ರಂಜನೆ ಬೋಧನೆ ಪ್ರಚೋದನೆ


ಲಂಕೇಶ್

ನವೆಂಬರ್ 24, 2010 ರೂ. 12/-



ಶಬ್ದಸಾಗರ ಪ್ರೊ ಜಿ.ವಿ.





ಕ್ರಿಕೆಟ್ ಎಲೆಕ್ಷನ್ ಕುಂಬ್ಳೆ-ಶ್ರೀನಾಥ್ ಡೀಲ್‌ಗಳು



ಯಡ್ಡಿ ವಿರುದ್ಧ 53 ಸಹಿ!




ರೆಡ್ಡಿಯ ವರ್ಗಾ ದಂಧೆ



ಅಳಿಯನನ್ನೇ ಕೊಂದ ಬಂಡಿಗಣಿ ಸ್ವಾಮಿ

ಅರ್ಜುನನ ಅಂಬಾರಿಯಲ್ಲಿ ರಾಧಿಕಾ ಸವಾರಿ!





● ಒಬಾಮ ಭೇಟಿಯಿಂದ ಭಾರತ ಪಡೆದುಕೊಂಡಿದ್ದೇನು? ಅಮೆರಿಕದ ಅಧ್ಯಕ್ಷ ಪಾಕಿಸ್ತಾನಕ್ಕೆ ಭೇಟಿ ನೀಡದೆ ಭಾರತಕ್ಕೆ ಮಾತ್ರ ಭೇಟಿ ಕೊಟ್ಟ ಹೆಚ್ಚುಗಾರಿಕೆ. ಅಮೆರಿಕದ ಅಧ್ಯಕ್ಷನನ್ನು ನಾಲ್ಕು ದಿನಗಳ ಕಾಲ ಭಾರತದಲ್ಲಿ ಉಪಚರಿಸಿದ ಧನ್ಯತೆ. ಭದ್ರತಾ ಮಂಡಳಿಯ ಸ್ಥಾನ ಪಡೆಯಬೇಕೆಂದರೆ ಅಂತರರಾಷ್ಟ್ರೀಯ ವಿಷಯಗಳಲ್ಲಿ ಅಷ್ಟೇ ಜವಾಬ್ದಾರಿಯಿಂದ ನಡೆದುಕೊಳ್ಳಬೇಕೆಂಬ ಬಗ್ಗೆ ಬಿಟ್ಟಿ ಉಪದೇಶ. ಅಮೆರಿಕದ ಯುದ್ಧ ಸಾಮಗ್ರಿಗಳಿಗೆ ಅತಿ ದೊಡ್ಡ ಗ್ರಾಹಕನಾದ ಹೆಗ್ಗಳಿಕೆ.

●

ಒಬಾಮ ಭೇಟಿ: ಭಾರತಕ್ಕೆ ದಕ್ಕಿದ್ದೇನು?
ಕೊಟ್ಟ ಕೋಡಗಗಳು - ಇಸ್ಕೊಂಡ ಕಮಂಗಿಗಳು!

ಅಮೆರಿಕದ ಅಧ್ಯಕ್ಷರ ಐತಿಹಾಸಿಕ ಭೇಟಿ ಮುಗಿದಿದೆ, ಇದರಿಂದ ಭಾರತಕ್ಕೇನು ದಕ್ಕಿದೆ? ಅಮೆರಿಕ ಏನು ಪಡೆದಿದೆ?

ಈ ಪ್ರಶ್ನೆಗಳಿಗೆ ಸ್ಪಷ್ಟವಾದ ಉತ್ತರವನ್ನು ಒಬಾಮಾನ ಸರ್ಕಾರವೇ ಕೊಟ್ಟಿದೆ. ಅವರ ಭಾರತ ಭೇಟಿ ಪ್ರಾರಂಭವಾಗುವ ಹಿಂದಿನ ದಿನ ಅಮೆರಿಕ ಸರ್ಕಾರದ ಅಂತರರಾಷ್ಟ್ರಿಯ ಆರ್ಥಿಕ ವ್ಯವಹಾರಗಳ ಡೆಪ್ಯೂಟಿ ಕಾರ್ಯದರ್ಶಿಯಾಗಿರುವ ಮೈಕೇಲ್ ಫ್ರೊಮಾನ್‌ರವರು ಅಮೆರಿಕನ್ ಮಾಧ್ಯಮಗಳನ್ನುದ್ದೇಶಿಸಿ ಮಾತನಾಡುತ್ತಾ "ಒಬಾಮಾರವರ ಈ ಭೇಟಿಯ ಉದ್ದೇಶ ಮೂಲಭೂತವಾಗಿ ಆರ್ಥಿಕವಾದದ್ದು. ಅಮೆರಿಕದಲ್ಲಿ ಉದ್ಯೋಗ ಸೃಷ್ಟಿ ಮಾಡಲು ಅನುಕೂಲವಾಗುವಂತೆ ನಮ್ಮ ಅಂತರರಾಷ್ಟ್ರೀಯ ಸಂಬಂಧಗಳನ್ನು ಬಳಸಿಕೊಳ್ಳುವುದೇ ಈ ಭೇಟಿಯ ಉದ್ದೇಶ" ಎಂದು ಯಾವುದೇ ಮುಚ್ಚುಮರೆಯಿಲ್ಲದೆ ಘೋಷಿಸಿದ್ದರು.

ಅಮೆರಿಕದಲ್ಲಿ ಇಂದು ನಿರುದ್ಯೋಗ ಅತ್ಯಂತ ತೀವ್ರವಾಗಿ ಬೆಳೆಯುತ್ತಿದೆ. ಒಂದು ಅಂದಾಜಿನ ಪ್ರಕಾರ ಅಮೆರಿಕದ ಆರ್ಥಿಕತೆ 1930ರ ದಶಕದಲ್ಲಿ ಎದುರಿಸುತ್ತಿದ್ದಂಥ ಬಿಕ್ಕಟ್ಟನ್ನೇ ಈಗಲೂ ಎದುರಿಸುತ್ತಿದೆ. ಕಳೆದ 70 ವರ್ಷಗಳಲ್ಲೇ ಪ್ರಥಮ ಬಾರಿಗೆ ಪ್ರಪಂಚದ ವಾಣಿಜ್ಯವು ಶೇ.14ರಷ್ಟು ಕುಸಿದಿದೆ. ಈ ಎಲ್ಲದರ ಪರಿಣಾಮವಾಗಿ ಒಬಾಮಾರ ಜನಪ್ರಿಯತೆ ಕುಸಿಯುತ್ತಿರುವುದು ಮಾತ್ರವಲ್ಲದೆ ಅಮೆರಿಕದ ಸಂಸತ್ತಿಗೆ ನಡೆದ ಚುನಾವಣೆಯಲ್ಲಿ ಕಳೆದ 75 ವರ್ಷಗಳಲ್ಲೇ ಅತ್ಯಂತ ಹೀನಾಯವಾಗಿ ಅವರ ಡೆಮಾಕ್ರಾಟಿಕ್ ಪಕ್ಷ ಸೋತಿದೆ. ಇನ್ನಾದರೂ ಅಮೆರಿಕದಲ್ಲಿ ಹೆಚ್ಚೆಚ್ಚು ಉದ್ಯೋಗಗಳನ್ನು ಸೃಷ್ಟಿಸದಿದ್ದರೆ 2012ರಲ್ಲಿ ನಡೆಯಲಿರುವ ಅಮೆರಿಕದ ಅಧ್ಯಕ್ಷೀಯ ಚುನಾವಣೆಯಲ್ಲಿ ಡೆಮಾಕ್ರಟಿಕ್ ಪಕ್ಷ ಬೋರ್ಡಿಗೆ ಬರುವ ಸಾಧ್ಯತೆಗಳೇ ಕ್ಷೀಣಿಸುತ್ತಿದೆ.


ಆದರೆ ಅಮೆರಿಕದ ಆರ್ಥಿಕತೆಗೆ ಚೈತನ್ಯ ಕೊಡುವ ಶಕ್ತಿ ಅದರ ಆಂತರಿಕ ಆರ್ಥಿಕತೆಗಿಲ್ಲ. ಹೀಗಾಗಿ ಅಮೆರಿಕ ತನ್ನ ಆರ್ಥಿಕತೆಯನ್ನು ಪುನಶ್ಚೇತನಗೊಳಿಸಲು ಏಕಕಾಲದಲ್ಲಿ ಎರಡು ಕ್ರಮಗಳನ್ನು ಅನುಸರಿಸುತ್ತಿದೆ. ಒಂದು ತಾನು ಉತ್ಪಾದಿಸುವ ಸರಕುಗಳ ಮಾರುಕಟ್ಟೆಗೆ ಪ್ರತಿಸ್ಪರ್ಧಿಯಾಗಿ ವಿದೇಶದ ಸರಕುಗಳು ತನ್ನ ಮಾರುಕಟ್ಟೆಗೆ ನುಗ್ಗದಂತೆ ರಕ್ಷಿಸಿಕೊಳ್ಳುವ "ಪ್ರೊಟೆಕ್ಷನಿಸ್ಟ್" ಕ್ರಮಗಳು. ಎರಡನೆಯದು ಇದೇ ರೀತಿ ಅಮೆರಿಕದ ಸರಕುಗಳಿಂದ ತನ್ನ ಗೃಹ ಮಾರುಕಟ್ಟೆಯನ್ನು ರಕ್ಷಿಸಿಕೊಳ್ಳುವ ನೀತಿಯನ್ನು ಅನುಸರಿಸುತ್ತಿರುವ ದೇಶಗಳ ಮೇಲೆ ಸಾಮ-ದಾನ-ಭೇದ-ದಂಡೋಪಾಯಗಳನ್ನು ಬಳಸಿ ಆ ದೇಶಗಳ "ಪ್ರೊಟೆಕ್ಷನಿಸ್ಟ್" ನೀತಿಗಳನ್ನು ಬದಲಿಸಿ ತನ್ನ ಬಂಡವಾಳಕ್ಕೆ, ಸರಕುಗಳಿಗೆ ಇನ್ನೂ ಹೆಚ್ಚಿನ ಮಾರುಕಟ್ಟೆಯನ್ನು ಪಡೆದುಕೊಳ್ಳುವುದು.

ಭಾರತ ಭೇಟಿಗೆ ಹೊರಡುವ ಸ್ವಲ್ಪ ಮುನ್ನ ಅಮೆರಿಕನ್ ಉದ್ಯಮಿಗಳನ್ನುದ್ದೇಶಿಸಿ ಭಾಷಣ ಮಾಡುತ್ತಾ ಒಬಾಮಾ "ಭಾರತದ ಆರ್ಥಿಕತೆ ತೀವ್ರಗತಿಯಲ್ಲಿ ಅಭಿವೃದ್ಧಿ ಹೊಂದುತ್ತಲಿದೆ ಮತ್ತು ಭಾರತದಲ್ಲಿರುವ ಮತ್ತು ಬೆಳೆಯುತ್ತಲಿರುವ ಮಧ್ಯಮವರ್ಗ ಅಮೆರಿಕದ ರಫ್ತಿಗೆ ಒಳ್ಳೆಯ ಮಾರುಕಟ್ಟೆ ಒದಗಿಸುತ್ತಾರೆ" ಎಂದು ಸ್ಪಷ್ಟವಾಗಿಯೇ ಹೇಳಿದ್ದರು. ತನ್ನ ಭಾರತ ಭೇಟಿಯ ಪ್ರಧಾನ ಉದ್ದೇಶ "ಅಮೆರಿಕದ ಸರಕುಗಳಿಗೆ ಭಾರತದಲ್ಲಿ 10 ಬಿಲಿಯನ್ ಡಾಲರ್‌ನಷ್ಟು ಹೊಸ ಮಾರುಕಟ್ಟೆಯನ್ನು ಪಡೆದುಕೊಂಡು ಆ ಮೂಲಕ ಅಮೆರಿಕದಲ್ಲಿ 53,000 ದಷ್ಟು ಉದ್ಯೋಗ ಗಳನ್ನು ಸೃಷ್ಟಿಸುವುದಾಗಿದೆ" ಎಂದೂ ಘೋಷಿಸಿದ್ದರು.

ಅಮೆರಿಕದ ಸರಕುಗಳು ಈಗಾಗಲೇ ಭಾರತದ ಎಲ್ಲಾ ಕ್ಷೇತ್ರಗಳಲ್ಲೂ ಒಳನುಗ್ಗಿದೆ. ಭಾರತವು 1998ರಲ್ಲಿ ಅಣುಶಕ್ತಿ ಸ್ಫೋಟ ನಡೆಸಿದ ಮೇಲೆ ಅಮೆರಿಕವು ಭದ್ರತಾ ದೃಷ್ಟಿಯಿಂದಲೇ ಭಾರತದೊಡನೆ ಅಣುವಾಣಿಜ್ಯ ಮತ್ತು ಹೈಟೆಕ್ ಟ್ರೇಡುಗಳ ಮೇಲೆ ನಿಷೇಧ ವಿಧಿಸಿತ್ತು, ಈಗ ಭಾರತವು ಅಮೆರಿಕಕ್ಕೆ ತನ್ನ ನಿಷ್ಠೆಯನ್ನು ಸಂಶಯಾತೀತವಾಗಿ ಸಾಬೀತು ಮಾಡಿರುವುದರಿಂದ ಮತ್ತು ಈ ನಿರ್ಬಂಧ ತೆಗೆಯದ ಹೊರತು ಅಣು ವಾಣಿಜ್ಯದಲ್ಲಿರುವ ಅಮೆರಿಕನ್ ಕಂಪನಿಗಳಿಗೆ ಭಾರತದ ಮಾರುಕಟ್ಟೆಯಾಗಲೀ, ಅಮೆರಿಕನ್ನರಿಗೆ ಹೊಸ ಕೆಲಸವಾಗಲೀ ಸಿಗುವುದು ಸಾಧ್ಯವಿಲ್ಲವೆಂದೂ ಅಮೆರಿಕ ಪರಿಗಣಿಸಿದ್ದರಿಂದಲೇ ಆ ನಿರ್ಬಂಧಗಳನ್ನು ತೆಗೆದುಹಾಕಿತು.

ಈಗಾಗಲೇ ಔಟ್‌ಸೋರ್ಸಿಂಗ್ (ಹೊರಗುತ್ತಿಗೆ) ಮಾರುಕಟ್ಟೆಯ ವ್ಯಾಪ್ತಿಯನ್ನೂ ಕುಗ್ಗಿಸಲು ಅಮೆರಿಕ ಹಲವಾರು ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ. ಇದರಿಂದ





ಭಾರತದಲ್ಲಿ ಸೃಷ್ಟಿಯಾಗಿದ್ದ ಲಕ್ಷಾಂತರ ಉದ್ಯೋಗಗಳು ನಷ್ಟವಾಗುತ್ತವೆ ಎಂಬ ಐಟಿ ಉದ್ಯಮದ ಅಹವಾಲಿಗೆ ಒಬಾಮಾ ಸರ್ಕಾರ ಕಿಂಚಿತ್ತೂ ಅಲುಗಾಡಿಲ್ಲ. ಬದಲಿಗೆ ಒಬಾಮಾ "ತಾನು ಹೊರಗುತ್ತಿಗೆ ಉದ್ಯಮಕ್ಕೆ ಕಡಿವಾಣ ಹಾಕಿ ಅಮೆರಿಕದಲ್ಲೇ ಆ ಉದ್ಯೋಗಗಳನ್ನು ಉಳಿಸಿದ್ದರ ಬಗ್ಗೆ ಯಾವುದೇ ಬಗೆಯ ವ್ಯಥೆಯಿಲ್ಲ" ಎಂದು ಹೇಳಿದ್ದಾರೆ. ಒಂದು ಕಡೆ ಅಮೆರಿಕವು ತನ್ನ ನೀತಿಯನ್ನು ಇನ್ನಷ್ಟು ಕಠಿಣಗೊಳಿಸುತ್ತಿರುವುದರಿಂದ ಭಾರತದ ಲಕ್ಷಾಂತರ ಉ[...]ಗಗಳು ನಷ್ಟವಾಗುತ್ತವೆ. ಆದರೂ ಭಾರತವು ಮಾತ್ರ [...] ನೀತಿಗಳನ್ನು ಸಡಿಲಗೊಳಿಸಿ ಅಮೆರಿಕಕ್ಕೆ 50,[...] ಉದ್ಯೋಗಗಳನ್ನು ದೊರಕಿಸಿಕೊಡಬೇಕು. ಇದು ಅಮೆ[...] ನೀತಿ.

ಒಬಾಮಾನ ಭಾರತ ಭೇಟಿಯ ನಿಜವಾದ ಉ[...] ಇದಾಗಿದ್ದರಿಂದಲೇ ಒಬಾಮಾ ಮೊದಲು ಭೇಟಿ ನೀ[...] ರಾಜಕೀಯ ರಾಜಧಾನಿ ದೆಹಲಿಗಲ್ಲ, ವಾಣಿಜ್ಯ ರಾಜ[...] ಮುಂಬೈಗೆ. ಅಮೆರಿಕ ಅಧ್ಯಕ್ಷನ ಪುಷ್ಪಕ ವಿಮಾನ[...] ಬಂದವರು ರಾಜಕೀಯ ಮುತ್ಸದ್ದಿಗಳಲ್ಲ, ಬದ[...] ಅಮೆರಿಕದ ಮಿಲಿಟರಿ-ವೈಮಾನಿಕ ವಾಣಿಜ್ಯೋದ್ಯ[...] ಲೀಡರ್ ಆದ ಬೋಯಿಂಗ್ ಕಂಪನಿಯ ಅಧ್ಯಕ್ಷ, ಪೆ[...] ಮುಖ್ಯಸ್ಥ ಹನಿವೆಲ್ ಇಂಟರ್‌ನ್ಯಾಷನಲ್, ಮೆಕ್‌ಗ್ರಾ ಹಿ[...] ಎ.ಇ.ಎಸ್ ಕಾರ್ಪ್ ಇನ್ನಿತರ ಇನ್ನೂರು ವಾಣಿಜ್ಯೋದ್ಯ[...] ಮುಖ್ಯಸ್ಥರು.

ಇದು ಒಬಾಮಾ ಭೇಟಿಯ ವಾಸ್ತವಗಳು. ಈಗ[...] ಭೇಟಿಯಲ್ಲಿ ನಿಜವಾಗಿ ಆದ ಒಪ್ಪಂದಗಳೆಷ್ಟು? ಇದ[...] ಭಾರತಕ್ಕೆ ದಕ್ಕಿದ್ದೇನು? ಅಮೆರಿಕ ಕಿತ್ತುಕೊಂಡಿದ್ದೇನು ಎ[...] ನೋಡೋಣ!

ಮೊದಲನೆಯದಾಗಿ ಈ ಭೇಟಿಯಲ್ಲಿ ಅಮೆರಿಕ ಹೈ[...] ಟ್ರೇಡ್ ಅಂದರೆ ಉನ್ನತ ತಂತ್ರಜ್ಞಾನಕ್ಕೆ ಸಂಬಂಧಪಟ[...] ಹೇರಿದ್ದ ನಿರ್ಬಂಧಗಳನ್ನು ತೆಗೆದು ಹಾಕಿದೆ. ಅ[...] ಭಾರತದ ವಾಯುಪಡೆಯ ಆಧುನಿಕರಣಕ್ಕೆ ಬೇ[...] ಎಂಜಿನ್‌ಗಳು ಮತ್ತು ಅಣುಶಕ್ತಿ ಸ್ಥಾವರಗಳಿಗೆ ಬೇ[...] ತಂತ್ರಜ್ಞಾನವನ್ನು ಭಾರತಕ್ಕೆ ಮಾರಲು ಅಮೆರಿಕದ ಕಂಪನಿ[...] ಶಾಸನಾತ್ಮಕವಾಗಿ ಇದ್ದ ತಡೆಗಳು ನಿವಾರಣೆಯಾ[...] ಅಕ್ಟೋಬರ್ 8ರಂದು ಭಾರತ ಮತ್ತು ಅಮೆ[...] ಉದ್ಯಮಪತಿಗಳ ಸಮ್ಮೇಳನದಲ್ಲಿ ಈ ಕ್ಷೇತ್ರಗ[...] ಸಂಬಂಧಪಟ್ಟಂತೆ ಅಮೆರಿಕನ್ ಕಂಪನಿಗಳಿಂದ ಭಾರ[...] ಸರ್ಕಾರ ಮತ್ತು ಕೆಲವು ಖಾಸಗಿ ಕಂಪನಿಗಳು 10 ಬಿಲಿಯ[...] ಡಾಲರ್ ಮೌಲ್ಯದ ಸರಕುಗಳನ್ನು ಕೊಳ್ಳಲು ಸಹಿ ಹಾ[...]

ಭಾರಿ ವಿಮಾನ ಕ್ಷೇತ್ರ: ಅಮೆರಿಕದಲ್ಲಿ 2008[...] ಹಣಕಾಸು ಬಿಕ್ಕಟ್ಟು ಪ್ರಾರಂಭವಾದ ಮೇಲೆ ಅತ[...] ಹೆಚ್ಚು ನಷ್ಟಕ್ಕೊಳಗಾಗಿದ್ದು ಮತ್ತು ಅತಿ ಹೆಚ್ಚು ನೌಕರ[...] ಕೆಲಸದಿಂದ ತೆಗೆದುಹಾಕಿದ್ದು ಬೋಯಿಂಗ್ ವಿಮಾ[...] ತಯಾರಿಕಾ ಕಂಪನಿ. ಈ ಭೇಟಿಯಲ್ಲಿ ಭಾರತ ಸರ್ಕಾ[...] ದೊಡನೆ ಅದರಲ್ಲೂ ರಕ್ಷಣಾ ಇಲಾಖೆಯೊಡನೆ ಆಗಿರ[...] ಒಪ್ಪಂದದ ಪ್ರಕಾರ ಬೋಯಿಂಗ್ ಕಂಪನಿ 10 C-[...] Globemaster III ಮಿಲಿಟರಿ ವಿಮಾನಗಳನ್ನು ಭಾರ[...] ಮಾರಲಿದೆ. ಇದನ್ನು ಕೊಂಡ ನಂತರ ಅಮೆರಿಕವ[...] ಬಿಟ್ಟರೆ ಪ್ರಪಂಚದಲ್ಲಿ ಅತಿ ಹೆಚ್ಚು ಬೋಯಿಂಗ್ ವಿಮಾ[...]ಗಳನ್ನು ಹೊಂದಿರುವ ಹೆಗ್ಗಳಿಕೆ ಭಾ[...]ದ್ದಾಗುತ್ತದೆ ಎಂಬುದನ್ನು ಬಿಟ್ಟರೆ [...]ರಿಂದ ಭಾರತಕ್ಕೆ ಹೆಚ್ಚಿನ ಅನುಕ[...]ವೇನೂ ಇಲ್ಲ. ಆದರೆ ಅಮೆರಿಕ[...] ಒಂದು ಅಂದಾಜಿನ ಪ್ರಕಾರ [...] C-17 ವಿಮಾನವು ಅಮೆರಿಕದ [...] ರಾಜ್ಯಗಳಲ್ಲಿ ಹಂಚಿಹೋಗಿರುವ 6[...] ಸಣ್ಣ ಉದ್ದಿಮೆದಾರರಿಗೆ ಕೆಲಸವನ್ನು ನೀಡುತ್ತದ[...] ಅಮೆರಿಕದ ಕ್ಯಾಲಿಫೋರ್ನಿಯಾದಲ್ಲಿರುವ ಬೃ[...] ಬೋಯಿಂಗ್ ವಿಮಾನ ತಯಾರಿಕಾ ಕಾರ್ಖಾನೆಗೆ ಒ[...] ಇಡೀ ವರ್ಷ ಕೆಲಸ ಕೊಡುತ್ತದೆ. 4.1 ಬಿಲಿಯ[...] ಡಾಲರ್ ಎಂದರೆ ಅಂದಾಜು 22,000 ಕೋಟಿ ರೂಪಾ[...]

▶▶ 1[...]

ನೋ ಕಾಮೆಂಟ್ಸ್

"ಅಮೆರಿಕವು ತನ್ನ ದೇಶದೊಳಗೆ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇಡುತ್ತದೆ. ಹೊರಗೆ ಸಾಮ್ರಾಜ್ಯವಾದವನ್ನೇ ಆಚರಿಸುತ್ತದೆ. ವಿದ್ವಾಂಸರನ್ನು ಬಿಟ್ಟರೆ ಬಹುಪಾಲು ಅಮೆರಿಕನ್ನರು ಅಂಥಾ ಸುಶಿಕ್ಷಿತರೇನಲ್ಲ."

- ಅಪರ್ಣಾ ಸೇನ್, ನಿರ್ದೇಶಕಿ

"ಅಂತರರಾಷ್ಟ್ರೀಯ ಸಮುದಾಯವು ಬರ್ಮಾ ಮೇಲೆ ಹಾಕುವ ಸಾರ್ವತ್ರಿಕ ನಿರ್ಬಂಧವು ಅಲ್ಲಿನ ಸಾಮಾನ್ಯ ಜನರ ಬದುಕಿನ ಮೇಲೆ ಪ್ರಭಾವ ಬೀರುತ್ತದೆ. ಅದರ ಬದಲಿಗೆ ಬರ್ಮಾದ ಆಳುವ ವರ್ಗಗಳನ್ನು ಇಕ್ಕಟ್ಟಿಗೆ ಸಿಲುಕಿಸುವಂಥಾ ನಿರ್ಬಂಧಗಳನ್ನು ಹಾಕಬೇಕು."

- ಅಮರ್ತ್ಯ ಸೇನ್

"ಯೂನಿಕ್ ಐಡೆಂಟಿಟಿ ಕಾರ್ಡ್ ಯೋಜನೆಯೊಂದಿಗೆ ನ್ಯಾಷನಲ್ ಇಂಟೆಲಿಜೆನ್ಸ್ ಗ್ರಿಡ್ ಯೋಜನೆಯೂ ಥಳಕು ಹಾಕಿಕೊಂಡಿದೆ. ಇದು ಎಲ್ಲಾ ನಾಗರಿಕರ ಖಾಸಗೀತನದ ಮೇಲೂ ಆಕ್ರಮಣ ಮಾಡುತ್ತದೆ."

- ರವಿ ವಿಶ್ವೇಶ್ವರಯ್ಯ, ತಂತ್ರಜ್ಞಾನ ಪರಿಣಿತ

"ಕನ್ನಡದ ಬಗ್ಗೆ ಕನಿಷ್ಠ ತಿಳಿವಳಿಕೆ ಇಲ್ಲದವರು ಪ್ರಚಾರದ ಗೀಳಿನಿಂದ ನಡೆಸುವ ಆಂದೋಲನಗಳಿಂದ ಕನ್ನಡದ ಬೆಳವಣಿಗೆಯಾಗುವುದಿಲ್ಲ. ಸಂಘಟನೆಗಳು ಪ್ರಚಾರ-ಪ್ರಕಟಣೆಗಳಿಂದ ವಿಮುಖವಾಗಿ ಕನ್ನಡ ಕಟ್ಟುವ ಕಾರ್ಯದಲ್ಲಿ ತೊಡಗಿಕೊಂಡಾಗ ಮಾತ್ರ ಕನ್ನಡ ಬೆಳೆಯಲಿದೆ."

- ಜಿ. ವೆಂಕಟಸುಬ್ಬಯ್ಯ, 77ನೇ ಸಾಹಿತ್ಯ ಸಮ್ಮೇಳನಾಧ್ಯಕ್ಷರು

ನಂಬಿದ್ರೆನಂಬಿ ಬಿಟ್ರೆಬಿಡಿ

"ದಕ್ಷಿಣ ಭಾರತದ ಮುಸ್ಲಿಮರು ಐಡೆಂಟಿಟಿ ಪ್ರಶ್ನೆಗಳ ಬಗ್ಗೆ ಅಷ್ಟು ಆಸಕ್ತರಾಗಿರುವುದಿ[...]

- ಮಕ್ಬೂಲ್ ಸಿರಾಜ್, ಕಾರ್ಯಕ[...]

ವಿದೇಶಿ ಬಂಡವಾಳವೆಂದರೆ ಮಾರುಕಟ್ಟೆಯಲ್ಲವೋ[...]

"ಚೆನ್ನೈನಲ್ಲಿ ನಡೆದ ಉದ್ದಿಮೆದಾರರ ಸಭೆಯಲ್ಲಿ ನಾನು ಹೇಳಿದ್ದಿಷ್ಟು. ಮಾರ್ಕ್ಸ[...] ಪಕ್ಷ ಮಾರುಕಟ್ಟೆಗಷ್ಟೇ ವಿರೋಧಿ. ಆದರೆ ನಾವು ಎಂದೂ ವಿದೇಶೀ ಬಂಡವಾಳವ[...] ವಿರೋಧಿಸಿಲ್ಲ ಆದರೆ ಅದು ಯಾವ ಕ್ಷೇತ್ರಗಳಲ್ಲಿ ಬರಬೇಕು ಎಂಬುದರ [...] ನಮಗೆ ಸರಿಯಾದ ತಿಳಿವಳಿಕೆ ಇರಬೇಕಷ್ಟೆ."

- ಪ್ರಕಾಶ್ ಕಾರ[...]

ತಾಜ್‌ಮಹಲ್‌ಗೆ ಈ ಪರಿಸ್ಥಿತಿ ಬರಬಾರದಿತ್ತು!

"ಆಕೆ ನನ್ನ ಮೋನಾಲಿಸ ಏನಲ್ಲ, ಆದರೆ ಆಕೆಗಾಗಿ ನಾನು ತಾಜ್‌ಮಹ[...] ಕಟ್ಟಿಕೊಡಲು ಬಯಸುತ್ತೇನೆ."

- ಐಶ್ವರ್ಯ ರೈ ಬಗ್ಗೆ ನಿರ್ದೇಶಕ ಸಂಜಯ್ ಲೀಲಾ ಬನ್ಸಾ[...]

ಅದೇ ದುರದೃಷ್ಟಕರವಾದ ವಿಷಯ

"ಭಾರತದ ಮುಸ್ಲಿಮರಿಗೆ ಬುಷ್ ಮೇಲೆ ಇದ್ದಷ್ಟು ಸಿಟ್ಟು ಒಬಾಮಾ ಮೆ[...] ಇಲ್ಲ."

- ಅಸಾದ್ದೀನ್ ಓವೈಸಿ, ಎ[...]

ಗೌರವ ಮೂಡಿಸುವ ಸಾಣೇಹಳ್ಳಿ ಸ್ವಾಮಿಗಳು...




ಕಂಡಹಾಗೆ

• ಗೌರಿ ಲಂಕೇಶ್
editorlankesh@gmail.com

ನಮ್ಮ ರಾಜ್ಯದ ಹಲವು ಪ್ರಮುಖ ಮಠಗಳತ್ತ ಒಂದು ಕ್ಷಣ ಗಮನಹರಿಸಿ ಅಲ್ಲೆಲ್ಲ ಏನೇನು ನಡೆಯುತ್ತಿದೆ ಎಂದು ನೋಡಿ. ಉದಾಹರಣೆಗೆ ಉಡುಪಿಯ ಅಷ್ಟಮಠಗಳು ಗೊಡ್ಡು ಸಂಪ್ರದಾಯಗಳಲ್ಲಿ ಮತ್ತು ಕೃಷ್ಣ ದೇವಸ್ಥಾನವನ್ನು ಉಳಿಸುವ ಷಡ್ಯಂತ್ರದಲ್ಲಿ ಮುಳುಗಿದ್ದರೆ, ಸಿದ್ಧಗಂಗಾ ಮಠವು ಇಡೀ ಲಿಂಗಾಯತ ರಾಜಕಾರಣಿಗಳ ಹೆಡ್‌ಆಫೀಸ್ ಆಗಿದೆ. ಹಾಗೆಯೇ ಹುಬ್ಬಳ್ಳಿಯ ಮೂರು ಸಾವಿರ ಮಠ ಅವ್ಯವಹಾರಗಳ ಕೇಂದ್ರಬಿಂದುವಾಗಿದ್ದರೆ, ಆದಿ ಚುಂಚನಗಿರಿ ಮಠ ಒಕ್ಕಲಿಗರ ರಿಂಗ್‌ಮಾಸ್ಟರ್‌ನಂತಾಗಿದೆ.

ಇಂತಹ ದುಷ್ಟ ಪರಿಸ್ಥಿತಿಯಲ್ಲಿ ಕೈಬೆರಳೆಣಿಕೆಯಷ್ಟು ಮಠಗಳು ಮಾತ್ರ ಇನ್ನೂ ತಮ್ಮ ಜನಪರ ನಿಲುವುಗಳನ್ನು ಕಾಪಾಡಿಕೊಂಡು ತಮ್ಮ ವಿವಿಧ ಸಾಂಸ್ಕೃತಿಕ ಚಟುವಟಿಕೆಗಳ ಮೂಲಕ ರಾಜ್ಯದ ಜನರಲ್ಲಿ ಅರಿವನ್ನು, ಪ್ರಗತಿಪರ ಚಿಂತನೆಯನ್ನು ಮೂಡಿಸುತ್ತಿವೆ. ಅಂತಹ ಮಠಗಳಲ್ಲಿ ಪ್ರಮುಖವಾದವು ಚಿತ್ರದುರ್ಗದ ಮುರುಘಾರಾಜೇಂದ್ರ ಮಠ ಮತ್ತು ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳ ಸಾಣೇಹಳ್ಳಿ ಮಠ. ಇತ್ತೀಚೆಗೆ ಸಾಣೇಹಳ್ಳಿ ಮಠದಲ್ಲಿ ನಡೆದ ಒಂದು ಬಹುಮುಖ್ಯ ಘಟನೆ ಬಗ್ಗೆ ಹೇಳಲೇಬೇಕಿದೆ.



ಇದೇ ನವೆಂಬರ್ 4 ರಿಂದ 10 ರ ತನಕ ಸಾಣೇಹಳ್ಳಿ ಮಠದಲ್ಲಿ 2010ರ ಸಾಲಿನ ನಾಟಕೋತ್ಸವ ನಡೆಯಿತು. ಹಾಗೆಯೇ ನಾಟಕೋತ್ಸವದ ಅಂಗವಾಗಿ ವಿವಿಧ ವಿಚಾರಗಳ ಬಗ್ಗೆಯೂ ಸಂಕಿರಣಗಳನ್ನು ಹಮ್ಮಿಕೊಳ್ಳಲಾಗಿತ್ತು. ಜಾತಿಗಣತಿ, ಸಮೂಹ ಮಾಧ್ಯಮಗಳ ಜವಾಬ್ದಾರಿ, ಮಹಿಳಾ ಸಮಾನತೆ ಕುರಿತಂತಲ್ಲದೆ 'ಶ್ರೀರಾಮ ದೇವರೆ?' ಎಂಬಂತಹ ಸ್ಫೋಟಕ ಚರ್ಚೆಗಳೂ ಇದ್ದವು. ಕಳೆದ ಭಾನುವಾರ 'ಹಸಿರು ಕ್ರಾಂತಿಯ ಸಾಫಲ್ಯ-ವೈಫಲ್ಯ' ಕುರಿತು ನಮ್ಮ ಅಂಕಣಕಾರ ಶಿವಸುಂದರ್ ಸಾಣೇಹಳ್ಳಿಯಲ್ಲಿ ಮಾತನಾಡುವವರಿದ್ದರು. ಅಂದಿನ ಹಲವು ಮುಖ್ಯ ಅತಿಥಿಗಳಲ್ಲಿ ಉನ್ನತ ಶಿಕ್ಷಣ ಸಚಿವ ವಿ.ಎಸ್. ಆಚಾರ್ಯ ಮತ್ತು ನಾನೂ ಇದ್ದೆವು.

ಹಸಿರು ಕ್ರಾಂತಿ ಹೇಗೆ ಭಾರತೀಯ ರೈತರನ್ನು ವಿದೇಶಿ ಕಂಪನಿಗಳ ಕಪಿಮುಷ್ಟಿಗೆ ದೂಡಿತು ಎಂದೆಲ್ಲ ಶಿವಸುಂದರ್ ಅವರು ಮಾತನಾಡುತ್ತಿದ್ದಾಗಲೇ ಆಚಾರ್ಯರ ಗೂಟದ ಕಾರು ಆಗಮಿಸಿತು. ನನ್ನ ಸರದಿ ಬಂದಾಗ ನಾನು ಎತ್ತಿದ ಮುಖ್ಯ ವಿಚಾರ ಈಗಿನ ಬಿಜೆಪಿ ಸರ್ಕಾರ ಜಾರಿಗೆ ತರಲು ಯತ್ನಿಸಿದ ಜಾನುವಾರು ಹತ್ಯೆ ನಿಷೇಧ ಕಾಯಿದೆ. ಆ ಕಾಯಿದೆ ಕುರಿತು ನಮ್ಮ ತಂಡದ ಅಭಿಪ್ರಾಯವನ್ನು ಈಗಾಗಲೇ ಪತ್ರಿಕೆಯಲ್ಲಿ ವ್ಯಕ್ತಪಡಿಸಿರುವುದರಿಂದ ವಿವರಗಳಿಗೆ ಇಲ್ಲಿ ಹೋಗುವ ಅವಶ್ಯಕತೆ ಇಲ್ಲ ಅನ್ನಿಸುತ್ತದೆ. ಸಾರಾಂಶದಲ್ಲಿ ಈ ಕಾಯಿದೆಯು ಪ್ರಸ್ತುತ ರಾಜ್ಯ ಸರ್ಕಾರದ ರೈತ ವಿರೋಧಿ ಧೋರಣೆಗೆ ಸಾಕ್ಷಿ ಎಂದು ಒತ್ತಿ ಹೇಳಿದೆ.

ಇತರೆ ಮುಖ್ಯ ಅತಿಥಿಗಳ ಭಾಷಣಗಳು ಮುಗಿದನಂತರ ವಿ.ಎಸ್. ಆಚಾರ್ಯರ ಸರದಿ ಬಂತು. ಶಿವಸುಂದರ್ ಮತ್ತು ನನ್ನ ಭಾಷಣಗಳಿಗೆ ಪ್ರತಿಕ್ರಿಯಿಸುತ್ತಾ ಆಚಾರ್ಯರು ತಮ್ಮ ಆರೆಸ್ಸೆಸ್ ಮತ್ತು ಬಿಜೆಪಿಯ ಪ್ರವೃತ್ತಿಗೆ ತಕ್ಕದಾಗಿ ಹಲವಾರು ಸುಳ್ಳುಗಳನ್ನೇ ಹೇಳಲಾರಂಭಿಸಿದರು. ಇದನ್ನು ಕೇಳಿ ಸಹಜವಾಗಿಯೇ ಶಿವಸುಂದರ್ ಮತ್ತು ನನಗೆ ಆತಂಕವಾಯಿತು. ಏಕೆಂದರೆ ನಾವಿಬ್ಬರೂ ಸತ್ಯ ಹೇಳಿದ್ದರೂ ಸಭಿಕರಲ್ಲಿದ್ದ ಜನ ಆಚಾರ್ಯರು ಹೇಳಿದ್ದ ಸುಳ್ಳನ್ನೇ ಸತ್ಯವೆಂದು ಭಾವಿಸುವ ಅಪಾಯವಿತ್ತು. ವೇದಿಕೆಯ ವಿವಿಧ ತುದಿಗಳಲ್ಲಿ ಕೂತಿದ್ದ ನಾವಿಬ್ಬರೂ ವೇದಿಕೆ ಮಧ್ಯದಲ್ಲಿ ಕೂತಿದ್ದ ಪಂಡಿತಾರಾಧ್ಯ ಸ್ವಾಮಿಗಳ ಹತ್ತಿರ ಹೋಗಿ ಆಚಾರ್ಯರು ಹೇಳುತ್ತಿದ್ದ ಸುಳ್ಳುಗಳಿಗೆ ಸ್ಪಷ್ಟೀಕರಣ ನೀಡಲು ಅವಕಾಶ ಕೊಡಬೇಕೆಂದು ಕೇಳಿಕೊಂಡೆವು. ನಮ್ಮ ಮನವಿಯನ್ನು ಸ್ವಾಮಿಗಳು ಒಪ್ಪಿಕೊಂಡರು. ಆಚಾರ್ಯರ ಭಾಷಣದ ನಂತರ ಮಾತನಾಡಿದ ಶಿವಸುಂದರ್ ಜಾನುವಾರ ಹತ್ಯೆ ಕುರಿತಂತೆ ಆಚಾರ್ಯರು ಹೇಳಿದ್ದೆಲ್ಲ ಸುಳ್ಳು, ಈ ವಿಷಯ ಕುರಿತಂತೆ ನಮ್ಮ ಸಂವಿಧಾನ ಮತ್ತು ನ್ಯಾಯಾಲಯದ ತೀರ್ಪುಗಳು ನಿಜವಾಗಲೂ ಏನನ್ನು ಹೇಳುತ್ತವೆ ಎಂದು ಸಂಕ್ಷಿಪ್ತವಾಗಿ ವಿವರಿಸಿದರು. ಎಲ್ಲರ ಮುಂದೆ ಆಚಾರ್ಯರಿಗೆ ಮುಖಭಂಗವಾಯಿತು.

ಅಂದಿನ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ಪಂಡಿತಾರಾಧ್ಯ ಸ್ವಾಮಿಗಳು ಕೊನೆಯದಾಗಿ ಮಾಡಿದ ಭಾಷಣವಂತೂ ಅದ್ಭುತವಾಗಿತ್ತು. ಸರ್ಕಾರದ ಹಿರಿಯ ಮಂತ್ರಿ ಓರ್ವರು ತಮ್ಮ ಪಕ್ಕದಲ್ಲೇ ಕೂತಿದ್ದರೂ, ಅಂಥವರಿಗೆ ಇತರೆ ಸ್ವಾಮಿಗಳಂತೆ ಡೊಗ್ಗುಸಲಾಮ ಹಾಕದೆ, ಹೇಳಬೇಕಾದ್ದನ್ನು ಹಿಂಜರಿಕೆ ಇಲ್ಲದೆ ಹೇಳುವ ಪ್ರವೃತ್ತಿ ಪಂಡಿತಾರಾಧ್ಯ ಸ್ವಾಮಿಗಳದ್ದು.

ಸಾಧಾರಣವಾಗಿ ಅಂತಹ ಸಭೆಗಳಲ್ಲಿ ಚರ್ಚೆ ಎಂಬುದೇ ಇರುವುದಿಲ್ಲ, ಇನ್ನು ಸ್ಪಷ್ಟೀಕರಣ ನೀಡುವ ಅವಕಾಶಗಳಂತೂ ಸಾಧ್ಯವೇ ಇಲ್ಲ, ಆದರೂ ಸ್ವಾಮಿಗಳು ನಮಗೆ ಅನುವು ಮಾಡಿಕೊಟ್ಟರಲ್ಲದೆ ಅದನ್ನು ಸಮರ್ಥಿಸಿಕೊಂಡರು. "ನಮ್ಮ ಮಠದ ಸಭೆಗಳೆಂದರೆ ಒಬ್ಬರು ತಮ್ಮ ಅಭಿಪ್ರಾಯಗಳನ್ನು ಹೇಳುವುದು, ಇತರರೆಲ್ಲರು ಅದನ್ನು ಕೇಳುವುದು ಮಾತ್ರ ಆಗಕೂಡದು. ಯಾವುದೇ ಸಭೆ ಪ್ರಶ್ನೆಗಳನ್ನು ಎತ್ತಬೇಕು, ಆ ಪ್ರಶ್ನೆಯ ಸುತ್ತ ಚರ್ಚೆ ನಡೆಯಬೇಕು, ಆ ಮೂಲಕ ಅರಿವನ್ನು ಹೆಚ್ಚಿಸಬೇಕು. ಪ್ರಶ್ನೆಗಳು ಉದ್ಭವವಾದಾಗಲೇ ಸತ್ಯದ ಶೋಧನೆ ಸಾಧ್ಯ. ಅನುಭವ ಮಂಟಪದಲ್ಲೂ ಪ್ರಶ್ನೆಗಳು, ಚರ್ಚೆಗಳು ನಡೆಯುತ್ತಿದ್ದವು" ಎಂದು ಸ್ವಾಮಿಗಳು ವಿವರಿಸಿದರು.

ಸ್ವಾಮಿಗಳು ಅಂದು ಮಾತನಾಡಿದ ಕೆಲವು ಪ್ರಮುಖ ಅಂಶಗಳನ್ನು ಇಲ್ಲಿ ಸಂಕ್ಷಿಪ್ತವಾಗಿ ಹೇಳುತ್ತೇನೆ.

"ಕೆಡವುವ ಮೂಲಕ ಏನನ್ನೂ ಕಟ್ಟಲಾಗುವುದಿಲ್ಲ, ನಮ್ಮ ಜನರ, ಸಮುದಾಯಗಳ ನಡುವೆ ಸೌಹಾರ್ದದ ಸೇತುವೆಗಳನ್ನು ಕಟ್ಟಬೇಕಿದೆ. ಹಾಗೆ ಮಾಡಿದಾಗ ನಾವು ದೇಶವನ್ನು ಕಟ್ಟುತ್ತೇವೆ. ಕೆಲವರು ಬಾಬ್ರಿ ಮಸೀದಿಯನ್ನು ಕೆಡುವುತ್ತಿದ್ದಾಗ ಹತ್ತಿರದಲ್ಲೇ ಕಾವಿಬಟ್ಟೆ ತೊಟ್ಟಿದ್ದ ಹಲವು ಸಂತರು ಚಪ್ಪಾಳೆ ತಟ್ಟುತ್ತಾ ಆನಂದಿಸುತ್ತಿದ್ದರು. ಅದನ್ನು ನೋಡಿ ಬೇಸರವಾಯಿತು. ಎಂತೆಂತಹ ಜನ ಕಾವಿ ತೊಡುತ್ತಾರೆ ನಮ್ಮ ದೇಶದಲ್ಲಿ...."

"ನನಗೆ ಗೊತ್ತಿರುವ ಒಬ್ಬರನ್ನು ಈ ಸರ್ಕಾರದಲ್ಲಿ ಯಾವುದೇ ಹಗರಣ ಮಾಡಿಕೊಳ್ಳದಿರುವ ಸಚಿವರು ಯಾರಾದರೂ ಇದ್ದಾರೆಯೇ ಎಂದು ಕೇಳಿದೆ. ಅದಕ್ಕೆ ಕಾರಣ ಇವತ್ತು ರೇಣುಕಾಚಾರಿ ತರಹದವರೂ ಈ ರಾಜ್ಯದಲ್ಲಿ ಮಂತ್ರಿಗಳಾಗಿರುವುದು! ಅವರು ವಿ.ಎಸ್. ಆಚಾರ್ಯರ ಹೆಸರನ್ನು ಹೇಳಿದರು. ಇವರ ಬಗ್ಗೆ ಗೌರಿಗೆ ಗೊತ್ತಿದ್ದರೆ ಈಗ ಹೇಳಬಹುದು (ನಾನು ತಲೆ ಅಲ್ಲಾಡಿಸಿದೆ!) ಆ ಕಾರಣದಿಂದಲೇ ಆಚಾರ್ಯರನ್ನು ನಾವು ಆಹ್ವಾನಿಸಿದ್ದು."

"ಜಾನುವಾರು ಹತ್ಯೆ ಬಗ್ಗೆ ಇಲ್ಲಿಯತನಕ ನಾನು ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಿರಲಿಲ್ಲ. ಆದರೆ ಇವತ್ತು ಹೇಳುತ್ತೇನೆ. ಅಹಿಂಸಾವಾದ ಎಂಬ ಕಾರಣ ನೀಡುವುದಾದರೆ ಅದು ಎಲ್ಲ ಪ್ರಾಣಿಗಳಿಗೂ ಅನ್ವಯಿಸಬೇಕು. ಅಂದರೆ ಕೋಳಿ, ಕುರಿ ಮತ್ತು ಇತರೆ ಪ್ರಾಣಿಗಳನ್ನೂ ಕೊಲ್ಲಬಾರದು ಎನ್ನಬೇಕು. ಬದಲಾಗಿ ಒಂದೇ ಒಂದು ಪ್ರಾಣಿಗೆ ಮಾತ್ರ ವಿಶೇಷ ಸ್ಥಾನ ನೀಡಿ ಅದರ ಹತ್ಯೆಯನ್ನು ನಿಷೇಧಿಸುವುದು ಸರಿ ಅಲ್ಲ, ಇವತ್ತು ಒಬ್ಬರಿಗೆ ಅನುಪಯೋಗವಾಗಿರುವ ಪ್ರಾಣಿ ಮತ್ತೊಬ್ಬರಿಗೆ ಆಹಾರವಾದರೆ ಅದರಲ್ಲಿ ತಪ್ಪೇನು. ಆದ್ದರಿಂದ ಈ ಜಾನುವಾರು ಹತ್ಯೆ ನಿಷೇಧ ಕಾಯಿದೆಯನ್ನು ಎಲ್ಲರೂ ತಿರಸ್ಕರಿಸಬೇಕು...."


ಹೀಗೆ ಪಂಡಿತಾರಾಧ್ಯ ಸ್ವಾಮಿಗಳು ನೇರವಾಗಿ, ಸ್ಪಷ್ಟವಾಗಿ, ದಿಟ್ಟವಾಗಿ ತಮ್ಮ ಜನಪರ ಮತ್ತು ಪ್ರಗತಿಪರ ನಿಲುವುಗಳನ್ನು ವ್ಯಕ್ತಪಡಿಸಿದರು. ರಾಜ್ಯದ ಪ್ರಮುಖ ಸಚಿವರೊಬ್ಬರ ಸಮ್ಮುಖದಲ್ಲೇ ಯಾವ ಮುಲಾಜೂ ತೋರದೆ ಸರ್ಕಾರಕ್ಕೆ ಮತ್ತು ಬಿಜೆಪಿಯ ಕೋಮುವಾದಿ ನಿಲುವುಗಳಿಗೆ ಪಂಡಿತಾರಾಧ್ಯ ಸ್ವಾಮಿಗಳು ನೇರವಾಗಿಯೇ ಸವಾಲುಗಳನ್ನು, ಪ್ರಶ್ನೆಗಳನ್ನು ಹಾಕಿದರು.

ಇದನ್ನೆಲ್ಲ ಕೇಳಿ ಆಚಾರ್ಯರಿಗೆ ತಾವು ಯಾಕಾದರೂ ಅಂದು ಅಲ್ಲಿಗೆ ಬಂದೆನು ಎಂದೆನಿಸಿದ್ದರೆ ಅಚ್ಚರಿ ಇಲ್ಲ!

ಪಂಡಿತಾರಾಧ್ಯ ಸ್ವಾಮಿಗಳ ಪ್ರತಿಯೊಂದು ಮಾತೂ ನಮ್ಮಲ್ಲಿ ಅಪಾರ ಮೆಚ್ಚುಗೆಯನ್ನು ಮೂಡಿಸಿತು. ಆದ್ದರಿಂದ ಸಭೆ ಮುಗಿದ ಕೂಡಲೇ ಅವರಿಗೆ ಕೈಮುಗಿದು "ನಿಮ್ಮ ಇಂತಹ ನಿಲುವುಗಳಿಂದಾಗಿಯೇ ನಾವೆಲ್ಲ ನಿಮ್ಮನ್ನು ಅಪಾರವಾಗಿ ಗೌರವಿಸುವುದು" ಎಂದೆ. ನಾವೆಲ್ಲ ಇನ್ನೂ ವೇದಿಕೆಯ ಮೇಲಿದ್ದಾಗಲೇ ಆಚಾರ್ಯರ ಜೊತೆ ಶಿವಸುಂದರ್ ಮಾತನಾಡುತ್ತಿರುವುದನ್ನು ನೋಡಿ ಅವರಿದ್ದಲ್ಲಿಗೆ ಹೋಗಿ "ಆಚಾರ್ಯರೇ, ಸಂವಿಧಾನದಲ್ಲಿ ಇರುವುದನ್ನು ಪದೇಪದೇ ತಿರುಚಿ ಹೇಳುವ ಮೂಲಕ ನೀವು ಪ್ರತಿಬಾರಿ ಅಂಬೇಡ್ಕರ್ ಅವರಿಗೆ ಅವಮಾನಿಸುತ್ತೀರಿ. ಸುಳ್ಳನ್ನು ಮತ್ತೆಮತ್ತೆ ಹೇಳುವ ಮೂಲಕ ಅದನ್ನೇ ಸತ್ಯವಾಗಿಸಲು ಪ್ರಯತ್ನಿಸುತ್ತೀರಿ" ಅಂದೆ. ಅದಕ್ಕೆ ಆಚಾರ್ಯರು "ಇಲ್ಲ, ಇಲ್ಲ" ಎಂದಾಗ ನಾನು "ಈಗಾಗಲೇ ಪಂಡಿತಾರಾಧ್ಯ ಸ್ವಾಮಿಗಳು ಘೋಷಿಸಿರುವಂತೆ ಅವರ ಅಧ್ಯಕ್ಷತೆಯಲ್ಲೇ ಜಾನುವಾರ ಹತ್ಯೆ ನಿಷೇಧ ಕಾನೂನು ಕುರಿತಂತೆ ಇದೇ ಸಾಣೇಹಳ್ಳಿಯಲ್ಲಿ ಚರ್ಚೆ ನಡೆಯಲಿ. ಈ ವಿಷಯ ಕುರಿತಂತೆ ಸಂವಿಧಾನ, ನ್ಯಾಯಾಲಯಗಳ ತೀರ್ಪುಗಳ ದಾಖಲೆಗಳನ್ನು ನಾವು ತರುತ್ತೇವೆ. ನೀವೂ ದಾಖಲೆಗಳನ್ನು ತನ್ನಿ. ನಾವು ನಿಮಗೆ ಸವಾಲು ಹಾಕುತ್ತೇವೆ" ಅಂದೆ. ಅಷ್ಟೇ ಅಲ್ಲ, ಪಂಡಿತಾರಾಧ್ಯ ಸ್ವಾಮಿಗಳಿಗೆ "ಈ ಚರ್ಚೆಗೇ ನೀವೇ ಒಂದು ದಿನ ನಿಗದಿ ಮಾಡಿ. ನೀವು ಹೇಳಿದಂದು ನಾವು ಹಾಜರಾಗುತ್ತೇವೆ" ಎಂದು ಶಿವಸುಂದರ್ ಮತ್ತು ನಾನು ಹೇಳಿದೆವು. ಸ್ವಾಮಿಗಳೂ ಅದಕ್ಕೆ ಒಪ್ಪಿದ್ದಾರೆ.

ಹಿಂದಿನಿಂದಲೂ ಪಂಡಿತಾರಾಧ್ಯ ಸ್ವಾಮಿಗಳು ಬಸವತತ್ವಗಳನ್ನು ಪಾಲಿಸಿಕೊಂಡು, ಎಲ್ಲಾ ಮತಗಳನ್ನು ಪೋಷಿಸಿಕೊಂಡು, ಮಾನವಧರ್ಮದ ಬಗ್ಗೆ ಅಪಾರ ಕಾಳಜಿ ತೋರುತ್ತಾ ಬಂದಿರುವವರು. ಅದೆಲ್ಲ ಅವರು ಬರೆದಿರುವ ಕೃತಿಗಳಲ್ಲೂ ಮತ್ತು ಅವರ ನೇತೃತ್ವದ ಶಿವಸಂಚಾರ ತಂಡ ಪ್ರತಿ ವರ್ಷ ಆಯ್ಕೆ ಮಾಡಿಕೊಳ್ಳುವ ನಾಟಕಗಳಲ್ಲೂ ವ್ಯಕ್ತವಾಗುತ್ತದೆ. "ನಾಟಕಗಳ ಮೂಲಕ ಸಾಮಾಜಿಕ ಜಾಗೃತಿ ಮೂಡಿಸಿ ಜನರಲ್ಲಿ ಪರಿವರ್ತನೆ ತರಬೇಕು. ದೇಶವನ್ನು ಕಟ್ಟುವ, ಬೆಳೆಸುವ ಕಾರ್ಯವನ್ನು ನಾಟಕಗಳು ಮಾಡಬೇಕು. ಜನರು ಕೇಳಿದ್ದನ್ನೆಲ್ಲ ಕೊಡುವ ಬದಲು ಅವರಿಗೆ ಏನು ಬೇಕು ಎನ್ನುವುದನ್ನು ಚಿಂತಿಸಿ ಅಂಥವನ್ನು ಮಾತ್ರ ಕೊಡುವ ಕಾರ್ಯವನ್ನು ರಂಗಭೂಮಿ ಮಾಡಬೇಕಿದೆ" ಎಂದು ನಂಬಿರುವವರು ಪಂಡಿತಾರಾಧ್ಯ ಸ್ವಾಮಿಗಳು. ಅಂದರೆ ನಾಟಕಗಳನ್ನು ಒಂದು ಕಲೆಯಾಗಿ ಮಾತ್ರ ನೋಡದೆ ಅದನ್ನು ಸಾಮಾಜಿಕ ಬದಲಾವಣೆಗೆ ಒಂದು ಅಸ್ತ್ರ ಎಂದು ನಂಬಿ ಆ ನಿಟ್ಟಿನಲ್ಲಿ ಕೆಲಸ ಮಾಡುತ್ತಿರುವವರು ಅವರು. ಪಂಡಿತಾರಾಧ್ಯ ಸ್ವಾಮಿಗಳಂತಹ ಜನಪರ, ಪ್ರಗತಿಪರ ಧಾರ್ಮಿಕ ನಾಯಕರು ಇರುವತನಕ ಈ ರಾಜ್ಯಕ್ಕೆ ಭವಿಷ್ಯವಿದೆ ಎಂಬ ನೆಮ್ಮದಿಯಂತೂ ನಮ್ಮೆಲ್ಲರದ್ದಾಗಿದೆ. ●

ಪಲ್ಲಕ್ಕಿ ಕಂಡರೆ ಏರಬಾರದು



ಅಕ್ಟೋಬರ್ ಕೊನೆಯ ದಿನಗಳಲ್ಲಿ ಮೂಡುಬಿದಿರೆಯಲ್ಲಿ ನಡೆದ 'ಆಳ್ವಾಸ್ ನುಡಿಸಿರಿ' ಸಾಂಸ್ಕೃತಿಕ ಹಬ್ಬದ ಅಧ್ಯಕ್ಷೆಯಾಗಿದ್ದ ವೈದೇಹಿಯವರು ಅತ್ಯಂತ ಸೂಕ್ಷ್ಮ ಸಂವೇದನೆಯ ಪ್ರತಿಭಾಶಾಲಿ ಬರಹಗಾರ್ತಿ. ಆದರೆ ಸಮ್ಮೇಳನದ ಉದ್ಘಾಟನೆಯ ಸಮಯದಲ್ಲಿ ಅವರನ್ನು ನಾಲ್ಕಾರು ಜನ ಆಧುನಿಕ ಬೋಯಿಗಳು ಪಲ್ಲಕ್ಕಿಯಲ್ಲಿ ಹೊತ್ತುಕೊಂಡು ಹೋದದ್ದು, ವೈದೇಹಿಯವರು ಅದರೊಳಗೆ ಕೂತಿದ್ದು ಬಹಳಷ್ಟು ಜನರಲ್ಲಿ ಬೇಸರ ತರಿಸಿದೆ.


ಇದರರ್ಥ ವೈದೇಹಿಯವರು ಪಲ್ಲಕ್ಕಿ ಮೆರವಣಿಗೆಗೆ ತಯ್ಯಾರಾಗಿ ನಿಂತಿದ್ದರೆಂದೇನೂ ಅಲ್ಲ. ನುಡಿಸಿರಿಯಲ್ಲಿ ಇದೇ ಮೊದಲ ಬಾರಿ ಸಮ್ಮೇಳನಾಧ್ಯಕ್ಷರ ಪಲ್ಲಕ್ಕಿ ಮೆರವಣಿಗೆ ಪ್ಲಾನ್ ಮಾಡಿದ್ದರಂತೆ. ವೈದೇಹಿಯವರು ಸ್ಥಳಕ್ಕೆ ಹೋದಾಗ ಅವರನ್ನು ತಕ್ಷಣ ಅದರೊಳಗೆ ಕೂರಿಸಿ ಮೋಹನ್ ಆಳ್ವ ಹೊರಿಸಿಕೊಂಡು ಹೋಗಿದ್ದಾರೆ. ಏನು ಮಾಡಬೇಕೆಂದು ಯೋಚಿಸಲೂ ಆಗದೆ ವೈದೇಹಿ ಅದರಲ್ಲಿ ಕುಳಿತರು ಎನ್ನಲಾಗಿದೆ.

ಇನ್ನೊಬ್ಬರ ಹೆಗಲ ಮೇಲೆ ಸವಾರಿ ಮಾಡುವುದು ಒಂದು ಫ್ಯೂಡಲ್ ಮೌಲ್ಯ. ಅಷ್ಟೇ ಅಮಾನವೀಯ ಕೂಡ. ಹಾಗಾಗಿ ಈ ಆಕ್ಷೇಪಣೆ.

ಇನ್ನು ನನ್ನ ಮನವಿ ಏನೆಂದರೆ ವೈದೇಹಿ ಅವರೂ ಸೇರಿದಂತೆ ಇತರೆ ಪ್ರಗತಿಪರರೂ ಮುಂದೆಯಾದರೂ ಇಂತಹ ಪ್ರಸಂಗಗಳು ಎದುರಾದಾಗ ಗೊಂದಲಗೊಳ್ಳದೆ ಪಲ್ಲಕ್ಕಿ ಮೆರವಣಿಗೆಯಂತಹ ಅಮಾನವೀಯ ಮೆರವಣಿಗೆಗಳನ್ನು ತಿರಸ್ಕರಿಸುವಂತಾಗಲಿ.

ವೈದೇಹಿ ಅವರ ಬಗ್ಗೆ ಅಪಾರ ಪ್ರೀತಿ ಮತ್ತು ಕಾಳಜಿಯಿಂದ ಇದನ್ನು ಹೇಳುತ್ತಿದ್ದೇನೆ. ಅವರು ಅನ್ಯಥಾ ಭಾವಿಸಬಾರದು.


• ಪಾರ್ವತೀಶ



‘ಅನರ್ಹ’ ಅಸ್ನೋಟಿಕರ್ ಪಟಾಕಿ

ಯಡ್ಡಿ ಹಿಟ್ಲರನಾದರೆ... ಈಶ್ವರಿ ಪಕ್ಕಾ ಕೀಚಕ...!!


ಬರೋಬ್ಬರಿ ಒಂದು ತಿಂಗಳು ಅಂತರ್‌ಪಿಶಾಚಿಯಂತೆ ರೆಸಾರ್ಟ್‌ನಿಂದ ರೆಸಾರ್ಟ್‌ಗೆ ಅಂಡಲೆದು ಸುಸ್ತಾದ ಕಾರವಾರದ "ದಾರಿ ತಪ್ಪಿದ ಶಾಸಕ" ಆನಂದ್ ಅಸ್ನೋಟಿಕರ್ ದೀಪಾವಳಿ ದಿನ ಇದ್ದಕ್ಕಿದ್ದಂತೆ ತವರಲ್ಲಿ ಪ್ರತ್ಯಕ್ಷನಾಗಿದ್ದಾನೆ! ಬರುವಾಗ ಭರ್ಜರಿ ಪಾಲಿಟಿಕಲ್ ಪಟಾಕಿ ಸರವನ್ನೇ ಈ ಅವಾಂತರಕಾರಿ ತಂದಿದ್ದಾನೆ. ಅದನ್ನು ಪ್ರವಾಸಿ ಮಂದಿರದಲ್ಲಿ ಪತ್ರಕರ್ತರ ಮುಂದೆ ಒಂದರ ಹಿಂದೊಂದರಂತೆ ‘ಪಟ್...ಪಟಾಪಟ್...’ ಎಂದು ಸಿಡಿಸಿದ್ದಾನೆ. ಆದರೆ ಈ ದೀಪಾವಳಿ ಪಟಾಕಿ ಹೊಡೆವಾಗ ಅಸ್ನೋಟಿಕರ್‌ನ ಮುಖದಲ್ಲಿ ಸಂಭ್ರಮ ಒಂಚೂರೂ ಇರಲಿಲ್ಲ; ಬದಲಾಗಿ ಸೋಲು-ಸಂಕಟ ತುಂಬಿಕೊಂಡಿತ್ತು!



"ಆಪರೇಷನ್ ಕಮಲ ಮೂಲಕ ಬಿಜೆಪಿ ಸೇರಿದ್ದ ನನ್ನ ಹೃದಯ, ಕಿಡ್ನಿ, ಮೆದುಳು... ಒಂದೊಂದೇ ಅಂಗಾಂಗ ಯಡ್ಡಿ ಪರಿವಾರ ಆಪರೇಷನ್ ಮಾಡಿ ಗುಲಾಮನಾಗಿಸಿಕೊಂಡಿತ್ತು..." ಎಂದು ಭಿನ್ನಮತ ಕ್ಲೈಮ್ಯಾಕ್ಸ್ ತಲುಪಿದಾಗೊಮ್ಮೆ ಬೆಂಗಳೂರಲ್ಲಿ ಬಡಬಡಿಸಿದ್ದ ಅಡ್ನಾಡಿ ಅಸ್ನೋಟಿಕರ್ ಈಗ ಕಾರವಾರದಲ್ಲಿ ಬಿಜೆಪಿಯೊಳಗಿನ ಗರ್ಭಗುಡಿ ಸಂಸ್ಕಾರ-ಸಂಸ್ಕೃತಿಯ ಕೊಳಕನ್ನೆಲ್ಲ ಹೊಡೆದುಹಾಕಿದ್ದಾನೆ. ಹಾಸುಂಡು ಬೀಸಿ ಎಸೆದ ಬಾಳೆಲೆಯಂತಾಗಿತ್ತು, ಬಿಜೆಪಿಯಲ್ಲಿ ತನ್ನ ಪಾಡೆಂದು ಅಲವತ್ತುಕೊಂಡಿದ್ದಾನೆ. ಸುಮಾರು ಎರಡೂವರೆ ವರ್ಷ ಯಡ್ಡಿಯ ಮಂತ್ರಿಯಾಗಿದ್ದ ಅಸ್ನೋಟಿಕರ್ ಬಿಜೆಪಿಯಲ್ಲಿ ಕಂಡುಂಡ ಭ್ರಷ್ಟಾಚಾರ-ಅನೈತಿಕ ರಾಜಕೀಯ-ಅನ್ಯಾಯ-ಅಕ್ರಮಗಳನ್ನೆಲ್ಲ ಎತ್ತಿಯಾಡಿದ್ದು ಯಡ್ಡಿ ಟೀಮಿನ ಬೇವರ್ಸಿತನವನ್ನಷ್ಟೇ ಅಲ್ಲ, ಅಸ್ನೋಟಿಕರ್‌ನ ಅಸಡ್ಡಾಳತನವನ್ನೂ ಒಟ್ಟೊಟ್ಟಿಗೆ ಅನಾವರಣ ಮಾಡಿಬಿಟ್ಟಿದೆ....

‘ಬದುಕಲು’ ಬಂಡಾಯದ ಬಾವುಟ ಹೆಗಲಿಗೇರಿಸಿಕೊಂಡು ಹೈದರಾಬಾದ್-ಚೆನ್ನೈ-ಶಿರಡಿ, ಗೋವಾ-ಬೆಂಗಳೂರು ರೆಸಾರ್ಟ್‌ಗಳು, ಅಲ್ಲಿಂದ ಜೆಡಿಎಸ್ ಅಡ್ಡೆ ಹೈಕೋರ್ಟ್ ಸುಪ್ರೀಂಕೋರ್ಟ್‌ಗೆಲ್ಲ ಉಸಿರು ಬಿಗಿಹಿಡಿದು ಓಡಾಡಿ ಬಂದಿದ್ದಾನೆ ಅಸ್ನೋಟಿಕರ್. ಆದರೆ ಆತನಿಗೆ ಹೋದಲ್ಲೆಲ್ಲ ಸೋಲೇಸೋಲು ಕಾಡಿತ್ತು. ಕಟ್ಟಕಡೆಗೆ ದಿಲ್ಲಿಗೂ ಒಂದು ರೌಂಡು ಹಾಕಿಬಂದಿದ್ದಾನೆ. ಅಲ್ಲಿ ಕಾಂಗ್ರೆಸ್ ಅಧಿನಾಯಕಿಯ ಒಡ್ಡೋಲಗದ ಆಪ್ತರೊಂದಿಗೆ ಸಣ್ಣದೊಂದು ನೈಟ್ಯಾನುಸಂಧಾನವನ್ನು ಈ ಭಿನ್ನರ ಬಣದ ವೈಸ್‌ಕ್ಯಾಪ್ಟನ್ ಮಾಡಿಬಂದಿದ್ದಾನೆ. ಅದು ವರ್ಕ್‌ಔಟಾಗುವ ಭರವಸೆಯೂ ಇಲ್ಲ, ಹೀಗಾಗಿ ಬಣ್ಣ-ಬಣ್ಣದ ಕನಸು ಕಟ್ಟಿಕೊಂಡು ಕೇಸರಿ ಪಕ್ಷಕ್ಕೆ ಹಾರಿದ್ದ ಅಸ್ನೋಟಿಕರ್‌ಗೆ ಭ್ರಮನಿರಸನ ಆಗಿದೆ! ಕ್ಷೇತ್ರದಲ್ಲಾಗಿರುವ ಡ್ಯಾಮೇಜು ಕಂಟ್ರೋಲ್‌ಗೆ ಆತ ಪಡಬಾರದ ಪಾಡು ಪಡುತ್ತಿದ್ದಾನೆ, ಪಾಪ!

ಯಡ್ಡಿ ವಿರುದ್ಧದ ಭಿನ್ನಮತದ ಸಮಸ್ಯೆ ಅಸ್ನೋಟಿಕರ್ ಕಾರವಾರದ ಶಾಸಕ ಕಂ ಮೀನುಗಾರಿಕಾ ಮಂತ್ರಿಯಾಗಿ ಬರುವಾಗ ಪವರ್‌ಫುಲ್ ಲೋಕೋಪಯೋಗಿ ಅಥವಾ ಅರಣ್ಯ ಇಲಾಖೆಯ ಮಂತ್ರಿಯಾಗಿ ಬರುವ ಮಹತ್ವಾಕಾಂಕ್ಷೆಯ ಸ್ಕೆಚ್ ಆತನಲ್ಲಿತ್ತು. ಆದರೆ ಖಾಲಿ ಕೈಲಿ ಬಂದಿದ್ದಾನೆ. ಮಂತ್ರಿಗಿರಿ ಸಾಯ್ಲಿ, ಎಮ್ಮೆಲ್ಲೆ ಸ್ಥಾನವನ್ನೂ ಯಡ್ಡಿ ತನ್ನ ಕುರ್ಚಿ ಯಜ್ಞಕ್ಕೆ ಬಲಿ ಪಡೆದು ಓಡಿಸಿದ್ದಾರೆ. ಶಾಸಕನಾದ ಕ್ಷಣದಿಂದಲೇ ಎಡವಟ್ಟುಗಳನ್ನೇ ಮಾಡುತ್ತಾ ಹೋದ ಅಸ್ನೋಟಿಕರ್ ಕ್ಷೇತ್ರ ಸಮಸ್ಯೆ-ಸಂಕಟ ಯಾವುದೂ ನೋಡದೆ ಅಧಿಕಾರ-ಹಡಬೆ ಹಣದ ಅಮಲಲ್ಲಿ ಸವಾರಿ ಮಾಡತೊಡಗಿದ್ದ. ಈ ಹುಚ್ಚು ಹುಡುಗ ಸಣ್ಣ ವಯಸ್ಸಿನಲ್ಲೇ ರಾಜಕೀಯದ ಅಂಗಳದಲ್ಲಿ ಎಡವಿಬಿದ್ದಿರುವುದು ಕಂಡು ಕಾರವಾರಿಗರು "ಮಾಡಿದ್ದುಣ್ಣೋ ಮಾರಾಯಾ... ಬೇಕಿತ್ತಾ ಅವಸರ..." ಎಂದು ನಗುತ್ತಿದ್ದಾರೆ. ಅಸ್ನೋಟಿಕರ್‌ನ ದುರಂತಕ್ಕೆ ಮರಗುವವರ್‍ಯಾರೂ ಇಲ್ಲ; ಹೇಸಿಗೆ ಪಡುವವರೇ ಹೆಚ್ಚು...



ಮಾಜಿ ಮಂತ್ರಿಯಷ್ಟೇ ಅಲ್ಲ ಮಾಜಿ ಶಾಸಕನೂ ಆಗಿಹೋಗಿರುವ ಅಸ್ನೋಟಿಕರ್ ಅದ್ಯಾವ ಪರಿ ಹತಾಶನಾಗಿದ್ದಾನೆಂದರೆ ಬಿಜೆಪಿ ಭೂಪರಾದ ಯಡ್ಡಿ, ಈಶ್ವರಿ, ಅನಂತಕುಮಾರ್, ರೆಡ್ಡೀಸ್ ಶೆಟ್ಟರ್, ರೇಣು, ಕಾಗೇರಿ... ಕಾಂಗ್ರೆಸ್‌ನ ಸೋನಿಯಾ ಗಾಂಧಿ, ಅಹ್ಮದ್ ಪಟೇಲ್, ಮೊಯ್ಲಿ, ಸಿದ್ದು... ಅಲ್ಲಿಂದ ಜೆಡಿಎಸ್‌ನ ಕುಮಾರಣ್ಣನ್ನೆಲ್ಲ ಬಾಯಿಗೆಬಂದಂತೆ ಮೂದಲಿಸಿ ಮೋಕಳಿಕೆ ಆಗುತ್ತಿದ್ದಾನೆ! ಅಷ್ಟೇ ಅಲ್ಲ ಅನರ್ಹ ತೀರ್ಪು ಕೊಟ್ಟಿರುವ ನ್ಯಾಯಾಧೀಶರನ್ನೂ ಆತ ಬಿಟ್ಟಿಲ್ಲ! ಒಂದು ತಿಂಗಳು ನಡೆದ ಭಿನ್ನಮತದ ಪ್ರಹಸನದ ಪ್ರತಿ ಸೀನನ್ನೂ ಆತ ಏಕಪಾತ್ರಾಭಿನಯದ ಮೂಲಕ ರೋಚಕವಾಗಿ ಪ್ರಸ್ತುತ ಪಡಿಸುತ್ತಿದ್ದಾನೆ....

ಪತ್ರಿಕಾಗೋಷ್ಠಿಯುದ್ದಕ್ಕೂ ಅಸ್ನೋಟಿಕರ್ ಸಿಎಂ ಯಡ್ಡಿಗೆ ಕ್ಯಾಕರಿಸಿ ಉಗಿಯುತ್ತಲೇ ಇದ್ದ! "ಆ ಸಿಎಂ ಯಡಿಯೂರಪ್ಪ ಪಕ್ಕಾ ಹಿಟ್ಲರ್... ಅಪ್ಪ ಮನೆ ಮಂದಿಯೇ ಮಂತ್ರಿ... ಅವರೇ ಸರ್ಕಾರ, ನಾವೆಲ್ಲ ಹೆಸರಿ... ಸಚಿವರಾಗಿದ್ವಿ... ಯಡ್ಡಿ ಮಂತ್ರಿ ವ... ಲದ ಸದಸ್ಯರೆಲ್ಲ ಗುಲಾಮ... ಸ್ವಾತಂತ್ರ್ಯ... ಸ್ವಾಭಿಮಾನ ಮಂತ್ರಿಗ... ಬಾರದು... ಇದ್ರೆ ಉಚ್ಚಾ... ಗ್ಯಾರಂಟಿ... ಹೀಗಾಗಿ ದುರಹಂ... ಸಿಎಂಗೆ ಸೋಮಣ್ಣ ಮತ್ತು ಶೋ... ಬಿಟ್ರೆ ಇನ್ಯಾವ ಶಾಸಕ-ಮಂತ್ರಿ... ಬೆಂಬಲವಿಲ್ಲ... ಯಡ್ಡಿಯ ಹಿ... ಕೆಯೇ ನಮ್ಮನ್ನು ಬಂಡಾಯ... ರಾಗಿಸಿತು..." ಎಂದು ಯಡ್ಡಿಯ... ಜಾಲಾಡಿಬಿಟ್ಟ ಬಚ್ಚಾ ಅಸ್ನೋಟಿ...

ರೆಬೆಲ್‌ಗಳ ಸ್ವಾರ್ಥಲಾಲಸೆಯ ಡಂಬಾಯಕ್ಕೆ ತಾತ್ಕಾಲಿಕಾದರ್ಶ-ಸಾಮಾಜಿಕ ನ್ಯಾಯದ ಲೇಪ ಹಚ್ಚಿ... ಹೋಗಿದ್ದು ಮೋಜಾಗಿತ್ತು! ಅಸ್ನೋಟಿಕರ್ ಪಡೆಯ ದ... ಯಡ್ಡಿ ಸರ್ಕಾರದ ಪರಮ ಭ್ರಷ್ಟತೆಯೇ ಪ್ರವ... ಕಾರಣವಂತೆ! ಯಡ್ಡಿಯ ಕೆಟ್ಟ ನಾಯಕತ್ವ ಮತ್ತು...

"ಆ ಪಾರ್ಟಿ ಪ್ರೆಸಿಡೆಂಟ್ ಈಶ್ವರಪ್ಪನೂ ಅಷ್ಟೇ... ಕೀಚಕನಂಥೋನು... ಅವನು ಶಾಸಕರ ಮೇಲೆ ದಬಾವ್ ಮಾಡ್ತಾನೆ... ಭಿನ್ನಮತೀಯರಿಗೆ ಮುಂದೆ ಟಿಕೆಟ್ ಇಲ್ಲ ಅಂತಾನೆ... ನಮ್ಮ ಹೊಟ್ಟೇಲಿ ಎಂಥ ಉರಿ ಬಿದ್ದೀತು... ನೀವೇ ಹೇಳಿ... ಸರ್ಕಾರದ ಸ್ಥಿರತೆಗೆ ಆಪರೇಷನ್ ಮಾಡಿಸ್ಕೊಂಡ ನಮ್ಗೆ ಈ ಈಶ್ವರಪ್ಪ ಧಮ್ಕಿ ಹಾಕ್ತಾನಂದ್ರೆ... ನಾವು ಸಿಡಿದೇಳದೆ ಮತ್ತೇನು ಮಾಡ್ಬೇಕಿತ್ತು...?"

ಭಿನ್ನಮತದ ಬೀಜ ಅನಂತ್-ರೆಡ್ಡೀಸ್-ಶೆಟ್ಟರ...


ಬಿಜೆಪಿಯಲ್ಲಿ ಭಿನ್ನಮತ ಮಾಮೂಲಿ ಪ್ರಕ್ರಿ... ಲಾಗಾಯ್ತಿನಿಂದಲೂ ಇದಕ್ಕೆ ಬಂಡಾಯದ ಕಾಯಿ... ಭಿನ್ನಮತಕ್ಕೆ ನೀರೆರೆದು ಪೋಷಿಸಿದ್ದು ಬಿಜೆಪಿಯ ರಾಷ್ಟ್ರೀ... ನಾಯಕ ಅನಂತಕುಮಾರ್, ಖಜಾಂಚಿಗಳಾದ ರೆಡ್ಡಿ... ಮತ್ತು ಜಗದೀಶ್ ಶೆಟ್ಟರ್ ಎಂದು ಬಂಡುಕೋ... ಅಸ್ನೋಟಿಕರ್ ಭರ್ಜರಿ ಬಾಂಬ್ ಸ್ಫೋಟಿಸಿದ್ದಾರೆ!

"ನಮ್ಮ ಬಂಡಾಯವೇನೂ ಮೊದಲಿನದಲ್ಲ, ಅನ... ಕುಮಾರ್ ಮೊದಲು ಯಡ್ಡಿ ವಿರುದ್ಧ ಬಂಡೆದ್ದಿದ್ದ... ನಂತರ ರೆಡ್ಡೀಸ್... ಆಮೇಲೆ ಶೆಟ್ಟರ್... ಹೀಗೆ ಸಾಲ... ಎಲ್ಲರೂ ಯಡಿಯೂರಪ್ಪನ ದುರಹಂಕಾರ-ದಾದಾ... ವಿರುದ್ಧ ಸಿಡಿದೆದ್ದಿದ್ದಾರೆ. ಶೆಟ್ಟರ್, ರೇಣುಕನನ್ನು ಮ... ಮಾಡಿದ್ದೇ ನಾವು ರೆಬೆಲ್‌ಗಳು. ಇಲ್ಲದಿದ್ರೆ ಇವು ಇದ್ದ... ಇರಬೇಕಿತ್ತು. ಈಶ್ವರಪ್ಪನೇನು ಕಮ್ಮಿ ಮಾತಾಡಿದ... ಯಡ್ಡಿ ವಿರುದ್ಧ? ಪಕ್ಷದ ಶಾಸಕರ-ಲೀಡರ್ಸ್ ಮೇ... ಈಶ್ವರಪ್ಪ ಹರಿಹಾಯೋದು ಭಿನ್ನಮತ... ಆಶಿಸ್ತು ಅಲ್ವಾ... ಆದಿರು ಸಾಗಾಣಿಕೆ ನಿಷೇಧದ ನಂತರ ಯಡ್ಡಿ ವಿರು... ದಂಗೆಗೆ ಪ್ರಚೋದಿಸಿದ್ದೇ ರೆಡ್ಡೀಸ್. ಇದಕ್ಕೆ ಅನಂ... ಶೆಟ್ಟರ್ ಬೆಂಬಲವೂ ಇತ್ತು, ನಾವು ಮಾತ್ರ ಬಲಿಪ... ಗಳಾದ್ವಿ..." ಎಂದು ಅಸ್ನೋಟಿಕರ್ ಬಿಜೆಪಿಯೊಳ... ಹೊಲಸು-ಹುಳುಕುಗಳನ್ನು ಹೊರಹಾಕಿದ್ದಾರೆ.

ಅಕಟಕಟಾ... !! ಯಡ್ಡಿ ಮಹಾತ್ಮ ಅಸ್ನೋಟಿಕರ... ಮೂದಲಿಕೆ ಕೇಳಿಸಿಕೊಂಡು ಸಿಎಂ ಕುರ್ಚಿ ಮೇಲೆ ಅದ... ಮುಖ ಹೊತ್ತು ಕೂತಿದ್ದಾರೆ! ಎಂಥ ನಾಚಿಕೆಗೇಡು...

ಹೇಡಿ ರೇಣು ರಸ್ತೆ ತಪ್ಪಿಸಿದ


ರೇಣುಕಾಚಾರ್ಯನೇ ಬಿಜೆಪಿ ಬಂಡಾಯದ ‘ಬೀಜ ಪುರುಷ’ ಆತನ ಸ್ವಾರ್ಥ-ಹೇಡಿತನದಿಂದ ಅಮಾಯಕ ಶಾಸಕರು ದಿಕ್ಕುತಪ್ಪಿ ಹೋದರಂತೆ. ಇದು ರೆಬೆಲ್ ಅಸ್ನೋಟಿಕರ್ ಅಂಬೋಣ. "ರೇಣು ಸಿಎಂ ವಿರುದ್ಧ ಅತೃಪ್ತ ಶಾಸಕರಲ್ಲಿ ಏನೆಲ್ಲ ಮಾತಾಡಿದ ಗೊತ್ತಾ? ಕುಮಾರಸ್ವಾಮಿ, ಸಿದ್ದರಾಮಯ್ಯ ಜತೆ ಒಳಒಪ್ಪಂದ ಮಾಡಿಕೊಂಡು ಭಿನ್ನಮತೀಯ ಶಾಸಕರನ್ನು ಚೆನ್ನೈ, ಮಹಾರಾಷ್ಟ್ರ, ಗೋವಾ ಎಂದೆಲ್ಲಾ ಈ ರೇಣುಕ ಸುತ್ತು ಹೊಡೆಸಿದ... ಇಂಥವನನ್ನು ಯಡ್ಡಿ ಹೇಗೆ ಮಂತ್ರಿ ಮಾಡಿಟ್ಟುಕೊಂಡಿದ್ದಾರೋ..." ಎಂದು ಅಸ್ನೋಟಿಕರ್ ಅರಚುತ್ತಿದ್ದುದು ಮೋಜಾಗಿದೆ.



ರೇಣು ಒಂದಲ್ಲ ಮೂರು ಬಾರಿ ಬಂಡಾಯಗಾರರನ್ನು ಪ್ರಚೋದಿಸಿದ್ದ. ಇವನ ನಂಬಿ ನಾವು ಚೆನ್ನೈನಿಂದ ಮುಂಬೈಗೆ ಹೋಗಿದ್ವಿ... ಅಲ್ಲಿ ಶಿವಸೇನೆಯವರು ಅಟ್ಟಿಸಿಕೊಂಡು ಬಂದ್ರು. ಗೋವಾ ಸೇಫ್ ಅಂತ ಅಲ್ಲಿಗೆ ಹೋದ್ವಿ. ಅಲ್ಲಿಯ ಸರ್ಕಾರದಿಂದ ರಕ್ಷಣೇನೂ ಕೇಳಿದ್ವಿ. ಅಲ್ಲಿ ಬಿಜೆಪಿ ಲೀಡರ್‌ಗಳು ನಮಗೆ ತರತರದ ಆಮಿಷ ಒಡ್ಡಿದ್ರು... ಆದ್ರೆ ನಮ್ದು ಒಂದೇ ಬೇಡಿಕೆ... ದುರಹಂಕಾರಿ ಭ್ರಷ್ಟ ಸಿಎಂ ಯಡ್ಡಿ ನಾಯಕತ್ವ ಬದಲಾಯಿಸಿ ಎಂದಿದ್ವಿ... ಈಗಲಾದ್ರೂ ಬಿಜೆಪಿ ಹೈಕಮಾಂಡ್ ಎಚ್ಚೆತ್ತು ಯಡ್ಡಿನ ಮನೆಗೆ ಕಳಿಸಬೇಕು... ಆಗ ಮಾತ್ರ ಪಾರ್ಟಿ ಉಳೀತದೆ... ಇಲ್ಲಾಂದ್ರೆ ಗೋ...ವಿಂ...ದಾ...! ಹೀಗೆ ಅಸ್ನೋಟಿಕರ್ ಭಿನ್ನಮತ ಎಪಿಸೋಡ್‌ನ ಸೀನರಿ ಬಿಚ್ಚುತ್ತಾ ಹೋದರು.

ಮೊಯ್ಲಿ ಮಸಲತ್ತು; ಕುಮಾರ್ ಕಸರತ್ತು


"ಯಡ್ಡಿ ಗ್ಯಾಂಗ್ ಅಂದರೆ ಅಲಿಬಾಬಾ ಮತ್ತು ಚಾಲೀಸ್ ಚೋರ್ ಇದ್ದಂತೆ" ಎಂದು ಕಟುಕಿಯಾಡಿರುವ ‘ಮಾಜಿ’ ಅಸ್ನೋಟಿಕರ್ "ಯಡ್ಡಿ ಸಂಪುಟದಲ್ಲಿ ಲಿಂಗಾಯತರದೇ ಹಾವಳಿ... ನಾಲ್ವರು ಬ್ರಾಹ್ಮಣರು ಬೇರೆಯಿದ್ದಾರೆ... ಇಲ್ಲಿ ಹಿಂದುಳಿದವರಿಗೆ, ದಲಿತರಿಗೆ ಕ್ಯಾರೇ ಎನ್ನುವುದಿಲ್ಲ." ಎಂದು ಸಾಮಾಜಿಕ ನ್ಯಾಯದ ಬುರುಡೆಯೂ ಬಿಟ್ಟಿದ್ದಾರೆ. ದುರಾಸೆಗೆ ಬಿದ್ದು ಕೋಮುವಾದಿ ತೆಕ್ಕೆಗೆ ಬಿದ್ದ ಅಸ್ನೋಟಿಕರ್ ಯಡ್ಡಿಯ ಜಾತಿಯತೆ, ಧರ್ಮಾಂಧತೆ ಬಗ್ಗೆ ಮಾತಾಡಿದರೆ ದೆವ್ವ ಭಗವದ್ಗೀತೆ ಹೇಳಿದಂತಾಗುತ್ತದೆ ಅಲ್ಲವೇ?



ಶಾಸಕತ್ವವನ್ನೂ ಕಳೆದುಕೊಂಡಿರುವ ಅಸ್ನೋಟಿಕರ್‌ನ ತಲೆ ಅದ್ಯಾವ ಪರಿ ಕೆಟ್ಟುಹೋಗಿದೆಯೆಂದರೆ ‘ಕಷ್ಟಕಾಲದಲ್ಲಿ ನೆರವಿಗೆ ಬಂದಿದ್ದ ಜೆಡಿಎಸ್‌ನ ಕುಮಾರಸ್ವಾಮಿ ಕೈಯಾಡಿಸಿದ್ದರಿಂದಲೇ ಅದು ಬಗಡಾಯಿಸಿತು... ಆತ ಕೇಳದಿದ್ದರೂ ಸಹಾಯಕ್ಕೆ ಬಂದಿದ್ರು.. ಕುಮಾರಸ್ವಾಮಿ ಮತ್ತು ಸಿದ್ದರಾಮಯ್ಯ ಬಿಜೆಪಿ ಭಿನ್ನಮತದ ಲಾಭ ಹೊಡೆಯಲು ಹವಣಿಸಿದರು.. ಕೇಂದ್ರ ಕಾನೂನು ಮಂತ್ರಿ ಮೊಯ್ಲಿ, ಸೋನಿಯಾ ಗಾಂಧಿ ಆಪ್ತ ಅಹ್ಮದ್ ಪಟೇಲ್ ಭಿನ್ನರಿಗೆ ಆಸೆ ತೋರಿಸಿ ಬಲಿಪಶು ಮಾಡಿದರು. ನಮ್ಗೆ ಈ ಮೀಡಿಯೇಟರ್‌ಗಳ ಅವಶ್ಯಕತೆ ಇಲ್ಲ...’ ಎಂದು ಅಸ್ನೋಟಿಕರ್ ಮೈಪರಚಿಕೊಂಡಿದ್ದು ಆತನ ರಾಜಕೀಯ ಪತನ ಬಿಂಬಿಸುವಂತಿತ್ತು!!

ಸಿಎಂ-ಸಿಜೆ ಸಂಧಿಸಿದ್ದೇಕೆ?

ಹೈಕೋರ್ಟ್ ತನ್ನ ಶಾಸಕತ್ವ ಅನರ್ಹತೆ ಬಗ್ಗೆ ಕೊಟ್ಟ ತೀರ್ಪಿನಿಂದ ನ್ಯಾಯಾಂಗ ವ್ಯವಸ್ಥೆಯ ಬಗ್ಗೆಯೇ ಸಂಶಯಪಡುವಂತಾಗಿದೆ ಎಂದು ‘ಅನರ್ಹ’ ಅಸ್ನೋಟಿಕರ್ ಅಲವತ್ತುಕೊಂಡಿದ್ದಾನೆ. "ಭಯೋತ್ಪಾದಕ ಕಸಬ್‌ಗೂ ಸಮರ್ಥಿಸಿಕೊಳ್ಳಲು ಸಾಕಷ್ಟು ಅವಕಾಶ ಕೊಡಲಾಗಿತ್ತು. ಆದರೆ ಅನರ್ಹಗೊಂಡ ಶಾಸಕರಿಗೆ ಸಮರ್ಥನೆಗೆ ಅವಕಾಶಗಳೇ ಕೊಡಲಿಲ್ಲ. ಯಾವುದೇ ವಿಪ್ ನಮಗೆ ಪಾರ್ಟಿಯಿಂದ ಬಂದಿರಲಿಲ್ಲ, ಆದರೂ ಸ್ಪೀಕರ್ ಏಕಪಕ್ಷೀಯವಾಗಿ ಭಿನ್ನಮತೀಯರ ಅನರ್ಹ ಮಾಡಿದ್ದಾರೆ. ಇದೆಂಥ ನ್ಯಾಯ...?"



"ಹೈಕೋರ್ಟ್‌ನಿಂದಲೂ ಭಿನ್ನ ತೀರ್ಪು ಬಂದಿದೆ. ದೇಶಕ್ಕೆ ಇರುವುದು ಅಂಬೇಡ್ಕರ್ ಬರೆದ ಒಂದೇ ಸಂವಿಧಾನ.. ಹೀಗಿರುವಾಗ ಎರಡು ತೀರ್ಪು ಹೇಗೆ ಬಂತು... ತೀರ್ಪು ಬರುವ ಒಂದು ದಿನ ಮೊದಲು ಮುಖ್ಯ ನ್ಯಾಯಮೂರ್ತಿ ಜೆ.ಎಸ್.ಖೆಹರ್‌ರನ್ನು ಸಿಎಂ ಭೇಟಿ ಮಾಡಿದ್ದೇಕೆ? ಮೈಸೂರಲ್ಲಿ ಸಿಜೆ-ಸಿಎಂ ಒಂದೇ ದಸರಾ ವೇದಿಕೆ ಹಂಚಿಕೊಂಡಿದ್ದೇಕೆ? ಕೆಲವು ದಿನ ಹೋಗ್ಲಿ... ನಾಯಕರ-ನ್ಯಾಯಾಧೀಶರ, ಪಾಲಿಟಿಷಿಯನ್‌ಗಳ ಬಣ್ಣ ಬಯಲಾಗಿಸ್ತೇನೆ...!!" ಎಂದು ಅಸ್ನೋಟಿಕರ್ ಹೇಳುವಾಗ ಆತನ ಬಿಳಿಮುಖ ಕೆಂಪಾಗಿತ್ತು! ಕಣ್ಣಂಚಲ್ಲಿ ನೋವಿನ ಹನಿಯಿತ್ತು!


ಬಯಸಲಷ್ಟೇ ಅವರು ಸಿಡಿದೆದ್ದಿದ್ದರಂತೆ. ಸಾಮಾಜಿಕ ನ್ಯಾಯ ಲವಲೇಶವೂ ಇಲ್ಲದ ಸಿಎಂ ಸಾಹೇಬರು ಶಾಸಕರನ್ನೂ ಹೀನಾಯವಾಗಿ ನಡೆಸಿಕೊಳ್ಳುತ್ತಿದ್ದರಂತೆ. ಕ್ಷೇತ್ರಾಭಿವೃದ್ಧಿಗೆ ಹಣ ಕೊಡಿಯೆಂದರೆ "ನನ್ನಪ್ಪ ದುಡ್ಡಿನ ಗಿಡ ನೆಟ್ಟಿಲ್ಲ.. ಹೋಗು.. ಹೋಗೋ... ನೀನು ಮಂತ್ರಿಯಾಗಿರೋದೆ ಮೂರ್ಖತನಕ..." ಎಂದು ಯಡ್ಡಿ ಅಸ್ನೋಟಿಕರ್‌ನ ಬೈದು ಅಟ್ಟಿದ್ದರಂತೆ. ಇಂಥ ಹಿಟ್ಲರ್ ಸಂಗಡ ಏಗಲಾಗದೇ ರಾಜ್ಯಪಾಲರಿಗೆ ಬೆಂಬಲ ವಾಪಸಾತಿ ಪತ್ರ ಕೊಡಬೇಕಾಯ್ತಂತೆ..."

ಇದೇ ಓಘದಲ್ಲಿ ಓತಪ್ರೋತವಾಗಿ 'ಮಾಜಿ' ಅಸ್ನೋಟಿಕರ್‌ನ ಆಲಾಪ ಮುಂದುವರೆದಿತ್ತು. "ಆ ಪಾರ್ಟಿ ಪ್ರೆಸಿಡೆಂಟ್ ಈಶ್ವರಪ್ಪನೂ ಅಷ್ಟೇ... ಕೀಚಕನಂಥೋನು... ಅವನು ಶಾಸಕರ ಮೇಲೆ ದಬಾವ್ ಮಾಡ್ತಾನೆ... ಭಿನ್ನಮತೀಯರಿಗೆ ಮುಂದೆ ಟಿಕೆಟ್ ಇಲ್ಲ ಅಂತಾನೆ... ನಮ್ಮ ಹೊಟ್ಟೇಲಿ ಎಂಥ ಉರಿ ಬಿದ್ದೀತು... ನೀವೇ ಹೇಳಿ... ಸರ್ಕಾರದ ಸ್ಥಿರತೆಗೆ ಆಪರೇಷನ್ ಮಾಡಿಸ್ಕೊಂಡ ನಮ್ಗೆ ಈ ಈಶ್ವರಪ್ಪ ಧಮ್ಕಿ ಹಾಕ್ತಾನಂದ್ರೆ... ನಾವು ಸಿಡಿದೇಳದೆ ಮತ್ತೇನು ಮಾಡ್ಬೇಕಿತ್ತು...?"

ಇಂಥ ಹಲವು "ಅಮೃತವಾಣಿ" ಅಸ್ನೋಟಿಕರ್ ಬಾಯಿಂದ ಉದುರಿದೆ. ಅವು ಬಾಕ್ಸ್‌ನಲ್ಲಿದೆ. ಇವೆಲ್ಲ ಮೇಲ್ನೋಟಕ್ಕೆ ಮೋಜಾಗಿ ಕಂಡರೂ ಆಳದಲ್ಲಿ ಶೀಲ-ಶಿಸ್ತು ಗುತ್ತಿಗೆ ಹಿಡಿದಂತೆ ಹಾರಾಡುವ ಬಿಜೆಪಿ ಭಂಡರ ಬುರ್ನಾಸ್ ರಾಜಕೀಯದಿಂದ ಕರ್ನಾಟಕಕ್ಕೆ ಎಂಥ ಕೇಡಾಗುತ್ತಿದೆ, ಅದೆಂಥ ಅನ್ಯಾಯ-ಅರಾಜಕತೆ ರಾಜ್ಯದಲ್ಲಿ ತಾಂಡವವಾಡುತ್ತಿದೆ ಎಂಬುದನ್ನು ನಿಚ್ಚಳವಾಗಿ ಬಿಚ್ಚಿಟ್ಟಿದೆ!! ಹೇ... ರಾಮ್...!

• ನಹುಶ

ಕಾಗೇರಿ ಕರಾಮತ್ತು



ಪಕ್ಕಾ ಚಡ್ಡಿ ರಾಜಕಾರಣ ಮಾಡುವ ಉ.ಕನ್ನಡ ಜಿಲ್ಲಾ ಉಸ್ತುವಾರಿ ಮಂತ್ರಿ ಕಾಗೇರಿ ಮೇಲೆ ನೇರಾನೇರ ಆರೋಪ ಮಾಡಿದ್ದಾನೆ ರೆಬೆಲ್ ಅಸ್ನೋಟಿಕರ್; ಸಂಭಾವಿತನಂತೆ, ಪ್ರಾಮಾಣಿಕನಂತೆ ಪೋಸ್ ಕೊಡುವ ಕಾಗೇರಿಯ ಮಾನ ಹರಾಜು ಹಾಕಿದ್ದಾನೆ. ಕಾಗೇರಿಗೆ ಇಂಥ ಅವಮಾನಕರ ಹೊಡೆತ ಬಿದ್ದಿದ್ದು ಬಹುಶಃ ಇದೇ ಫಸ್ಟ್.

"ಆ ಕಾಗೇರಿ ನಾನು ಮಂತ್ರಿಯಾದ ಕ್ಷಣದಿಂದ ಹೊಂಚು ಹಾಕಿ ಸಂಚು ಮಾಡ್ತಾನೇ ಬಂದ್ರು... ನನ್ನ ಕ್ಷೇತ್ರದ ಸಮಸ್ಯೆಗೆಲ್ಲ ಆತನೇ ಕಾರಣ. ಮರಳು ಗೋವಾಕ್ಕೆ ಹೋಗದಂತೆ ಮಾಡಿ ಜನ ನಮ್ಮ ವಿರುದ್ಧ ತಿರುಗಿ ಬೀಳುವಂತೆ ಮಾಡಲು ನೋಡಿದ್ರು... ಅಭಿವೃದ್ಧಿ ಅನುದಾನದಲ್ಲಿ ನನ್ನ ತೇಜೋವಧೆ-ಅನ್ಯಾಯ ಮಾಡಿ ದೊಡ್ಡ ಪಾಲು ತನ್ನ ಶಿರಸಿ-ಸಿದ್ದಾಪುರಕ್ಕೆ ಒಯ್ದಿದ್ರು.. ಜಿಲ್ಲಾ ಕೇಂದ್ರದಲ್ಲಿದ್ದ ಮುಖ್ಯ ಕಚೇರಿ ಒಂದೇ ಏಟಿಗೆ ಶಿರಸಿಗೆ ಒಯ್ದಿದ್ದಾರೆ... ಆತ ಮಾಡಿದ ಅನಾಚಾರ ಒಂದೆರಡಲ್ಲ... ಸಿಎಂಗೆ ಸುಳ್ಳು-ಸುಳ್ಳೇ ನನ್ನ ಬಗ್ಗೆ ಚಾಡಿ ಹೇಳಿ ಅವರ ಮನಸು ಕೆಡಿಸುತ್ತಿದ್ರು... ಆತ ಕೊಟ್ಟ ಕಿರುಕುಳ ಹೇಳತೀರದು....


ಈಗ ಸಿಎಂ ಕರೆಸಿ ಕಾರವಾರ ಇಂಜಿನಿಯರಿಂಗ್ ಕಾಲೇಜಿಗೆ ಅಡಿಗಲ್ಲು ಹಾಕಿಸ್ತೀನಿ ಅಂತಿದ್ದಾರಲ್ಲ... ಇದೇ ಕಾಗೇರಿ ನಾನು ಕಾರವಾರಕ್ಕೆ ಇಂಜಿನಿಯರಿಂಗ್ ಕಾಲೇಜು ಬೇಕೆಂದು ಕ್ಯಾಬಿನೆಟ್ ಮೀಟಿಂಗ್‌ನಲ್ಲಿ ಒತ್ತಾಯ ಮಾಡಿದಾಗ ಅಡ್ಡಗಾಲು ಹಾಕಿದ್ರು... ಅಂದು ಜನಾರ್ದನ ರೆಡ್ಡಿ, ಲಿಂಬಾವಳಿ ಸಂಗೆ ಸಪೋರ್ಟ್ ಮಾಡದಿದ್ರೆ ಕಾರವಾರಕ್ಕೆ ಇಂಜಿನಿಯರಿಂಗ್ ಕಾಲೇಜು ಸ್ಯಾಂಕ್ಷನ್ ಆಗ್ತಿರ್ಲಿಲ್ಲ... ಇಷ್ಟಕ್ಕೆ ಕಾಗೇರಿ ಹೊಟ್ಟೆಕಿಚ್ಚು ನಿಲ್ಲಲಿಲ್ಲ... ಕಾಲೇಜು ಕಟ್ಟಡಕ್ಕೆ ಹಣ ಬಿಡುಗಡೆಯಾಗದಂತೆ ಮಾಡಿದ್ರು... ಈಗ ಇದೇ ಕಾಲೇಜು ಶಿರಸಿಗೆ ಸ್ಥಳಾಂತರಿಸಲು ಕಿತಾಪತಿ ಮಾಡ್ತಿದ್ದಾರೆ...

ಬೇಲೆಕೇರಿ ಬಂದರಿನ ಎರಡು ಅದಿರು ರಫ್ತು ಕಂಪನಿಗಳಿಂದ ಕಾಗೇರಿ ರೆಗ್ಯುಲರ್ ಆಗಿ ಹಫ್ತಾ ಪಡೀತಿದ್ರು. ನನ್ನ ರಾಜಕೀಯ ವಿರೋಧಿಯಾದ ಕಾಂಗ್ರೆಸ್ಸಿನ ಅದಿರು ಉದ್ಯಮಿಯೊಬ್ಬನನ್ನು ಬೆಂಗಳೂರಿನ ತನ್ನ ಮಂತ್ರಿ ಚೇಂಬರಿಗೆ ಕರೆಸಿಕೊಂಡು ದಂಧೆ ನಡೆಸ್ತಿದ್ರು... ಈ ಉದ್ಯಮಿಯ ರದ್ದಾದ ಬಂದರು ಲೀಸ್ ಕಾಗೇರಿಯೇ ಮುತುವರ್ಜಿ ವಹಿಸಿ ನವೀಕರಿಸಿಕೊಟ್ಟಿದ್ದರು... ಸಿಬಿಐ ತನಿಖೆಯಾದ್ರೆ ಕಾಗೇರಿ ಬಣ್ಣ ಬಯಲಾಗುತ್ತದೆ... ಅವನ ಅಕ್ರಮದ ಬಗ್ಗೆ ಹಲವು ದಾಖಲೆ ನನ್ನಲ್ಲಿದೆ. ಈ ದೌರ್ಜನ್ಯ ಸಹಿಸಿಕೊಂಡು ನಾನು ಬಿಜೆಪಿಯಲ್ಲಿರಬೇಕಾ...?

ಇದು ಅಸ್ನೋಟಿಕರ್‌ನ ಜಿಲ್ಲಾ ಮಟ್ಟದ ಸಮಸ್ಯೆ •

ಕುಂತಲ್ಲಿಂದ ಕದಲದ ಡಿ.ಸಿ.ಗಳು

ರೆಡ್ಡಿ ರಾಜ್ಯದಲ್ಲಿ ಯಡ್ಡಿ ಕಾಲ ಕಸ!



ಯುದ್ಧವಿನ್ನೂ ಮುಗಿದಿಲ್ಲ....

ಇಂತಹುದೊಂದು ಸೂಚನೆ ಬಂಡಾಯದ ಬೆಂಕಿಯಿಂದ ಪಾರಾಗಿ ನಿಸೂರಾದಂತೆ ನಟಿಸುತ್ತಿರುವ ಬಿಜೆಪಿಯೊಳಗಿಂದ ಆಗಾಗ ಪ್ರಕಟವಾಗುತ್ತಿದೆ. ಯಡಿಯೂರಪ್ಪ 'ನಾವು ಒಗ್ಗಟ್ಟಾಗಿದ್ದೇವೆ' ಅಂತ ಅದೆಷ್ಟೇ ಕಿರುಲಿದರೂ ಒಡಕುಗಳನ್ನು ಮುಚ್ಚಿಡಲಾಗುತ್ತಿಲ್ಲ. ಇದೆಲ್ಲದರ ನಡುವೆ ಯಡ್ಡಿ-ರೆಡ್ಡಿಗಳ ನಡುವೆ ದೊಡ್ಡದೊಂದು ಕಂದಕವೇ ಸೃಷ್ಟಿಯಾದಂತಿದೆ. ಇದಕ್ಕೆ ಕಳೆದ ತಿಂಗಳು ಯಡ್ಡಿ ಹೊರಡಿಸಿದ ಡಿ.ಸಿ.ಗಳ ವರ್ಗಾವಣೆ ಆದೇಶ ಹಾಗೂ ರೆಡ್ಡಿಗಳು ಅದರ ವಿರುದ್ಧ ನಡೆಸಿರುವ ತಣ್ಣನೆಯ ಪ್ರತಿರೋಧ ಪ್ರತ್ಯಕ್ಷ ಸಾಕ್ಷಿ!

ಕಳೆದ ತಿಂಗಳು ಖುದ್ದು ಯಡಿಯೂರಪ್ಪರೇ ಚಿತ್ರದುರ್ಗ ಜಿಲ್ಲಾಧಿಕಾರಿ ಅಮ್ಲಾನ್ ಆದಿತ್ಯ ಬಿಸ್ವಾಸ್‌ರನ್ನು ಬಳ್ಳಾರಿಗೆ, ಗದಗದ ಎನ್.ವಿ. ಪ್ರಸಾದ್‌ರನ್ನು ಚಿತ್ರದುರ್ಗಕ್ಕೆ ವರ್ಗಾವಣೆ ಮಾಡಿ ಆದೇಶ ಹೊರಡಿಸಿದ್ದರು. ಇದರೊಂದಿಗೆ ಬಳ್ಳಾರಿ ಜಿಲ್ಲಾಧಿಕಾರಿ ಬಿ. ಶಿವಪ್ಪ ವರ್ಗಾವಣೆಗೂ ಆದೇಶ ಬಂದಿತ್ತಾದರೂ ಅವರಿಗೆ ಬೇರೆ ಜಾಗ ನಿಗದಿಯಾಗಿರಲಿಲ್ಲ. ಅಸಲಿ ವಿಚಾರವೆಂದರೆ ಈ ಆದೇಶ ಹೊರಬಿದ್ದು ಇಪ್ಪತ್ತು ದಿನಗಳಾಗಿವೆ. ಆದರೆ ಈ ಡಿ.ಸಿ.ಗಳು ಬೇರೆಡೆಗೆ ಹೋಗದೆ ಇದ್ದಲ್ಲೇ ಅಲ್ಲಾಡದೆ ಕುಳಿತುಬಿಟ್ಟಿದ್ದಾರೆ!

ಸಾಕ್ಷಾತ್ ಮುಖ್ಯಮಂತ್ರಿಯ ಆದೇಶವನ್ನೇ ಕಡೆಗಣಿಸುವುದೆಂದರೆ, ಅದರ ಹಿಂದೆ ಬಲವಾದುದೊಂದು ಶಕ್ತಿ ಇರಲೇಬೇಕು. ಅದರ ಹಿಂದೆ ಹಿತಾಸಕ್ತಿಗಳಂತೂ ಇದ್ದೇ ಇರುತ್ತವೆ. ಈ ಬಗ್ಗೆ ತಲಾಷಿಗಿಳಿದರೆ ಜನಾರ್ದನ ರೆಡ್ಡಿ ಪಟಾಲಂನ ಝಲಕುಗಳೇ ಎದುರಾಗುತ್ತವೆ. ಯಾಕೆಂದರೆ ವರ್ಗಾವಣೆ ಆದೇಶ ಧಿಕ್ಕರಿಸಿದ ಡಿಸಿಗಳು ಪ್ರತಿನಿಧಿಸುವ ಚಿತ್ರದುರ್ಗ, ಗದಗ ಹಾಗೂ ಬಳ್ಳಾರಿ ಜಿಲ್ಲೆಗಳು ಕ್ರಮವಾಗಿ ಕರುಣಾಕರ ರೆಡ್ಡಿ, ಶ್ರೀರಾಮುಲು, ಜನಾರ್ದನ ರೆಡ್ಡಿಗಳ ಉಸ್ತುವಾರಿಗೊಳಪಟ್ಟಿವೆ. ಒಂದರ್ಥದಲ್ಲಿ ಅದು ರೆಡ್ಡಿ ರಾಜ್ಯ!

ಗಮನೀಯ ಅಂಶವೆಂದರೆ, ಯಡಿಯೂರಪ್ಪ ಹತ್ತಕ್ಕೂ ಹೆಚ್ಚು ಜಿಲ್ಲಾಧಿಕಾರಿಗಳನ್ನು ವರ್ಗಾವಣೆ ಮಾಡಿದ್ದಾರೆ. ಅವರಲ್ಲಿ ಈ ಮೂವರನ್ನು ಬಿಟ್ಟು ಮತ್ತೆಲ್ಲರೂ ನಿರ್ದೇಶಿತ ಜಾಗಗಳಿಗೆ ತೆರಳಿ ಅಧಿಕಾರ ವಹಿಸಿಕೊಂಡಿದ್ದಾರೆ. ಆದರೆ ರೆಡ್ಡಿ ಪಟಾಲಂನ ಪಾರುಪತ್ಯವಿರುವ ಪ್ರದೇಶದ ಡಿಸಿಗಳು ಮಾತ್ರ ಆದೇಶ ಧಿಕ್ಕರಿಸಿದ್ದಾರೆಂದರೆ ಅದು ಯಡ್ಡಿ-ರೆಡ್ಡಿ ಬಣಗಳ ನಡುವೆ ಯುದ್ಧ ನಿರಂತರವಾಗಿರುವ ಸೂಚನೆಯಲ್ಲದೆ ಮತ್ತೇನೂ ಅಲ್ಲ.

ಈಗ್ಗೆ ಒಂದು ವರ್ಷದ ಹಿಂದೆ ಸರಿಯಾಗಿ ಇದೇ ತಿಂಗಳಲ್ಲಿ ಯಡಿಯೂರಪ್ಪ ಇದೇ ಶಿವಪ್ಪ ಮತ್ತು ಎನ್.ವಿ. ಪ್ರಸಾದ್‌ರನ್ನು ವರ್ಗಾವಣೆ ಮಾಡಿದ್ದರು. ಅದರ ವಿರುದ್ಧ ಬುಸುಗುಟ್ಟಿದ್ದ ರೆಡ್ಡಿ ಪಡೆ ಕೆಲ ಶಾಸಕರನ್ನು ಹೈಜಾಕ್ ಮಾಡಿಕೊಂಡು ಹೈದರಾಬಾದ್‌ಗೆ ಟೂರು ಹೊಡೆದಿತ್ತು. ಅಲ್ಲಿಂದಲೇ ಬೆದರಿಕೆಗಳೂ ರವಾನೆಯಾಗಿ ಹೆದರಿದ ಯಡ್ಡಿ ಕೂಡಲೇ ವರ್ಗಾವಣೆ ರದ್ದುಗೊಳಿಸಿದ್ದರು.

ಅದೇ ಯಡಿಯೂರಪ್ಪ ಇದೀಗ ಮತ್ತೆ ಆ ಜಿಲ್ಲಾಧಿಕಾರಿಗಳನ್ನೇ ವರ್ಗಾವಣೆ ಮಾಡುತ್ತಾರೆಂದರೆ, ಅದರ ಹಿಂದೆ ರೆಡ್ಡಿ ಬ್ರದರ್ಸ್‌ಗೆ ಥ್ರೆಟ್ ಕೊಡುವ ಉದ್ದೇಶವಿದ್ದೇ ಇರುತ್ತದೆ. ಆದರೆ ಇಂಥಾ ವಿಷಮ ಪರಿಸ್ಥಿತಿಯಲ್ಲಿ ಯಡ್ಡಿಗೆ ಇಂಥಾ ಧೈರ್ಯ ಹ್ಯಾಗೆ ಬಂತೆಂಬುದೇ ಮುಖ್ಯ ಪ್ರಶ್ನೆ.


ಸದ್ಯದ ವಿದ್ಯಮಾನಗಳನ್ನು ಗಮನಿಸುತ್ತಿದ್ದರೆ, ಬಿಜೆಪಿಯೊಳಗೆ ಯಾರು ಯಾರ ಮಿತ್ರರೋ, ಯಾರು ಯಾರಿಗೆ ಶತ್ರುಗಳೋ ಎಂಬುದೇ ತಿಳಿಯದ ಅಯೋಮಯ ಪರಿಸ್ಥಿತಿಯಿದೆ. ಈ ಕಡೆಯಿಂದ ಯಡ್ಡಿ 'ಬಿಜೆಪಿಯಲ್ಲೆಲ್ಲರೂ ಒಗ್ಗಟ್ಟಿಂದಿದ್ದಾರೆ' ಅಂತ ಹೇಳಿಕೆ ಎಸೆದರೆ, ಅತ್ತಲಿಂದ ಬಿಜೆಪಿ ರಾಜ್ಯಾಧ್ಯಕ್ಷ ಈಶ್ವರಪ್ಪ 'ರೆಡ್ಡಿಗಳೇನು ಇಂಟರ್‌ನ್ಯಾಷನಲ್ ಲೀಡರ್ರಾ?' ಅಂತ ಸವಾಲೆಸೆಯುತ್ತಾರೆ!

ಇನ್ನೊಂದು ಕಡೆಯಿಂದ ಅನರ್ಹಗೊಂಡಿರುವ ಶಾಸಕ ಬೇಳೂರು ಗೋಪಾಲಕೃಷ್ಣ ಈಶ್ವರಪ್ಪ-ಯಡ್ಡಿ ನಡುವೆಯೇ ಬಾಂಬ್ ಇಕ್ಕಿದ್ದಾನೆ. ಅದರನ್ವಯ ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ಯಡ್ಡಿ ಮಗ ರಾಘವೇಂದ್ರನ ವಿರುದ್ಧ ಕೆಲಸ ಮಾಡುವಂತೆ ಖುದ್ದು ಈಶ್ವರಪ್ಪನೇ ಬೇಳೂರಿಗೆ ತಾಕೀತು ಮಾಡಿದ್ದರಂತೆ! ಶಿವಮೊಗ್ಗದ ರಾಜಕೀಯ ಬಲ್ಲವರಿಗೆ, ಯಡ್ಡಿ-ಈಶ್ವರಪ್ಪ ನಡುವಿನ 'ಬಾಂಧವ್ಯ'ದ ಪರಿಚಯವಿರುವವರಿಗೆ ಇದು ಅತಿಶಯೋಕ್ತಿ ಅನ್ನಿಸುತ್ತಿಲ್ಲ.

ಆದರೆ ಸದ್ಯದ ಬಿಜೆಪಿಯೊಳಗಿನ ಪರಿಸ್ಥಿತಿಗಳ ಸಂದರ್ಭದಲ್ಲಿ ಇವೆಲ್ಲ ಆಂತರಿಕ ಕಲಹ ಉತ್ತುಂಗಕ್ಕೇರುವ ಸೂಚನೆಗಳಂತೆಯೇ ಕಾಣಹತ್ತಿವೆ.



ಪ್ರಸಾದ್



ಶಿವಪ್ಪ



ಬಿಶ್ವಾಸ್


ಇದಕ್ಕೆ ಸರಿಯಾಗಿ ರೆಡ್ಡಿ ಪಟಾಲಂ ಅವಿವೇಕಿ ವರ್ತೂರು ಪ್ರಕಾಶ್‌ರನ್ನು ಕಟ್ಟಿಕೊಂಡು ನಿತಿನ್ ಗಡ್ಕರಿಯನ್ನು ಮಾತಾಡಿಸಿಕೊಂಡು ಬಂದಿದೆ. ಗಡ್ಕರಿ ಮುಂದೆ ವರ್ತೂರನಿಗೆ ಸಚಿವಗಿರಿ ಕೊಡುವಂತೆ ಅಹವಾಲನ್ನೂ ಸಲ್ಲಿಸಿದೆ. ಇಲ್ಲಿನ ಪರಿಸ್ಥಿತಿ ಹೇಗಿದೆಯೆಂದರೆ, ಯಡಿಯೂರಪ್ಪ ವರ್ತೂರನಿಗೆ ಸಚಿವಗಿರಿ ಕೊಡಲೊಪ್ಪಿದರೆ, ಈಶ್ವರಪ್ಪ ಅಡ್ಡಗಾಲಾಗುತ್ತಿದ್ದಾರೆ. ಅಷ್ಟಕ್ಕೂ ರೆಡ್ಡಿಗಳು ಇಲ್ಲೇ ಮಾತುಕತೆ ನಡೆಸಿ ವರ್ತೂರನಿಗೆ ಸಚಿವ ಸ್ಥಾನ ಕೊಡಿಸಲು ಪ್ರಯತ್ನಿಸಬಹುದಿತ್ತಲ್ಲಾ? ಇದು ಯಾಕೆ ಸಾಧ್ಯವಾಗಿಲ್ಲವೆಂದರೆ, ರಾಜ್ಯ ಬಿಜೆಪಿಯಲ್ಲೀಗ ಒಬ್ಬರ ಮುಖ ಇನ್ನೊಬ್ಬರು ನೋಡುವ ಪರಿಸ್ಥಿತಿಯಿಲ್ಲ.

ಇಂಥಾ ಆಂತರಿಕ ಕಲಹಗಳು, ವರ್ಗಾವಣೆ ಮೊದಲಾದ ಆಡಳಿತ ಪ್ರಕ್ರಿಯೆಗಳ ಮೂಲಕ ಹೊರಬೀಳುತ್ತಿರುವುದು ಖಚಿತ.

ಯಡಿಯೂರಪ್ಪ ರೆಡ್ಡಿ ಆಪ್ತ ಡಿಸಿಗಳನ್ನು ವರ್ಗಾವಣೆ ಮಾಡಿದ್ದು, ರೆಡ್ಡಿ ಪಡೆ ಅದಕ್ಕೆ ಕಿಮ್ಮತ್ತಿರದಂತೆ ನಡೆದುಕೊಂಡಿರುವುದು ಮತ್ತೊಂದು ಸುತ್ತಿನ ಕದನದ ಸೂಚನೆಯಂತೆಯೇ ಕಾಣಿಸುತ್ತಿದೆ.

ಇದೆಲ್ಲ ಏನೇ ಇರಲಿ, ಆಗಾಗ ಸಮರ್ಥ, ಯಾರಿಗೂ ಹೆದರದ ಮುಖ್ಯಮಂತ್ರಿಯೆಂಬಂತೆ ಪೋಸು ಕೊಡುವ, ಯಡಿಯೂರಪ್ಪ ರೆಡ್ಡಿ ರಾಜ್ಯದಲ್ಲಿ ಕಾಲಕಸ ಎಂಬುದಂತೂ ಸಾಬೀತಾಗಿದೆ! •





ತುಂಗಾ ಮೇಲ್ದಂಡೆ ಯೋಜನೆ

ಮತ್ತೊಬ್ಬ ರೈತನನ್ನು ಕೊಂದ ಯಡ್ಡಿ ಸರ್ಕಾರ

ಮತ್ತೊಬ್ಬ ರೈತನ ಹೆಣ ಕೆಡವಿದೆ ರಾಜ್ಯ ಕಂಡ ಕಡುಭ್ರಷ್ಟ, ಜೀವವಿರೋಧಿ ಹಲ್ಕಾ ಸರ್ಕಾರ.

ರೈತರನ್ನು ಕೊಂದ ರಕ್ತದ ಕಲೆಗಳಿಂದಲೇ ತನ್ನ ಜೀವಮಾನದ 'ಸರ್ವಶ್ರೇಷ್ಠ' ಬಯಕೆಯಾದ ಮುಖ್ಯಮಂತ್ರಿಗಿರಿಯನ್ನು ಆರಂಭಿಸಿದ ಯಡಿಯೂರಪ್ಪ ಎಂಬ ಮಾನವ ದ್ರೋಹಿಯೀಗ, ತುಂಗಾ ಮೇಲ್ದಂಡೆ ಯೋಜನೆಯ ನಿರಾಶ್ರಿತರ ರೈತರ ನಾಯಕ ಚಂದ್ರು ಎಂಬುವವರನ್ನು 'ಕೊಲ್ಲುವ' ಮೂಲಕ ತನ್ನ ಎರಡೂವರೆ ವರ್ಷಗಳ



ಮೃತ ಚಂದ್ರು....



ಆತ್ಮಹತ್ಯೆಗೆ ಯತ್ನಿಸಿದ ರೈತರು.....

ಜನದ್ರೋಹಿ ಆಡಳಿತಕ್ಕೆ ಮತ್ತೊಂದು ಹೆಣದ ಗರಿಯನ್ನು ಏರಿಸಿಕೊಂಡಿದ್ದಾನೆ.

2005 ಮೇ 5ರಂದು 'ಆಪರೇಷನ್ ಕಮಲ' ಎಂಬ ಹೇಸಿಗೆಯ ಕಸುಬಿನ ಆಧಾರದಿಂದ ಮುಖ್ಯಮಂತ್ರಿಯಾಗಿ ರೈತರ ಹೆಸರಲ್ಲಿ ಪ್ರಮಾಣವಚನ ಸ್ವೀಕರಿಸಿದ 'ಮಾಜಿ' ರೈತ ಓರಾಟಗಾರ ಯಡಿಯೂರಪ್ಪ ಅಧಿಕಾರ ಸಿಕ್ಕ ತಿಂಗಳೊಪ್ಪತ್ತಿನಲ್ಲೇ ನ್ಯಾಯಯುತವಾಗಿ ತಮಗೆ ಸಿಗಬೇಕಾದ ಗೊಬ್ಬರ ಕೇಳಿದ ಹಾವೇರಿ ರೈತರ ಮೇಲೆ ಗೋಲಿಬಾರ್ ನಡೆಸಿ ಮೂವರು ಅನ್ನದಾತರ ಬಲಿ ತೆಗೆದುಕೊಂಡಿದ್ದ. ಮುಂದೆ ಆತನ ಜಿಲ್ಲೆ ಶಿವಮೊಗ್ಗ ಸೇರಿದಂತೆ ರಾಜ್ಯಾದ್ಯಂತ ನೂರಾರು ರೈತರು ಸರ್ಕಾರದ ರೈತವಿರೋಧಿ ಮನಸ್ಥಿತಿಯಿಂದಾಗಿ ಆತ್ಮಹತ್ಯೆಗೆ ಶರಣಾದರು. ಯಡ್ಡಿಯ ಮಿತ್ರರಾದ ಖೂಳ ಬಂಡವಾಳಶಾಹಿಗಳಿಗೆ ಭೂಮಿ ಕೊಡಲೊಪ್ಪದ ದಾವಣಗೆರೆಯ ಸ್ವಾಭಿಮಾನಿ ರೈತರಿಗೆ ಕೈಕೋಳ ತೊಡಿಸಿದ ಯಡ್ಡಿ ನ್ಯಾಯಯುತ ಬೇಡಿಕೆಗಳನ್ನು ಮುಂದಿಟ್ಟು ಶಾಂತಿಯುತ ಚಳವಳಿ ನಡೆಸುತ್ತಿದ್ದ ಚಾಮರಾಜನಗರ ರೈತರ ಮೇಲೆ ಲಾಠಿ ಪ್ರಹಾರ ನಡೆಸಿದ್ದ. ಈ ನಾಡಿನ ಗಣಿ ಸಂಪತ್ತು, ಭೂ ಸಂಪತ್ತುಗಳನ್ನು ದರೋಡೆಕೋರರಿಗೆ ಒತ್ತೆ ಇಟ್ಟು ರಾಜ್ಯಭಾರ ಮಾಡುತ್ತಿರುವ ಈ ಜನವಿರೋಧಿ ಸರ್ಕಾರ ಈಗ ರೈತ ಚಂದ್ರುವನ್ನು ಬಲಿ ತೆಗೆದುಕೊಂಡಿದೆ.

ರೈತರ ಜೀವ ಹಿಂಡುವ ನಾಡಲ್ಲಿ...


ಇಪ್ಪತ್ತು ವರ್ಷಗಳ ಹಿಂದೆ ತುಂಗಾ ಮೇಲ್ದಂಡೆ ಯೋಜನೆಗಾಗಿ ತಮ್ಮೆಲ್ಲ ಭೂಮಿಯನ್ನು ತ್ಯಾಗ ಮಾಡಿ, ತಮ್ಮ ಜೀವನಾಧಾರವನ್ನೇ ಕಳೆದುಕೊಂಡು ನ್ಯಾಯಯುತ ಪರಿಹಾರಕ್ಕಾಗಿ ಹೋರಾಟ ಮಾಡುತ್ತಾ ಬಂದ ರೈತರತ್ತ ಎರಡು ದಶಕಗಳ ಯಾವ ಸರ್ಕಾರವೂ ಕಣ್ಣೆತ್ತಿ ನೋಡಲೇ ಇಲ್ಲ. ಮೊದಲೇ ರೈತವಿರೋಧಿ ಸರ್ಕಾರವೆನಿಸಿದ ಯಡ್ಡಿ ಸರ್ಕಾರ ರೈತರೊಂದಿಗೆ ಕುಳಿತು ಮಾತುಕತೆಯಾಡುವ ಕನಿಷ್ಠ ಸೌಜನ್ಯವನ್ನು ಮರೆತು, ತನ್ನ ಕುರ್ಚಿ ಭದ್ರಪಡಿಸಿಕೊಳ್ಳಲು ಹಲ್ಕಟ್ ಹಾದಿಗಳನ್ನು ಹಿಡಿಯಿತು.

20 ವರ್ಷಗಳ ಹಿಂದೆ ಭೂಮಿ ಕಳೆದುಕೊಂಡು ಅತಂತ್ರರಾಗಿ, ತಮ್ಮ ಮುಂದಿನ ತಲೆಮಾರು ಬೀದಿ ಪಾಲಾಗುತ್ತಿರುವುದನ್ನು ಕಣ್ಣೆದುರೇ ಕಂಡು ಹತಾಶರಾದ ರೈತರು ಮೃತ ಚಂದ್ರುನಂತಹ ನಾಯಕರಲ್ಲಿ ವಿಶ್ವಾಸವಿಟ್ಟು ಶಾಂತಿಯುತ ಹೋರಾಟ ಮಾಡುತ್ತಲೇ ಬಂದಿದ್ದರು. ಇತ್ತೀಚೆಗದು ತೀವ್ರಗೊಂಡಿತ್ತು, ಆದರೆ ಕಣ್ಣು, ಕಿವಿ, ಚರ್ಮ ಎಲ್ಲವನ್ನು ಕಳೆದುಕೊಂಡ ನೀಚ ಸರ್ಕಾರ ಅವರ ಹೋರಾಟಕ್ಕೆ ಪುಡಿಗಾಸಿನ ಕಿಮ್ಮತ್ತನ್ನೂ ನೀಡಲೇ ಇಲ್ಲ, ತನ್ನ ನಾಯಕತ್ವದಲ್ಲಿ ನಂಬಿಕೆಯಿಟ್ಟು ಹೋರಾಟದಲ್ಲಿ ಪಾಲ್ಗೊಂಡ ರೈತರಿಗೆ ನ್ಯಾಯ ಕೊಡಿಸಲಾಗಲಿಲ್ಲವಲ್ಲ ಎಂದು ನೊಂದುಕೊಂಡ ಚಂದ್ರು, ಯಡ್ಡಿಯ ತವರು ಜಿಲ್ಲೆ ಶಿವಮೊಗ್ಗದಲ್ಲಿರುವ ತುಂಗಾ ಮೇಲ್ದಂಡೆ ಯೋಜನೆಯ ಮುಖ್ಯ ಕಚೇರಿಯ ಎದುರು ಅಲ್ಲಿನ ಅಧಿಕಾರಿಗಳ ಎದುರು ಪ್ರತಿಭಟನೆ ಸಲ್ಲಿಸುತ್ತ ಪೆಟ್ರೋಲ್ ಸುರಿದುಕೊಂಡು ಬೆಂಕಿ ಹಚ್ಚಿಕೊಂಡು ಆತ್ಮಹತ್ಯೆಗೆ ಯತ್ನಿಸಿ ತನ್ನ ಆಕ್ರೋಶವನ್ನು ಹೊರಹಾಕಿದ್ದ. ರೈತರ ಹೋರಾಟಕ್ಕಾಗಿಯೇ ಜೀವನ ಸವೆಸಿದ ಚಂದ್ರು ಸಾವನ್ನು ಗೆಲ್ಲಲಾರದೇ ಬೆಂಗಳೂರಿನಲ್ಲಿ ಕೊನೆಯುಸಿರು ಎಳೆದ. 'ಆಪರೇಷನ್ ಕಮಲ-3'ರಲ್ಲಿ ಮುಳುಗಿದ್ದ ಯಡ್ಡಿಯ ಸರ್ಕಾರ ಹೀಗೆ ಮತ್ತೋರ್ವ ರೈತನನ್ನು ಕೊಂದುಹಾಕುವ ಮೂಲಕ ತನ್ನ ರಾಕ್ಷಸತನವನ್ನು ಮತ್ತೊಮ್ಮೆ ಜಗಜ್ಜಾಹೀರು ಮಾಡಿದೆ.

ಹೋರಾಟದಲ್ಲೇ ಮಡಿದ ಚಂದ್ರು....

ಕಳೆದ 20 ವರ್ಷಗಳಿಂದ ಆಗಾಗ ಮರುಕಳಿಸುತ್ತಲೇ ಬಂದಿರುವ ತುಂಗಾ ಮೇಲ್ದಂಡೆ ಯೋಜನೆಯ ನಿರಾಶ್ರಿತ ರೈತ ಕುಟುಂಬಗಳ ಹೋರಾಟಕ್ಕೆ ಕಳೆದ ಮೂರು ತಿಂಗಳ ಹಿಂದೆ ತೀವ್ರತೆ ಬಂದಿತ್ತು, ಅದಕ್ಕೆ ಹಾವೇರಿ ಜಿಲ್ಲೆ ಹಿರೇಕೆರೂರು ತಾಲ್ಲೂಕಿನ ರಟ್ಟಿಹಳ್ಳಿ ಗ್ರಾಮದ ರೈತನಾಯಕ ಚಂದ್ರು ಬನ್ನಿಕೋಡನೇ ಕಾರಣನಾಗಿದ್ದ. ಈ ಸಲದ ಹೋರಾಟದ ಸ್ವರೂಪ ದಿನೇದಿನೇ ವ್ಯಾಪಕವಾಗುತ್ತಿದ್ದುದನ್ನು ಕಂಡು ಅಂಜಿದ ಜಿಲ್ಲಾಧಿಕಾರಿ ಶ್ರೀವರ ರಾತ್ರೋರಾತ್ರಿ ಹೋರಾಟದ ಸ್ಥಳಕ್ಕೆ ಬಂದು, ನಲವತ್ತೈದು ದಿನಗಳಲ್ಲಿ ಬಾಕಿಯಿರುವ ಪರಿಹಾರವನ್ನೆಲ್ಲ ಕೊಡಿಸುವುದಾಗಿ ಭರವಸೆ ನೀಡಿದ್ದ. ಯಡ್ಡಿಯ ಚೇಲಾ ಜಿಲ್ಲಾಧಿಕಾರಿ ಶ್ರೀವರ ನೀಡಿದ್ದ ಗಡುವು ಅಕ್ಟೋಬರ್ 16ಕ್ಕೆ ಮುಗಿದುಹೋಗಿತ್ತು. ಸರ್ಕಾರದಿಂದ ಯಾವ ಭರವಸೆಯೂ ಸಿಗದಿದ್ದಾಗ ರೈತ ನಾಯಕ ಚಂದ್ರು ಬನ್ನಿಕೋಡ್ ಶಿವಮೊಗ್ಗದ ತುಂಗಾ ಮೇಲ್ದಂಡೆ ಯೋಜನೆಯ ಮುಖ್ಯ ಕಚೇರಿಗೆ ಅಕ್ಟೋಬರ್ 23ರಂದು ಭೇಟಿನೀಡಿ ಈ ಕುರಿತು ಅಧಿಕಾರಿಗಳನ್ನು ವಿಚಾರಿಸಿದ್ದಾರೆ. ಯಡ್ಡಿ ಮಕ್ಕಳು ಇಲ್ಲಿಗೆ ತಂದುಹಾಕಿರುವ ಲಂಚಕೋರ ಅಧಿಕಾರಿಗಳು ಮಹಾನ್ ಉಡಾಫೆ ಸ್ವಭಾವದವರಾಗಿದ್ದು, ಅವರು ರೈತನಾಯಕ ಚಂದ್ರುರನ್ನೇ ಅಪಹಾಸ್ಯ ಮಾಡಿಕಳುಹಿಸಿದ್ದಾರೆ.

ತುಂಗಾ ಮೇಲ್ದಂಡೆ ಯೋಜನೆಯ ಪ್ರಮುಖ ರೂವಾರಿಗಳಲ್ಲಿ ಚಂದ್ರು ಅವರ ತಂದೆ ಬಿ.ಎಚ್.ಬನ್ನಿಕೋಡ್ ಕೂಡಾ ಒಬ್ಬರಾಗಿದ್ದು ಅವರ ವ್ಯಕ್ತಿತ್ವ, ಪ್ರಾಮಾಣಿಕತೆ ನಂಬಿ ರೈತರು ಈ ಯೋಜನೆಗೆ ಭೂಮಿ ಬಿಟ್ಟುಕೊಟ್ಟಿದ್ದರು. ಆದರೀಗ ಎರಡು ದಶಕಗಳು ಕಳೆದರೂ ಅವರಿಗೆ ಸೂಕ್ತ ಪರಿಹಾರ ಸಿಕ್ಕಿಲ್ಲ. ತಂದೆಯ ಕಾಳಜಿಯನ್ನು ಗಮನದಲ್ಲಿಟ್ಟುಕೊಂಡು ಹೋರಾಟಕ್ಕೆ ಇಳಿದು ಹೊಸ



ಚಂದ್ರು ಬನ್ನಿಕೋಡ್

ಕಾವನ್ನು ತಂದಿದ್ದ ಚಂದ್ರುಗೆ ಸರ್ಕಾರದ ಅಧಿಕಾರಿಗ[ಳ] ಉಡಾಫೆತನ, ನಿರ್ಲಕ್ಷ್ಯತನ ಕಂಡು ರೋಸಿಹೋಗಿದೆ. ತ[ನ್ನ] ನಾಯಕತ್ವದಲ್ಲಿ ನಂಬಿಕೆಯಿಟ್ಟ ರೈತರಿಗೆ ನ್ಯಾಯ ಕೊಡಿ[ಸ]ಲಾಗುತ್ತಿಲ್ಲವಲ್ಲ ಎಂಬ ಖೇದದಿಂದ ಮನನೊಂದ ಅವರ [...] ರೈತರ ಈ ಕಷ್ಟಕ್ಕೆಲ್ಲ ಯಡ್ಡಿ ಸರ್ಕಾರ ಮತ್ತು ಅಧಿಕಾರವರ್ಗವೆ ಹೊಣೆ ಎಂಬ ಪತ್ರವನ್ನು ಬರೆದಿಟ್ಟು ತುಂಗಾ ಮೇಲ್ದಂ[ಡೆ] ಯೋಜನೆಯ ಪ್ರಮುಖ ಕಚೇರಿಯ ಎದುರ[ೇ] ಬೆಂಕಿಹಚ್ಚಿಕೊಂಡು ಜೀವ ತೆತ್ತಿದ್ದಾರೆ. ಅಲ್ಲಿಗೆ ಕೊಲೆಗಡು[ಕ] ರೈತವಿರೋಧಿ ಯಡ್ಡಿ ಸರ್ಕಾರ ಮತ್ತೊಬ್ಬ ಅನ್ನದಾತನನ[್ನು] ಬಲಿ ತೆಗೆದುಕೊಂಡಂತಾಗಿದೆ.


ಗೇಮ್ ಆಡಿದ ಅಧಿಕಾರಿಗಳು....

ಯಥಾ ಸಿಎಂ, ತಥಾ ಅಧಿಕಾರಿವರ್ಗ ಎಂಬಂತಾಗಿಹೋಗಿರುವ ಈ ರಾಜ್ಯದಲ್ಲೀಗ ರೈತರು ದಲಿತರು, ಹಿಂದುಳಿದವರು ಮತ್ತು ಅಲ್ಪಸಂಖ್ಯಾತರ ನೋವಿ[ನ] ಧ್ವನಿಗೆ ಯಾರೂ ಸ್ಪಂದಿಸುತ್ತಿಲ್ಲ. ಬರೀ ಲೂಟಿಯಲ್ಲಿ ಮುಳುಗಿರುವ ಆಡಳಿತ ಯಂತ್ರ ಜನರ ಬೇಡಿಕೆಗಳನ[್ನು] ಕಾಲಕಸ ಮಾಡಿ ಮರೆಯುತ್ತಿದೆ. ಚಂದ್ರುವಿನ ದುರ್ಮರಣಕ[್ಕೆ] ಕೊಲೆಗೆ ಇಂತಹ ಅಧಿಕಾರಶಾಹಿ ಮನೋಭಾವವ[ೇ] ಕಾರಣವಾಗಿದೆ. ಹಾಗೆಯೇ ಈ ಕೊಳಕ[ು] ಅಧಿಕಾರಶಾಹಿಯನ್ನು ಪೋಷಿಸುತ್ತಿರುವ ಯ[ಡ್ಡಿ] ಸರ್ಕಾರವೇ ಈ ಸಾವಿಗೆ ಪ್ರಮುಖ ಹೊಣೆಗಾ[ರ]ನಾಗಿದೆ.

ಮೊದಲೆಲ್ಲ ರೈತರ ನ್ಯಾಯಯುತ ಹೋರಾ[ಟ]ವನ್ನು ಉಡಾಫೆಯಾಗಿ ಕಾಣುತ್ತಿದ್ದ ಯಡ್ಡಿ ಮತ[್ತು] ಮಕ್ಕಳ ಚೇಲಾಗಳಾದ ಅಧಿಕಾರಿಗಳು, ಯಾವಾ[ಗ] ಚಂದ್ರುವಿನ ಹೆಣಬಿತ್ತೋ ಆ[ಗ] ಎಚ್ಚೆತ್ತುಕೊಂಡವರಂತೆ ನಾಟಕ ಶುರು ಮಾಡಿದ್ದಾ[ರೆ]. ಮೈಸುಟ್ಟುಕೊಂಡು ಚಂದ್ರು ಆಸ್ಪತ್ರೆಯಲ್ಲಿ ಸಾವಿ[ನ] ಎದುರು ಸೆಣಸುತ್ತಿದ್ದಾಗ, ಅವಸರವಸರದ[ಲ್ಲಿ] ಪರಿಹಾರಕಾರ್ಯಕ್ಕೆ ಮುಂದಾದ ಅಧಿಕಾರಿಗಳ[ು] 247 ರೈತರ ಹೆಸರಿಗೆ 97 ಲಕ್ಷ ಹಣದ ಚೆಕ[್]



ಜೀವನಾಡಿಯಾಗಬೇಕಿದ್ದ ತುಂಗೆ ಜೀವದಾಹಿಯಾದಳೇ?




ಬಿ.ಎಚ್. ಬನ್ನಿಕೋಡ್

ಶಿವಮೊಗ್ಗ, ಹಾವೇರಿ ಜಿಲ್ಲೆಗಳ ಪಾಲಿನ ರೈತರ ಜೀವನಾಡಿಯಾಗಬೇಕಿದ್ದ ತುಂಗಾ ಮೇಲ್ದಂಡೆ ಯೋಜನೆ ಇಂದು ಜೀವದಾಹಿ ಯೋಜನೆಯಾಗಿ ಮಾರ್ಪಟ್ಟಿರುವುದಕ್ಕೆ ಯಡ್ಡಿ ಸರ್ಕಾರವೇ ಹೊಣೆಯಾಗಿದೆ. 1983ರಲ್ಲಿ ಮೃತ ರೈತನಾಯಕ ಚಂದ್ರುವಿನ ತಂದೆ ಬಿ.ಎಚ್.ಬನ್ನಿಕೋಡ್ ಈ ಭಾಗದ ರೈತರ ಒಣಭೂಮಿಗೆ ನೀರಾವರಿಯ ಭಾಗ್ಯ ಕಲ್ಪಿಸುವ ಉದ್ದೇಶದಿಂದ ನೂರಾರು ರೈತ ನಾಯಕರನ್ನು ಬೆನ್ನಿಗಿಟ್ಟುಕೊಂಡು ಯೋಜನೆಯ ಜಾರಿಗಾಗಿ ಹೋರಾಟ ಆರಂಭಿಸಿದ್ದರು. ಮುಂದೆ ಬಂಗಾರಪ್ಪನ ಸರ್ಕಾರ ತುಂಗಾ ಮೇಲ್ದಂಡೆ ಯೋಜನೆಯನ್ನು ಜಾರಿಗೆ ತಂದಿತು. ಈ ಹೋರಾಟದ ಮುಖಂಡತ್ವದ ಕಾರಣದಿಂದಾಗಿಯೇ ಬಿ.ಎಚ್.ಬನ್ನಿಕೋಡ್ ಶಾಸಕರಾಗಿ ಕೂಡಾ ಆಯ್ಕೆಯಾಗಿದ್ದರು. ಆದರೆ ಈ ಯೋಜನೆಗಾಗಿ ಭೂಮಿ ನೀಡಿ ಬೀದಿಪಾಲಾದ ರೈತರು ಮಾತ್ರ ಎರಡು ದಶಕಗಳಿಂದ ನಿತ್ಯ ಸಾಯುತ್ತಲೇ ಬಂದಿದ್ದಾರೆ. ಇಂತಹ ರೈತರ ಪರ ನಿಂತು ಹೋರಾಟಕ್ಕೆ ಚಾಲನೆ ನೀಡಿದ ಬಿ.ಎಚ್.ಬನ್ನಿಕೋಡ್‌ರ ಪುತ್ರ ಚಂದ್ರು ಇವತ್ತು ತನ್ನ ಪ್ರಾಣವನ್ನೇ ತ್ಯಾಗ ಮಾಡುವಂತಾಗಿದೆ.

ತುಂಗೆ ರೈತರ ಪಾಲಿಗೆ ಜೀವದಾಹಿಯಾಗದೆ, ಜೀವನಾಡಿಯಾಗಲಿ.

ಸ್ವಜಾತಿ ರಾಜಕೀಯಕ್ಕೆ ಮಣ್ಣಾದ ಹೋರಾಟ



ಬಿ.ಸಿ.ಪಾಟೀಲ್

ಮಗ ಚಂದ್ರು ಮೂರೂ ಹೊತ್ತು ರೈತರ ಬೆಂಬಲಕ್ಕೆ ನಿಂತು ಹೋರಾಟದಲ್ಲಿ ಮಡಿದರೆ, ಈ ಯೋಜನೆಯ ರೂವಾರಿಗಳಲ್ಲೊಬ್ಬ ಎಂದು ಕರೆಸಿಕೊಂಡ ಅಪ್ಪ ಮಾಜಿ ಶಾಸಕ ಬಿ.ಎಚ್.ಬನ್ನಿಕೋಡ್ ಸ್ವಜಾತಿ ಪ್ರೀತಿಗೆ ಇಡೀ ಹೋರಾಟವನ್ನೇ ಮಣ್ಣುಪಾಲು ಮಾಡಿದ್ದಾರೆ ಎಂಬ ಆಕ್ರೋಶದ ಮಾತುಗಳನ್ನು ರೈತರೇ ಹೇಳುತ್ತಿದ್ದಾರೆ. ಹಾವೇರಿ ಗೋಲಿಬಾರ್ ಪ್ರಕರಣವನ್ನು ಹೂತುಹಾಕಿದಂತೆ ಈ ಪ್ರಕರಣವನ್ನೂ ಮುಚ್ಚಿಹಾಕಲು ಯತ್ನಿಸುತ್ತಿರುವ ಯಡ್ಡಿ ಮಹಾಶಯ ಈ ಕೆಲಸಕ್ಕಾಗಿ ಜಲಮಂತ್ರಿ ಬಸವರಾಜ ಬೊಮ್ಮಾಯಿಯನ್ನು ಆಯೋಜಿಸಿದ್ದಾನೆ. ಬಿ.ಎಚ್.ಬನ್ನಿಕೋಡ್‌ನ ಸ್ವಜಾತಿಯವನೇ ಆಗಿರುವ ಬಸು ಬೊಮ್ಮಾಯಿ, ಬನ್ನಿಕೋಡ್‌ನ ಜೊತೆ ಡೀಲು ಕುದುರಿಸಿದ್ದಾನೆ ಎಂಬ ಮಾತು ರೈತಸಮೂಹದಲ್ಲಿ ಕೇಳಿ ಬರುತ್ತಿದೆ. ಇಷ್ಟರಲ್ಲೇ ಬಿ.ಎಚ್.ಬನ್ನಿಕೋಡ್‌ಗೆ ಒಂದು ಒಳ್ಳೇ ಪೋಸ್ಟ್ ಸಿಗುವ ಸಾಧ್ಯತೆಯೂ ಇದೆಯಂತೆ. ಇದೇ ನವೆಂಬರ್ 10ರಂದು ನಡೆದ 'ಭಾಗ್ಯಲಕ್ಷ್ಮಿ' ಸೀರೆ ಹಂಚುವ ಕಾರ್ಯಕ್ರಮಕ್ಕೆ ಯಡ್ಡಿ ಹಾವೇರಿ ಜಿಲ್ಲೆಗೆ ಬಂದಿದ್ದ, ಆ ಕಾರಣಕ್ಕಾಗಿ ಈ ಪ್ರಕರಣವನ್ನು ಪೂರ್ತಿ ಮುಚ್ಚಿ ಹಾಕುವ ಸಂಚುಗಳನ್ನು ಮಾಡಲಾಗಿತ್ತು, ಅದರ ಪರಿಣಾಮ ಎಂಬಂತೆ ಮಗನನ್ನು ಕಳೆದುಕೊಂಡ ಬಿ.ಎಚ್.ಬನ್ನಿಕೋಡ್ ಬಾಯಿಮುಚ್ಚಿಕೊಂಡು ಗೂಡು ಸೇರಿಕೊಂಡರು. ರಾಜ್ಯದ ನೇಕಾರರ ಕುತ್ತಿಗೆಗೆ ನೇಣುಬಿಗಿದು, ಸೂರತ್‌ನ ಸೀರೆಗಳನ್ನು ಹಂಚಿದ ಯಡ್ಡಿ ಮೃತ ರೈತ ಚಂದ್ರುವಿನ ಕುರಿತು ಒಂದೇ ಒಂದು ಸಾಂತ್ವನದ ಮಾತನ್ನೂ ಹೇಳದೇ ತನ್ನ ಕ್ರೌರ್ಯವನ್ನು ಪ್ರದರ್ಶಿಸಿ ಹೋಗಿದ್ದಾನೆ.

ಬಿ.ಎಚ್.ಬನ್ನಿಕೋಡ್‌ರಂತೆಯೇ ಸ್ವಜಾತಿ ಪ್ರೇಮಕ್ಕೆ ಗಂಟುಬಿದ್ದಿರುವ ಜಿಲ್ಲೆಯ ಏಕೈಕ ಕಾಂಗ್ರೆಸ್ ಶಾಸಕ ಲಿಂಗವಂತ ಬಿ.ಸಿ.ಪಾಟೀಲ್ ಕೂಡಾ ಎಲ್ಲ ಮುಚ್ಚಿಕೊಂಡು ಕುಳಿತಿದ್ದಾರೆ. ಒಟ್ಟಿನಲ್ಲಿ ರೈತರ ಹೋರಾಟದಲ್ಲೂ ಲಿಂಗಾಯತ ಜಾತಿ ಪ್ರೇಮವನ್ನು ತಂದಿಟ್ಟಿರುವ ಯಡ್ಡಿ ಸರ್ಕಾರ ಇಡೀ ರೈತಾಪಿ ವರ್ಗಕ್ಕೆ ಅವಮಾನ ಮಾಡುತ್ತಿದೆ.

ಅಭಿವೃದ್ಧಿ : ರೈತರ ಹೆಸರು, ಪುಢಾರಿ ಅಧಿಕಾರಿಗಳ ಬಸಿರು

ಒಣಭೂಮಿಯಲ್ಲಿ ಹಸಿರು ಕಾಣಿಸುವ ಧ್ಯೇಯೋದ್ದೇಶದೊಂದಿಗೆ ತುಂಗಾ ಮೇಲ್ದಂಡೆ ಯೋಜನೆಯೇನೋ ಶುರುವಾಯಿತು. ಅದು ಒಳ್ಳೆಯದೇ. ಈ ಒಂದು ಕಾರಣಕ್ಕಾಗಿ ಸಾವಿರಾರು ರೈತ ಕುಟುಂಬಗಳು ತಮ್ಮ ಜೀವನಾಡಿಯಾಗಿದ್ದ ಭೂಮಿಯನ್ನು ತ್ಯಾಗ ಮಾಡಿದವು. ಆದರಿಂದು ಈ ರೈತ ಕುಟುಂಬಗಳು ಸರಿಯಾದ ಪರಿಹಾರ ಸಿಗದೇ ಅತಂತ್ರ ಸ್ಥಿತಿಯಲ್ಲಿ ಬದುಕು ನೂಕುತ್ತಿವೆ. ಇದಕ್ಕೆಲ್ಲ ಕಾರಣ ಎಲ್ಲ ಪಕ್ಷಗಳ ಧನದಾಹಿ ರಾಜಕಾರಣಿಗಳು ಮತ್ತು ಅವರ ಚಪ್ಪಲಿಗಳನ್ನು ತಲೆಮೇಲೆ ಹೊತ್ತುಕೊಂಡು ತಿರುಗುವ ರಣಹಸಿವಿನ ಅಧಿಕಾರಿಗಳೇ ಆಗಿದ್ದಾರೆ.

ಕಳೆದ ಎರಡು ತಿಂಗಳ ಹಿಂದಷ್ಟೇ ಮೊದಲ ಹಂತದ ಕಾಮಗಾರಿಯನ್ನು ಪೂರ್ಣಗೊಳಿಸಿ ನೀರು ಹರಿಸಲಾಗಿತ್ತು. ನೀರು ಹರಿಸಿದ ಎರಡನೆಯ ದಿನಕ್ಕೆ ಕಾಲುವೆಗಳು ಒಡೆದುಹೋಗಿ ಬೆಳೆದು ನಿಂತ ಪೈರೆಲ್ಲ ಕೊಚ್ಚಿಕೊಂಡು ಹೋಗಿ ರೈತರ ಕನಸು ನೀರುಪಾಲಾಗಿತ್ತು. ಅಂದರೆ ಈ ಯೋಜನೆಯಿಂದ 'ಫಲ' ಪಡೆಯಬೇಕಾಗಿದ್ದ ರೈತನೂ ಇಂದು ಕಷ್ಟದಲ್ಲಿದ್ದಾನೆ, ಈ ಯೋಜನೆಗೆ ಭೂಮಿ ಕೊಟ್ಟ ರೈತನೂ ಕಷ್ಟದಲ್ಲಿದ್ದಾನೆ. ಕೊಬ್ಬಿರುವವರು ಮತ್ತು ರಾಜಕಾರಣಿಗಳು, ಅಧಿಕಾರಿಗಳು ಮಾತ್ರ.

ಈ ಯೋಜನೆಯ ಅನುಷ್ಠಾನಕ್ಕಾಗಿ ಮಾಡಿದ ಭೂಸ್ವಾಧೀನವೂ ಕೂಡ ಕಾನೂನುಬಾಹಿರವೇ ಆಗಿದೆ. ಎಲ್ಲ ನಿಯಮಗಳನ್ನೂ ಗಾಳಿಗೆ ತೂರಿ ರೈತರ ಭೂಮಿಯನ್ನು ಸ್ವಾಧೀನಮಾಡಿಕೊಳ್ಳಲಾಗಿದೆ. ಇಂತಹ ನೀರಾವರಿ ಯೋಜನೆಗಾಗಿ ಭೂಮಿ ಕಳೆದುಕೊಂಡ ಮೈಸೂರು ಭಾಗದ ರೈತನಿಗೆ ಎಕರೆಗೆ 50 ಲಕ್ಷ ರೂ. ಪರಿಹಾರ ನೀಡಿದರೆ, ಇಲ್ಲಿಯ ರೈತನಿಗೆ ಎಕರೆಗೆ ನೀಡಿದ ಪರಿಹಾರ ಕೇವಲ 46 ಸಾವಿರ ರೂಪಾಯಿ ಮಾತ್ರ! ಇಷ್ಟು ಸಾಲದೆಂಬಂತೆ ಪರಿಹಾರದ ಹಣವನ್ನು ಏಕಕಾಲಕ್ಕೆ ನೀಡದೆ ಕಂತಿನಲ್ಲಿ ನೀಡುವ ಕಂತ್ರಿ ಯೋಜನೆಯನ್ನು ರೂಪಿಸಿದ ಸರ್ಕಾರಗಳು ನಿರಾಶ್ರಿತರ ಬಾಯಲ್ಲಿ ಹಿಡಿಮಣ್ಣು ಹಾಕಿವೆ.

ಒಟ್ಟಿನಲ್ಲಿ ಯೋಜನೆಯ ಫಲಾನುಭವಿ ರೈತರಿಗೂ ನೆಮ್ಮದಿಯಿಲ್ಲ, ಯೋಜನೆಯ ನಿರಾಶ್ರಿತ ರೈತರ ಗೋಳೂ ನಿಂತಿಲ್ಲ...

ಲಾಭ ಪಡೆದಿರುವವರು ಮಾತ್ರ ಪುಢಾರಿಗಳು, ಅಧಿಕಾರಿಗಳು....

...ಬರೆದು ಕೈತೊಳೆದುಕೊಳ್ಳಲು ನೋಡಿದ್ದಾರೆ. ಆದರೆ ತಮ್ಮ ನಾಯಕ ಚಂದ್ರು ...ಣಮುಖರಾಗಿ ಬಂದ ನಂತರವಷ್ಟೇ ತಾವು ಚೆಕ್ ಪಡೆಯುವುದಾಗಿ ನಿರ್ಧರಿಸಿದ ರೈತರು ಅಧಿಕಾರಿಗಳ ಮುಖಕ್ಕೆ ಉಗಿದು ಕಳುಹಿಸಿದ್ದಾರೆ. ಈ ನಡುವೆ ಯೋಜನೆಯ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಆಗಿರುವ ಜಗದೀಶ್ 142 ರೈತರನ್ನು ಫೋನ್ ಮೂಲಕ ಸಂಪರ್ಕಿಸಿ, ಪರಿಹಾರದ ಚೆಕ್ ಒಯ್ಯುವಂತೆ ...ಟಿಂಗ್ ಇಟ್ಟಿದ್ದಾನೆ. ಈ ಜಗದೀಶ್ ಎಂಬ ಇಂಜಿನಿಯರನನ್ನು ನಂಬಿ ತುಂಗಾ ಮೇಲ್ದಂಡೆ ಯೋಜನೆಯ ಕಚೇರಿಗೆ ಬಂದ 142 ರೈತರಿಗೆ ಬಕಾಸುರ ಅಧಿಕಾರಿಗಳು ಮುಂದಿಟ್ಟ ಪರಿಹಾರದ ಮೊತ್ತ ಚಿಲ್ಲರೆ ಮೂರು ಲಕ್ಷ ಮಾತ್ರ. ...ಮೊದಲೇ ಚಂದ್ರುವಿನ ದುರಂತಸ್ಥಿತಿಯಿಂದ ನೊಂದಿದ್ದ ರೈತರು ಆಕ್ರೋಶಗೊಂಡು ...ವಾವೇಶದಲ್ಲಿ ಆತ್ಮಹತ್ಯೆಗೆ ಸಿದ್ಧರಾಗಿದ್ದಾರೆ. ಜಗದೀಶ್ ಲಕ್ಕನಗೌಡ ಎಂಬ ...ತ ಕಚೇರಿಯ ಮುಖ್ಯ ಬಾಗಿಲಿನ ಕಬ್ಬಿಣದ ಸರಳುಗಳಿಗೆ ತನ್ನ ಟವೆಲ್‌ನಿಂದಲೇ ...ಣುಹಾಕಿಕೊಳ್ಳಲು ಪ್ರಯತ್ನಿಸಿದರೆ, ಇನ್ನೊಬ್ಬ ರೈತ ರಾಮು ಮೂಲಿಮನಿ ...ತಾನು ತೊಟ್ಟಿದ್ದ ಪ್ಯಾಂಟನ್ನೇ ಬಿಚ್ಚಿ ಅದರಿಂದ ಕಚೇರಿಯ ಹೊರಗಿದ್ದ ಮರಕ್ಕೆ ...ಣು ಹಾಕಿಕೊಳ್ಳಲು ಯತ್ನಿಸಿದ್ದಾರೆ. ಇಷ್ಟೆಲ್ಲ ನಡೆಯುತ್ತಿದ್ದರೂ ಜಿಲ್ಲಾಧಿಕಾರಿ ...ಶ್ರೀವರ ಮಾತ್ರ ತನಗೂ ಇದಕ್ಕೂ ಸಂಬಂಧವೇ ಇಲ್ಲ ಎಂಬಂತೆ ಜಿಲ್ಲಾಧಿಕಾರಿ ...ಚೇರಿಯಲ್ಲಿ ಹಾಯಾಗಿ ಕುಳಿತಿದ್ದ. ತನ್ನ ಜಿಲ್ಲೆಯ ರೈತರ ಈ ಹೋರಾಟವನ್ನು ...ರಿಪಾಟಲನ್ನು ಕಣ್ಣೆತ್ತಿ ಕೂಡ ನೋಡದ ಜಲಮಂತ್ರಿ ಬಸವರಾಜ ಬೊಮ್ಮಾಯಿ ...ಬ್ಬನ್ ಕಟ್ ಮಾಡುವುದರಲ್ಲೇ ಕಾಲಹರಣ ಮಾಡುತ್ತಿದ್ದ.

ಶವ ನೋಡಲೂ ಬಾರದ ರಾಕ್ಷಸ ಸರ್ಕಾರ...


...ಮಂಕಾಗಿದ್ದ ಹೋರಾಟಕ್ಕೆ ತೀವ್ರ ಚಾಲನೆ ನೀಡಿದ ರೈತನಾಯಕ ಚಂದ್ರು ...ಟ್ಟಗಾಯಗಳಿಂದ ಮೃತನಾದ ಮೇಲೆ, ಆತನ ಕಳೇಬರಕ್ಕೆ ಕನಿಷ್ಠ ಸರ್ಕಾರಿ ...ರವವೂ ಸಿಗಲೇ ಇಲ್ಲ. ಹಾವೇರಿ ಜಿಲ್ಲೆಯಲ್ಲೇ ತಿರುಗುತ್ತಿದ್ದ ಜಿಲ್ಲಾ ಮಂತ್ರಿ ...ಎಂ.ಉದಾಸಿಯಾಗಲಿ, ಜಲಮಂತ್ರಿ ಬೊಮ್ಮಾಯಿಯಾಗಲಿ ಮತ್ತು ಹಾವೇರಿ ...ಲ್ಲೆಯ ಮೂವರು ಚೆಡ್ಡಿ ಶಾಸಕರಾಗಲೀ ಯಾರೂ ಹಿರೇಕೆರೂರಿನತ್ತ ಬಂದು ...ದ್ರುವಿನ ಅಂತಿಮ ದರ್ಶನ ಮಾಡಿ ಸಾಂತ್ವನ ಹೇಳಲಿಲ್ಲ. ಸೆಗಣಿ ತಿಂದೇ ...ಸಿರುವ ಅಧಿಕಾರಿ ಗಣವೂ ಇತ್ತ ಸುಳಿಯಲೇ ಇಲ್ಲ. ಮೃತ ಚಂದ್ರು ...ಎಸ್ ಜಿಲ್ಲಾಧ್ಯಕ್ಷ, ಮಾಜಿ ಶಾಸಕ ಬಿ.ಎಚ್. ಬನ್ನಿಕೋಡರ ಪುತ್ರನಾಗಿದ್ದು ...ಸಾವಿನಲ್ಲೂ ಚೆಡ್ಡಿ ಮಂತ್ರಿಗಳು, ಶಾಸಕರು ರಾಜಕೀಯದ ವಾಸನೆ ತಂದು ...ಹೋರಾಟವನ್ನೇ ಅವಮಾನ ಮಾಡಿದ್ದಾರೆ.

ಹೋರಾಟವನ್ನೇ ಕೊಲ್ಲುತ್ತಿರುವ ಸರ್ಕಾರ

ಎರಡು ದಶಕಗಳಿಂದ ಜಾರಿಯಲ್ಲಿರುವ 1600 ಕೋಟಿ ವೆಚ್ಚದ ತುಂಗಾ ...ಲ್ದಂಡೆ ಯೋಜನೆಯಿಂದ ರೈತರಿಗೆ ಸಿಕ್ಕ ಪ್ರಯೋಜನ ಅಷ್ಟಕಷ್ಟೇ; ಇಲ್ಲಿ ...ಕಾರಣಿಗಳು, ಅಧಿಕಾರಿಗಳು ನುಂಗಿ ನೀರು ಕುಡಿದಿದ್ದೇ ಜಾಸ್ತಿ, ಇತ್ತ ಈ ಯೋಜನೆಗೆ ಭೂಮಿಕೊಟ್ಟ ರೈತರಿಗೆ ನ್ಯಾಯಯುತ ಪರಿಹಾರವೂ ಸಿಕ್ಕಿಲ್ಲ. ...ಹ ದಿಕ್ಕೆಟ್ಟ ರೈತರಿಗೆ ನಾಯಕತ್ವ ಒದಗಿಸಿದ ಚಂದ್ರುವನ್ನು ಇವತ್ತು ...ರವೇ ಹತ್ಯೆ ಮಾಡಿದೆ. ಇದರ ವಿರುದ್ಧ ಕಾಂಗ್ರೆಸ್ ಪಕ್ಷ, ರೈತಸಂಘಗಳೂ ...ಮಾಡಿಲ್ಲ! ಸ್ವಂತ ಪುತ್ರನನ್ನು ಕಳೆದುಕೊಂಡ ಬಿ.ಎಚ್.ಬನ್ನಿಕೋಡ್ ಜೆಡಿಎಸ್‌ನ ...ಧ್ಯಕ್ಷ. ಕನಿಷ್ಠ ಆ ಪಕ್ಷದಿಂದಲೂ ಸರ್ಕಾರದ ವಿರುದ್ಧ ಧಿಕ್ಕಾರದ ಕೂಗು ...ಬಂದಿಲ್ಲ! ಮಾಜಿ ಸಂಸದ ಮಂಜುನಾಥ ಕುನ್ನೂರು ಒಬ್ಬರೇ ಸರ್ಕಾರದ ...ರುದ್ಧ ಆಕ್ರೋಶ ವ್ಯಕ್ತಪಡಿಸಿದ್ದು ಬಿಟ್ಟರೆ ಉಳಿದವರೆಲ್ಲ ಬಾಯಿಗೆ ಬೀಗ ...ಹಾಕಿಕೊಂಡಿದ್ದಾರೆ. ಕನ್ನಡ, ಕರ್ನಾಟಕ ಎಂದಬ್ಬರಿಸುವ ವಸೂಲಿಕೋರ ...ವೇದಿಕೆಗಳಂತೂ ಸರ್ಕಾರದ ಪಾದ ನೆಕ್ಕುತ್ತಲೇ ದುಂಡಗಾಗುತ್ತಿವೆ.

...ಹೀಗಾಗಿ ಇಲ್ಲಿ ಯಡ್ಡಿ ಸರ್ಕಾರ ಒಬ್ಬ ರೈತನ ಹತ್ಯೆಯನ್ನಷ್ಟೇ ಮಾಡಿಲ್ಲ; ...ಜೊತೆಗೆ ಒಂದು ಹೋರಾಟದ ಕತ್ತನ್ನೇ ಹಿಸುಕಿ ಹಾಕುತ್ತಿದೆ.

• ಹುರುಳಿಕುಪ್ಪಿ ವಿನಯ್



ಈಗ ಪ್ರೊ. ಜಿ.ವಿ. ಅವರಿಗೆ 98 ವರ್ಷ. ಶತಮಾನಕ್ಕೆ ಇನ್ನು ಎರಡು ವರ್ಷ ಮಾತ್ರ. ಕನ್ನಡಿಗರ ಅಭಿಮಾನದ, ಅಖಿಲ ಭಾರತ 77 ನೇ ಕನ್ನಡ ಸಾಹಿತ್ಯ ಸಮ್ಮೇಳನದ ನಿಯೋಜಿತ ಅಧ್ಯಕ್ಷ. ಇದು ಅವರಿಗೆ ಸಂದಿರುವುದು ವಿದ್ವತ್ತಿಗೆ, ವಿನಯಕ್ಕೆ, ಕನ್ನಡಕ್ಕೆ ಸಂದಿರುವ ಪುರಸ್ಕಾರ.


ಶಬ್ದಸಾಗರ ಪ್ರೊ ಜಿ.ವಿ.

ಪ್ರೊ. ಜಿ.ವೆಂಕಟಸುಬ್ಬಯ್ಯ ಅವರ ಮನೆತನ ಬಹು ಹಿಂದು. ತಂದೆ ಗಂಜಾಂ ತಿಮ್ಮಣ್ಣಯ್ಯ (ಅರಮನೆಯ ವಿದ್ವಾಂಸರು) ಸಂಸ್ಕೃತ ಹಾಗೂ ಕನ್ನಡಗಳಲ್ಲಿ ದೊಡ್ಡ ವಿದ್ವಾಂಸರು. ಇವರು 'ಪುರಾಣ ಕಥಾವಳಿ' ಎಂಬ ಮಾಸಪತ್ರಿಕೆಯನ್ನು ಹೊರಡಿಸುತ್ತಿದ್ದರು. ಇದರಲ್ಲಿ ಶಿವ ಮಹಾಪುರಾಣ, ವಿಷ್ಣು ಪುರಾಣ ಮುಂತಾದ ಪುರಾಣಗಳನ್ನು ಅನುವಾದ ಮಾಡಿ ಪ್ರಕಟಿಸಿದ್ದರು. ಇವರ ಅಚ್ಚುಮೆಚ್ಚಿನ ಮಗನೇ ನಮ್ಮ ಹಿರಿಯ ಜೀವಿ ಗಂಜಾಂ ವೆಂಕಟಸುಬ್ಬಯ್ಯ 23.08.1913 ರಲ್ಲಿ ಜನನ. ಬಿ.ಎಂ.ಶ್ರೀ ಅವರ ಆಪ್ತ ಶಿಷ್ಯರು. 1937 ರಲ್ಲಿ ಕನ್ನಡ ಎಂ.ಎ. ಪದವಿ, 1939 ರಲ್ಲಿ ಬಿ.ಎ. ಪದವಿ ಪ್ರಥಮ ಸ್ಥಾನಕ್ಕಾಗಿ ಸುವರ್ಣ ಪದಕ ಪಡೆದ ಗರಿಮೆ ಇವರದು!

ಪ್ರೊ. ಜಿ.ವಿ. ಅವರು ಶಿಕ್ಷಣ, ಸಂಶೋಧನೆ, ಅನುವಾದ, ವಿಮರ್ಶೆ ನಿಘಂಟು ನಿರ್ಮಾಣ ಕ್ಷೇತ್ರಗಳನ್ನು ಆಯ್ದುಕೊಂಡು ಅಪೂರ್ವ ಗ್ರಂಥಗಳನ್ನು ನಿರ್ಮಾಣ ಮಾಡಿದ್ದಾರೆ. ಪ್ರೊ. ಜಿ.ವಿ. ಎಂದರೆ ನಿಘಂಟು ಎಂಬುದರ ಪರ್ಯಾಯ ಪದವಾಗಿ ಬಳಕೆಗೊಂಡಿದೆ. ಪ್ರೊ. ಜಿ.ವಿ. ಒಬ್ಬರೇ ನಿಘಂಟು ಕ್ಷೇತ್ರವನ್ನು ಆಯ್ದುಕೊಂಡು, ಅದರಲ್ಲಿ ಉತ್ತಮ ಸಾಧನೆಯನ್ನು ಮಾಡಿದವರು; ಸಿದ್ಧಿಯನ್ನು ಪಡೆದವರು!!

ಪ್ರೊ. ಜಿ. ವೆಂಕಟಸುಬ್ಬಯ್ಯ ಅವರು ನಮ್ಮ ನಾಲ್ಕು ತಲೆಮಾರಿನ ಸರ್ವಶ್ರೇಷ್ಠ ವಿದ್ವಾಂಸರು. ಈ ಮಾತು ಉಪಚಾರೋಕ್ತಿಯಲ್ಲ. ಕನ್ನಡ-ಇಂಗ್ಲಿಷ್ ಮತ್ತು ಸಂಸ್ಕೃತ ಭಾಷೆ-ಸಾಹಿತ್ಯಗಳಲ್ಲಿ ಅವರದ್ದು ನಿರ್ದುಷ್ಟ ಮತ್ತು ಖಚಿತವಾದ ಪದಪದ್ಧತಿ. ಪ್ರಾಚೀನ ಭಾಷಾ ಸಾಹಿತ್ಯದ ಅನುಸಂಧಾನ ಎಷ್ಟು ದೊಡ್ಡದೋ ಅರ್ವಾಚೀನ ಭಾಷಾ ಸಾಹಿತ್ಯದ ಅನುಸಂಧಾನವೂ ಅಷ್ಟೇ ಪರಿಪೂರ್ಣ. ಅವರು ತಮ್ಮ ಜೀವಮಾನವಿಡೀ ಈ ಸಾಧನೆಗಾಗಿ ಪರಿಶ್ರಮಿಸಿದವರೆಂಬುದು ಈಗ ಇತಿಹಾಸ. ಅದು ನಮಗೊಂದು ಸಂಕೇತ.

ಈ ಮಹನೀಯ ವಿದ್ವಾಂಸರ ಹೆಸರನ್ನು ನಾನು ಆಗಾಗ್ಗೆ ಪ್ರೊ. ವಿ. ಸೀತಾರಾಮಯ್ಯ ಅವರ ಜತೆ ಮಾತನಾಡುತ್ತಿರುವಾಗ ತಿಳಿಯುತ್ತಿತ್ತು. ವಿಜಯಾ ಕಾಲೇಜಿನ ಪ್ರಾಧ್ಯಾಪಕರಾಗಿ ಮತ್ತು ಸಂಜೆ ಕಾಲೇಜಿನ ಪ್ರಾಂಶುಪಾಲರಾಗಿ ಅವರು ದಕ್ಷತೆಯನ್ನು ತೋರಿಸಿದ್ದರು. ಒಂದು ಪ್ರಾಚೀನ ಧೀಮಂತಿಕೆ ಮತ್ತು ಸುಹಾಸ್ಯ ಮತ್ತು ಅರ್ವಾಚೀನ ಆಡಳಿತ ಕೌಶಲ್ಯ ಮತ್ತು ಸಮಕಾಲೀನ ವಿವೇಕ ಇವೆರಡೂ ಇದ್ದವರೆಂದು ಅವರು ಹೆಸರಾಗಿದ್ದರು. ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟು ಸಂಪಾದಕರಾಗಿ ಅವರು ಮಾಡುತ್ತಿದ್ದ ಕೆಲಸಗಳು ನನ್ನ ಕಿವಿಗೆ ಯಾವಯಾವುದೋ ಸಂದರ್ಭದಲ್ಲಿ ಬಿದ್ದಿದ್ದವು. ನಾನು ಒಮ್ಮೊಮ್ಮೆ ಕನ್ನಡ ಸಾಹಿತ್ಯ ಪರಿಷತ್ತಿನ ಹಳೆಯ ಕಟ್ಟಡದ ಮುಂದೆ ನಿಂತು ಮೂಕವಿಸ್ಮಿತನಾಗುತ್ತಿದ್ದೆ. ಆ ಕಟ್ಟಡದ ಒಂದು ಪಾರ್ಶ್ವದಲ್ಲಿ ಪ್ರೊ. ಜಿ.ವೆಂ. ನಿಘಂಟು ಕಚೇರಿಯ ಕೊಠಡಿಯಲ್ಲಿ ಕುಳಿತು ಕೆಲಸ ಮಾಡುತ್ತಿದ್ದರು. ನಾನು ಬೆಂಗಳೂರಿಗೆ ಬಂದ ಹೊಸತರಲ್ಲಿ ನನಗೆ ಅತ್ಯಂತ ಆಕರ್ಷಣೆ ಉಂಟುಮಾಡಿದ್ದು ಮೂರು ಸ್ಥಳಗಳು ಮಾತ್ರ. ಮೊದಲನೆಯದು ಚಾಮರಾಜಪೇಟೆಯ ಚಾಮರಾಜೇಂದ್ರ ಸಂಸ್ಕೃತ ಪಾಠಶಾಲೆ, ಎರಡನೆಯದು ಸೆಂಟ್ರಲ್ ಕಾಲೇಜ್ ಮತ್ತು ಮೂರನೆಯದೇ ಕನ್ನಡ ಸಾಹಿತ್ಯ ಪರಿಷತ್ತು. ಇವುಗಳಲ್ಲಿ ನನಗೆ ಹೊಕ್ಕು-ಬಳಕೆಯಿದ್ದದ್ದು ಚಾಮರಾಜೇಂದ್ರ ಸಂಸ್ಕೃತ ಪಾಠಶಾಲೆಯೇ. ಆನಂತರ ಸೆಂಟ್ರಲ್ ಕಾಲೇಜ್. ನನ್ನ ಪಾರಂಪರಿಕ ಅಧ್ಯಯನಕ್ಕೆ ಸಂಸ್ಕೃತ ಪಾಠಶಾಲೆಯಾದರೆ ಆಧುನಿಕ ತಿಳಿವಳಿಕೆಗೆ ಸೆಂಟ್ರಲ್ ಕಾಲೇಜ್ ಮುಖ್ಯ ಕಾರಣವಾಗಿತ್ತು. ಕನ್ನಡ ಸಾಹಿತ್ಯ ಪರಿಷತ್ತು ಸೆಂಟ್ರಲ್ ಕಾಲೇಜ್ ಎದುರು ಓಡಾಡುತ್ತಾ ಅಂಗಳದಲ್ಲಿ ಸುಮ್ಮನೆ ಸುತ್ತಾಡಿದ ನೆನಪಿದೆ. ಅಲ್ಲಿ ಡಿವಿಜಿ, ಬಿಎಂಶ್ರೀ, ಟಿ.ಎಸ್. ವೆಂಕಣ್ಣಯ್ಯ, ಎ.ಆರ್.ಕೃ., ತೀ.ನಂ.ಶ್ರೀ, ಡಿ.ಎಲ್.ಎನ್, ಕ.ವೆಂ. ರಾಘವಾಚಾರ್, ಸಿದ್ಧಾಂತಿ ಸುಬ್ರಹ್ಮಣ್ಯ ಶಾಸ್ತ್ರಿ, ತಿರುವಳ್ಳೂರು ಶ್ರೀನಿವಾಸರಾಘವಾಚಾರ್ ಇವರೇ ಮೊದಲಾದ ಅನೇಕ ಮಹನೀಯರು ನಡೆದಾಡಿದ್ದು ನನಗೆ ಪುಲಕ ತರುತ್ತಿತ್ತು.



ಪ್ರೊ. ಗಂಜಾಂ ವೆಂಕಟಸುಬ್ಬಯ್ಯ ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಅದನ್ನು ಆಧುನಿಕಗೊಳಿಸಿದ್ದು, ಅದಕ್ಕೊಂದು ವಿಶಾಲ ಕರ್ನಾಟಕದ ವ್ಯಾಪ್ತಿಯನ್ನು ತಂದುಕೊಟ್ಟಿದ್ದು ಈಗ ಇತಿಹಾಸ. ಆ ಇತಿಹಾಸವು ಉಜ್ವಲವಾಗಿದೆ. ಶುಭ್ರವಾಗಿದೆ. ಆ ಶುಭ್ರತ್ವದ ಸ್ವರ್ಣದ್ಯೋತಕವೇ ಕನ್ನಡ-ಕನ್ನಡ ನಿಘಂಟು ಸಂಪುಟಗಳು. ಇದು ಅವರ ಅಪಾರ ಪಾಂಡಿತ್ಯ ಮತ್ತು ಶ್ರಮಶ್ರದ್ಧೆಗಳ ಸಂಕೇತ. ಪ್ರೊ. ಜಿ.ವಿ. ಪ್ರಾಚೀನ ಮತ್ತು ನವೀನ ಶಾಸ್ತ್ರ ಸಾಹಿತ್ಯಗಳೆರಡರಲ್ಲೂ ನಿತಾಂಶಪ್ರತಿಭೆಯನ್ನು ಮೆರೆದವರಷ್ಟೆ. ತಾವು ತಿಳಿದದ್ದನ್ನು ಆಚರಣೆಗೆ ತಂದ ಅಪರೂಪದ ವ್ಯಕ್ತಿ. ಪ್ರಾಚೀನ ಕಾವ್ಯಕ್ಕೆ ಅವರು ನೀಡಿದ ಧ್ಯಾನಸ್ಥಮುಖ ಎಷ್ಟು ಪ್ರಾಮುಖ್ಯವಾದುದೋ ಆಧುನಿಕ ಕಾವ್ಯಕ್ಕೂ ಅವರು ನೀಡದ ಪ್ರಾಸಸ್ತ್ಯ-ಹಿರಿಮೆ ಅಷ್ಟೇ ಮುಖ್ಯವೆಂಬ ಭಾವನೆ ನನ್ನದು. ಅಡಿಗರ, ರಾಮಚಂದ್ರ ಶರ್ಮರ, ಕವಿತೆಗಳ ಮೇಲೆ ಅವರು ಮಾಡಿದ ಭಾಷಣ, ಉಪನ್ಯಾಸ ಮತ್ತು ಬರಹಗಳು ಎಷ್ಟು ಸೂಕ್ಷ್ಮವಾದುದೆಂಬುದನ್ನು ಈಗ ಎಲ್ಲರೂ ಬಲ್ಲರು. ಅವರು ನಡೆಸಿದ ಆಧುನಿಕ ಕವಿತೆಗಳ ವ್ಯಾಖ್ಯಾನವನ್ನು ಈಗಲೂ ಹಲವರು ಸ್ಮರಿಸಿಕೊಳ್ಳುತ್ತಾರೆ. ಪ್ರೊ. ಜಿ.ವಿ. ಹೊಸತಿಗೆ ಕಣ್ಣನ್ನೂ ಹೃದಯವನ್ನೂ ಸಮನಾಗಿ ತೆರೆದುಕೊಂಡವರು. ಹಾಗಾಗಿ "ಹೊಸತೆಂಬುದೂ ಸತ್ಯ ಹಳತೆಂಬುದೂ ನಿತ್ಯ" ಎಂಬ ಸೂತ್ರಕ್ಕೆ ನುಡಿಹಾಯ್ದವರು. ಈ ಮಾತನ್ನು ಎಲ್ಲರಿಗೂ ಹೇಳಲು ಸಾಧ್ಯವಿಲ್ಲವಷ್ಟೆ.

ಪ್ರೊ. ಜಿ.ವಿ. ಅವರು ಒಬ್ಬ ಉತ್ತಮ 'ಜೀವಿ'. ಇವರು ವ್ಯಕ್ತಿಯಾಗಿ ಎಷ್ಟು ದೊಡ್ಡವರೊ ಸಾಮಾಜಿಕವಾಗೂ ಅಷ್ಟೇ ಎತ್ತರದವರು. ಇವರು ವ್ಯಷ್ಟಿಬದುಕನ್ನು ಆರಾಧಿಸಿದವರಲ್ಲ; ಸಮಷ್ಟಿ ಬದುಕನ್ನು ಹೊಸಶಕ್ತಿಗಳನ್ನು ಆರಾಧಿಸಿದವರು. ಪ್ರೊ. ಜಿ.ವಿ., ಹೃದಯಸಂಪನ್ನರೆಂಬುದಕ್ಕೆ ಎಷ್ಟೋ ಉದಾಹರಣೆಗಳುಂಟು! ಅಂಥ ನೂರಾರು ಘಟನೆಗಳನ್ನು ಅವರ ಕಿರಿಯ ಶಿಷ್ಯಮಿತ್ರರು ಈಗಲೂ ನೆನೆದುಕೊಳ್ಳುತ್ತಾರೆ. ವಿಜಯಾ ಕಾಲೇಜಿನ ಪ್ರಾಧ್ಯಾಪಕರಾಗಿ, ಪ್ರಾಂಶುಪಾಲರಾಗಿದ್ದಾಗ ಎಷ್ಟೋ ಜನಕ್ಕೆ ಉದಾರವಾದ ಸಹಾಯವನ್ನು ಅವರು ಮಾಡಿದ್ದಾರೆ. ಎಷ್ಟೋ ಕುಟುಂಬಗಳು ಅವರ ಕರುಣೆಗೆ ಪಾತ್ರವಾಗಿವೆ. ಶಿಷ್ಯರು, ಕಿರಿಯ ಮಿತ್ರರು ಈ ಅಂಶಕ್ಕಾಗಿ ಕೃತಜ್ಞರಾಗಿರುವುದನ್ನು ನಾನು ವೈಯಕ್ತಿಕವಾಗಿ ಬಲ್ಲೆ.

ಪ್ರೊ. ಜಿ.ವಿ. ಆಧುನಿಕ ನಿಘಂಟು ಶಾಸ್ತ್ರಕ್ಕೆ ಆದ್ಯರು. ಇನ್ನಾರಾದರೂ ಆದ್ಯರಿದ್ದರೆ ಖಂಡಿತವಾಗಿಯೂ ಅವರೆಲ್ಲರಲ್ಲೂ ಇವರೇ ಆದ್ಯರು. ಕನ್ನಡ, ಇಂಗ್ಲಿಷ್ ಮತ್ತು ಸಂಸ್ಕೃತ ಭಾಷಾ-ಸಾಹಿತ್ಯದ ಓದು ಅವರ ನಿಘಂಟು ಕ್ಷೇತ್ರಕ್ಕೆ ಹೊಸ ತುಷ್ಟಿ-ಪುಷ್ಟಿಯನ್ನು ನೀಡಿವೆ. ದೇಶೀ ಭಾಷಿಕ ಅಧ್ಯಯನ ಪದಕೋಶಗಳ, ಭಾವಕೋಶಗಳ ಅಧ್ಯಯನಕ್ಕೆ ಹೊಸ ದಾರಿಯನ್ನು ನಿರ್ಮಾಣ ಮಾಡಿಕೊಟ್ಟಿವೆ. ಸಾಹಿತ್ಯ ಪರಿಷತ್ತಿನ ನಿಘಂಟುಗಳು, ಮುದ್ದಣಭಂಡಾರವೆಂಬ ಎರಡು ಕಾವ್ಯಗಳ ಸಂಪಾದನೆ-ಅನುವಾದ-ಟಿಪ್ಪಣಿ ಮತ್ತು ಮುದ್ದಣ ಪದಪ್ರಯೋಗ ಕೋಶ-ಇವು ಅವರ ಕೃತಿಗಳಲ್ಲಿ ಮೈಲಿಗಲ್ಲನ್ನು ಸ್ಥಾಪಿಸಿವೆಯೆಂಬ ನಮ್ರ ತಿಳಿವಳಿಕೆ ನನ್ನದು. ಆನಂತರ, ಇಗೊ ಕನ್ನಡ, ಎರವಲು ಪದಕೋಶ ಮುಂತಾದವು ಅವರು ನಿಂತನೆಲೆಯನ್ನು ಮುಂದಿರಿಸಿ ನೋಡಬಹುದು. ಹೊಸ ಕಾಣ್ಕೆಗಳು, ಹೊಸ ಕಲ್ಪನೆಗಳು ಅಲ್ಲಿ ಮುಂದುವರಿದಿದೆ. ಪ್ರಾಚೀನ ನಿಘಂಟುಶಾಸ್ತ್ರ ಅವರಿಗೆ ಎಷ್ಟು ಆಳವಾಗಿ ತಿಳಿದಿತ್ತೊ ಆಧುನಿಕ ನಿಘಂಟುಶಾಸ್ತ್ರದ ಪರಿಜ್ಞಾನ ಅಷ್ಟೇ ಆಳವಾಗಿ ತಿಳಿದಿತ್ತೆಂಬುದು ಬೇರೆಯಾಗಿ ಹೇಳಬೇಕಾಗಿಲ್ಲ.

ಸಾಮಾಜಿಕ ನಿಘಂಟು ಎಂಬ ಪರಿಕಲ್ಪನೆಯನ್ನು ಮೊದಲು ಕನ್ನಡದಲ್ಲಿ ಕಸಿ ಮಾಡಿದ ಹೆಗ್ಗಳಿಕೆ ಪ್ರೊ. ಜಿ.ವಿ. ಅವರದ್ದು. ಅವರು 'ಎರವಲು ಪದಕೋಶ'ದಲ್ಲಿ ಇಟ್ಟಿರುವ ಶಬ್ದ ಸಾಮಗ್ರಿ, ಅರ್ಥನಿರ್ಣಯ, ಪದಗಳ ಪೂರ್ವಾಪರ ನಿಲುವುಗಳು ಎಂಥವರನ್ನು ಆಶ್ಚರ್ಯಪಡಿಸುತ್ತವೆ. ಕನ್ನಡಕ್ಕೊಂದು 'ಶಾಸ್ತ್ರವಿಧಾನ'ವನ್ನು ಕಲ್ಪಿಸಿಕೊಟ್ಟ ಕೀರ್ತಿಯೂ ಇವರದೇ. ನಿಘಂಟು ವಿಜ್ಞಾನಕ್ಕೆ 'ಆಧುನಿಕ ಶಾಸ್ತ್ರ ವಿಧಾನ'ವನ್ನು ಕಲ್ಪಿಸಿಕೊಟ್ಟ ಪ್ರೊ. ಜಿ.ವಿ. ಕನ್ನಡಕ್ಕೆ ಕಿರೀಟ ನೀಡಿದ್ದಾರೆ; ಕೋಡು ಮೂಡಿಸಿದ್ದಾರೆ. ಆಧುನಿಕ ದ್ರಾವಿಡ ಭಾಷೆಗಳಲ್ಲಿ ಈ ಬಗೆಯ ಕೆಲಸವನ್ನು ಮಾಡಿದವರು ಬಹು ವಿರಳಾತಿ ವಿರಳ. ಅಂಥ ವಿರಳಲ್ಲಿ ಪ್ರೊ. ಜಿ.ವಿ.ಯವರದ್ದು ಅಗ್ರಪಂಕ್ತಿಯ ವಿಧಾನವೆಂದೇ ನಾನು ತಿಳಿಯುತ್ತೇನೆ.

ಪಾಂಡಿತ್ಯವು ಅನೇಕ ಬಾರಿ ಮಂಕು ತರಿಸುತ್ತದೆ. ಆದರೆ, ಅದು ಲೌಕಿಕವಾಗಿ ಪರಮೋಪಕಾರ ಆಗುವುದು ಇಂಥ ಮಹನೀಯರಲ್ಲೇ. ಪಾಂಡಿತ್ಯ ಅಜ್ಞಾನವನ್ನು ತಂದಿತ್ತು ಬುದ್ಧಿಗೆ ಮಂಕು ತರಿಸುತ್ತದೆ. ಆದರೆ ಜೀವಿ ಅವರಿಗೆ ಅದೊಂದು ಪ್ರಜ್ಞಾಪ್ರಕಾಶವಾಗಿದೆ. ಅದು ಶ್ರದ್ಧೆಯನ್ನು ತಂದಿತ್ತು ಅವರ ಬದುಕನ್ನು ಬೆಳಗಿಸಿದೆ. ಪಂಪ 'ಬೆಳಗುವೆನಲ್ಲಿ ಲೌಕಿಕಮಂ ಅಲ್ಲಿ ಜಿನಾಗಮಮಂ' ಎಂದು ಹೇಳಿದನಷ್ಟೆ. ಪ್ರತಿಯೊಬ್ಬ ಸಾಮಾಜಿಕ ಜೀವಿಯೂ ಲೌಕಿಕವನ್ನು ಬೆಳಗಿಸಬೇಕು. ಅದೊಂದು ತಪಸ್ಸು, ಧ್ಯಾನಭಾವ. ಅಂಥ ಲೌಕಿಕ ಬೆಳಗುವಿಕೆಯ ಕೆಲಸವನ್ನೂ ಪ್ರೊ. ಜಿ.ವಿ. ಕಳೆದ ಏಳು ವರ್ಷಗಳ ಕಾಲ ಮಾಡುತ್ತಾ ಬಂದಿದ್ದಾರೆ. ಅವರ ಬದುಕಿಗೆ ಅಂಥ ಉನ್ನತ ಶಕ್ತಿ ನಿತ್ಯಪ್ರಾಪ್ತವಾಗಿದೆ. ಇದು ದೇವಬಲ ಮತ್ತು ಗುರುಬಲಗಳಿಂದ ಒದಗಿದೆ. ಪ್ರೊ.ಬಿ.ಎಂ.ಶ್ರೀ, ಪ್ರೊ. ಎ.ಆರ್.ಕೃ. ಇಂಥ ಮಹನೀಯರ ಗುರುಕಾರುಣ್ಯವೂ ಪೂರ್ವಸೂರಿಗಳ ಗ್ರಂಥಾಧ್ಯಯನಗಳ ನೆರವೂ ಅವರ ಪಾಲಿಗೆ ಸಕಾರಣವಾಗಿಯೇ ಒದಗಿ ಬಂದಿದೆ. ಅದು ಅವರ ಶ್ರಮ-ಶ್ರದ್ಧೆ ನಿಷ್ಠೆಗಳ ಮೂರ್ತ ಸ್ವರೂಪವೂ ಆಗಿದೆ. ಅವರ ಗ್ರಂಥಗಳು ಇವಕ್ಕೆ ಸಾಕ್ಷ್ಯಗಳನ್ನು ನುಡಿಯುತ್ತಿವೆ.

ಪ್ರೊ. ಜಿ. ವೆಂಕಟಸುಬ್ಬಯ್ಯನವರ ಸಾಹಿತ್ಯ ಬಳಗ ದೊಡ್ಡದು; ಇದಕ್ಕಿಂತ ವಿದ್ಯಾರ್ಥಿ ಬಳಗ ಮತ್ತಷ್ಟು ದೊಡ್ಡದು. ಇವರು ವಿದ್ಯಾರ್ಥಿಪ್ರಿಯರು. ಯಾರು ಸ್ವಾಧ್ಯಾಯ-ಪ್ರವಚನಗಳಲ್ಲಿ ಸದಾ ನಿರತರೊ ಅಂಥವರು ಸದಾ ಕ್ಷೇಮ ಜಗತ್ತಿನ ಪ್ರಿಯರೂ ಆಗಿರುತ್ತಾರೆ. 'ಸ್ವಾಧ್ಯಾಯ'ಕ್ಕೆ ಪ್ರೊ. ಜಿ.ವಿ. ಅವರಲ್ಲಿ ಪ್ರಥಮ ಸ್ಥಾನ. ಪ್ರವಚನಕ್ಕೂ ಅವರು ಅಷ್ಟೇ ಉನ್ನತೋನ್ನತ ಮರ್ಯಾದೆ ನೀಡಿದ್ದಾರೆ. ಇಲ್ಲದಿದ್ದರೆ ಇಷ್ಟು ವಿದ್ಯಾರ್ಥಿ ಸಮೂಹ ಅವರನ್ನು ಚುಂಬಕದಂತೆ ಆಕರ್ಷಿಸುತ್ತಿದ್ದಿತಾದರೂ ಹೇಗೆ? ಪ್ರೊ. ಜಿ.ವಿ. ಪೂರ್ವಸೂರಿಗಳ ತಿಳಿವಳಿಕೆ ಭಂಡಾರವನ್ನು ಆಧುನಿಕಗೊಳಿಸುತ್ತಿದ್ದ ಬಗೆ ಹೇಗೆ? ಪ್ರೊ. ಜಿ.ವಿ. ಪೂರ್ವಸೂರಿಗಳ ತಿಳಿವಳಿಕೆ ಭಂಡಾರವನ್ನು ಆಧುನಿಕಗೊಳಿಸಿರುವ ಕ್ರಮವನ್ನು ನಮ್ಮ ವಿದ್ವಾಂಸರು ತಿಳಿಯುವ ವ್ಯಾಖ್ಯಾನಿಸುವ ವಿಶ್ಲೇಷಿಸುವ ಅಗತ್ಯವಿದೆ. ಅದು ವಿಶೇಷತಃ 'ನಿಘಂಟು ವಿಜ್ಞಾನ' ಎಂಬ ಶಾಸ್ತ್ರವಿಧಾನಕ್ಕೆ ಸಂಬಂಧಿಸಿದಂತೆ ಈ ಮಾತನ್ನು ಹೇಳುತ್ತಿದ್ದೇನೆ. ಅಧ್ಯಯನವು ನಿಂತ ನೀರಲ್ಲ, ಅದು ತಿಳಿಯುವ ತಿಳಿಯಾಗಿ ಸಾಗುವ ದಾರಿಗೆ ಸೇರಿದ್ದು. ಆಳವಾದ ಅಧ್ಯಯನ 'ಮಂಕು' ತರಿಸುತ್ತದೆಂಬ ಮಾತು ಈ ಹಿಂದೆ ಹೇಳಿದ್ದು ಇದೇ ಅರ್ಥದಲ್ಲಿಯೇ. ಆದರೆ ಪ್ರೊ. ಜಿ.ವಿ. ಅವರಂಥ ವಿದ್ವಾಂಸ ಮಹನೀಯರ ವಿಷಯದಲ್ಲಿ ಈ ಮಾತನ್ನು ಅಷ್ಟೇ ದಾರ್ಷ್ಟ್ಯವಾಗಿ ಹೇಳಲು ಸಾಧ್ಯವಿಲ್ಲ. ವಿನಯ, ಶ್ರಮ, ಶ್ರದ್ಧೆ, ಗೌರವ, ವಿವೇಕ, ಪೂರ್ವಾಪರಜ್ಞಾನಗಳು ಅವರ ಬದುಕಿಗೂ ಬರಹಕ್ಕೂ ಜೋಡು ಜೇನಿಗೆಯಾಗಿ ತಮಗೆ ತಾವೇ ಶಬ್ದ-ಅರ್ಥಗಳಂತೆ, ಶಿವ-ಪಾರ್ವತಿಯಂತೆ ಸೇರಿಕೊಂಡಿವೆ.

ಈಗ ಪ್ರೊ. ಜಿ.ವಿ. ಅವರಿಗೆ 98 ವರ್ಷ. ಶತಮಾನಕ್ಕೆ ಇನ್ನು ಎರಡು ವರ್ಷ ಮಾತ್ರ. ಕನ್ನಡಿಗರ ಅಭಿಮಾನದ, ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ನಿಯೋಜಿತ ಅಧ್ಯಕ್ಷ. ಇದು ಅವರಿಗೆ ಸಂದಿರುವುದು ವಿದ್ವತ್ತಿಗೆ, ವಿನಯಕ್ಕೆ, ಕನ್ನಡಕ್ಕೆ ಸಂದಿರುವ ಪುರಸ್ಕಾರ.

• ಮಲ್ಲೇಪುರಂ ಜಿ. ವೆಂಕಟೇಶ

ಮಗಳ ಬದುಕಿಗೂ ಮಣ್ಣುಹಾಕಿದ ಭಂಡ ಬಂಡಿಗಣೆ ಸ್ವಾಮಿ



ತನ್ನೊಳಗಿನ ತೀಟೆಗಳಿಗೆ ಧಾರ್ಮಿಕತೆಯ ಮಾಲೀಶು ಮಾಡಿ ಮುಗ್ಧರನ್ನು ಯಾಮಾರಿಸುತ್ತಾ ಬಂದಿರುವ ಬಂಡಿಗಣೆ ಸ್ವಾಮಿ ಮತ್ತೊಮ್ಮೆ ಬೆತ್ತಲಾಗಿದ್ದಾನೆ. ದೇವರ ಹೆಸರಲ್ಲಿ ಹೆಂಗಳೆಯರ ಮೇಲೆ ಅತ್ಯಾಚಾರ ಎಸಗುವುದು, ಅದಕ್ಕಡ್ಡ ಬಂದವರನ್ನು ಬಲಿಹಾಕುವುದೆಲ್ಲ ಈ ಹಲಾಲು ಕೋರನ ಹುಟ್ಟು ಜಾಯಮಾನ. ಆದರೀಗ ಈತನೊಳಗಿನ ವಿಕೃತಿಗಳು ರಾಕ್ಷಸರೂಪ ಪಡೆದು ಮಗಳ ಗಂಡನನ್ನೇ ನಡುಬೀದಿಯಲ್ಲಿ ಕೊಂದು ಕೆಡಹುವ ಮಟ್ಟಕ್ಕೆ ಬೆಳೆದು ನಿಂತಿವೆ.


ಬಾಗಲಕೋಟೆ ಜಿಲ್ಲೆ ಜಮಖಂಡಿ ತಾಲ್ಲೂಕಿನಲ್ಲಿರುವ ಬಸವಗೋಪಾಲ ನೀಲಮಾಣಿಕ ಮಠಕ್ಕೆ ಸ್ಥಳೀಯರು ಬಂಡಿಗಣೆ ಮಠ ಅಂತ ಕರೆಯುತ್ತಾರೆ. ಇದರ ಪೀಠಾಧಿಪತಿಯಾದ ದಾನಯ್ಯ ದುಂಡಯ್ಯನೆಂಬ ದುಷ್ಟ ಬಂಡಿಗಣೆಸ್ವಾಮಿ ಅಂತಲೇ ಕುಖ್ಯಾತ. ಈತನ ಕಚ್ಚೆಹರುಕತನದ ಕಲ್ಯಾಣ ಗುಣಗಳು ಈ ಭಾಗದಲ್ಲಿ ಜನಜನಿತ. ದುರಂತವೆಂದರೆ, ಅನಕ್ಷರಸ್ಥರೇ ಹೆಚ್ಚಾಗಿರುವ ಈ ಸೀಮೆಯಲ್ಲಾಕೋ ಭಂಡ ಬಂಡಿಗಣೆ ಸ್ವಾಮಿಯ ಗಿಮಿಕ್ಕುಗಳು ವಿಘ್ನವಿಲ್ಲದೆ ಮುಂದುವರೆಯುತ್ತಿವೆ.

ಇಂಥಾ ಬಂಡಿಗಣೆ ಸ್ವಾಮಿಗೆ ತನ್ನ ಮಠಕ್ಕೆ ಶರಣು ಬಂದ ಹೆಂಗಸರನ್ನ ಬಲೆಗೆ ಕೆಡವಿಕೊಳ್ಳುವುದು ಕರತಲಾಮಲಕ ವಿದ್ಯೆ. ಈ ಚಾಳಿಗೆ ಬಲಿ ಬಿದ್ದು ಬದುಕು ಕಳೆದುಕೊಂಡ ಹತಭಾಗ್ಯರ ಲಿಸ್ಟು ತೀರಾ ದೊಡ್ಡದಿದೆ. ಇಂಥಾ ಅಡ್ನಾಡಿತನದಿಂದ ಅದೆಷ್ಟು ಹೆಂಗೆಳೆಯರನ್ನ ಬಲಿ ಬೀಳಿಸಿದರೂ ಈತನೊಳಗಿನ ಕಾಮ ಪಿತ್ಥ ತಣಿದಂತಿಲ್ಲ, ಇದರಿಂದಾಗಿಯೇ ಈರಮ್ಮ ಹಾಗೂ ಚಂದ್ರವ್ವರೆಂಬ ಸಹೋದರಿಯರನ್ನು ಮದುವೆಯಾಗಿ ಒಬ್ಬಳಿಗೆ ಮೂವರು ಹಾಗೂ ಇನ್ನೊಬ್ಬಾಕೆಗೆ ಒಂಬತ್ತು ಮಕ್ಕಳನ್ನು ನೀಡಿ 'ಪೌರುಷ' ಮೆರೆದ.


ಅದ್ಯಾವ ದುರಾದೃಷ್ಟವೋ ಗೊತ್ತಿಲ್ಲ, ಬನಹಟ್ಟಿಯ ಲಕ್ಷ್ಮೀನಗರದ ರಾಜಸ್ಥಾನಿ ಬ್ರಾಹ್ಮಣರ ಹುಡುಗ ಬಲರಾಮ ಶರ್ಮ ಕುಖ್ಯಾತ ಬಂಡಿಗಣೆ ಮಠದತ್ತ ಆಕರ್ಷಿತನಾದ. ಭಕ್ತನಾಗಿ ಬಂದ ಶರ್ಮನಿಗೆ ಸ್ವಾಮಿಯ ಕಚ್ಚೆಹರುಕತನ ತಿಳಿದಿರಲಿಲ್ಲವೋ, ತಿಳಿದೂ ಮೌಢ್ಯಕ್ಕೆ ಶರಣಾದನೋ... ಅಂತೂ ಕಳ್ಳ ಸ್ವಾಮಿಯ ಆಪ್ತ ವಲಯದಲ್ಲಿ ಅಡ್ಡಾಡುವಷ್ಟರ ಮಟ್ಟಿಗೆ ಆಪ್ತನಾದ.

ಇದು ಯಾವ ಹಂತಕ್ಕೆ ತಲುಪಿತೆಂದರೆ, ಬಲರಾಮ ಶರ್ಮ ಸ್ವಾಮಿಯ ಸಂಸಾರಕ್ಕೂ ಹತ್ತಿರದವನಾಗಿ ಹೋದ. ಬರಬರುತ್ತಾ ಸ್ವಾಮಿಯ ಎರಡನೇ ಹೆಂಡತಿಯ ಮಗಳು ಶಿವಲೀಲಾಳೆಡೆಗೆ ಆಸಕ್ತಿ ಬೆಳೆಸಿಕೊಂಡ ಶರ್ಮ ಆಕೆಯನ್ನು ಒಲಿಸಿಕೊಳ್ಳುವುದನ್ನು ಭಕ್ತಿಯ ಭಾಗವಾಗಿಸಿಕೊಂಡ. ನೋಡಲು ಚೆಂದಗಿದ್ದ ಶಿವಲೀಲಾಳಿಗೆ ಕೂಡಾ ಶರ್ಮನೆಡೆಗೊಂದು ಪ್ರೀತಿ ಮೊಳೆತಿದೆ. ಇದು ಕಳೆದೆರಡು ವರ್ಷಗಳಿಂದಲೂ ಮುಂದುವರೆದಿದೆ. ದಿನಗಟ್ಟಲೇ ಇಬ್ಬರ ನಡುವೆ ದೂರವಾಣಿ ಮಾತುಕತೆಯೂ ಎಗ್ಗಿಲ್ಲದೆ ನಡೆದಿದೆ. ಆದರೆ ಪ್ರೀತಿಯೆಂಬುದು ಮದುವೆಯ ಆಲೋಚನೆಯ ಸುತ್ತ ಹರಿದಾಡಿದಾಗ ಶಿವಲೀಲಾ ವಾಸ್ತವವನ್ನು ಬಲರಾಮನೆದುರು ತೆರೆದಿಟ್ಟಿದ್ದಾಳೆ. ತನ್ನ ತಂದೆ ಕಳ್ಳಸ್ವಾಮಿಯ ವಕ್ರಬುದ್ಧಿಯ ಅರಿವಿದ್ದ ಆಕೆ ಅವನೇ ತಮ್ಮ ಪ್ರೇಮಕ್ಕೆ ಅಡ್ಡಿಯಾಗುವ ಸೂಚನೆಯನ್ನೂ ನೀಡಿದ್ದಾಳೆ.


ಆದರೆ ಬಲರಾಮನದ್ದು ಭಂಡ ಧೈರ್ಯ, ಎಂಥಾ ಸಮಸ್ಯೆಯೂ ಪ್ರೀತಿಯ ಮುಂದೆ ಕರಗುತ್ತದೆಂಬ ಕಠಿಣ







ನಂಬುಗೆ. ಇದರಿಂದಾಗಿಯೇ ವರ್ಷದ ಹಿಂದೆ ಶಿವಲೀಲಾಳನ್ನು ಕರೆದುಕೊಂಡು ಊರುಬಿಟ್ಟ. ಒಂದಷ್ಟು ದಿನ ಅಲ್ಲಲ್ಲಿ ಅಲೆದು ನಂತರ ಧಾರವಾಡದ ಸಬ್‌ರಿಜಿಸ್ಟರ್ ಆಫೀಸ್‌ನಲ್ಲಿ ರಿಜಿಸ್ಟರ್ ಮದುವೆಯೂ ನಡೆಯಿತು.



ಕೊಲೆಯಾದ ಬಲರಾಮ ಶಿವಲೀಲಾಳೊಂದಿಗೆ...

ತಮಾಷೆಯೆಂದರೆ ಕಂಡವರ ಮುಂದೆ ಭವಿಷ್ಯದ ಪುಂಗಿಯೂದಿ ಯಾಮಾರಿಸುವ ಬಂಡಿಗಣೆ ಸ್ವಾಮಿಗೆ ತನ್ನದೇ ಮನೆಯಲ್ಲಿ ನಡೆದ ಬೆಳವಣಿಗೆಗಳೇ ಗೊತ್ತಾಗಲಿಲ್ಲ, ಜೊತೆಗೆ ತುಂಬಾ ದಿನದವರೆಗೆ ತನ್ನ ಮಗಳು ಯಾರೊಂದಿಗೆ ಓಡಿಹೋದಳೆಂಬುದೂ ಗೊತ್ತಿರಲಿಲ್ಲ!

ಈ ಬಗ್ಗೆ ತಾನು ಸಾಕಿದ ಪಂಟರುಗಳಿಂದ ಮಾಹಿತಿ ಕಲೆಹಾಕಲು ಹೆಣಗಿದ ಸ್ವಾಮಿಗೆ ತನ್ನ ಮಠದ ಭಕ್ತ ಬಲರಾಮನೇ ಮಗಳನ್ನು ಹಾರಿಸಿಕೊಂಡು ಹೋಗಿದ್ದೆಂಬ ಸತ್ಯ ತಿಳಿಯಿತು. ತಾನು ಜಾತಿಯ ಹಂಗಿಲ್ಲದೆ ಕಚ್ಚೆಹರುಕ ಬುದ್ಧಿ ಪ್ರದರ್ಶಿಸಿದರೂ ಮಗಳು ಬೇರೆ ಜಾತಿಯವನನ್ನು ಮದುವೆಯಾದದ್ದೇ ಆತನಿಗೆ ಮಹಾ ಪಾತಕವಾಗಿ ಕಂಡಿದೆ. ಇದರ ಮರುಗಳಿಗೆಯಿಂದಲೇ ಪಕ್ಕಾ ರೌಡಿ ಗೆಟಪ್ಪು ತಳೆದ ಸ್ವಾಮಿ ತನ್ನ ಬಂಟರನ್ನಟ್ಟಿ ಬನಹಟ್ಟಿಯ ಬಲರಾಮನ ಕುಟುಂಬಿಕರಿಗೆ ಇನ್ನಿಲ್ಲದಂತೆ ಕಿರುಕುಳ ನೀಡಲು ಶುರುವಿಟ್ಟಿದ್ದಾನೆ. ಕೊಲೆ ಬೆದರಿಕೆಯನ್ನೂ ಹಾಕಿದ್ದಾನೆ.

ತೀರಾ ತಾವಾಯಿತು, ತಮ್ಮ ಕಸುಬಾಯಿತು ಅಂತ ಬದುಕುತ್ತಿದ್ದ ಶರ್ಮನ ಮನೆಯವರು ಬಂಡಿಗಣೆ ಸ್ವಾಮಿಯ ಭಂಡತನದೆದುರು ಕಂಗಾಲಾಗಿ ಬಲರಾಮನನ್ನು ಹೊಸಪೇಟೆಯಲ್ಲಿ ಪತ್ತೆಹಚ್ಚಿದರು. ನಂತರ ಬಲರಾಮ-ಶಿವಲೀಲಾರನ್ನು ಬನಹಟ್ಟಿಗೆ ಕರೆತಂದು ಪ್ರತ್ಯೇಕ ಮನೆ ಮಾಡಿ ಕೂರಿಸಿದರು. ಇದಾಗುವಷ್ಟರಲ್ಲಿ ಬಲರಾಮ-ಶಿವಲೀಲಾರ ದಾಂಪತ್ಯಕ್ಕೆ ಒಂದು ವರ್ಷ ತುಂಬುತ್ತಾ ಬಂದಿತ್ತು.

ಮಗಳನ್ನು ಹಾರಿಸಿಕೊಂಡು ಹೋದ ಬಲರಾಮ ಊರ ಪಕ್ಕದಲ್ಲಿ ಸಂಸಾರ ಹೂಡಿದ್ದೇ ಬಂಡಿಗಣೆ ಸ್ವಾಮಿ ಕುದ್ದುಹೋಗಿದ್ದಾನೆ. ತನ್ನ ಎಂಟು ಜನ ಗಂಡು ಮಕ್ಕಳನ್ನು (ಅಧಿಕೃತ) ಗುಡ್ಡೆ ಹಾಕಿಕೊಂಡವನೇ ಏನೇ ಆದರೂ ಶರ್ಮನನ್ನು ಬಲಿ ಹಾಕುವಂತೆ ತಾಕೀತು ಮಾಡಿದ್ದಾನೆ. ಇದನ್ನು ದಕ್ಕಿಸಿಕೊಳ್ಳಲು ರಾಜಕೀಯ ಬೆಂಬಲ ಬೇಕಲ್ಲ? ಅದಕ್ಕಾಗಿ ಶಾಸಕ ಸಿದ್ದು ಸವದಿಯ ಸಹೋದರ ಯೋಗಪ್ಪನನ್ನ ವಿಶ್ವಾಸಕ್ಕೆ ತೆಗೆದುಕೊಳ್ಳಲಾಯ್ತು. ನಂತರ ರೆಡಿಯಾದದ್ದು ಬಲರಾಮನ ಬಲಿಗೆ ಪಕ್ಕಾ ಸ್ಕೆಚ್!



ಬಂಡಿಗಣೆ ಸ್ವಾಮಿ

ಸುಖಸಂಸಾರ ನಡೆಸುತ್ತಾ ಹಾಯಾಗಿದ್ದ ಬಲ[ರಾಮ]ನಿಗಾಗಲಿ, ಶಿವಲೀಲಾಳಿಗಾಗಲಿ ಈ ಸಂಚಿನ ವ[...] ಬಡಿಯಲೇ ಇಲ್ಲ, ಒಂದು ವರ್ಷದಿಂದ ತೆಪ್ಪಗಿದ್[ದ ...] ಇನ್ನೇನೂ ಮಾಡಲಾರರೆಂಬ ನಂಬುಗೆಯಲ್ಲಿದ್ದ ಬಲ[ರಾಮ] ಸಲೀಸಾಗಿ ಅಡ್ಡಾಡಲಾರಂಭಿಸಿದ. ಆದರೆ ಬಂಡಿಗಣೆ ಸ[್ವಾಮಿಯ] ಪಟಾಲಂನ ಹುಡುಗರು ಬಲರಾಮನ ಸಹೋದರನ [...] ದಂಗಡಿಯಲ್ಲಿ ಕೂತು ಆತನ ಚಲನವಲನಗಳ ಮೇಲೊ[ಂದು] ಕಣ್ಣಿಟ್ಟಿದ್ದರು. ಇದೆಲ್ಲದರ ನಡುವೆ ದೀಪಾವ[ಳಿ] ಅಮಾವಾಸ್ಯೆಯಂದು ಬಲರಾಮನ ಬಲಿಗೆ ಮುಹು[ರ್ತ] ಫಿಕ್ಸ್ ಆಯಿತು.

ಅಂದು ಬೆಳಗ್ಗೆಯಿಂದಲೇ ಬಲರಾಮನ ಮನೆ[ಯಲ್ಲಿ] ಹಬ್ಬದ ಸಂಭ್ರಮ. ಆ ದಂಪತಿಗಳ ಪಾಲಿಗಿದು ಮೊ[ದಲ] ಬೆಳಕಿನ ಹಬ್ಬ. ಇಂಥ ಸಂತಸದಲ್ಲಿ ಇಡೀ [...] ಮಿಂದೇಳುತ್ತಿದ್ದರೆ, ಶಿವಲೀಲಾಳಿಗೆ ತಾಯಿ ಇಂದಿರಾ ಫೋ[ನ್] ಮಾಡಿದ್ದಾಳೆ. ಬಲರಾಮನ ಬಲಿಗೆ ತನ್ನ ಗಂಡ ಅ[...] ಶಿವಲೀಲಾಳ ಅಪ್ಪ ಬಂಡಿಗಣೆಸ್ವಾಮಿ ಸ್ಕೆಚ್ಚು ಹಾಕಿ[...] ಹೇಳಿದ್ದಾಳೆ. ಅದಾದ ಬಳಿಕ ಶಿವಲೀಲಾಳ ಇನ[್ನೊಬ್ಬ] ಸಹೋದರ ಕಾಡಯ್ಯನೂ ಕರೆ ಮಾಡಿ ಎಚ್ಚರಿಕೆ ನೀಡಿ[...]

ಶಿವಲೀಲಾ ಇದಿಷ್ಟು ವಿಚಾರ ತಿಳಿಸುತ್ತಲೇ ಬಲರ[ಾಮ] ಶಂಕರಬದರಿಯವರ ತಮ್ಮ ರಾಜು ಬದರಿಯವರಿಗೆ ವಿ[...] ತಿಳಿಸುವ ತರಾತುರಿಯಿಂದ ಮನೆಯ ಹೊರ ನಡೆದ[...] ಇದಕ್ಕಾಗೇ ಶಾಲೆಯ ಕಾಂಪೌಂಡ್ ಬಳಿ ಕಾದು ಕು[...] ಶಿವಲೀಲಾಳ ಸಹೋದರರಾದ ಚಿಕ್ಕಯ್ಯ, ಈರಪ್ಪ [...] ಬಸವಯ್ಯ ಬಲವಂತದಿಂದ ಬಲರಾಮನನ್ನ ಶಾ[ಲೆಯ] ಆವರಣಕ್ಕೆ ಎಳೆ ತಂದಿದ್ದಾರೆ. ಪ್ಲಾನ್‌ನಂತೆ ಚಿ[...]

ತಿರುಬೋಕಿ ದಾನಯ್ಯ ಸ್ವಾಮಿಯಾದದ್ದು!

ಇದೀಗ ಬಸವಗೋಪಾಲಸ್ವಾಮಿಯಾಗಿ ಗೆಟಪ್ಪು ಬದಲಿಸಿಕೊಂಡಿರುವ ಬಂಡಿಗಣೆಸ್ವಾಮಿಯ ನಿಜನಾಮಧೇಯ ದಾನಯ್ಯ ಹಿರೇಮಠ.

ಈಗ್ಗೆ ಇಪ್ಪತ್ತೈದು ವರ್ಷಗಳ ಹಿಂದೆ ಪುಂಡನಾಗಿದ್ದ ಈತನ ಕಾರ್ಯಕ್ಷೇತ್ರ ಅಥಣಿಯಾಗಿತ್ತು, ದಿನಾ ಬೆಳಗಾಗೆದ್ದು ಬೀದಿಯಲ್ಲಿ ನಿಂತು ಹುಡುಗಿಯರನ್ನು ಚುಡಾಯಿಸುವುದೇ ಈತನ ನಿತ್ಯದ ಘನಕಾರ್ಯವಾಗಿತ್ತು, ಇವನ ಹುಡುಗೀರ ಹುಚ್ಚು ವಿಪರೀತಕ್ಕೆ ಹೋದಾಗ ಅದೇ ಅಥಣಿಯ ಮರ್ಯಾದಸ್ಥರು ಬೆತ್ತಲೆ ಮಾಡಿ ಎಕ್ಕಡದಲ್ಲಿ ಹೊಡೆದು ಕಾಮಪಿತ್ಥ ಇಳಿಸಿದ್ದರು.

ಹಾಗೆ ಬಡಿಸಿಕೊಂಡ ದಾನಯ್ಯ ದೈನೇಸಿಯಂತೆ ಜಮಖಂಡಿಯ ತನ್ನ ಸಂಬಂಧಿಕರ ಮನೆ ಸೇರಿಕೊಂಡ. ನಂತರ ಬಾಜಿನಲ್ಲೇ ನಡೆಯುತ್ತಿದ್ದ ಡ್ಯಾಮ್ ಕಾಮಗಾರಿಯಲ್ಲಿ ಕೂಲಿಯಾಗಿ ಕೆಲಸ ಮಾಡಹತ್ತಿದ. ಆದರೆ ಹುಟ್ಟುಗುಣ ಬಿಡಬೇಕಲ್ಲ, ಆಶ್ರಯ ನೀಡಿದವರ ಮನೆಮಗಳನ್ನೇ ತನ್ನ ತೆವಲಿಗೆ ಬಳಸಿಕೊಂಡ. ಇದು ಊರಮಂದಿಗೆ ಗೊತ್ತಾಗಿ ರಣರಂಪವಾಗಿ ಹೋಗಿತ್ತು,

ನಂತರ ಪಕ್ಕಾ ಬೀಡಾಡಿಯಂತೆ ಅಲೆಯಹತ್ತಿದ ದಾನಯ್ಯ ಆಸುಪಾಸಿನ ಮಠಗಳಲ್ಲಿ ಅಡ್ಡಾಡಿ ಗಾಂಜಾ, ಸಾರಾಯಿ ಅಮಲಿನಲ್ಲಿ ತೂರಾಡಲು ಶುರುವಿಟ್ಟ. ಈ ನಡುವೆ ಭಯಂಕರ ಗಿಮಿಕ್ಕೊಂದನ್ನು ಶುರುವಿಟ್ಟ ಈತ ಕನಸಲ್ಲಿ ಕೃಷ್ಣ ಪರಮಾತ್ಮ ಬರ್ತಾನೆ, ಭಗವಂತನೇ ಮೈಮೇಲೆ ಬರ್ತಾನೆ ಅಂತೆಲ್ಲ ಪುಂಗತೊಡಗಿದ.

ಹೇಳಿಕೇಳಿ ಅದು ಅನಕ್ಷರಸ್ಥರೇ ಹೆಚ್ಚಾಗಿರುವ ಊರು. ಇದನ್ನೇ ಬಳಸಿಕೊಂಡ ದುಷ್ಟ ದಾನಯ್ಯ ಮಾಟಮಂತ್ರ ಬಡಿಸುವ ತಂತ್ರ ಶುರುಹಚ್ಚಿದ. ಈ ದಂಧೆ ಕ್ಲಿಕ್ ಆಗುತ್ತಲೇ ಬಂಡಿಗಣೆ ಗ್ರಾಮದ ಹೊರವಲಯದಲ್ಲಿ ಪುಟ್ಟದೊಂದು ಬಸವಣ್ಣನ ಮೂರ್ತಿಯಿಟ್ಟು 'ಹೇಳಿಕೆ' ಆರಂಭಿಸಿದ. ಇದರ ಜೊತೆಯಲ್ಲೇ ಆಸುಪಾಸಿನ ಸರ್ಕಾರಿ ಜಮೀನು ಹೊಡೆಯುತ್ತಾ ಕೊಬ್ಬಿದ ದಾನಯ್ಯ ಬಸವಗೋಪಾಲ ಸ್ವಾಮಿಯಾಗಿ ಬದಲಾಗಿ ಜನರನ್ನು ಯಾಮಾರಿಸಿದ. ಅದು ಇಂದಿಗೂ ಮುಂದುವರೆದಿದೆ.



ಎಲ್ಲಾ ಕೃಷ್ಣ ಪರಮಾತ್ಮನಿಚ್ಛೆ

ಬೀಡಾಡಿ ದಾನಯ್ಯ ಮಠ ತೆರೆದು ಸ್ವಾಮಿಯ ಗೆಟಪ್ಪು ಬದಲಿಸಿದ್ದರ ಹಿಂದೆ ಅದೇನೇ ಉದ್ದೇಶಗಳಿದ್ದರೂ ಅದೆಲ್ಲದರ[...] ಹೆಂಗಸರ ಖಯಾಲಿ ಪ್ರಮುಖವಾದದ್ದು. ಮಠಕ್ಕೆ ಬಂದ ಹೆಣ್ಣುಮಕ್ಕಳನ್ನು ಆರಂಭದಿಂದಲೂ ತನ್ನ ತೀಟೆ[...] ಬಳಸಿಕೊಳ್ಳುತ್ತಾ ಬಂದ ಈತ ತೆವಲು ತೀರಿದ ಬಳಿಕ 'ಎಲ್ಲಾ ಕೃಷ್ಣನ ಇಚ್ಛೆ' ಅಂದು ಅಮಾಯಕರನ್ನ ಸಾಗಹಾಕುತ್ತಾ[...]

ಈತ ಸ್ತ್ರೀವಶೀಕರಣ ವಿದ್ಯೆ, ಪುರುಷತ್ವ ವೃದ್ಧಿ ಅಂತೆಲ್ಲಾ ಪುಂಗುತ್ತಿದ್ದಾನಲ್ಲಾ? ಅದೆಲ್ಲದರ ಹಿಂದೆ ಹೆಣ್ಣುಬಾಕತನ ಹುನ್ನಾರವಿರುವುದು ಖಚಿತ. ಒಂದಷ್ಟು ವರ್ಷಗಳ ಹಿಂದೆ ಈ ಭಾಗದ ಇಂಜಿನಿಯರ್ ಒಬ್ಬ ತನ್ನ ನರದೌರ್ಬಲ್ಯ ಸಮಸ್ಯೆ ಹೇಳಿಕೊಂಡು ಈ ಖದೀಮನ ಬಳಿ ಬಂದಿದ್ದ. ಬಂಡಿಗಣೆ ಸ್ವಾಮಿಯ 'ದೌರ್ಬಲ್ಯ' ಅರಿಯ[ದ] ಅಮಾಯಕತನದಿಂದ ತನ್ನ ಚೆಂದದ ಹೆಂಡತಿ ಸುಮಂಗಲಾ ಪಾಟೀಲಳನ್ನೂ ಕರೆದುಕೊಂಡು ಬಂದಿದ್ದ. ಕತ್ತೆಗೆ ಸೀ[ರೆ] ಉಡಿಸಿದರೂ ಕಚ್ಚೆ ಎತ್ತಿಕೊಂಡು ಹಿಂದೆ ಓಡುವ ಜಾಯಮಾನದ ಬಂಡಿಗಣೆಸ್ವಾಮಿ ಸುಮಂಗಲಾಳ ಸೌಂದರ್ಯ[ಕ್ಕೆ] ಮಾರುಹೋಗಿದ್ದಾನೆ. ಆಕೆಯನ್ನು ಅದು ಹೇಗೋ ಒಲಿಸಿಕೊಂಡು ನೀನು ಸಾಕ್ಷಾತ್ ಕೊಲ್ಹಾಪುರದ ಮಹಾಲ[ಕ್ಷ್ಮಿ] ಎಂದೂ, ನಿನ್ನನ್ನು ಕೊಲ್ಹಾಪುರಕ್ಕೆ ಕರೆತರುವ ಜವಾಬ್ದಾರಿಯನ್ನು ಆ ತಾಯಿಯೇ ತನಗೊಪ್ಪಿಸಿದ್ದಾಳೆಂದು ಒದರಿ[...]

ಇದೆಲ್ಲದಕ್ಕೆ ಮನಸೋತ ಸುಮಂಗಲಾ ಗಂಡನನ್ನು ಬಿಟ್ಟು ಕಳ್ಳ ಸ್ವಾಮಿಯೊಂದಿಗೆ ಕೊಲ್ಹಾಪುರಕ್ಕೆ ತೆರಳಿದಳ[ು] ಅಲ್ಲೇ ಒಂದು ವಾರಗಳ ಕಾಲ 'ಪೂಜೆ' ಮುಗಿಸಿಕೊಂಡು ಆತನೊಂದಿಗೆ ವಾಪಸಾದ ಆಕೆ ಬಂಡಿಗಣೆ ಮಠ[ದ] ಮಾತೆಯಾಗಿ ಬಿಂಬಿಸಿಕೊಂಡಳು. ಆಕೆಯ ನರದೌರ್ಬಲ್ಯದ ಇಂಜಿನಿಯರ್ ಗಂಡ ನಿಗೂಢವಾಗಿ ಸತ್ತೇಹೋದ[...] ಅದರ ಹಿಂದೆ ಸ್ವಾಮಿಯದ್ದೇ ಕೈವಾಡವಿದೆ ಅಂತ ಈಗಲೂ ಜನ ಆಡಿಕೊಳ್ಳುತ್ತಿದ್ದಾರೆ.

ಬಂಡಿಗಣೆ ಸ್ವಾಮಿ ತನ್ನ ಕಾಮುಕತನ ನೀಗಿಸಿಕೊಳ್ಳಲು ಎಂಥ ರಾಕ್ಷಸ ಕೆಲಸಕ್ಕೂ ಹಿಂಜರಿಯುವ ಆಸಾಮಿಯ[ಲ್ಲ.] ಇದಕ್ಕೆ ಆತನ ಮಠದ ಭಕ್ತೆಯಾಗಿದ್ದುಕೊಂಡು ದುರಂತ ಅಂತ್ಯ ಕಂಡ ಮಹಾದೇವಿ ತಳವಾರ ಎಂಬ ದಲಿ[ತ] ಮಹಿಳೆಯೇ ಸಾಕ್ಷಿ. ಈಕೆಯನ್ನು ಬಂಡಿಗಣೆಸ್ವಾಮಿ ಬಳಸಿಕೊಂಡು ಹಿಂಸಿಸಿದ. ಸ್ವಲ್ಪ ಗಟ್ಟಿ ಹೆಂಗಸಾದ ಆ[...] ವಿರೋಧಿಸಿದಳು. ಇದು ಬಹಿರಂಗವಾಗುತ್ತದೆಂದು ಹೆದರಿದ ಪಾಪಿ ಸ್ವಾಮಿ ಆಕೆಯನ್ನು ಕೊಂದು ಬಾವಿಯ[ಲ್ಲಿ] ಹಾಕಿದ್ದ. ಈ ಬಗ್ಗೆ 'ಲಂಕೇಶ್' ಆಗಲೇ ವರದಿ ಮಾಡಿತ್ತು, ಇಷ್ಟೆಲ್ಲಾ ಅಮಾನುಷವಾಗಿ ವರ್ತಿಸಿ ಅಮಾಯ[ಕ] ಹೆಂಗಸರನ್ನು ಬಲಿಬೀಳಿಸಿದ ಬಂಡಿಗಣೆ ಸ್ವಾಮಿ ಅದೆಲ್ಲ ಶ್ರೀಕೃಷ್ಣನ ಇಚ್ಛೆ ಅನ್ನುತ್ತಾನೆ.

ಈ ಲಫಂಗನಿಗೆ ಯಾವುದರಲ್ಲಿ ಹೊಡೆಯಬೇಕು?

ದುಷ್ಟನ ಕಾಲಿಗೆ ಬಿದ್ದ ದರಿದ್ರ ಯಡ್ಡಿ!

ಕರ್ನಾಟಕ ಕಂಡ ಅತ್ಯಂತ ಅವಿವೇಕಿ ಮುಖ್ಯಮಂತ್ರಿ ಯಡಿಯೂರಪ್ಪ ಜಾತಿಪ್ರೇಮದಲ್ಲಿ ಭಲೇ ಕುಖ್ಯಾತರು. ಆತ ಎಷ್ಟೇ ದಗಲ್ಬಾಜಿಯಾಗಿದ್ದರೂ, ದುಷ್ಟನಾಗಿದ್ದರೂ, ಕಾಮುಕ-ಕೊಲೆಗಡುಕನಾಗಿದ್ದರೂ ಅವನ ಕುತ್ತಿಗೆಯಲ್ಲೊಂದು 'ಕರಡಿಗೆ' ಕಂಡರೆ ಸಾಕು ಯಡ್ಡಿಗೆ ಇಹವೇ ಮರೆತುಹೋಗುತ್ತದೆ. ಸದ್ಯ ಯಡಿಯೂರಪ್ಪ ಕಾಮುಕ ಬಂಡಿಗಣಿ ಸ್ವಾಮಿಯೆಡೆಗೂ ಇಂತಹುದೇ ಜಾತಿ ನಿಷ್ಠೆ ಪ್ರದರ್ಶಿಸಿ ಶುದ್ಧ ದರಿದ್ರತನ ಮೆರೆದಿದ್ದಾರೆ.

ಆರು ತಿಂಗಳ ಹಿಂದೆ ಕಾರ್ಯಕ್ರಮವೊಂದರಲ್ಲಿ ಪಾಲ್ಗೊಳ್ಳಲೋಸುಗ ಯಡಿಯೂರಪ್ಪ ತೇರದಾಳಕ್ಕೆ ಬಂದಿದ್ದರು. ಸಮಾರಂಭ ಮುಗಿಸಿಕೊಂಡ ಬಳಿಕ ಬಂಡಿಗಣಿ ಸ್ವಾಮಿಯ ಚೇಲಾ ಶಾಸಕ ಸಿದ್ದು ಸವದಿ ಯಡ್ಡಿಯನ್ನು ಬಂಡಿಗಣಿ ಮಠಕ್ಕೆ ಕರೆದ. ಹಾಗೆ ಬಂದ ಯಡ್ಡಿ ಕಾಮುಕನ ಕಾಲಿಗೆ ಬಿದ್ದು ಆಶೀರ್ವಾದ ಪಡೆದುಕೊಂಡರು. ಈ ಹಲಾಲುಕೋರ ಸ್ವಾಮಿ ಮುಖ್ಯಮಂತ್ರಿ ತನ್ನ ಕಾಲಿಗೆ ಬಿದ್ದ ಫೋಟೋ ಬಳಸಿಕೊಂಡು ಒಂದಷ್ಟು ಮೈಲೇಜ್ ತೆಗೆದಕೊಂಡಿದ್ದೂ ನಡೆದಿತ್ತು. ಯಡ್ಡಿಯ ಈ ದರಿದ್ರ ಕೆಲಸಕ್ಕೆ ಪ್ರೇರಣೆ ನೀಡಿದ್ದ ಕಳ್ಳ ಸ್ವಾಮಿ ಜಂಗಮ ಎಂಬುದರ ಹೊರತಾಗಿ ಬೇರ್ಯಾವ ಕಾರಣಗಳೂ ಕಾಣಿಸುತ್ತಿಲ್ಲ.

ಯಡ್ಡಿಯ ಈ ಮೂರ್ಖತನವೇ ಇಂದು ಬಂಡಿಗಣಿ ಸ್ವಾಮಿಯನ್ನು ಕೊಲೆ ಕೇಸಿಂದ ಬಚಾವಾಗಿಸಿದರೂ ಆಶ್ಚರ್ಯವಿಲ್ಲ, ಯಾಕೆಂದರೆ ಇದೀಗಲೇ ಈ ಭಾಗದ ಕೆಲ ಅವಿವೇಕಿ ರಾಜಕಾರಣಿಗಳು ಈತನ ಕಾಲಕೆಳಗೆ ಬಿದ್ದು ಉಳ್ಳಾಡುತ್ತಿದ್ದಾರೆ. ಇದೇ ಸ್ವಾಮಿಯ ಪೊಲಿಟಿಕಲ್ ಪವರ್ ಅಂತ ಖದರು ಪಡೆದುಕೊಂಡಿದೆ.

ಇದೇ ಪವರು ಬಲರಾಮನ ಕೊಲೆಕೇಸು ಕೈಗೆತ್ತಿಕೊಂಡ ಪೊಲೀಸರಿಗೆ ತೊಡರುಗಾಲಾದರೂ ಆಶ್ಚರ್ಯವಿಲ್ಲ.

●

ಅಕ್ಕಮಹಾದೇವಿ ಶಾಲೆಯ ಪಕ್ಕ ನಿಂತಿದ್ದ ಸುಪಾರಿ ಹಂತಕರಿಗೆ ಫೋನಾಯಿಸಿದ್ದಾನೆ. ತಕ್ಷಣ ಇಂಡಿಕಾ ಕಾರಲ್ಲಿ ಬಂದಿಳಿದ ಹಂತಕರು ಬಲರಾಮನ ಮೇಲೆ ಮುಗಿಬಿದ್ದು ಅಮಾನುಷವಾಗಿ ಕೊಚ್ಚಿ ಕೊಲೆ ಮಾಡಿ ಪರಾರಿಯಾಗಿದ್ದಾರೆ. ಈ ಘಟನೆಯನ್ನು ಕಣ್ಣಾರೆ ಕಂಡ ಹಲವರು ಮೂರ್ಛೆ ಹೋಗಿದ್ದಾರೆ. ತಕ್ಷಣ ಶಿವಲೀಲಾಳಿಗೂ ವಿಷಯ ತಿಳಿದು, ಬಲರಾಮನ ಸಹೋದರರೂ ನೆರೆದು ರೋದನೆ, ಚೀರಾಟ ಮುಗಿಲು ಮುಟ್ಟಿತು.

ಇದರ ನಡುವೆಯೇ ಪೊಲೀಸರಿಗೂ ದೂರು ನೀಡಲಾಯ್ತು. ಅದರಲ್ಲಿ ಶಿವಲೀಲಾ ತನ್ನ ಸಹೋದರರು ಹಾಗೂ ತನ್ನ ತಂದೆಯೇ ಬಲರಾಮನ ಹತ್ಯೆ ಮಾಡಿದ್ದಾರೆಂದು ನಿಖರವಾಗಿ ಹೇಳಿದ್ದಳು. ಇನ್ಸ್‌ಪೆಕ್ಟರ್ ಗೋಪಾಲ ಜೋಗಿನ ದೂರು ಸ್ವೀಕರಿಸಿದರಾದರೂ ಶಾಸಕನ ಸಹೋದರ ಯೋಗಪ್ಪನ ಮುತುವರ್ಜಿಗೆ ಬಿದ್ದವರಂತೆ ವರ್ತಿಸಲಾರಂಭಿಸಿದರು.

ಗೋಪಾಲ ಜೋಗಿನನ ಜಾಗದಲ್ಲಿ ಖಡಕ್ ಅಧಿಕಾರಿಯೊಬ್ಬನಿದ್ದರೆ ತಕ್ಷಣ ಮಠಕ್ಕೆ ನುಗ್ಗಿ ಕಳ್ಳಸ್ವಾಮಿ ಹಾಗೂ ಆತನ ಮಕ್ಕಳನ್ನು ಎತ್ತಾಕಿಕೊಂಡು ಬಂದು ರುಬ್ಬುತ್ತಿದ್ದ. ಆದರೆ ಜೋಗಿನನಿಗೆ ಈ ಮೊದಲೇ ತಿಂದಿದ್ದ ಸ್ವಾಮಿಯ ಎಂಜಲು ಪೊಲೀಸನಂತೆ ವರ್ತಿಸಲು ಬಿಟ್ಟಂತಿಲ್ಲ. ಈತನ ಘಟಿಂಗತನ ಎಷ್ಟು ಮಿತಿ ಮೀರಿತೆಂದರೆ ಶರ್ಮಾನ ಮನೆಯವರನ್ನೇ ವಿಚಾರಣೆಗೊಳಪಡಿಸಿ, ಶಿವಲೀಲಾಳನ್ನು ನಿತ್ಯ ಠಾಣೆಗೆ ಕರೆಸಿಕೊಂಡು ಕಾಟಕೊಡಲಾರಂಭಿಸಿದ.

ಇದೆಲ್ಲ ಪರಿಸ್ಥಿತಿಗೆ ಸಿಕ್ಕು ದಿಕ್ಕೆಟ್ಟು ನಿಂತಿರುವಾಕೆ ಪಾಪದ ಹುಡುಗಿ ಶಿವಲೀಲಾ. ಈಕೆಗೀಗ ಜೀವದಂತೆ ಹಚ್ಚಿಕೊಂಡಿದ್ದ ಗಂಡನೂ ಇಲ್ಲ, ಇಂಥ ಸಂದರ್ಭದಲ್ಲಿ ಮೈದಡವಿ ಸಂತೈಸುವ ತವರು ಮನೆಯೂ ಇಲ್ಲ, ಪರಿಸ್ಥಿತಿ ಹೇಗಿದೆಯೆಂದರೆ, ಇನ್ನೇನು ಬಲರಾಮನ ಸಾವಿನ ವಿಧಿ ಮುಗಿದ ಬಳಿಕ ಶಿವಲೀಲಾಳ ಬದುಕು ಸ್ಮಶಾನವಾಗಲಿದೆ. ಈಕೆಯನ್ನು ಜೊತೆಗಿಟ್ಟುಕೊಂಡು ಸಲುಹಲು ಶರ್ಮಾ ಮನೆಯವರಿಗೆ ಕನಿಕರವಿದ್ದರೂ ಬಂಡಿಗಣಿ ಸ್ವಾಮಿಯ ಹೆದರಿಕೆ ಅದಕ್ಕೆ ಅವಕಾಶ ಕೊಡುವ ಸೂಚನೆಗಳಿಲ್ಲ.

ಎಸ್ಪಿ ಅಭಿಷೇಕ್ ಗೋಯಲ್ ಆದರೂ ಈ ಬಗ್ಗೆ ನಿಷ್ಪಕ್ಷಪಾತವಾಗಿ ವರ್ತಿಸಿ, ಶಿವಲೀಲಾಳನ್ನು ಬಂಡಿಗಣಿ ಸ್ವಾಮಿಯ ರಾಕ್ಷಸತನದಿಂದ ರಕ್ಷಿಸಬೇಕಿದೆ. ಆಕೆ ಗಂಡನ ಮನೆಯಲ್ಲಾದರೂ ನೆಮ್ಮದಿಯಾಗಿರುವಂಥ ವಾತಾವರಣ ಕಲ್ಪಿಸಬೇಕಿದೆ.


ಖಾಕಿ, ಖಾದಿಗಳು ಕಳ್ಳ ಸ್ವಾಮಿಯ ಪಾದಪೂಜೆಗೆ ನಿಂತಿರುವಾಗ ಇಂಥ ನಿಷ್ಠುರ ನಿಲುವನ್ನು ನಿರೀಕ್ಷಿಸಬಹುದೇ?

● ಮೇಘರಾಜ್

ಮೈಸೂರು: ಸಿದ್ದರಾಮಯ್ಯ ಸಾಮ್ರಾಜ್ಯಕ್ಕೆ ಸಿದ್ದಲಿಂಗಸ್ವಾಮಿಯ ಕನ್ನ!?

ಯಾವ ರೀತಿಯಲ್ಲಿ ತೂಗಿ ಅಳೆದರೂ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯನ ಲೆವಲ್ಲಿಗೆ ಬರಲಾಗದ ಯಡಿಯೂರಪ್ಪನ ಚೇಲಾ ಸಿದ್ದಲಿಂಗಸ್ವಾಮಿ ತನ್ನ ಹಡೆಬಿಟ್ಟ ಹಣವನ್ನ ವರುಣಾ ಕ್ಷೇತ್ರದ ತುಂಬೆಲ್ಲಾ ಹಂಚತೊಡಗಿದ್ದಾನೆ. ಈತ ಹರಿಸುತ್ತಿರುವ ಹಣದ ಹೊಳೆಯ ರಭಸವನ್ನ ನೋಡಿದ ಬಿಜೆಪಿ ಚೆಡ್ಡಿಗಳೇ ಗಾಬರಿ ಬೀಳುವಂತಾಗಿದೆ. ಸಿದ್ದು ಅತ್ತ ಗಣಿಕಳ್ಳರ ಜೊತೆ ಕಾಳಗ ನಡೆಸಿದರೆ, ಯಡ್ಡಿಯ ಚೇಲಾ ಸಿದ್ದಲಿಂಗ ಸ್ವಾಮಿ ಇತ್ತ ಸಿದ್ದರಾಮಯ್ಯನ ಬೆಂಬಲಿಗರಿಗೆಗಾಳಹಾಕಿ ಖರೀದಿ ವ್ಯಾಪಾರ ಶುರುಹಚ್ಚಿ ಕೊಂಡಿದ್ದಾನೆ. ಕಳೆದ ತಿಂಗಳು ಯಡ್ಡಿಯ ಸರ್ಕಾರ ಬೀಳುವ ಎಲ್ಲಾ ಲಕ್ಷಣಗಳಿದ್ದ ಸಂದರ್ಭದಲ್ಲಿ ಸ್ವತಃ ಬಿಜೆಪಿ ಪಕ್ಷದ ಪುಂಡ ಶಾಸಕರಿಂದ ಒದೆ ತಿಂದಿದ್ದ ಸಿದ್ದಲಿಂಗಸ್ವಾಮಿ ಈಗ ತಾನೂ ಎಮ್ಮೆಲ್ಲೆ ಆಗೇ ತೀರುತ್ತೇನೆಂದು ಹಟಕ್ಕೆಬಿದ್ದು ಸಿದ್ದು ಬೆಂಬಲಿಗರನ್ನ ಬೇಟೆಯಾಡತೊಡಗಿದ್ದಾನೆ.

ಸಿದ್ದಲಿಂಗಸ್ವಾಮಿಯು ಒಳಗೊಳಗೆ ನಮಕ್‌ಹರಾಮ್ ಆಗಿದ್ದರೂ, ಆತನ ಬಳಿಗೆ ಬರುವ ಜನರನ್ನ ನಯವಿನಯದಿಂದ ಮಾತಾಡಿಸಿ ಅವರ ಕೆಲಸ ಮಾಡಿಸಿಕೊಡುವುದರಲ್ಲಿ ನಿಸ್ಸೀಮ. ಮೈಸೂರು ಜಿಲ್ಲೆಯ ಯಾವುದೇ ವ್ಯಕ್ತಿ ಆತನ ಬಳಿ ಹೋದರೂ ಬಹಳ ಮುತುವರ್ಜಿ ವಹಿಸಿ ಅವರ ಕೆಲಸಗಳನ್ನು ಆತ ಮಾಡಿಸಿಕೊಡುವುದರ ಹಿಂದೆ ಇಂತಹದ್ದೊಂದು ಎಮ್ಮೆಲ್ಲೆ ಆಗುವ ದುರಾಲೋಚನೆ ಅಡಗಿದೆ ಎಂಬ ವಿಚಾರ ಇತ್ತೀಚೆಗೆ ಬಹಿರಂಗವಾಗತೊಡಗಿದೆ. ಈಗಂತೂ ತನ್ನ ಮನೆಗೆ ಬರುವವರ ಕೆಲಸ ಮಾಡಿಸಿಕೊಡುವುದಲ್ಲದೆ ಅವರ ಜೇಬಿಗೆ ಕನಿಷ್ಠ 5000 ರೂ.ಗಳನ್ನೂ ಇಳಿಸಿಯೇ ಕಳುಹಿಸುತ್ತಿದ್ದಾನೆ ಸಿದ್ದಲಿಂಗಸ್ವಾಮಿ!




ಕಳೆದ ದೀಪಾವಳಿಯ ಅಂಗವಾಗಿ ಹುಟ್ಟೂರು ಕಾರ್ಯದಲ್ಲಿ ಸಿದ್ದೇಶ್ವರ ಜಾತ್ರೆಯನ್ನ ಭಾರಿ ಅದ್ದೂರಿಯಾಗಿ ನಡೆಸಿರುವ ಈಗ ಅದಕ್ಕಾಗಿ ತನ್ನ ಬಳಿಇದ್ದ ಕಪ್ಪು ಹಣದ ಹೊಳೆಯನ್ನೇ ಹರಿಸಿದ್ದಾನೆ. ಪ್ರತಿಯೊಬ್ಬ ಪುಢಾರಿಗೂ ಏನಿಲ್ಲವೆಂದರೂ ಐವತ್ತು ಸಾವಿರದಿಂದ ಒಂದು ಲಕ್ಷದ ವರೆಗೂ ಹಣ ಹಂಚಿದ್ದಾನೆ. ಇದಲ್ಲದೆ ಐದು ಸಾವಿರ ದುಡ್ಡು 25 ಕೆಜಿ ಅಕ್ಕಿಯನ್ನ ಬಲವಂತವಾಗಿ ದಾನದ ಹೆಸರಿನಲ್ಲಿ ಮನೆಮನೆಗೆ ತಲುಪಿಸಿದ್ದಾನೆ.

ಹೀಗೆ ಜಾತ್ರೆಯನ್ನು ಅದ್ದೂರಿಯಾಗಿ ಆಚರಿಸಿದ್ದರ ಹಿಂದೆ ಅಸಲಿ ಸತ್ಯವೊಂದು ಅಡಗಿದೆ. ಅದು ಮುಂಬರುವ ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್ ಚುನಾವಣೆ ನಡೆಸಿರುವ ತಯಾರಿ. ಕಾರ್ಯ ಜಾತ್ರೆಯು ಸುತ್ತಮುತ್ತಲಿನ ಹತ್ತಿಪ್ಪತ್ತು ಹಳ್ಳಿಗಳಲ್ಲಿ ಪ್ರಸಿದ್ಧವಾಗಿರುವುದರಿಂದ ಇಲ್ಲಿಗೆ ಜನರು ಬಂದೇ ಬರುತ್ತಾರೆಂದು ತಿಳಿದಿದ್ದ ಸಿದ್ದಲಿಂಗಸ್ವಾಮಿ ಕಾರ್ಯದಲ್ಲೆ ಉಳಿದುಕೊಂಡು ಜನರನ್ನ ಮಾತಾಡಿಸುತ್ತಲೇ ಅವರ ಜೇಬಿಗೆ ಕಂತೆ ಕಂತೆ ಹಣ ತುಂಬಿ ಕಳುಹಿಸಿದ.

ಅಷ್ಟೇ ಅಲ್ಲದೆ, ಗ್ರಾಮ ಪಂಚಾಯ್ತಿ ಅಧ್ಯಕ್ಷ ಮತ್ತು ಉಪಾಧ್ಯಕ್ಷರುಗಳನ್ನ ಕರೆಸಿ ಡೀಲ್ ಕುದುರಿಸಿದ್ದಾನೆಂಬ ಸುದ್ದಿಯಿದೆ. ಜಾತ್ರೆಯ ಸಂದರ್ಭದಲ್ಲಿ ಖುದ್ದು ಸಿದ್ದಲಿಂಗಸ್ವಾಮಿಯೇ ಹಳ್ಳಿಹಳ್ಳಿಗಳಿಗೆ ತೆರಳಿ ಮುಖಂಡರುಗಳನ್ನ ಭೇಟಿ ಮಾಡಿ ಅವರೆಲ್ಲ ಜಾತ್ರೆಗೆ ಬರುವಂತೆ ನೋಡಿಕೊಂಡಿದ್ದ. ವರುಣಾ ವ್ಯಾಪ್ತಿಗೆ ಬರುವ ಕಾರ್ಯ, ಬಿಳಿಗೆರೆ, ತಗಡೂರು, ತಾಯೂರು, ಸುತ್ತೂರು, ದೇವನೂರು, ಹೊಸಕೋಟೆ ಮುಂತಾದ ಗ್ರಾಮ ಪಂಚಾಯ್ತಿಗಳ ಅಧ್ಯಕ್ಷ ಮತ್ತು ಉಪಾಧ್ಯಕ್ಷರುಗಳು, ಸದಸ್ಯರುಗಳನ್ನ ಗುಡ್ಡೆಹಾಕಿ ಅವರೆಲ್ಲರಲ್ಲಿ ಹಣದ ಆಸೆ ಹುಟ್ಟಿಸಿದ್ದಾನೆ. ಬಿಳಿಗೆರೆ ನಾಗೇಂದ್ರ, ಕಾರೇಪುರ ಬಸಣ್ಣ, ರಾಜೇಂದ್ರ, ಸಿದ್ದುವಿನ ಕಟ್ಟಾ ಬೆಂಬಲಿಗ ತಾಯೂರಿನ ಲಾರಿಸ್ವಾಮಿ ಸೇರಿದಂತೆ ಸಿದ್ದುವಿನ ಬೆಂಬಲಿಗರನ್ನ ಬೇಟೆಯಾಡಿ ಮುಂಬರುವ ಚುನಾವಣೆಯಲ್ಲಿ ಸಿದ್ದು ಪರ ಓಡಾಡಲು ಕಾರ್ಯಕರ್ತರೇ ಇಲ್ಲದಂತೆ ಮಾಡುವ ಪಣತೊಟ್ಟಿದ್ದಾನಂತೆ.

ಈ ಮಧ್ಯೆ ಸಿದ್ದರಾಮಯ್ಯನವರ ವಿರುದ್ಧ ಕೆಲವು ಕಾಂಗ್ರೆಸ್ ಪಕ್ಷದವರೇ ಕೆಲಸ ಮಾಡುತ್ತಿದ್ದಾರೆ. ಈಗ ಕಾಂಗ್ರೆಸ್‌ನಲ್ಲಿ ಮೂಲ ಕಾಂಗ್ರೆಸ್ ಮತ್ತು ವಲಸಿಗ ಕಾಂಗ್ರೆಸ್ ಎಂಬ ಎರಡು ಬಣಗಳಾಗಿವೆ. ಮೂಲ ಕಾಂಗ್ರೆಸ್‌ನಲ್ಲಿ ಎಚ್.ವಿಶ್ವನಾಥ್, ಶ್ರೀನಿವಾಸ್ ಪ್ರಸಾದ್, ಶಾಸಕ ತನ್ವೀರ್ ಸೇಠ್, ಮಾಜಿ ಮೇಯರ್ ವಾಸು, ಎಸ್.ಎಂ.ಕೃಷ್ಣ ಬಳಗದ ವೆಂಕರಾಜ್ ಇದ್ದಾರೆ. ಹಾಗೆಯೇ ಸಿದ್ದು ಬಣದಲ್ಲಿ ಶಾಸಕರಾದ ಹೆಚ್.ಸಿ.ಮಹದೇವಪ್ಪ, ಪಿರಿಯಾಪಟ್ಟಣದ ಕೆ.ವೆಂಕಟೇಶ್,





ಸತ್ಯನಾರಾಯಣ ಇದ್ದಾರೆ. ಆದರೆ ಇತ್ತೀಚೆಗೆ ವೆಂಕಟೇಶ್ ಅವರು ಮಾಜಿ ಸಿಎಂ ಕುಮಾರಸ್ವಾಮಿ ಜೊತೆ ಸಖ್ಯ ಬೆಳೆಸಿ ಸದ್ಯದಲ್ಲೇ ಜೆಡಿಎಸ್‌ಗೆ ಜಿಗಿಯುವ ತವಕದಲ್ಲಿದ್ದಾರೆ.

ಇವೆಲ್ಲವನ್ನೂ ಸಿದ್ದರಾಮಯ್ಯ ಹೇಗೆ ನಿಭಾಯಿಸುತ್ತಾರೋ ಗೊತ್ತಿಲ್ಲ. ಸ್ವಪಕ್ಷದವರೇ ತಮ್ಮ ಕಾಲೆಳೆದರೆ ತಮ್ಮ ಕ್ಷೇತ್ರ ಕೈತಪ್ಪಿ ಹೋಗುತ್ತದೆ ಎಂಬುದನ್ನು ಮುಖ್ಯಮಂತ್ರಿ ಆಗುವ ಆಸೆಯಲ್ಲಿರುವ ಸಿದ್ದರಾಮಯ್ಯ ಆದಷ್ಟು ಬೇಗೆ ಅರಿತರೆ ಅವರಿಗೇ ಒಳ್ಳೆಯದು. ಇದೇ ಸಂದರ್ಭದಲ್ಲಿ ಹಡೆಬಿಟ್ಟ ಹಣ ಹರಿಸುತ್ತಾ ಕ್ಷೇತ್ರದ ಮತದಾರನನ್ನ ದಾರಿತಪ್ಪಿಸುತ್ತಿರುವ ಸಿದ್ದಲಿಂಗಸ್ವಾಮಿಯ ಹಣಮದವನ್ನೂ ಎದುರಿಸುವ ಸವಾಲು ಸಿದ್ದು ಮುಂದಿದೆ.

● ಲಕ್ಷ್ಮಣ್ ಚೀರನಹಳ್ಳಿ

ಧಾರವಾಡ: ಶಿಕ್ಷಕರ ಹಣ ನುಂಗಿದ ದಗಲ್ಬಾಜಿ ದೇಸಾಯಿ!





ಅಖಂಡ ಎಪ್ಪತ್ತಾರು ವರ್ಷಗಳ ಇತಿಹಾಸ ಹೊಂದಿರುವ ಧಾರವಾಡದ ಗ್ರಾಮೀಣ ಪ್ರಾಥಮಿಕ ಶಾಲಾ ಶಿಕ್ಷಕರ ಸಹಕಾರ ಸಂಘ ಅವಸಾನದ ಅಂಚಿಗೆ ತಲುಪಿದೆ. ಸಂಘದ ಮೂಲ ಆಶಯಗಳ ಎದೆಯ ಮೇಲೆ ಅಧ್ಯಕ್ಷನಾಗಿ ಕುಂತಿರುವ ಎ.ಆರ್. ದೇಸಾಯಿ ಎಂಬ ದಗಲ್ಬಾಜಿ ಇದೆಲ್ಲದಕ್ಕೆ ಮೂಲ ಪುರುಷ. ಶಿಕ್ಷಕ-ಶಿಕ್ಷಕಿಯರ ಹಿತ ಕಾಯುತ್ತಾ, ಶೈಕ್ಷಣಿಕ ಗುಣಮಟ್ಟ ಕಾಪಾಡುವ ಆಶಯದೊಂದಿಗೆ ಅಸ್ತಿತ್ವಕ್ಕೆ ಬಂದ ಈ ಸಂಘದ ಆರ್ಥಿಕ ವಹಿವಾಟು ಎರಡು ಕೋಟಿಗೂ ಅಧಿಕವಿದೆ. ಇದಕ್ಕೆ ಸ್ವಂತ ಕಟ್ಟಡಕ್ಕಾಗಿ ಶಿಕ್ಷಕರೇ ಕೊಟ್ಟ ಹಣದ ಮೊತ್ತ ಹದಿನೇಳು ಲಕ್ಷಕ್ಕೂ ಹೆಚ್ಚಿದೆ. ಸಹಜವಾಗಿಯೇ ಇಂಥ ಫಲವತ್ತಾದ ಸಂಘದತ್ತ ದೇಸಾಯಿಯ ಕಣ್ಣುಬಿದ್ದು ಆತನೇ ಅಧ್ಯಕ್ಷನಾಗುವಂತಾಗಿತ್ತು.

ಹಾಗೆ ಅಗಾಧ ಹಣದ ಮೇಲೆ ಕಣ್ಣಿಟ್ಟೇ ಅಧ್ಯಕ್ಷನಾದ ದೇಸಾಯಿ ತನ್ನ ಹಿಕಮತ್ತುಗಳನ್ನು ಒಂದೊಂದಾಗಿ ಹರಿಬಿಡಲಾರಂಭಿಸಿದ. ಸದ್ಯ ಸಂಘ 650 ಮಂದಿ ಸದಸ್ಯರನ್ನು ಹೊಂದಿದೆಯಲ್ಲಾ? ಇದರಲ್ಲಿ ತನ್ನ ಲಾಬಿಗೆ ಸಹಕರಿಸದವರನ್ನ ತರಹೇವಾರಿ ನೆಪಗಳೊಂದಿಗೆ ಕಾಡಲಾರಂಭಿಸಿದ ದೇಸಾಯಿ ಇದ್ದಕ್ಕಿದ್ದಂತೆ ಎಂಬತ್ತೊಂದು ಸದಸ್ಯ ಶಿಕ್ಷಕರನ್ನು ವಜಾಗೊಳಿಸಿದ. ಇದಲ್ಲದೆ, ಸಂಘದ ನಿರ್ದೇಶಕರಾಗಿದ್ದ ಗುರು ತಿಗಡಿ, ವಿ.ಎನ್, ಕೀರ್ತಿವತಿ ಮತ್ತು ಎಸ್.ಬಿ. ಕೇಸರಿಯವರನ್ನೂ ವಜಾಗೊಳಿಸಿದ.


ಈ ಸಂಘ ಆರಂಭಗೊಂಡಂದಿನಿಂದಲೂ ಭಾನುವಾರದಂದೇ ಸಭೆ ನಡೆಸುವ ರೂಢಿಯೊಂದು ನಡೆದು ಬಂದಿತ್ತು, ಅಂದು ರಜೆಯಿರುವುದರಿಂದ ಎಲ್ಲರಿಗೂ ಅನುಕೂಲವಾಗಲೆಂಬುದು ಸದುದ್ದೇಶ. ಆದರೆ ದಗಲ್ಬಾಜಿ ದೇಸಾಯಿಗೆ ಮೀಟಿಂಗುಗಳಲ್ಲಿ ಹೆಚ್ಚು ಜನ ಸೇರಿದರೆ ಅಲರ್ಜಿ. ಇದಕ್ಕಾಗಿ ಮೀಟಿಂಗ್ ಟೈಮಿಂಗ್ಸ್ ಅನ್ನು ಗುರುವಾರಕ್ಕೆ ಬದಲಿಸಿದ! ಇಂಥಾ ಸಭೆಯೊಂದರಲ್ಲಿ ಎಚ್.ಡಿ. ಭಲವಾದಿ, ಸಿ.ಎಮ್. ಶೆಂಗಾರ ಹಾಗೂ ಸುಜಾತಾ ಸಾಲಿ ಎಂಬವರನ್ನು ಹೊಸದಾಗಿ ನಿರ್ದೇಶಕರನ್ನಾಗಿಸಿದ. ಗಮನಿಸಬೇಕಾದ ಅಂಶವೆಂದರೆ, ಇವರೆಲ್ಲ ಸಂಘದ ಚುನಾವಣೆಯಲ್ಲಿ ಹೀನಾಯವಾಗಿ ಗೋತಾ ಹೊಡೆದಿದ್ದರು. ದೇಸಾಯಿಯ ಅಂದಾದುಂದಿಗಳಿಗೆಲ್ಲ ಮನಸಾರೆ ಸಾಥ್ ನೀಡುವ ನೀಚತನವೊಂದೇ ಇವರಿಗಿರುವ ಕ್ವಾಲಿಫಿಕೇಷನ್ನು.


ಸದ್ಯ ದೇಸಾಯಿಯ ದುಷ್ಟತನದ ವಿರುದ್ಧ ವಜಾಗೊಂಡ ಚುನಾಯಿತ ಪ್ರತಿನಿಧಿಗಳು ತಿರುಗಿಬಿದ್ದು ಸಹಕಾರ ಸಂಘಗಳ ನ್ಯಾಯಾಲಯಕ್ಕೆ ಮೊರೆ ಹೋದರು. ವಿಚಾರಣಾ ಸಂದರ್ಭದಲ್ಲಿ ದೇಸಾಯಿಯ ದಾದಾಗಿರಿಗಳೆಲ್ಲ ಸ್ಪಷ್ಟಗೊಂಡ ಪರಿಣಾಮ ವಜಾಗೊಂಡ ಮೂವರು ನಿರ್ದೇಶಕರು ಹಾಗೂ ಎಂಭತ್ತೊಂದು ಮಂದಿ ಸದಸ್ಯರುಗಳನ್ನು ಪುನಃ ಸೇರಿಸಿಕೊಳ್ಳಬೇಕೆಂಬ ಆದೇಶ ಹೊರಬಿತ್ತು.

ಇಂಥಾ ದೇಸಾಯಿ ಎಂಥಾ ರಕ್ಕಸನೆಂದರೆ, ಈ ಸಂಘದ ಕಟ್ಟಡಕ್ಕೆ ಜಾಗ ನೀಡಿದವರನ್ನೇ ಬೀದಿಗೆ ಬೀಳಿಸಿದ್ದಾನೆ! ಈ ಸಂಘದ ಸದಸ್ಯನಾಗಿದ್ದ ಚಂದ್ರಶೇಖರ ಕಲಘಟಗಿ ಎಂಬಾತ ಮೂರು ವರ್ಷಗಳ ಹಿಂದೆ ನಿಧನ ಹೊಂದಿದ್ದ. ಈತನ ತಾಯಿ ಬಸವಣ್ಣೆವ್ವ ಮಗನ ನೆನಪಿಗೆಂಬಂತೆ ತನ್ನ ಮೂರು ಗುಂಟೆ ಜಾಗವನ್ನು ಸಂಘಕ್ಕೆ ಬಿಟ್ಟುಕೊಟ್ಟಿದ್ದರು. ಅದರ ಇಂದಿನ ಮೌಲ್ಯ 25 ಲಕ್ಷದಷ್ಟಿದೆ!

ಈ ಜಾಗದಲ್ಲಿ 20 ಲಕ್ಷ ವೆಚ್ಚದಲ್ಲೊಂದು ಕಟ್ಟಡ ನಿರ್ಮಿಸಲು ದೇಸಾಯಿ ಯೋಜನೆ ಹಾಕಿದ. ಇದರಲ್ಲಿ ಪೂರ್ತಿ ಹಣ ಹೊಡೆಯುವ ಲೆಕ್ಕಾಚಾರ ಹಾಕಿದ್ದ ದೇಸಾಯಿ ಕೊಪ್ಪದಕೇರಿಯಲ್ಲಿದ್ದ ಹಳೇ ಕಟ್ಟಡ ಕೆಡವುವುದಕ್ಕೇ 20 ಸಾವಿರ ರೂಪಾಯಿಯ ಲೆಕ್ಕ ತೋರಿಸಿದ! ಈ ಹಳೇ ಕಟ್ಟಡದಲ್ಲಿದ್ದ ಬೆಲೆಬಾಳುವ ತೇಗ, ಹೊನ್ನೆಯ ಪರಿಕರಗಳಲ್ಲಿ ಅರ್ಧದಷ್ಟನ್ನು ಸ್ವಂತಕ್ಕೆ ಬಳಸಿಕೊಂಡು ಬಿಟ್ಟ. ಬಸವಣ್ಣೆವ್ವ ತನ್ನ ಭೂಮಿ ಕೊಡುವಾಗ ಬರೆದ ದಾನ ಪತ್ರದಲ್ಲಿ ಒಂದು ಕರಾರು ಹಾಕಿದ್ದಳು. ಅದರನ್ವಯ ಆಕೆ ಬದುಕಲು ಒಂದು ಮನೆ ನಿರ್ಮಿಸಿ ಕೊಡಬೇಕಿತ್ತು. ಆದರೆ ಹಣ ಹೊಡೆಯುವ ಉತ್ಸಾಹದಲ್ಲಿದ್ದ ದೇಸಾಯಿ ಇದರ ಬಗ್ಗೆ ತಲೆ ಕೆಡಿಸಿಕೊಳ್ಳದೆ ವೃದ್ಧೆಯನ್ನು ಬೀದಿಪಾಲು ಮಾಡಿದ್ದಾನೆ.

ಇದೆಲ್ಲದರ ನಡುವೆ ಕಟ್ಟಡ ನಿರ್ಮಾಣ ಕಾರ್ಯ ಕುಂಟುತ್ತಾ ಸಾಗಿದೆ. ಆದರೆ ದೇಸಾಯಿ ಇದೀಗಲೇ 13 ಲಕ್ಷ ಖರ್ಚಾದ ಲೆಕ್ಕ ತೋರಿಸ ಹತ್ತಿದ್ದಾನೆ. ಆದರೆ ನಿಜವಾಗಿ ಖರ್ಚಾದದ್ದು 8 ಲಕ್ಷದಷ್ಟು ಮಾತ್ರ. ಈ ಬಗ್ಗೆ ಪ್ರಶ್ನಿಸಿದವರನ್ನ ವಿವಿಧ ರೀತಿಯಲ್ಲಿ ಬಾಯ್ಮುಚ್ಚಿಸುವ ಕೆಲಸವೂ ಸಾಂಗವಾಗಿ ನೆರವೇರಿದೆ. ದೇಸಾಯಿಯ ಇಂಥಾ ದಗಲ್ಬಾಜಿಗಳಿಗೆಲ್ಲಾ ಸಂಘದ ಕಾರ್ಯದರ್ಶಿ ದೊಡಮನಿ ಸಂಪೂರ್ಣ ಸಾಥ್ ನೀಡುತ್ತಿದ್ದಾನೆ.





ಇದೀಗ ನಿಲ್ಲಲು ಸೂರಿಲ್ಲದೆ ಕಂಗಾಲಾಗಿರುವ ದಾನಿ ಬಸವಣ್ಣೆವ್ವ ದಾನಪತ್ರದ ಷರತ್ತು ಉಲ್ಲಂಘಿಸಿರುವ ದೇಸಾಯಿ ವಿರುದ್ಧ ಪೊಲೀಸರಿಗೆ ದೂರು ಕೊಟ್ಟಿದ್ದಾರೆ. ಭೂಮಿ ವಾಪಾಸ್ ನೀಡಬೇಕೆಂಬ ಬೇಡಿಕೆಯನ್ನು ಮುಂದಿಟ್ಟಿದ್ದಾರೆ. ಇದರಿಂದಾಗಿ ಸಂಘದಲ್ಲಿ ಫಿಕ್ಸೆಡ್ ಡಿಪಾಸಿಟ್ ಇಟ್ಟ ಬಡಪಾಯಿ ಶಿಕ್ಷಕರು ಕಂಗಾಲಾಗಿ ಹಣ ವಾಪಸ್ ಪಡೆಯಲು ಪ್ರಾರಂಭಿಸಿದ್ದಾರೆ.

ಕೋಟ್ಯಂತರ ಹಣದ ವಹಿವಾಟು ನಡೆಸುತ್ತಾ ಅಸಂಖ್ಯ ಶಿಕ್ಷಕರ ಹಿತ ಕಾಯುವಂತಿದ್ದ ಸಂಘ ದೇಸಾಯಿಯ ದೆಸೆಯಿಂದ ಮುಚ್ಚುವ ಹಂತ ತಲುಪಿದೆ.

ಅದಾಗುವ ಮುಂಚೆ ಈ ಖದೀಮನನ್ನು ಅಧ್ಯಕ್ಷಗಾದಿಯಿಂದ ಕಿತ್ತು ಬಿಸಾಡಬೇಕಿದೆ.

● ಹುಬ್ಬಳ್ಳಿಯಾಂವ

ಕ್ರಿಕೆಟ್ ಎಲೆಕ್ಷನ್ ಕುಂಬ್ಳೆ-ಶ್ರೀನಾಥ್ ಡೀಲ್‌ಗಳು



ಇಲ್ಲಿಯವರೆಗೂ ಕ್ರಿಕೆಟ್ ಆಡಿಕೊಂಡಿದ್ದ ಅನಿಲ್ ಕುಂಬ್ಳೆ, ಜಾವಗಲ್ ಶ್ರೀನಾಥ್, ವೆಂಕಟೇಶ್ ಪ್ರಸಾದ್ ಇನ್ನೂ ಮುಂತಾದವರು ಈಗ ಕ್ರಿಕೆಟ್ ಆಡಳಿತಗಾರರಾಗಲು ಹೊರಟಿದ್ದಾರೆ.

ಇದೇ ನವೆಂಬರ್ 21ರ ಭಾನುವಾರ ನಡೆಯಲಿರುವ ಕರ್ನಾಟಕ ಸ್ಟೇಟ್ ಕ್ರಿಕೆಟ್ ಅಸೋಸಿಯೇಶನ್ (KSCA)ನ ಅಧ್ಯಕ್ಷಗಿರಿಗೆ ಕುಂಬ್ಳೆಯು, ಉಪಾಧ್ಯಕ್ಷಸ್ಥಾನಕ್ಕೆ ವೆಂಕಟೇಶ್ ಪ್ರಸಾದನೂ ಹಾಗೂ ಸೆಕ್ರೆಟರಿ ಹುದ್ದೆಗೆ ಜಾವಗಲ್ ಶ್ರೀನಾಥ್ ಸ್ಪರ್ಧಿಸುತ್ತಿದ್ದಾರೆ.

ಇವರೀಗಾಗಲೇ ಚುನಾವಣೆ ಗೆದ್ದೇಬಿಟ್ಟಂತೆ ಮಾತನಾಡುತ್ತಿರುವುದು ಅನೇಕ ಕ್ರಿಕೆಟ್ ಪ್ರೇಮಿಗಳಲ್ಲಿ ಆಶ್ಚರ್ಯ ಮೂಡಿಸಿದೆ. ಅದೊಂದೆಡೆ ಇರಲಿ, 'ನಾವು ಕರ್ನಾಟಕ ಕ್ರಿಕೆಟ್ ಅನ್ನೇ ಬದಲಾಯಿಸಿಬಿಡುತ್ತೇವೆ. KSCA ಅನ್ನು ಇಡೀ ಇಂಡಿಯಾದಲ್ಲೇ, ಪ್ರಪಂಚದಲ್ಲೇ ಗ್ರೇಟ್ ಸಂಸ್ಥೆಯಾಗಿ ರೂಪಿಸುತ್ತೇವೆ' ಎಂದು ಕುಂಬ್ಳೆ-ಶ್ರೀನಾಥ್ ಹೇಳಿದ್ದಾರೆ.

ಈ ಬೌಲರ್ ಜೋಡಿ ಕರ್ನಾಟಕ ಕ್ರಿಕೆಟ್‌ನ ಕಸ ತೊಳೆಯುವ ಮಾತನಾಡುತ್ತಿದ್ದಾಗ ಅವರ ಮಧ್ಯೆ ಕುಳಿತಿದ್ದ ಆಸಾಮಿ ಬ್ರಿಜೇಶ್ ಪಟೇಲ್!

ಕರ್ನಾಟಕ ಕ್ರಿಕೆಟ್ ಅನ್ನು ಗಬ್ಬೆಬ್ಬಿಸಿ, ಕೋಟ್ಯಂತರ ರೂಪಾಯಿಗಳ ಭ್ರಷ್ಟಾಚಾರ ನಡೆಸಿದ ಆರೋಪ ಹೊತ್ತಿರುವ ಕಳಂಕಿತ ವ್ಯಕ್ತಿ ಈ ಪಟೇಲ್.

ಈ ಪಟೇಲ್‌ನ ಅವ್ಯವಹಾರಗಳ ಬಗ್ಗೆ ನಂತರ ಚರ್ಚಿಸೋಣ. ಆದರೆ ಕುಂಬ್ಳೆ-ಶ್ರೀನಾಥ್ ಜೋಡಿಯ ಈಗಿನ ರಣೋತ್ಸಾಹ, ಅಧಿಕಾರ ಲಾಲಸೆಯ ಹಿಂದೆ ಕೇವಲ ಕ್ರಿಕೆಟ್ ಉದ್ಧಾರ ಮಾಡುವ ಕಾಳಜಿ ಒಂದೇ ಇಲ್ಲ ಎಂಬುದಂತೂ ಸತ್ಯ.

ಇವರಿಬ್ಬರೂ ತಾವು ಇಂಟರ್‌ನ್ಯಾಷನಲ್ ಕ್ರಿಕೆಟ್ ಸ್ಟಾರ್‌ಗಳಾಗಿ ಮೆರೆಯುತ್ತಿದ್ದಾಗ ಕರ್ನಾಟಕ ಕ್ರಿಕೆಟ್ ಅನ್ನೂ ಉದ್ಧರಿಸಿ ಬೆಳೆಸುವುದಿರಲಿ, ಇಲ್ಲಿನ ಸ್ಥಳೀಯ ಯುವ ಆಟಗಾರರಿಗೆ ಒಂದೇ ಒಂದು ಟೋಪಿ ಅಥವಾ ಟಿ.ಶರ್ಟ್ ನೀಡಿ ಪ್ರೋತ್ಸಾಹಿಸಿದವರಲ್ಲ, ತಾವು ಕೋಟಿಗಟ್ಟಲೆ ಹಣ ಮಾಡಿಕೊಳ್ಳುತ್ತಿದ್ದಾಗ ನೂರು ರೂಪಾಯಿ ಖರ್ಚು ಮಾಡಿ ಯಾರಿಗೂ ಒಂದು ಬ್ಯಾಟು ಬಾಲು ಕೊಡಿಸಿರಲಿಲ್ಲ, ಇಷ್ಟೆಲ್ಲ ಯಾಕೆ ICC, IPL, T-20 ಮ್ಯಾಚ್‌ಗಳಲ್ಲಿ ಆಡುತ್ತಾ, ನಡುವೆ ಬಿಡುವಿದ್ದಾಗಲೂ ಇಲ್ಲಿಗೆ ಬಂದು ರಣಜಿ ಕ್ರಿಕೆಟ್ (Domestic Cricket) ಆಡುವ ಮನಸ್ಸು ಮಾಡಿದವರಲ್ಲ, ಇದೇ ಕುಂಬ್ಳೆ-ಶ್ರೀನಾಥ್ ಯಾವ ರಾಹುಲ್ ದ್ರಾವಿಡನ ಬೆಂಬಲವೂ ನಮಗಿದೆ ಎಂದು ಈಗ ಹೇಳಿಕೊಂಡಿದ್ದಾರೋ ಅದೇ ದ್ರಾವಿಡ್ ಕೂಡ ಇವರಷ್ಟೇ ಜಿಪುಣ. ದ್ರಾವಿಡ್ ಮೀಡಿಯಗಳೆದುರು ಕನ್ನಡ ಭಾಷೆಯಲ್ಲಿ ಮಾತನಾಡಲು ನಿರಾಕರಿಸುವಷ್ಟು ಅಹಂಕಾರಿ ಆಟಗಾರ.

ಹೀಗೆ ಕರ್ನಾಟಕದಲ್ಲೇ ಹುಟ್ಟಿ, ಬೆಳೆದು ಇಲ್ಲೇ ಕ್ರಿಕೆಟ್ ಕಲಿತು ಮುಗಿಲೆತ್ತರಕ್ಕೆ ಬೆಳೆದ ಈ ತ್ರಿಮೂರ್ತಿಗಳು ತಾವು ಏರಿಬಂದ ಏಣಿಯನ್ನೇ ಎಡಗಾಲಿನಿಂದ ಒದ್ದವರು. ಈಗ ಅರ್ಜೆಂಟಾಗಿ ಕರ್ನಾಟಕ ಕ್ರಿಕೆಟ್ ಅನ್ನು ಉದ್ಧಾರ ಮಾಡಲು ಬರುತ್ತಿರುವ ಅವತಾರ ಪುರುಷನಂತೆ ಯಾಕೆ ಪೋಸು ಕೊಡುತ್ತಿದ್ದಾರೆ?

ಈ ಅನುಮಾನಗಳನ್ನಿಟ್ಟುಕೊಂಡು ಉತ್ತರ ಹುಡುಕುತ್ತಾ ಹೋದರೆ ಗಬ್ಬು ನಾರುವ ಉತ್ತರಗಳು ಸಿಗುತ್ತಿವೆ. ಪ್ರಾಯೋಜಕರಿಂದ ಹರಿದು ಬರುತ್ತಿರುವ



ಕೋಟಿಗಟ್ಟಲೇ ಹಣದ ಮೇಲೆ ಕಂಟ್ರೋಲಿಟ್ಟುಕೊಳ್ಳುವ ಹುನ್ನಾರ, ಬ್ರಿಜೇಶ್ ಪಟೇಲನ 10 ವರ್ಷಗಳ ಭ್ರಷ್ಟಾಚಾರಗಳನ್ನೂ ಮುಚ್ಚಿಹಾಕುವ ಸಂಚುಗಳೆಲ್ಲಾ ಇದರ ಹಿಂದೆ ಇದೆ. ಇದಿಷ್ಟೇ ಅಲ್ಲ, ಚೆನ್ನೈ ಸೂಪರ್ ಕಿಂಗ್ಸ್‌ನ ಮಾಲೀಕ ಹಾಗೂ ಇಂಡಿಯಾ ಸಿಮೆಂಟ್ಸ್ ಕಂಪೆನಿಯ ಜನಕ ಶ್ರೀನಿವಾಸನ್‌ನ ನೆರಳೂ ಈ ಕುಂಬ್ಳೆ-ಶ್ರೀನಾಥನ ಹಿಂದೆ ಕಾಣುತ್ತಿದೆ.

ಇವರ ಎಲೆಕ್ಷನ್ ಖರ್ಚಿಗೆ ಶ್ರೀನಿವಾಸನ್ ಲಕ್ಷಾಂತರ ರೂಪಾಯಿ ಕೊಡುತ್ತಿದ್ದಾನೆಂಬ ಸುದ್ದಿ ಕೇಳಿಬರುತ್ತಿದೆ.

ಇದನ್ನೆಲ್ಲ ಮರೆಮಾಚುತ್ತಾ ಕ್ರಿಕೆಟ್ ಉದ್ಧಾರದ ಅಣಿಮುತ್ತುಗಳನ್ನು ಉದುರಿಸುತ್ತಿದೆ ಈ ಕುಂಬ್ಳೆ-ಶ್ರೀನಾಥ್ ಜೋಡಿ.

ವಂಚಕ ಬ್ರಿಜೇಶ್ ಜೊತೆ ಡೀಲ್

1998ರಿಂದಲೂ KSCA ಯಲ್ಲಿ ಒಂದಲ್ಲ ಒಂದು ಅಧಿಕಾರ ಹಿಡಿದು ಕೂತಿರುವ ಬ್ರಿಜೇಶ್ ಪಟೇಲ್ ಒಬ್ಬ ಮಹಾನ್ ಕಿಲಾಡಿ, ವಂಚಕ ಪ್ರಾರ್ವಾಡಿ. ಕೋಟಿಗಟ್ಟಲೇ ರೂಪಾಯಿಗಳ ಹಗರಣ ಸೃಷ್ಟಿಸಿ ರೆಡ್‌ಹ್ಯಾಂಡಾಗಿ ಸಿಕ್ಕಿಬಿದ್ದಿರುವ ಭ್ರಷ್ಟ. ಈ ಬ್ರಿಜೇಶ್ 1998ರಲ್ಲಿ ಮೊದಲ ಬಾರಿಗೆ ಎಲೆಕ್ಷನ್ ಗೆದ್ದಾಗಲೂ ಈಗ ಕುಂಬ್ಳೆ-ಶ್ರೀನಾಥ್ ಹೇಳುತ್ತಿರುವಂತೆಯೇ ಕ್ರಿಕೆಟ್ ಉದ್ಧಾರದ ಮಾತುಗಳನ್ನೇ ಆಡಿ ಗೆದ್ದು ಬಂದಿದ್ದ. ಆಗ ಸೆಕ್ರೆಟರಿಯಾಗಿದ್ದ ನಾಗರಾಜ್ ಕೆಟ್ಟವರೇನಾಗಿರಲಿಲ್ಲ. ಆದರೂ ಹೊಸ ನೀರು ಬರಲೆಂದು KSCA ಸದಸ್ಯರು ಬ್ರಿಜೇಶ್‌ನನ್ನು ಗೆಲ್ಲಿಸಿದ್ದರು. ಅವತ್ತು ಎಲೆಕ್ಷನ್ ಗೆದ್ದ ಬ್ರಿಜೇಶ್ ಇದುವರೆಗೂ ನಡೆಸಿರುವ ಹಗರಣಗಳ ಬಗ್ಗೆ ರಿಜಿಸ್ಟ್ರಾರ್ ಆಫ್ ಕೋ-ಆಪರೇಟಿವ್ ಸೊಸೈಟೀಸ್ ಇಲಾಖೆಯು ಒಂದು ಸಮಗ್ರ ತನಿಖೆಯನ್ನೇ ನಡೆಸುತ್ತಿದೆ.

ಇಂಥವನೊಂದಿಗೆ ಕುಂಬ್ಳೆ-ಶ್ರೀನಾಥಗೆಂಥಾ ಸ್ನೇಹ?

ಬ್ರಿಜೇಶ್ ಪಟೇಲ್‌ನ ಅವ್ಯವಹಾರಗಳ ಒಂದೆರಡು ಸ್ಯಾಂಪಲ್ ಹೀಗಿದೆ ನೋಡಿ.

ಕಾಂಪೊಸಿಟ್ ಟ್ರಾವೆಲ್ಸ್ ಎನ್ನುವ ಟ್ರಾವಲ್ಸ್ ಸಂಸ್ಥೆ ಬ್ರಿಜೇಶ್‌ನ ಬೇನಾಮಿ ಮಾಲೀಕತ್ವದ್ದು. ಇವರು ಆಟಗಾರರ ಟೂರ್ ಇತ್ಯಾದಿ ಡೀಲ್‌ನಲ್ಲಿ ಅನಾಮತ್ತು

ಅಕಾಯ್ ಶ್ರೀನಾಥ್- 20: ಶ್ರೀನಾಥ್

ಜಾವಗಲ್ ಎಕ್ಸ್‌ಪ್ರೆಸ್ ಯಾನೆ ಜಾವಗಲ್ ಶ್ರೀನಾಥ್ ಎಂಬ ಮಾಜಿ ಫಾಸ್ಟ್ ಬೌಲರ್‌ಗಿರುವ ಅಡ್ಡ ಹೆಸರಿದು. ಹಿಂದೆ ಅಕಾಯ್ ಎಲೆಕ್ಟ್ರಾನಿಕ್ ಕಂಪೆನಿಯ ಬ್ರ್ಯಾಂಡ್ ಅಂಬಾಸಿಡರ್ ಆಗಿದ್ದ ಶ್ರೀನಾಥ ಒಮ್ಮೆ ಕರ್ನಾಟಕದಲ್ಲಿ ಕ್ರಿಕೆಟ್ ಅಭಿವೃದ್ಧಿಗೆ ಹಣ ಕೊಡುವಂತೆ ಕೇಳಿದನಂತೆ. ಅಕಾಯ್ ಅಕಾಡೆಮಿ ಅಂತಾ ಹೆಸರಿಟ್ಟರೆ ಒಂದು ಕೋಟಿ ರೂಪಾಯಿ ನೀಡುವುದಾಗಿ ಕಂಪೆನಿಯವರು ಒಪ್ಪಿಕೊಂಡರಂತೆ. ಅಲ್ಲಿಂದ ಹೊರಟು ಬಂದ ಶ್ರೀನಾಥ KSCA ನವರ ಹತ್ತಿರ ಈ ವಿಚಾರ ಪ್ರಸ್ತಾಪಿಸಿ 'ಅಕಾಯ್ ಕಂಪೆನಿ 80 ಲಕ್ಷ ಕೊಡಲು ಒಪ್ಪಿಕೊಂಡಿದ್ದಾರೆ' ಅಂದನಂತೆ. ಅಂದರೆ ಮಾರ್ಗಮಧ್ಯದಲ್ಲೇ ಅನುದಾನದ ಮೊತ್ತವನ್ನು 1 ಕೋಟಿಯಿಂದ 80 ಲಕ್ಷಕ್ಕೆ ಇಳಿಸಿ ತನಗೆ 20 ಲಕ್ಷ ಇಟ್ಟುಕೊಳ್ಳುವ ಪ್ಲಾನ್ ಆದಾಗಿತ್ತು, ಈ ಬಗ್ಗೆ ಗೊತ್ತಿದ್ದ ಹೆಂಡೋದ್ಯಮಿ ವಿಜಯ್ ಮಲ್ಯ 'ನಾನು 2 ಕೋಟಿ ರೂ. ಕೊಡುತ್ತೇನೆ, ಕಿಂಗ್‌ಫಿಷರ್ ಅಕಾಡೆಮಿ ಮಾಡಿ' ಅಂದರಂತೆ.

ಅಲ್ಲಿಗೆ ಅಕಾಯ್ ಅಕಾಡೆಮಿ ಮಕಾಡೆ ಬಿತ್ತು, ಆದರೆ ಶ್ರೀನಾಥ್‌ಗೆ ಮಾತ್ರ ಅಕಾಯ್ 'ಶ್ರೀನಾಥ್, ಟ್ವೆಂಟಿ ಪರ್ಸೆಂಟ್ ಶ್ರೀನಾಥ್' ಎನ್ನುವ ಅಡ್ಡ ಹೆಸರು ಬಿತ್ತು.

ಪಾರ್ವತೀಶ
bparvateesha@gmail.com

45 ಲಕ್ಷ ರೂಪಾಯಿ ಕೊಳ್ಳೆ ಹೊಡೆದು ಸಿಕ್ಕಿಬಿದ್ದಿದ್ದಾರೆ. ಸ್ಪೋರ್ಟಿಂಗ್ ಫ್ರಾಂಟಿಯರ್ಸ್ ಎನ್ನುವ ಇನ್ನೊಂದು ಕ್ರೀಡಾ ಕಂಪೆನಿ ಬ್ರಿಜೇಶ್ ಹಾಗೂ ರಾಮಧ್ಯಾನಿ ಮಾಲೀಕತ್ವದಲ್ಲಿದೆ. ಇವರಿಬ್ಬರೂ KSCA ದ ಪದಾಧಿಕಾರಿಗಳಾಗಿದ್ದಾಗ ಕ್ರಿಕೆಟ್ ಸ್ಟೇಡಿಯಂ ಒಳಗಡೆ ಬೌಂಡರಿ ಲೈನ್ ಬಳಿ ಜಾಹೀರಾತು ಫಲಕ ನಿಲ್ಲಿಸುವ ಕಾಂಟ್ರ್ಯಾಕ್ಟ್ ಅನ್ನು ತಮ್ಮದೇ ಮಾಲೀಕತ್ವದ ಸ್ಪೋರ್ಟಿಂಗ್ ಫ್ರಾಂಟಿಯರ್ಸ್‌ಗೆ ಕೊಟ್ಟುಕೊಂಡಿದ್ದರು. ಕೋಟಿಗಟ್ಟಲೆ ರೂಪಾಯಿ ಡೀಲ್ ಅದು. ಸಹಕಾರಿ ಇಲಾಖೆಯ ನಿಯಮಾವಳಿ ಪ್ರಕಾರ ಕ್ರಿಮಿನಲ್ ಅಪರಾಧವೂ ಹೌದು. ಸ್ವಜನಪಕ್ಷಪಾತ ಹಾಗೂ ಸಂಸ್ಥೆಗೆ ನಂಬಿಕೆ ದ್ರೋಹವೆಸಗಿದ ಇದೇ ಬ್ರಿಜೇಶ್ ಪಟೇಲ್ ಬೆಂಬಲವನ್ನು ಈಗ ಕುಂಬ್ಳೆ-ಶ್ರೀನಾಥ್ ಕೂಡ ಪಡೆಯುತ್ತಿದ್ದಾರೆ. ಅಂದಮೇಲೆ ಇವರು ಇನ್ಯಾವ ಬದಲಾವಣೆ ತರಲು ಸಾಧ್ಯ?







ಇನ್ನು ಯುವ ಪ್ರತಿಭೆಗಳಿಗೆ ಪ್ರೋತ್ಸಾಹ ಕೊಡುವ ಪುಢಾರಿ ಶೈಲಿಯ ಆಶ್ವಾಸನೆಯನ್ನು ಕುಂಬ್ಳೆ-ಶ್ರೀನಾಥ್-ಬ್ರಿಜೇಶ್ ಕೊಡುತ್ತಿದ್ದಾರೆ.

ಆದರೆ ಇಡೀ ಕರ್ನಾಟಕದ ಕ್ರಿಕೆಟ್ ಪ್ರಿಯರಿಗೆಲ್ಲರಿಗೂ ಗೊತ್ತಿರುವಂತೆ ಇದೇ ಬ್ರಿಜೇಶ್ ಪಟೇಲ್ ತನ್ನ ಮೊದ್ದು ಪುತ್ರ ಉದಿತ್ ಪಟೇಲ್ ಎಂಬ ಸಾಧಾರಣ ಕ್ರಿಕೆಟಿಗನನ್ನು ಕರ್ನಾಟಕ ರಣಜಿ ತಂಡದಲ್ಲಿ ಸ್ಥಾನಕೊಡಿಸಲು ಸಕಲವಿದ್ಯೆಗಳನ್ನು ಉಪಯೋಗಿಸಿದ್ದ. ಇದರ ಪರಿಣಾಮವಾಗಿ ಕರ್ನಾಟಕದ ಉದಯೋನ್ಮುಖ ಸ್ಪಿನ್ನರ್ ಎನಿಸಿದ್ದ ಧರ್ಮಚಂದ್‌ಗೆ ರಣಜಿ ಟೆಸ್ಟ್ ಕ್ರಿಕೆಟ್‌ನಲ್ಲಿ ಜಾಗ ಸಿಗದಂತಾಗಿ ಆತ ಸಿಂಗಪೂರ್ ತಂಡಕ್ಕೆ ವಲಸೆ ಹೋದ.

ಬ್ರಿಜೇಶ್ ಪಟೇಲ್ ಇಷ್ಟೆಲ್ಲಾ ಅನಾಹುತಗಳನ್ನು ಮಾಡಿರುವುದು ಎಲ್ಲರಿಗೂ ಗೊತ್ತಿರುವಾಗ ಅಂತವನೊಂದಿಗೆ ಕುಂಬ್ಳೆ-ಶ್ರೀನಾಥ್ ಕೈಜೋಡಿಸುತ್ತಿರುವುದು ಯಾಕೆ?

ಇವರು ಯಾವ ಬ್ರಿಜೇಶ್ ವಿರುದ್ಧ ಯುದ್ಧ ಘೋಷಿಸಿ ಚುನಾವಣೆಗಿಳಿಯಬೇಕಿತ್ತೋ ಅದರ ಬದಲಾಗಿ ಬ್ರಿಜೇಶ್ ಜೊತೆಗೆ ರಾಜಿ ಮಾಡಿಕೊಂಡಿರುವ ಹಿಂದೆ ಕಾರಣಗಳಿವೆ.

ಒಂದು ಎಲೆಕ್ಷನ್ ಗೆಲ್ಲಲು ಬ್ರಿಜೇಶ್ ಸಹಾಯ ಪಡೆಯುವುದು. ಅದಕ್ಕೆ ಪ್ರತ್ಯುಪಕಾರವಾಗಿ ಗೆದ್ದ ನಂತರ ಬ್ರಿಜೇಶ್ ನಡೆಸಿರುವ ಅವ್ಯವಹಾರಗಳನ್ನು ಮುಚ್ಚಿಹಾಕಲು ಸಹಕರಿಸಬೇಕೆಂಬುದೇ ಆ ಡೀಲ್ ಆಗಿದೆ.

KSCA ಮತದಾರರಾಗಿರುವ 1811 ಜನರ ಪೈಕಿ ಬ್ರಿಜೇಶ್‌ನ ದೊಡ್ಡಮಟ್ಟದ ಮಾರ್ವಾಡಿಗಳ ಗುಂಪಿನ ಬೆಂಬಲವಿರುವುದೇ ಇದಕ್ಕೆ ಪ್ರಮುಖ ಕಾರಣವಾಗಿದೆ.

ಕುಂಬ್ಳೆ-ಶ್ರೀನಾಥ್ ಅಧಿಕಾರದಾಹ

.ಈ ಕುಂಬ್ಳೆ ಶ್ರೀನಾಥ್‌ಗೆ ಕರ್ನಾಟಕದಲ್ಲಿ ಕ್ರಿಕೆಟ್ ಆಡಳಿತ ನಡೆಸುವಷ್ಟು ಪುರುಸೊತ್ತು ಇದೆಯಾ ಎನ್ನುವ ಅನುಮಾನ ಅನೇಕರಿಗಿದೆ. ಏಕೆಂದರೆ ಅನಿಲ್ ಕುಂಬ್ಳೆ ಈಗಾಗಲೇ ನ್ಯಾಷನಲ್ ಕ್ರಿಕೆಟ್ ಅಕಾಡೆಮಿಗೆ ಚೇರ್‌ಮನ್ ಆಗಿದ್ದಾನೆ. ಜೊತೆಗೆ IPL ಟೂರ್ನಿಯ ಬೆಂಗಳೂರು ರಾಯಲ್ ಚಾಲೆಂಜರ್ಸ್ ಟೀಮಿನ ಕ್ಯಾಪ್ಟನ್ ಆಗಿಯೂ ಆಡುತ್ತಿದ್ದಾನೆ. ವರ್ಷಕ್ಕೆ ಮಿನಿಮಂ 180 ದಿನ ಬಾಬ್ತಿಗೆ ಕುಂಬ್ಳೆ ಮೀಸಲಿಡಬೇಕಿದೆ.

ಅದೇರೀತಿ ಇಂಟರ್‌ನ್ಯಾಷನಲ್ ಕ್ರಿಕೆಟ್ ಕೌನ್ಸಿಲ್‌ನ ಮ್ಯಾಚ್ ರೆಫರಿ ಕೆಲಸ ಮಾಡುವ ಜಾವಗಲ್ ಶ್ರೀನಾಥ್ ಕುಡಾ ವರ್ಷದಲ್ಲಿ 180 ದಿನ ICC ಕೆಲಸ ಮಾಡಲು ಒಪ್ಪಂದ ಮಾಡಿಕೊಂಡಿದ್ದಾನೆ. ಮತ್ತೊಂದೆಡೆ ಚೆನ್ನೈನ ಸೂಪರ್ ಕಿಂಗ್ಸ್ ಟೀಮಿನ ಬೌಲಿಂಗ್ ಕೋಚ್ ಆಗಿರುವ ವೆಂಕಟೇಶ್ ಪ್ರಸಾದ್ ಕೂಡ ವರ್ಷದ ಅರ್ಧ ಸಮಯ ಬಿಡುವಿರುವುದಿಲ್ಲ, ಅಂದರೆ ಅಧ್ಯಕ್ಷ, ಉಪಾಧ್ಯಕ್ಷ, ಕಾರ್ಯದರ್ಶಿ ಸ್ಥಾನಕ್ಕೆ ಸ್ಪರ್ಧಿಸಿರುವ ಈ ಮೂವರು ವರ್ಷದ ಆರೆಂಟು ತಿಂಗಳು ಕರ್ನಾಟಕದಲ್ಲೇ ಇರುವುದಿಲ್ಲ, ಇಂತವರು ಎಲೆಕ್ಷನ್ ಗೆದ್ದು ಕರ್ನಾಟಕ ಕ್ರಿಕೆಟ್ ಉದ್ಧಾರ ಮಾಡುತ್ತೇವೆಂದರೆ ಯಾರು ನಂಬುತ್ತಾರೆ? ಯಾಕೆ ನಂಬಬೇಕು ಹೇಳಿ?

ಅಷ್ಟೇ ಅಲ್ಲ, ಈ ಮೂವರಿಗೂ ಈಗಾಗಲೇ ಕ್ರಿಕೆಟ್ ಜಗತ್ತಿನ ಬೇರೆ ಬೇರೆ ಲೆವೆಲ್‌ನಲ್ಲಿ ಚೇರ್‌ಮನ್, ಕ್ಯಾಪ್ಟನ್, ಮ್ಯಾಚ್ ರೆಫರಿ, ಕೋಚ್ ಮುಂತಾದ

▶▶ 1

ಜಿ.ಆರ್. ವಿಶ್ವನಾಥ್‌ಗೆ ಮೋಸ ಮಾಡಿದ ಕುಂಬ್ಳೆ

ಹಿರಿಯ ಕ್ರಿಕೆಟಿಗ ಜಿ.ಆರ್. ವಿಶ್ವನಾಥ್ ಈ ಬಾರಿ KSCA ಅಧ್ಯಕ್ಷರಾಗುವ ಎಲ್ಲಾ ಸಾಧ್ಯತೆಗಳಿದ್ದವು. 2007ರಲ್ಲಿ ನಡೆದ ಎಲೆಕ್ಷನ್‌ನಲ್ಲಿ ಒಡೆಯರ್ ವಿರುದ್ಧ ಅಧ್ಯಕ್ಷಗಾದಿಗೆ ವಿಶ್ವನಾಥ್ ಸ್ಪರ್ಧಿಸಿ 516 ಓಟ್ ಪಡೆದಿದ್ದರು. ಆದರೆ 553 ಓಟ್ ಗಳಿಸಿದ್ದ ಶ್ರೀಕಂಠದತ್ತ ಒಡೆಯರ್ 37 ಓಟುಗಳಿಂದ ವಿಶಿಯನ್ನು ಸೋಲಿಸಿದ್ದರು. ಅದಾದನಂತರ ಒಡೆಯರ್ ಕರ್ನಾಟಕ ಕ್ರಿಕೆಟ್‌ಗಾಗಿ ಅಷ್ಟೇನೂ ಉತ್ತಮ ಕೆಲಸ ಮಾಡಲಿಲ್ಲ, ಆದರೆ ಸೆಕ್ರೆಟರಿ ಬ್ರಿಜೇಶ್ ಪಟೇಲ್‌ನಂತೆ KSCA ಗೆ ಮೋಸವನ್ನಂತೂ ಮಾಡಲಿಲ್ಲ ಅಷ್ಟೆ. ಈ ಬಾರಿ ವಿಶಿ ಮತ್ತೆ ಒಡೆಯರ್ ವಿರುದ್ಧ ನೀಡಿದ್ದರೆ ಖಂಡಿತ ಗೆಲ್ಲುತ್ತಿದ್ದರು. ಎಲೆಕ್ಷನ್‌ಗೆ ನಿಲ್ಲುವ ಯೋಚನೆಯೂ ವಿಶಿಗಿತ್ತು, ಆದರೆ ಸಡನ್ನಾಗಿ ಧೂಮಕೇತುವಿನಂತೆ ನುಗ್ಗಿ ಬಂದ ಕುಂಬ್ಳೆ ಈಗ ತಾನೇ ಅಧ್ಯಕ್ಷಗಾದಿಗೆ ಸ್ಪರ್ಧಿಸುತ್ತಿದ್ದಾನೆ.



ವಿಶಿಗೀಗ 61 ವರ್ಷವಾಗಿದ್ದರೆ ಕುಂಬ್ಳೆಗೆ ಈಗಿನ್ನೂ 40 ವರ್ಷ. ಶ್ರೀನಾಥ್‌ಗೂ ಈಗ 41 ವರ್ಷ. ಇವರ ಕೈಲಿ ಈಗಾಗಲೇ ಒಂದಷ್ಟು ಅಧಿಕಾರ-ಹಣವಿದೆ. KSCA ಅಧ್ಯಕ್ಷ, ಕಾರ್ಯದರ್ಶಿಯಾಗಲು ಇವರಿಗಿನ್ನೂ ಕಾಲಾವಕಾಶವಿತ್ತು, ಈ ತಕ್ಷಣಕ್ಕೆ ಮಾಡಲು ಬೇರೆ ಕೆಲಸಗಳೂ ಇದ್ದವು. ಕರ್ನಾಟಕ ಕ್ರಿಕೆಟ್ ಬೆಳೆಸಬೇಕೆಂದರೆ ಈ ಕುಂಬ್ಳೆ ಹೋಗಿ ಜಿ.ಆರ್.ವಿಶ್ವನಾಥರನ್ನೇ ಅಧ್ಯಕ್ಷಗಾದಿಗೆ ಮತ್ತೆ ಸ್ಪರ್ಧಿಸುವಂತೆ ಕೇಳಬಹುದಿತ್ತು, ಹಾಗೆ ಕೇಳಿದಿದ್ದರೆ ವಿಶಿ ನೋ ಅನ್ನುತ್ತಿರಲಿಲ್ಲ, ಆದರೆ ಕುಂಬ್ಳೆ-ಶ್ರೀನಾಥ್ ತಮ್ಮನ್ನು ಬೆಳೆಸಿದ ವಿಶಿಗೆ ದೋಖಾ ನೀಡಿ ಸೈಡ್‌ಲೈನ್ ಮಾಡಿ ತಾವೇ ಮುಂದೆ ನಿಂತರು. ಕುಂಬ್ಳೆ-ಶ್ರೀನಾಥರಿಗೆ ಕೈಲಿ ಅನೇಕ ಹುದ್ದೆಗಳಿವೆ.

ಆದರೂ KSCA ಹುದ್ದೆಯನ್ನು ಲಪಟಾಯಿಸುವ ಲೋಭ ಇವರಿಗೆ. ಕನ್ನಡಿಗರೆಲ್ಲರೂ ಗೌರವಿಸುವ, ಘನತೆಯ ಕ್ರಿಕೆಟಿಗ ವಿಶ್ವನಾಥ್ ಸಹ ಕುಂಬ್ಳೆ ವರ್ತನೆ ನೋಡಿ ನೊಂದುಕೊಂಡಿದ್ದಾರೆ.

ರೆಡ್ಡಿ, ಅನಂತ್, ಶೆಟ್ಟರ್ ಅಶೋಕ್ ಜಂಟಿ ಹುನ್ನಾರ

ಯಡ್ಡಿ ವಿರುದ್ಧ 53 ಸಹಿ?


ಯಡ್ಡಿ

ನಿನ್ನೆಮೊನ್ನೆಯ ತನಕ ಬಿಜೆಪಿ ಸರ್ಕಾರದ ವಿರುದ್ಧ ! ತಟ್ಟುತ್ತಿದ್ದ ಬೇಳೂರು, ಜಾರಕಿಹೊಳಿ ಏಕಾಏಕಿ ...ೀಶ್ ಶೆಟ್ಟರ್ ಮುಖ್ಯಮಂತ್ರಿಯಾಗಲಿ ಎಂದು ಏಕೆ ...ಗೋಷ್ಠಿ ಕರೆಯುತ್ತಾರೆ?

ಮೈಸೂರಿನಲ್ಲಿ ನಡೆದ ಬಿಜೆಪಿ ಕಾರ್ಯಕಾರಿಣಿ ಸಭೆಗೆ ...ಡ್ಡಿಗಳ ಪಟಾಲಮ್ ಗೈರುಹಾಜರಾಗಿದ್ದಕ್ಕೂ ಅನರ್ಹ ...ರ ಪರವಾಗಿ ರೆಡ್ಡಿಯ ವಕೀಲ ರಾಘವಾಚಾರ್ಯ ...ಯಲ್ಲಿ ಓಡಾಡುತ್ತಿರುವುದಕ್ಕೂ ...ಪರೂ ಸಂಬಂಧವಿದೆಯೇ?



...ಮೊನ್ನೆ ಅಂದರೆ ನವೆಂಬರ್ 7 ರ ...ುವಾರ ಬೆಳಗ್ಗೆ ಮುಖ್ಯಮಂತ್ರಿ ...ದಿಂದ ಮುಖ ಗಂಟಿಕ್ಕಿ ಹೊರ ...! ವರ್ತೂರು ಪ್ರಕಾಶ್‌ನನ್ನು ...ರ್ದನ ರೆಡ್ಡಿ ದೆಹಲಿಗೆ ಕರೆದೊಯ್ದು ... ರಾಷ್ಟ್ರಾಧ್ಯಕ್ಷ ಗಡ್ಕರಿಯ ಮುಂದೆ ...ಸಿದ್ದರ ಉದ್ದೇಶವೇನು?

"ರೆಡ್ಡಿಗಳೇನು ಇಂಟರ್‌ನ್ಯಾಷನಲ್ ...ರುಗಳಾ?" ಎಂದು ರಾಜ್ಯಾಧ್ಯಕ್ಷ ...ಪ್ಪ ಏಕಾಏಕಿ ಕಿಡಿಕಾರಿದ್ದಕ್ಕೂ ಅತ್ತ ...ಾಂಬಾ ದೇವಾಲಯದಲ್ಲಿ ಮಂತ್ರಿ ...ಮಣ್ಣನ ಹೆಗಲಿಗೆ ಕೈಹಾಕಿ ರೇವಣ್ಣ ...ೋಪರಿ ನಡೆಸಿದ್ದಕ್ಕೂ ಸಂಬಂಧ ...ಯೇ?


ಅಶೋಕ್

...ಇಂಥ ಅನೇಕ ಪ್ರಶ್ನೆಗಳ ಹಿಂದಿನ ...ರವೇ ಬೇರೆಯಿದೆ. ಅದು ಯಡ್ಡಿ ...ಅಪ್ಪಚ್ಚು ರಂಜನ್‌ರನ್ನು ಛೂಬಿಟ್ಟು ...ರೆಡ್ಡಿಗಳು ನಡೆಸುತ್ತಿರುವ ಸಹಿ ...ಹವಿರಬಹುದು, ನಡೆಯಬೇಕಿದ್ದ ...ಟ ವಿಸ್ತರಣೆ ಏಕಾಏಕಿ ರದ್ದಾಗಿದ್ದರ ...ನ ಮಸಲತ್ತಿರಬಹುದು ಅಥವಾ ...ರಿನ ಕಾರ್ಯಕಾರಿಣಿಯನ್ನು ಇಡೀ ... ಗ್ಯಾಂಗ್ ಬಹಿಷ್ಕರಿಸಿದ್ದರ ...ರವೇ ಇರಬಹುದು.



ಈ ಎಲ್ಲದರ ಹಿಂದಿರುವುದು ...ಯನ್ನು ಕೆಳಕ್ಕಿಳಿಸಲು ಗಣಿ ರೆಡ್ಡಿಗಳು ...ುತ್ತಿರುವ ಸನ್ನಾಹವೊಂದೆ. ...ಯದಶಮಿಯ ರಾತ್ರಿ ಅನಂತ್ ...ಾರ್ ತಮ್ಮ ಬಸವನಗುಡಿಯ ...ದಲ್ಲಿ ಜನಾರ್ದನ ರೆಡ್ಡಿ ಸಮ್ಮುಖ ... ಬೆಂಗಳೂರಿನ ಶಾಸಕರಿಗೆಂದು ...ದ ಊಟಕ್ಕೂ ಅತ್ತ ಹಾಸನದಲ್ಲಿ ...ಣ್ಣ ಮತ್ತು ಮಣ್ಣಿನ ಮಗ ರೇವಣ್ಣ ... ವಿಲಾಯಿಸಿದ್ದಕ್ಕೂ ಏನೋ ...ಥ ಸಂಬಂಧವಿರಲೇಬೇಕು.



ಬಿಜೆಪಿಯ ರಾಜ್ಯ ಸಂಘಟಕ ಸಂತೋಷ್‌ಜಿಯೇ ತನ್ನ ...ವಲಯದಲ್ಲಿ ಹೇಳಿಕೊಂಡಂತೆ ಅಪ್ಪಚ್ಚು ರಂಜನ್ ...ನಾಯಕತ್ವದ ವಿರುದ್ಧ ನಡೆಸುತ್ತಿರುವ ಸಹಿ ಸಂಗ್ರಹಣೆಯ ...ರುವುದು ಜನಾರ್ದನ ರೆಡ್ಡಿ. ಸಂತೋಷ್‌ಜಿಯ ...ವೇ ಈಗಾಗಲೇ ಯಡ್ಡಿ ವಿರುದ್ಧ 53 ಮಂದಿ ... ಶಾಸಕರು ಸಹಿ ಹಾಕಿದ್ದಾರಂತೆ. ಈ 53 ಸಹಿಗಳಲ್ಲಿ ...ಯ ಅತೃಪ್ತ ಅನರ್ಹ ಶಾಸಕರ ಸಹಿ ಇದೆಯಾ? ...ರೂ ಸಹಿ ಹಾಕಿದ್ದಾರಾ? ಗೊತ್ತಿಲ್ಲ ಅಥವಾ ...ಹೊಳಿ, ಬೇಳೂರು, ಬಗಲಿ ಮುಂತಾದ ಹನ್ನೊಂದು ...ಸ್ಸ್‌ಗಳ ಸಹಿ ಬಿದ್ದರೆ ಆ ಸಂಖ್ಯೆ ಅರವತ್ಮೂರು ... ಎಂಬುದೂ ಗೊತ್ತಾಗುತ್ತಿಲ್ಲ.

...ಮೊನ್ನೆ ನಡೆಯಬೇಕಿದ್ದ ಸಂಪುಟ ವಿಸ್ತರಣೆ ಏಕಾಏಕಿ ...ದ್ದಕ್ಕೂ ಈಗ ನಡೆಯುತ್ತಿರುವ ಸಹಿ ಸಂಗ್ರಹಣೆಗೂ ...ಕುಮಾರ್ ಮನೆಯಲ್ಲಿ ವಿಜಯದಶಮಿಯ ರಾತ್ರಿ ... ಹುನ್ನಾರಕ್ಕೂ ಪರಸ್ಪರ ಸಂಬಂಧವಿದ್ದುದರಿಂದಲೇ ... ಜಗದೀಶ್ ಶೆಟ್ಟರ್ ಮುಖ್ಯಮಂತ್ರಿಯಾಗಬೇಕೆಂದು ..., ನೆಲಮಂಗಲದ ನಾಗರಾಜು ಮತ್ತು ಜಾರಕಿಹೊಳಿ ...ಂದು ಪತ್ರಿಕಾಗೋಷ್ಠಿ ನಡೆಸಿದ್ದಾರೆ. ಮಂತ್ರಿ ಮಾಡ್ತೀನಿ ... ಮಾತು ಕೊಟ್ಟೇ ವರ್ತೂರು ಪ್ರಕಾಶ್‌ನನ್ನು ಬಿಜೆಪಿಗೆ ... ತಂದ ಜನಾರ್ದನ ರೆಡ್ಡಿಗೆ ಎಂಥಾ ಮುಖಭಂಗ ...ದರೆ ಯಡ್ಡಿ ಸಂಪುಟ ವಿಸ್ತರಣೆಯನ್ನೇ ಮುಂದೂಡಿ ... ಬೆನ್ನಲ್ಲೇ ಅನರ್ಹಗೊಂಡ ಅತೃಪ್ತರನ್ನು ಮತ್ತೆ ...ಗೆ ಕರೆತರುವ ಕಾರ್ಯಾಚರಣೆಗೆ ಗಾಲಿ ರೆಡ್ಡಿ ಕೈ ಇಟ್ಟ. ...ನ್ನೊಂದು ಮಂದಿ ಅನರ್ಹರು ಮತ್ತು ಆರು ... ಪಕ್ಷೇತರರೇನಾದರೂ ಮತ್ತೆ ಒಳಕ್ಕೆ ಕಾಲಿಟ್ಟರೆಂದರೆ ...ಗೇ ರೆಡ್ಡಿಗಳ ಸೊಕ್ಕು ಹೆಚ್ಚಾಗುತ್ತದೆ ಎಂದು ಲೆಕ್ಕ ... ಯಡ್ಡಿ 'ಬಲ್‌ಕಾಲ್' ಆಗೋದೇ ಇಲ್ಲ' ...ಸ್ಕ್ಕರು.

ಅಲ್ಲಿಗೆ ಯಡ್ಡಿ ಜೊತೆಗಿದ್ದೇ ತಮ್ಮ ವಿರುದ್ಧ ಕತ್ತಿ ಮಸೆಯುತ್ತಿದ್ದಾರೆಂಬುದು ಗಣಿ ರೆಡ್ಡಿಗೆ ನಿಕ್ಕಿಯಾಗಿತ್ತು, ಅತ್ತ ಆರೆಸ್ಸೆಸ್ ಕೂಡ ಅನರ್ಹರ ವಿರುದ್ಧವಿತ್ತಾದ್ದರಿಂದ ಗಾಲಿರೆಡ್ಡಿಯ ಪುನರ್ ತ್ಯಾಪೆ ಕಾರ್ಯಾಚರಣೆಗೆ ಅಂಥ ಪ್ರೋತ್ಸಾಹ ಗಿಟ್ಟದಂತಾಯ್ತು, ಇದೆಲ್ಲದರ ಮೇಲೆ ಬರೆ ಎಳೆದಂತೆ ಗಣಿ ಗ್ಯಾಂಗಿನ ಅಷ್ಟೂ ಅಡ್ಡೆಗಳ ಮೇಲೆ ಐಟಿ ರೇಡಾಯಿತು. ರೆಡ್ಡಿಯ ಡ್ರೈವರ್‌ನ ಮನೆಯಿಂದ ಹಿಡಿದು ವಕೀಲ ರಾಘವಾಚಾರ್ಲುವಿನ ಯಾವ ಕಚೇರಿಯನ್ನೂ ಬಿಡದೇ ಜಾಲಾಡಿದ ಇನ್‌ಕಮ್ ಟ್ಯಾಕ್ಸ್ ಅಧಿಕಾರಿಗಳು ಸಿಕ್ಕಸಿಕ್ಕ ದಾಖಲೆಗಳನ್ನೆಲ್ಲ ಹೊತ್ತೊಯ್ದರು.

ಒಂದು ಮೂಲದ ಪ್ರಕಾರ ರೆಡ್ಡಿ ಗ್ಯಾಂಗಿನ ಐವತ್ತು ಸಾವಿರ ಕೋಟಿಯ ಇಡೀ ಸಾಮ್ರಾಜ್ಯದ ಬುಡಕ್ಕೇ ಆದಾಯ ತೆರಿಗೆ ಅಧಿಕಾರಿಗಳು ಕೈಹಾಕಿದ್ದರು. ಗಣಿ ಸಾಮ್ರಾಜ್ಯದ ಯಾವ ಹುತ್ತದಲ್ಲಿ ಏನೇನಿದೆ ಎಂಬುದರ ಅಷ್ಟೂ ಲೆಕ್ಕ ಇನ್‌ಕಮ್ ಟ್ಯಾಕ್ಸ್ ಅಧಿಕಾರಿಗಳಿಗೆ ಸಿಕ್ಕಿ ಹೋಗಿತ್ತು, ಮಂತ್ರಿಗಿರಿ, ಅಧಿಕಾರ, ಸರ್ಕಾರ ಎಲ್ಲಕ್ಕಿಂತ ಮುಖ್ಯವಾಗಿ ಸಹಸ್ರಾರು ಕೋಟಿಯ ತಮ್ಮ ಆರ್ಥಿಕ ಸಾಮ್ರಾಜ್ಯವನ್ನು ಕ್ಯಾಪಾಡಿಕೊಳ್ಳಲೇ ಬೇಕಾದ ಸಂದಿಗ್ಧಕ್ಕೆ ಸಿಲುಕಿದ ಗಣಿ ರೆಡ್ಡಿಗಳು ಒಳಗೊಳಗೆ ಕಾಂಗ್ರೆಸ್ ಜೊತೆ ಕೈ ವಿಲಾಯಿಸುವ ನಿರ್ಧಾರಕ್ಕೆ ಬಂದಿರಬೇಕು. ಅಥವಾ ತಮ್ಮ ಆಂಧ್ರದ ಕಾಂಗ್ರೆಸ್ ನೆಂಟಸ್ತಿಕೆಯನ್ನು ಬಳಸಿಕೊಂಡು ಕಾಂಗ್ರೆಸ್ ಜೊತೆ ಕೈಜೋಡಿಸಲು ನಿರ್ಧರಿಸಿದಂತೆ ನಾಟಕವಾಡಲು ಅಣಿಯಾಗಿರಬೇಕು.

ಈ ಹಿನ್ನೆಲೆಯಲ್ಲಿ ಅನಂತ್‌ಕುಮಾರ್ ಜೊತೆ ಮತ್ತೊಂದು ಸುತ್ತಿನ ಮಾತುಕತೆ ನಡೆಸಿದ ಗಾಲಿ ರೆಡ್ಡಿ ಮತ್ತೆ ಅನರ್ಹರನ್ನು ಬಿಜೆಪಿಗೆ ಕರೆತರುವ ಕಾರ್ಯಾಚರಣೆಗೆ ಕೈಇಟ್ಟ. ತಾನು ಕರೆತಂದ ವರ್ತೂರು ಪ್ರಕಾಶ್‌ಗೆ ಮಂತ್ರಿಗಿರಿ ಕಲ್ಪಿಸದ ಮುಖ್ಯಮಂತ್ರಿಯ ತಿರುಗೇಟಿಗೆ ಪ್ರತ್ಯುತ್ತರ ನೀಡಲು ಅಪ್ಪಚ್ಚು ರಂಜನನ್ನು ಛೂಬಿಟ್ಟ. ಇತ್ತ ಅಪ್ಪಚ್ಚು ರಂಜನ್ ಯಡ್ಡಿ ವಿರುದ್ಧ ಒಂದೊಂದೇ ಸಹಿ ಸಂಗ್ರಹಿಸುತ್ತಿದ್ದರೆ– ಗಣಿರೆಡ್ಡಿಯ ಹಂಗಿಗೆ ಬಿದ್ದ ಬೇಳೂರು, ಜಾರಕಿಹೊಳಿ ಮತ್ತು ನೆಲಮಂಗಲದ ನಾಗರಾಜು ಸೇರಿಕೊಂಡು ಜಗದೀಶ್ ಶೆಟ್ಟರ್ ಮುಖ್ಯಮಂತ್ರಿಯಾಗಬೇಕೆಂಬ ಹೊಸ ವರಸೆ ಶುರುವಿಟ್ಟದ್ದರು.

ಒಂದೆಡೆ ಕೇಂದ್ರದಲ್ಲಿ ಕಾಂಗ್ರೆಸ್ ನಾಯಕರನ್ನೂ ತಣಿಸಬೇಕು, ತನ್ಮೂಲಕ ತೂಗುತ್ತಿದ್ದ ಇನ್‌ಕಮ್‌ಟ್ಯಾಕ್ಸ್ ಕತ್ತಿಯಿಂದಲೂ ಬಚಾವಾಗಬೇಕು, ಜೊತೆಗೆ ಬಿಜೆಪಿಯ ಯಡ್ಡಿ ವಿರೋಧಿಗಳನ್ನೂ ತಣಿಸಿದತಾಗಬೇಕು ಮತ್ತು ಅವಮಾನಕ್ಕೆ ತಕ್ಕ ಉತ್ತರ ಕೊಟ್ಟಂತಾಗಬೇಕು. ಒಂದೇ ಕಲ್ಲಿನಿಂದ ಹಲವಾರು ಹಕ್ಕಿ ಹೊಡೆಯುವ ಇಂಥದೊಂದು ಮಾರ್ಮಿಕ ಉದ್ದೇಶವಿಟ್ಟುಕೊಂಡೇ ಮೈಸೂರಿನ ಬಿಜೆಪಿ ಕಾರ್ಯಕಾರಿಣಿಯನ್ನು ರೆಡ್ಡಿ ಗ್ಯಾಂಗ್ ಬಹಿಷ್ಕರಿಸಿತ್ತು. ಜನಾರ್ದನ ರೆಡ್ಡಿ, ಕರುಣಾಕರ ರೆಡ್ಡಿ, ಶ್ರೀರಾಮುಲು, ಸೋಮಶೇಖರ ರೆಡ್ಡಿ, ಚೊಮ್ಮನೂರು ನಾಗೇಂದ್ರ, ಕಂಪ್ಲಿಯ ಸುರೇಶ್ ಸೇರಿದಂತೆ ಒಟ್ಟೂ ಮೂವತ್ತಾರು ಮಂದಿ ಶಾಸಕರು ಮೈಸೂರಿಗೆ ಕಾಲಿಡಲೇ ಇಲ್ಲ, ಅದು ರೆಡ್ಡಿಗಳ ಪುಂಡುಬುದ್ಧಿಯ ಸ್ಪಷ್ಟ ಬಂಡಾಯದಂತಿತ್ತು, ಹಿಂದಾದರೆ ಯಾರೋ ಒಬ್ಬ ಶಾಸಕ ಕಾರ್ಯಕಾರಿಣಿಗೆ ಚಕ್ಕರ್ ಹಾಕಿದನೆಂದು ಕೇಶವಕೃಪಾಕ್ಕೆ ಕರೆಸಿಕೊಂಡು ಬೈಠಕ್ ನಡೆಸುತ್ತಿದ್ದ ಆರೆಸ್ಸೆಸ್ ಪರಿಷತ್ತು ಈಗ ಬಾಲಸುಟ್ಟ ಬೆಕ್ಕಿನಂತೆ ತೆಪ್ಪಗಾಗಿದ್ದರು. ಅಂತಾ ವಕೀಲ ದಿವಾಕರ್ ಥರದವರೇ ಕಾರ್ಯಕಾರಿಣಿಯನ್ನು ತಪ್ಪಿಸಿಕೊಂಡಿದ್ದಕ್ಕೆ ಕ್ಷಮೆ ಕೋರಿ ಮುಚ್ಚಳಿಕೆ ಬರೆದು ಕೊಟ್ಟಿದ್ದರು.

ಈಗ ರೆಡ್ಡಿ ಗ್ಯಾಂಗಿನ ಮೂವತ್ತಾರು ಮಂದಿ ಒಟ್ಟೊಟ್ಟಿಗೇ ಕಾರ್ಯಕಾರಿಣಿಯನ್ನು ಬಹಿಷ್ಕರಿಸಿದ್ದರೂ ಯಾವೊಬ್ಬ ನಾಯಕನಿಗೂ ಅದರ ವಿರುದ್ಧ ಸೊಲ್ಲೆತ್ತುವ ಧಮ್ಮೇ ಇರಲಿಲ್ಲ, ಏಕೆಂದರೆ ರೆಡ್ಡಿಗಳ ಬೆನ್ನಿಗೆ ಅನಂತ್, ಶೆಟ್ಟರ್, ಅಶೋಕ್ ಇದ್ದಾರೆಂಬುದು ಸ್ವತಃ ಯಡ್ಡಿ ಗ್ಯಾಂಗಿಗೇ ಮನದಟ್ಟಾಗಿತ್ತು, ಇದರ ಬೆನ್ನಲ್ಲೇ ಯಡ್ಡಿ ವಿರುದ್ಧದ ಸಹಿ ಸಂಗ್ರಹಣೆಯೂ ಶುರುವಾಗಿತ್ತು.

ಬಿಜೆಪಿಯ ಪ್ರತಿಯೊಬ್ಬ ಶಾಸಕರನ್ನೂ ಯಡ್ಡಿ ಬಣದಿಂದ ಸೆಳೆಯಲು ಗಾಲಿ ರೆಡ್ಡಿ ಎಂಥಾ ಚಾಲಾಕಿ ಕಾರ್ಯಾಚರಣೆ ಗಿಳಿದಿದ್ದನೆಂದರೆ ನವೆಂಬರ್ 8 ರ ಸೋಮವಾರ ಬೆಳಗ್ಗೆ ತನ್ನನ್ನು ಮಂತ್ರಿ ಮಾಡುವಂತೆ ಕೋರಿ ಮುಖ್ಯಮಂತ್ರಿ ನಿವಾಸಕ್ಕೆ ಬಂದಿದ್ದ ವರ್ತೂರು ಪ್ರಕಾಶ್ ಹ್ಯಾಪುಮೋರೆ ಹೊತ್ತು ನಿರಾಶೆಯಿಂದ ಹೊರಬಿದ್ದನೆಂಬ ಸುದ್ದಿ ಗೊತ್ತಾಗಿದ್ದೇ ಅತ್ತಲಿಂದ ರೆಡ್ಡಿಯ ಫೋನ್ ಕರೆ ವರ್ತೂರು ಮೊಬೈಲ್‌ಗೆ ಬಂದಾಗಿತ್ತು, ಸೀದಾ ಮುಖ್ಯಮಂತ್ರಿ ನಿವಾಸದಿಂದ ಗಾಲಿ ರೆಡ್ಡಿಯ ಮನೆಗೇ ಬಂದ ವರ್ತೂರು ಅರ್ಧಗಂಟೆಯಲ್ಲೇ ದೆಹಲಿಯ ವಿಮಾನ ಹತ್ತಿದ್ದ.

ವರ್ತೂರು ಪ್ರಕಾಶ್‌ನನ್ನು ನೇರವಾಗಿ ಬಿಜೆಪಿ ರಾಷ್ಟ್ರಾಧ್ಯಕ್ಷ ಗಡ್ಕರಿಯ ಮನೆಗೊಯ್ದು ನಿಲ್ಲಿಸಿದ ಜನಾರ್ದನ ರೆಡ್ಡಿ, ಗಡ್ಕರಿಯಿಂದ ಸ್ಪಷ್ಟ ಭರವಸೆಯನ್ನೂ ಕೊಡಿಸಿದ್ದ, ನಮ್ಮ ಪಕ್ಷದ ಮೇಲೆ ವಿಶ್ವಾಸವಿಟ್ಟು ಬಂದ ನಿಮ್ಮನ್ನು ಯಾವತ್ತೂ ನಾವು ಕೈಬಿಡುವುದಿಲ್ಲ, ಅವಸರ ಪಡಬೇಡಿ. ನಾಲ್ಕು ದಿನ ತಾಳ್ಮೆ ವಹಿಸಿ ಎಂದೇ ಗಡ್ಕರಿ ಮಾತು ಕೊಟ್ಟರು.

ಹೀಗೆ ವರ್ತೂರು ಪ್ರಕಾಶ್‌ನನ್ನು ಕೆಲವೇ ಗಂಟೆಗಳಲ್ಲಿ ದೆಹಲಿಗೆ ಕರೆದೊಯ್ದು ಗಡ್ಕರಿಯಿಂದ ಭರವಸೆ ಕೊಡಿಸಿದ ರೆಡ್ಡಿಯ ಚಾಕಚಕ್ಯತೆ ಕಂಡೇ ಯಡ್ಡಿಗೆ ಗಾಬರಿಯಾಗಿತ್ತು. ಅದು ತನ್ನ ವಿರುದ್ಧದ ರೆಡ್ಡಿಯ ಕಾರ್ಯಾಚರಣೆಯ ಒಂದು ಭಾಗವೆಂದೇ ಯಡ್ಡಿ ಲೆಕ್ಕ ಹಾಕಿದ್ದರು. ಇದಕ್ಕೂ ಮುನ್ನ ಮೈಸೂರಿನಲ್ಲಿ ರೆಡ್ಡಿ ಗ್ಯಾಂಗ್ ಕಾರ್ಯಕಾರಿಣಿಯನ್ನು ಬಹಿಷ್ಕರಿಸಿದ್ದಕ್ಕೆ ಪತ್ರಕರ್ತರು ಕೆಣಕಿದ್ದಕ್ಕೆ ರಾಜ್ಯಾಧ್ಯಕ್ಷ ಈಶ್ವರಪ್ಪ 'ರೆಡ್ಡಿಗಳೇನು ಇಂಟರ್‌ನ್ಯಾಷನಲ್ ಲೀಡರುಗಳಾ?' ಎಂದು ಕುಟುಕಿದ್ದು ಕೂಡ ಬಿಜೆಪಿಯ ದಾವಾನಲವನ್ನು ಬಟ್ಟಾ ಬಯಲಾಗಿಸಿತ್ತು,



ಸದ್ಯ ರೆಡ್ಡಿಗಳೇ ಹೇಳಿಕೊಂಡಂತೆ ಅವರ ಮುಂದಿರುವುದು ಎರಡು optionalಗಳು ಮಾತ್ರ. ಒಂದು; ನಾಯಕತ್ವದ ವಿರುದ್ಧ ಎಪ್ಪತ್ತು ಶಾಸಕರ ಸಹಿ ಬೀಳುತ್ತಿದ್ದಂತೆ ಅದನ್ನು ಸುಷ್ಮಾ ಸ್ವರಾಜ್ ಮೂಲಕ ರಾಷ್ಟ್ರಾಧ್ಯಕ್ಷ ಗಡ್ಕರಿಯ ಕೈಗಿತ್ತು ಯಡ್ಡಿಯನ್ನು ಕೆಳಕ್ಕಿಳಿಸುವ ಕಾರ್ಯಾಚರಣೆಗಿಳಿಯುವುದು. ಉತ್ತರ ಕರ್ನಾಟಕದ ಬಹುತೇಕ ಲಿಂಗಾಯತ ಶಾಸಕರನ್ನು ಸೆಳೆಯಲು ಜಗದೀಶ್ ಶೆಟ್ಟರ್‌ರನ್ನು ಮುಖ್ಯಮಂತ್ರಿ ಅಭ್ಯರ್ಥಿ ಮಾಡುವುದು.



ಶುರುವಿನಲ್ಲಿ ಯಡ್ಡಿ ವಿರುದ್ಧ ಕೈಜೋಡಿಸುವ ಶೆಟ್ಟರ್ ನಿರ್ಣಾಯಕ ಹಂತದಲ್ಲಿ ಹಿಂದೆ ಸರಿದು ತಾನು ಮುಖ್ಯಮಂತ್ರಿ ಅಭ್ಯರ್ಥಿಯಲ್ಲ, ತನಗಿಂತಲೂ ಅನಂತ್‌ಕುಮಾರ್ ಮುಖ್ಯಮಂತ್ರಿಯಾಗುವುದೇ ಸೂಕ್ತ ಎಂದು ಶೆಟ್ಟರ್ ಬಾಯಿಂದಲೇ ಹೊರಡಿಸುವುದು. ಎಲ್ಲವೂ ಲೆಕ್ಕಾಚಾರದಂತೆಯೇ ನಡೆದರೆ ಶೆಟ್ಟರ್ ಮುಂದಿಟ್ಟುಕೊಂಡು ಯಡ್ಡಿಯನ್ನು ಕೆಳಕ್ಕಿಳಿಸಿ ಆ ಜಾಗಕ್ಕೆ ಅನಂತ್‌ಕುಮಾರ್ ವಕ್ಕರಿಸುತ್ತಾರೆ.

ಹಾಗೊಂದು ಪಕ್ಷ ಅನಂತ್, ಶೆಟ್ಟರ್ ಮತ್ತು ಅಶೋಕ್ ಯಡ್ಡಿ ಇಳಿಸಲು ಹೈಕಮಾಂಡನ್ನು ಧಿಕ್ಕರಿಸದೇ ತೆಪ್ಪಗಾದ ಪಕ್ಷದಲ್ಲಿ ರೆಡ್ಡಿಗಳ ನೇತೃತ್ವದಲ್ಲಿ ಹೊಸ ಪಕ್ಷ ಸ್ಥಾಪನೆಯಾಗಲಿದೆ. ಅದಕ್ಕೆ ಕರ್ನಾಟಕ ಜನತಾ ಪಕ್ಷ ಎಂಬ ಹೆಸರಿಡುತ್ತಾರಂತೆ. ಎಪ್ಪತ್ತೂ ಮಂದಿ ಶಾಸಕರು ರೆಡ್ಡಿಗಳ ಬೆನ್ನಿಗೆ ನಿಂತು ಕರ್ನಾಟಕ ಜನತಾ ಪಕ್ಷ ಅಂದರೆ ಕೆಜೆಪಿ ಅಸ್ತಿತ್ವಕ್ಕೆ ಬಂದಿದ್ದೇ ಆದಲ್ಲಿ ಕಾಂಗ್ರೆಸ್ ಜೊತೆ ಕೈಜೋಡಿಸಿ ಪರ್ಯಾಯ ಸರ್ಕಾರ ರಚಿಸುವುದಕ್ಕೂ ರೆಡ್ಡಿಗಳು ರೆಡಿಯಂತೆ.

ಇದಕ್ಕೆ ಪೂರಕವಾಗಿ ಗಾಲಿ ರೆಡ್ಡಿ ಕಾಂಗ್ರೆಸ್ ನಾಯಕ ಗುಲಾಮ್ ನಬಿ ಆಜಾದ್‌ರನ್ನು ಕಂಡು ಒಂದು ಸುತ್ತಿನ ಮಾತುಕತೆ ಮಾಡಿದ್ದಾನಂತೆ.

ಆದರೆ ಸಮಸ್ಯೆಯಿರುವುದು ಯಾರು ಮುಖ್ಯಮಂತ್ರಿಯಾಗಬೇಕೆನ್ನುವುದರಲ್ಲಿ, ಸಿದ್ಧರಾಮಯ್ಯ ಮುಖ್ಯಮಂತ್ರಿಯಾಗುವುದು ರೆಡ್ಡಿಗಳಿಗೆ ಇಷ್ಟವಿಲ್ಲ, ಒಂದೋ ಕೆ.ಎಚ್. ಮುನಿಯಪ್ಪ ಅಥವಾ ಮೊಯ್ಲಿ ಇಲ್ಲವೆಂದರೆ ಎಸ್.ಎಂ. ಕೃಷ್ಣ ಮುಖ್ಯಮಂತ್ರಿಯಾದರಂತೂ ರೆಡ್ಡಿಗಳಿಗೆ ತಕರಾರಿಲ್ಲವಂತೆ. ಆದರೆ ರೆಡ್ಡಿಗಳ ಇಂಥ ಹುನ್ನಾರಕ್ಕೆ ಇನ್ನೂ ಕಾಂಗ್ರೆಸ್‌ನಿಂದ ಗ್ರೀನ್‌ಸಿಗ್ನಲ್ ಸಿಕ್ಕಿಲ್ಲ, ಏಕೆಂದರೆ ಒಮ್ಮೆ ರೆಡ್ಡಿಗಳ ಜೊತೆ ಕೈಜೋಡಿಸಿಬಿಟ್ಟರೆ ಕಾಂಗ್ರೆಸ್ ಪಾಲಿಗದು ದೊಡ್ಡ ಹಿನ್ನಡೆಯೇ. ಜೊತೆಗೆ ಸಿದ್ಧರಾಮಯ್ಯ ಮತ್ತು ಕುಮಾರಸ್ವಾಮಿ ಸೇರಿಕೊಂಡು ರೆಡ್ಡಿಗಳ ಈ ಪ್ರಸ್ತಾವನೆಗೆ ಕಲ್ಲು ಹಾಕಿರಬೇಕು. ಈ ಎರಡರ ಪೈಕಿ ಯಾವುದು ಕಾರ್ಯಗತವಾದರೂ ರೆಡ್ಡಿಗಳಿಗೇನೂ ಲುಕ್ಸಾನಿಲ್ಲ, ಅದಕ್ಕೆ ಯಡ್ಡಿ ವಿರುದ್ಧ ಶಾಸಕರನ್ನು ಎತ್ತಿ ಕಟ್ಟುವುದು ಮತ್ತು ತೆರೆಮರೆಯಲ್ಲಿ ಸಹಿ ಸಂಗ್ರಹಣೆ ಮುಂದುವರೆಸುವ ಒಂದಂಶದ ಕಾರ್ಯಾಚರಣೆಗೆ ರೆಡ್ಡಿ ಗ್ಯಾಂಗ್ ಕೈಹಾಕಿದೆ.

ಎಲ್ಲಕ್ಕೂ ಮಿಗಿಲಾಗಿ ಹನ್ನೊಂದು ಮಂದಿ ಅನರ್ಹರು ಮತ್ತು ಐದು ಮಂದಿ ಪಕ್ಷೇತರರನ್ನು ತಮ್ಮತ್ತ ಸೆಳೆಯುವುದು ರೆಡ್ಡಿಗಳ ಸದ್ಯದ ಹರಕತ್ತು, ಒಂದೆಡೆ ಇನ್‌ಕಮ್ ಟ್ಯಾಕ್ಸ್ ಅಧಿಕಾರಿಗಳ ಕೈಗೆ ಇಡೀ ರೆಡ್ಡಿಗಳ ಬ್ಲ್ಯಾಕ್‌ಮನಿ ಸಾಮ್ರಾಜ್ಯ ಸಿಲುಕಿಕೊಂಡಿದೆ. ಇನ್ನೊಂದೆಡೆ ತಮ್ಮ ಜೊತೆ ಕೈಜೋಡಿಸುವಲ್ಲಿ ಕಾಂಗ್ರೆಸ್ಸಿಗೆ ಒಮ್ಮನಸ್ಸಿಲ್ಲ, ಇತ್ತ ಯಡ್ಡಿ ಇಳಿಸಬೇಕೆಂದರೆ ಅದಕ್ಕೆ ಹೈಕಮಾಂಡ್ ಒಪ್ಪಬೇಕು. ಅದಕ್ಕೆ ಬಹುಸಂಖ್ಯೆಯ ಎಮ್ಮೆಲ್ಲೆಗಳನ್ನು ಸೆಳೆಯಬೇಕು. ಜೊತೆಗೆ ವರ್ತೂರು ಪ್ರಕಾಶ್ ಮತ್ತು ರಾಜೂಗೌಡರನ್ನು ಮಂತ್ರಿ ಮಾಡಬೇಕು. ಮಗದೊಂದೆಡೆ ಅತೃಪ್ತ ಶಾಸಕರ ಅನರ್ಹತೆ ವಿರುದ್ಧ ಸುಪ್ರೀಂಕೋರ್ಟ್‌ನಿಂದಲೂ ತಡೆ ತರಬೇಕು. ಅದಕ್ಕೂ ತಾವೇ ವಕೀಲರ ಫೀಜು ಕಟ್ಟಬೇಕು.

ಏಕಕಾಲಕ್ಕೆ ಏನೆಲ್ಲಾ ಬುಡಮೇಲು ಕಾರ್ಯಾಚರಣೆಗಿಳಿದ ರೆಡ್ಡಿಗಳ ಷಡ್ಯಂತ್ರಕ್ಕೆ ಸದ್ಯ ಸಿಕ್ಕ ಲಾಭವೆಂದರೆ; ಯಡ್ಡಿ ವಿರುದ್ಧ ಬಿದ್ದ 53 ಸಹಿ ಮಾತ್ರ. ಅದು ಎಪ್ಪತ್ತಾಗುವುದು ಎಷ್ಟು ಹೊತ್ತು?


-ರಾ. ಸೋಮನಾಥ್


ರೇವಣ್ಣನ ಜೊತೆ ಸೋಮಣ್ಣ!

ತನ್ನ ವಿರುದ್ಧ ರೆಡ್ಡಿಗಳು ಶುರು ಹಚ್ಚಿಕೊಂಡ ಸಹಿ ಸಂಗ್ರಹಣೆ ಮತ್ತು ಅದಕ್ಕೆ ಶೆಟ್ಟರ್ ಮತ್ತು ಅನಂತ್ ಕುಮ್ಮಕ್ಕು ಕೊಡುತ್ತಿರುವುದರ ಸ್ಪಷ್ಟ ಮಾಹಿತಿ ತಿಳಿದೇ ಯಡ್ಡಿ ಪ್ರತಿತಂತ್ರಕ್ಕೆ ಕೈಯಿಟ್ಟಿದ್ದಾರಾ?

ಹಾಗೊಂದು ವೇಳೆ ತನ್ನನ್ನು ರೆಡ್ಡಿ–ಅನಂತ್ ಸೇರಿ ಇಳಿಸುವುದೇ ಆದ ಪಕ್ಷದಲ್ಲಿ ಜೆಡಿಎಸ್ ಜೊತೆ ಯಡ್ಡಿ ಕೈಜೋಡಿಸಬಹುದಾ? ಇಂಥ ಲೆಕ್ಕಾಚಾರಕ್ಕೆ ಪೂರಕವೋ ಎಂಬಂತೆ ಬಂಟ ಸೋಮಣ್ಣನನ್ನು ಮುಂದೆ ಬಿಟ್ಟು ಜೆಡಿಎಸ್ ಅನ್ನು ಪಳಗಿಸುತ್ತಿದ್ದಾರಾ? ಇದಕ್ಕೆ ತಕ್ಕಂತೆಯೇ ಹಾಸನಾಂಬಾ ದೇವಸ್ಥಾನದಲ್ಲಿ ರೇವಣ್ಣ ಮತ್ತು ಸೋಮಣ್ಣ ಕೈಕೈ ಬೆಸದಿರಬಹುದಾ?

ಇಲ್ಲದಿದ್ದರೆ ಸೋಮಣ್ಣ ಹೋಗಿ ಹೋಗಿ ರೇವಣ್ಣನಿಗೆ ಏಕೆ ಮಸ್ಕಾ ಹೊಡೆಯುತ್ತಿದ್ದ? ರೆಡ್ಡಿ ಬಣದ ಜೊತೆ ಕಾಂಗ್ರೆಸ್ ಏನಾದರೂ ಕೈಜೋಡಿಸಿಬಿಟ್ಟರೆ ಯಡ್ಡಿಗೆ ಉಳಿಯುವುದು ಜೆಡಿಎಸ್ ದಾರಿಯೊಂದೆ. ಏನೆಲ್ಲಾ ಪಡಿಪಾಟಲು ಪಟ್ಟರೂ ರೇವಣ್ಣ ಉಪಮುಖ್ಯಮಂತ್ರಿಯಾಗಬೇಕೆಂದರೆ ಅದಕ್ಕೆ ಇನ್ಯಾವುದಾದರೂ ಪಕ್ಷದ ನೆರವು ಬೇಕೇಬೇಕು. ರೇವಣ್ಣನ ಸುಪ್ತ ಆಶೆ ಮತ್ತು ಸೋಮಣ್ಣನ ಮೂರದ ಬಯಕೆ ಯಾವತ್ತಾದರೂ ನೆರವೇರಲು ಸಾಧ್ಯವಾ?





▶▶ 10

ಸ್ಥಾನಮಾನಗಳಿವೆ. ಸಾಕಷ್ಟು ದುಡ್ಡೂ ಸಿಗುತ್ತಿದೆ. ಇವರಿಗೆ ಕರ್ನಾಟಕ ಕ್ರಿಕೆಟ್ ಬಗ್ಗೆ ನಿಜಕ್ಕೂ ಕಾಳಜಿಯಿದ್ದರೆ ಮೊದಲು ಈಗ ತಮ್ಮ ಕೈಲಿರುವ ಅಧಿಕಾರದ ಹುದ್ದೆಗಳನ್ನಾದರೂ ಬಿಟ್ಟು ಬರಬೇಕಿತ್ತಲ್ಲವೇ?

ಈ ಕುಂಬ್ಳೆ ಅದೆಂತಾ ದಕ್ಷನೆಂದರೆ ಕರ್ನಾಟಕ ಹುಲಿ ಸಂರಕ್ಷಣಾ ಯೋಜನೆಯ ರಾಯಭಾರಿಯಾಗಿ ಈತ ಇದ್ದಾನೆ. ಆದರೆ ಈ ತಿಂಗಳೊಂದರಲ್ಲೇ ಬನ್ನೇರುಘಟ್ಟ ನ್ಯಾಷನಲ್ ಪಾರ್ಕ್‌ನಲ್ಲಿ ಅನೇಕ ಹುಲಿ-ಸಿಂಹ-ಚಿರತೆಗಳು ಸತ್ತಿವೆ. ಕುಂಬ್ಳೆ ಅತ್ತ ಹೋಗಿ ನೋಡುವುದಿರಲಿ ಕನಿಷ್ಠ ಕಾಳಜಿ ತೋರುವ ಒಂದು ಹೇಳಿಕೆಯನ್ನೂ ಕೊಡಲಿಲ್ಲ, ಅಂದರೆ ಒಪ್ಪಿಕೊಂಡ ಕೆಲಸ ಮಾಡಲಾಗದ ವ್ಯಕ್ತಿಯೀತ.

ಶ್ರೀನಿವಾಸನ್ ದುಡ್ಡು-ಕುಂಬ್ಳೆ ಜಾತ್ರೆ

ಕ್ರಿಕೆಟ್ ಆಟದಲ್ಲಿ ಎಷ್ಟು ದುಡ್ಡಿದೆಯೋ ಅಷ್ಟೇ ದುಡ್ಡು ಕ್ರಿಕೆಟ್ ಬೋರ್ಡ್‌ಗಳ ಎಲೆಕ್ಷನ್‌ನಲ್ಲೂ ಹರಿದಾಡಲೇಬೇಕು ಎಂಬುದು ಹಲವರ ಅಂಬೋಣ. ಅದು ನಿಜವಿರಲಿಕ್ಕೂ ಸಾಕು. ನೂರಾರು ಕೋಟಿ ರೂಪಾಯಿಗಳ ಲೆವೆಲ್‌ನಲ್ಲಿ ಕ್ರಿಕೆಟ್ ಮಂಡಳಿಗಳು ವ್ಯವಹರಿಸುತ್ತಿರುವಾಗ ಅದರ ಎಲೆಕ್ಷನ್‌ನಲ್ಲಿ ಹಲವು ಕೋಟಿ ರೂ. ಖರ್ಚಾಗದೇ ಇರದು. ಆದರೆ ಕುಂಬ್ಳೆ-ಶ್ರೀನಾಥ್ ತಮ್ಮ ಕೆರಿಯರ್‌ನ ಉದ್ದಕ್ಕೂ ಇನ್‌ಕಮಿಂಗ್ ಕಾಲ್‌ಗಳನ್ನು ಮಾತ್ರ ಉಳಿಸಿಕೊಂಡು ಔಟ್‌ಗೋಯಿಂಗ್ ಕಾಲ್‌ಗಳಿಗೆ ನಿರ್ಬಂಧ ಹಾಕಿಕೊಂಡಿದ್ದವರು. ಅಂದರೆ ಹಣ ಯಾವಾಗಲೂ ಒಳಬರಬೇಕೆ ವಿನಃ ಹೊರಹೋಗಬಾರದು ಎಂಬ ನಿಯಮದವರು. ಅಂತವರು ಈಗ ಲಕ್ಷಾಂತರ ರೂ. ಖರ್ಚು ಮಾಡಿ ಎಲೆಕ್ಷನ್‌ನಲ್ಲಿ ಫೈಟ್ ಮಾಡುತ್ತಾರಾ? ಎಂದು ನೋಡಿದರೆ ಅಲ್ಲೂ ಒಂದು ಡೀಲ್ ಕಾಣಿಸುತ್ತಿದೆ.

ಅದು ಎನ್.ಶ್ರೀನಿವಾಸನ ದುಡ್ಡು!

ಇಂಡಿಯಾ ಸಿಮೆಂಟ್ಸ್ ಎಂಬ ಬೃಹತ್ ಕಂಪೆನಿಯ 12 ಮಂದಿ ಡೈರೆಕ್ಟರುಗಳಲ್ಲಿ ಒಬ್ಬನಾಗಿರುವ ಈ ಎನ್.ಶ್ರೀನಿವಾಸನ್ ಚೆನ್ನೈ ಸೂಪರ್ ಕಿಂಗ್ಸ್ ಟೀಮ್‌ನ ಮಾಲೀಕನೂ ಹೌದು. ಇದಿಷ್ಟು ಹೇಳಿದರೆ ಶ್ರೀನಿವಾಸನ ಪುರಾಣ ಮುಗಿಯುವುದಿಲ್ಲ, ಕುಂಬ್ಳೆ-ಶ್ರೀನಾಥ್‌ಗೂ ಈ ಶ್ರೀನಿವಾಸನಿಗೂ ಇರುವ ಡೀಲ್ ಬಗ್ಗೆ ಹೇಳಿದಂತಾಗುವುದಿಲ್ಲ.

ಅಸಲಿ ಸಂಗತಿ ಏನೆಂದರೆ ಈ ಶ್ರೀನಿವಾಸನ್ ಹಾಲಿ ಬೋರ್ಡ್ ಆಫ್ ಕಂಟ್ರೋಲ್ ಫಾರ್ ಕ್ರಿಕೆಟ್ ಇನ್ ಇಂಡಿಯಾ (BCCI)ದ ಸೆಕ್ರೆಟರಿಯಾಗಿದ್ದಾನೆ. ಹೊಸ ವರ್ಷದ ವೇಳೆಗೆ BCCI ಚೇರ್‌ಮನ್ ಆಗುವ ಸಾಧ್ಯತೆಯೂ ಶ್ರೀನಿವಾಸನ್‌ಗಿದೆ. ಹಾಲಿ BCCI ಅಧ್ಯಕ್ಷ ಶಶಾಂಕ ಮನೋಹರನ ಅವಧಿ ಈ ತಿಂಗಳಲ್ಲೇ ಮುಗಿಯುತ್ತಿದ್ದು ಅದೇ ಜಾಗಕ್ಕೆ ಬಂದು ಕೂರಲು ಶ್ರೀನಿವಾಸನ್ ಭಾರೀ ಲಾಬಿ ನಡೆಸುತ್ತಿದ್ದಾನೆ. ಇದಾಗಬೇಕೆಂದರೆ BCCI ನ ಸದಸ್ಯ ಸಂಸ್ಥೆಗಳಾಗಿರುವ KSCA ತರದವರ ಬೆಂಬಲ ಬೇಕಾಗುತ್ತದೆ. ಅದೇ ಲೆಕ್ಕಾಚಾರದಲ್ಲಿ ಈ ಶ್ರೀನಿವಾಸನ್ ಏನು ಮಾಡುತ್ತಿದ್ದಾನೆಂದರೆ KSCA ಎಲೆಕ್ಷನ್‌ನಲ್ಲಿ ಕುಂಬ್ಳೆ-ಶ್ರೀನಾಥ್‌ರಿಗೆ ಹಣ ಕೊಟ್ಟು ಲಾಬಿ ಮಾಡಿ ಗೆಲ್ಲಿಸುವುದು ನಂತರ ಅದಕ್ಕೆ ಪ್ರತ್ಯುಪಕಾರವೆಂಬಂತೆ ಮುಂದಿನ BCCI ಎಲೆಕ್ಷನ್‌ನಲ್ಲಿ ತಾನು ಅಖಿಲ ಭಾರತದ ಅಧ್ಯಕ್ಷನಾಗಲು ಕುಂಬ್ಳೆ-ಶ್ರೀನಾಥ್ ಬೆಂಬಲ ಗ್ಯಾರಂಟಿ ಮಾಡಿಕೊಳ್ಳುವುದು.


ಇದಿಷ್ಟು ಇವರ ಗೇಮ್ ಪ್ಲಾನ್. ಆದರೆ ಶ್ರೀನಿವಾಸನ್ ಹಾದಿ ಅಷ್ಟು ಸಲೀಸಾಗಿಲ್ಲ, ಆತನೀಗ ಚೆನ್ನೈ ಸೂಪರ್ ಕಿಂಗ್ಸ್ ಮಾಲೀಕನೂ ಆಗಿ BCCI ಸೆಕ್ರೆಟರಿಯೂ ಆಗಿ ಏಕಕಾಲಕ್ಕೆ ಎರಡು ಲಾಭದ ಹಿತಾಸಕ್ತಿಯ ಹುದ್ದೆ ಹೊಂದಿರುವ ಬಗ್ಗೆ ಸುಪ್ರೀಂಕೋರ್ಟ್ ವಿಚಾರಣೆ ಮಾಡುತ್ತಿದೆ. BCCI ನ ಮಾಜಿ ಅಧ್ಯಕ್ಷ ಹಾಗೂ ಶ್ರೀನಿವಾಸನ್ ವೈರಿ ಮುತ್ತಯ್ಯ ಈ ಬಗ್ಗೆ ಸುಪ್ರೀಂ ಕೋರ್ಟ್‌ನಲ್ಲಿ ಕೇಸ್ ಹಾಕಿದ್ದಾನೆ.

ಈ ಕೇಸ್ ಏನಾದರೂ ಆಗಿಕೊಳ್ಳಲಿ, ಆದರೆ ಈ ಕುಂಬ್ಳೆ-ಶ್ರೀನಾಥರ ಎಲೆಕ್ಷನ್ ಸ್ಪರ್ಧೆಯ ಹಿಂದೆ ಆಲ್ ಇಂಡಿಯಾ ಲೆವೆಲ್‌ನ ಲಾಬಿಗಳು- ಕಾರ್ಪೊರೇಟ್ ಹಿತಾಸಕ್ತಿಗಳೆಲ್ಲಾ ಕೆಲಸ ಮಾಡುತ್ತಿವೆ. ಹಣ ಎಲ್ಲೆಲ್ಲಿಂದಲೋ ಹರಿದುಬರುತ್ತಿದೆ.

ನಡುವೆ ಕುಂಬ್ಳೆ-ಶ್ರೀನಾಥ್ ಮಾತ್ರ ಮುಗ್ಧ ಶಿಶುಗಳಂತೆ ಕರ್ನಾಟಕದಲ್ಲಿ ಗ್ರಾಮೀಣ ಕ್ರಿಕೆಟ್ ಪ್ರತಿಭೆ ಹುಡುಕುವ, ಎಲ್ಲಾ ಕೊಳಕನ್ನೂ ಒಂದೇ ಒಗೆತದಲ್ಲಿ ಶುದ್ಧ ಮಾಡುವ ಮಾತಾಡುತ್ತಿದ್ದಾರೆ.

ಇವರಿಬ್ಬರನ್ನೂ ಮತದಾರರು ಯಾಕೆ ನಂಬಬೇಕೋ ಭಗವಂತನೇ ಬಲ್ಲ...


ಬ್ರಿಜೇಶ್ ಟೀಮಿನ ಕಳ್ಳ ಹಾಕಿ ಗಣೇಶ



ಈಗಿನ ಎಲೆಕ್ಷನ್‌ನಲ್ಲಿ ಕುಂಬ್ಳೆ-ಶ್ರೀನಾಥ್ ಸಿಂಡಿಕೇಟ್‌ಗೆ ಸಪೋರ್ಟು ಮಾಡುತ್ತಿರುವ ಬ್ರಿಜೇಶ್ ಪಟೇಲ್ ಎಂತಾ ಐನಾತಿ ಖದೀಮನೆಂದರೆ KSCA ದಾಖಲೆಗಳನ್ನೇ ಕದ್ದು ಸಿಕ್ಕಿಬಿದ್ದಿದ್ದಾನೆ.

1999ರಿಂದ 2007ರವರೆಗಿನ ಬ್ರಿಜೇಶ್ ಅವ್ಯವಹಾರಗಳ ಬಗ್ಗೆ ರಿಜಿಸ್ಟಾರ್ ಆಫ್ ಕೋಆಪರೇಟಿವ್ ಸೊಸೈಟಿ ಇಲಾಖೆಯ ಡೆಪ್ಯೂಟಿ ಡೈರೆಕ್ಟರ್ ಮಧುಸೂದನ ತನಿಖೆ ನಡೆಸುತ್ತಿದ್ದರು. ಅವರೊಮ್ಮೆ ರಜೆ ಮೇಲೆ ಹೋದಾಗ ತನಿಖೆಯ ಉಸ್ತುವಾರಿಯನ್ನು ರಾತ್ರೋರಾತ್ರಿ ನರಸಿಂಹಮೂರ್ತಿ ಎಂಬ ಇನ್ನೊಬ್ಬ ಅಧಿಕಾರಿಗೆ ಹಸ್ತಾಂತರವಾಗುವಂತೆ ಬ್ರಿಜೇಶ್ ನೋಡಿಕೊಂಡ. ಅಷ್ಟೇ ಅಲ್ಲದೆ ತನ್ನ ಚೇಲಾ KSCA ಯ CEO ಆಗಿರುವ ಗಣೇಶ (ಈತ ಮಾಜಿ ಹಾಕಿ ಕ್ಯಾಪ್ಟನ್)ನನ್ನು ಅಕ್ಟೋಬರ್ 16ರ ರಾತ್ರಿ ಕಚೇರಿಗೆ ಕಳಿಸಿ ತಮ್ಮ ಅಕ್ರಮಗಳಿದ್ದ ದಾಖಲೆಗಳನ್ನು ಎಗರಿಸಲು ಯತ್ನಿಸಿ ರೆಡ್‌ಹ್ಯಾಂಡಾಗಿ ಸಿಕ್ಕಿಬಿದ್ದ. ಈ ತನಿಖೆ ಬಗ್ಗೆ ಇಲಾಖೆಯಿಂದ ಪತ್ರ ಬಂದರೆ ಗಣೇಶ ಅದನ್ನು ಮ್ಯಾನೇಜಿಂಗ್ ಕಮಿಟಿಗಾಗಲಿ, ಅಧ್ಯಕ್ಷ ಒಡೆಯರ್‌ಗಾಗಲಿ ತಿಳಿಸದೆ ಮುಚ್ಚಿಟ್ಟಿದ್ದ.

ಇಂತಹ ಹೀನ ಜಾತಕದವರೇ ಈಗ ಕುಂಬ್ಳೆ ಬೆಂಬಲಿಗರಾಗಿರುವುದು ವಿಪರ್ಯಾಸಕರ. ಇವರಷ್ಟೇ ಅಲ್ಲ, ಉದ್ಯಮಿ ತಲ್ಲಂ ವೆಂಕಟೇಶ್, ಹೋಟೆಲಿಯರ್ ಸದಾನಂದ ಮಯ್ಯ ಕೂಡ ಈಗ ಕುಂಬ್ಳೆ ಸಿಂಡಿಕೇಟ್‌ನಲ್ಲಿದ್ದಾರೆ.



ಕ್ರಿಕೆಟ್ ಆಟಗಾರರೇ ಕ್ರಿಕೆಟ್ ಆಡಳಿತ ನಡೆಸಬೇಕು ಎನ್ನುವ ಕುಂಬ್ಳೆ ಈ ಮಯ್ಯ-ತಲ್ಲಂರನ್ನು ಯಾಕೆ ಜೊತೆಗಿಟ್ಟುಕೊಂಡು ಚುನಾವಣೆ ನಡೆಸುತ್ತಿದ್ದಾರೆ?

ಕ್ರಿಕೆಟಿಗರೆ ಆಡಳಿತಗಾರರಾದ ತಕ್ಷಣ ಏನು ಬದಲಾಗಿ ಬಿಡುವುದಿಲ್ಲವೆನ್ನಲು ಮದನ್‌ಲಾಲ್, ಶಿವಲಾಲ್ ಯಾದವ್, ಭರತ ರೆಡ್ಡಿಗಳ ಉದಾಹರಣೆಯಿದೆ. ಕರ್ನಾಟಕದಲ್ಲೇ ಸ್ವತಃ ಕ್ರಿಕೆಟಿಗ ಬ್ರಿಜೇಶ್ KSCA ಆಡಳಿತ ವಹಿಸಿಕೊಂಡ ನಂತರ ನಡೆದಿರುವಷ್ಟು ಹಗರಣ ಬೇರೆ ಯಾರಿಂದಲೂ ನಡೆದಿರಲಿಲ್ಲ, ಚಿನ್ನಸ್ವಾಮಿ ನಾಗರಾಜ, ತಿಮ್ಮಪ್ಪಯ್ಯನಂತವರು ವಿವಾದ ಸೃಷ್ಟಿಸಿದ್ದಿರಬಹುದು ಆದರೆ ಬ್ರಿಜೇಶ್ ರೀತಿ ಭ್ರಷ್ಟಾಚಾರ ನಡೆಸಿರಲಿಲ್ಲ.

ಸುರೇಶ್‌ಗೌಡನ ಲಂಚದಲ್ಲಿ ಶಿವರಾಮೇಗೌಡನಿಗೂ ಪಾಲಿದೆಯಂತಲ್ಲಾ

ಕನ್ನಡ ಸಾಹಿತ್ಯ ಸಮ್ಮೇಳನಗಳನ್ನು ನಡೆಸುವುದರಿಂದ ಭಾಷೆ ಬೃಹದಾಕಾರವಾಗಿ ಬೆಳೆಯುತ್ತದೆ, ಗಡಿ ತನ್ನಿಂದ ತ... ವಿಸ್ತಾರಗೊಳ್ಳುತ್ತದೆ, ಕನ್ನಡಿಗರು ಸಮೃದ್ಧ ಸವಲತ್ತುಗಳನ್ನು ಹೊಂದಿ ಸುಖ ಸಂತೋಷದಿಂದ ನಲಿದಾಡುತ್ತಾರೆ ಎಂಬಂತೆ ಹಗ... ಇರುಳೂ ಓಡಾಡುತ್ತಿರುವ ನಲ್ಲೂರು ಪ್ರಸಾದ್ ನಡೆಸಲಿರುವ ಜಾತ್ರೆಗೆ ಕಡೆಗೂ ಒಂದು ಉತ್ಸವಮೂರ್ತಿ ಸಿಕ್ಕಿತಂತಲ್ಲಾ, ಸಾ... ಸಮ್ಮೇಳನಾಧ್ಯಕ್ಷ ಪಟ್ಟ ಸಾಮಾನ್ಯವಾಗಿ ಸೃಜನಶೀಲ ಸಾಹಿತಿಗಳ ಪಾಲಾಗುವುದರಿಂದ, ನಿಘಂಟಿನವರ ಹತ್ತಿರ ಸುಳಿಯುವುದಿಲ್ಲವೆ... ಸುಮ್ಮನಿದ್ದ ಸುಬ್ಬಯ್ಯನವರಿಗೇ ಒಲಿದು ಬಂದಿದ್ದು ಅವರಿಗೆ ಅಚ್ಚರಿಯುಂಟು ಮಾಡಿತಂತಲ್ಲಾ, ಈ ನಡುವೆ "ಎಡೂರಪ್ಪ... ಪಾಠ ಹೇಳಿದ್ದೇನೆ, ನಲ್ಲೂರು ಕೂಡ ನನ್ನ ನಲ್ಮೆಯ ಶಿಷ್ಯ" ಎಂದು ಮಹದಾನಂದದಿಂದ ಶ್ರಮಪಡುತ್ತಿದ್ದ ಹಂಪನಾ... ಬೇಜಾರಿನಿಂದಲೇ "ಮುಂದಿನ ಬಾರಿ ನನ್ನನ್ನು ಮರೆಯಬೇಡ" ಎಂದು ನಲ್ಲೂರರನ್ನು ಎಚ್ಚರಿಸಿದನೆಂದು ಬಲ್ಲ ಮೂಲಗಳೂ ... ಸುದ್ದಿ ಹರಡುತ್ತಿವೆಯಂತಲ್ಲಾ, ತನ್ನ ಶಿಷ್ಟಾಚಾರಗಳ ಬಹುಜತನದಿಂದ ಕಾಪಾಡಿಕೊಂಡು ಬಂದಿದ್ದು ಕನ್ನಡ ಸಾಹಿತ್ಯ ಪರಿಷ... ವಕ್ಕರಿಸಿ, ಆ ಪವಿತ್ರ ವೇದಿಕೆಗೆ ಧರ್ಮಾಧಿಪತಿಗಳು ಕಾವಿಧಾರಿಗಳೆಲ್ಲಾ ಬರುವಂತೆ ಮಾಡಿ ಇನ್ನೂ ಬದುಕಿರುವ ಹಂ... ಕಮಲದೊಡನೆ ಅಧ್ಯಕ್ಷನಾಗಿ ಮೆರೆಯುವ ಅವಕಾಶ ತಪ್ಪಿಹೋಯ... ಎಂದು ಹಂಪಾನ ಅಭಿಮಾನಿಗಳು ಹಪಹಪಿಸುತ್ತಿವೆಯಂತಲ್ಲಾ, ಥೂತ್...

ಥೂತ್ತೇರಿ

ಇಂಧಾತಹೂ

****

"ಕರ್ನಾಟಕದಲ್ಲಿ ಬಜೆಪಿ ಸರ್ಕಾರ ತನ್ನ ಪಾಪಕೃತ್ಯಗಳ ಉತ್... ಸ್ಥಿತಿಯಲ್ಲಿರುವಾಗ ಅಂತಹ ಸರ್ಕಾರದ ಪುರೋಹಿತನಂತಿರುವ ಚಿ... ಅಧ್ಯಕ್ಷನಾಗುವುದು ಸರ್ವಸಮ್ಮತವಾದ ನ್ಯಾಯ. ಅವರಾಗುವುದರ... ಇಡೀ ಕೇಶವಕೃಪವೇ ಯಜ್ಞ ಯಾಗ ಮಾಡುತ್ತ ಕೊಳ್ಳಿದೆವ್ವಗಳು ಕುಣಿ... ಸಾಹಿತ್ಯ ಸಮ್ಮೇಳನದ ವೇದಿಕೆ ಸುತ್ತ ಕುಣಿಯಬಹುದು" ಎಂದು ಕ... ಕಂಡಿದ್ದ ವಟುಗಳಿಗೆ ನಿರಾಶೆಯಾಗುವಂತೆ ವೆಂಕಟಸುಬ್ಬಯ್ಯನವರ ಆಯ್ಕೆ ಸಂಕಟ ತಂದು ಮಡಗಿದರಂತಲ್ಲಾ, ವಯೋಮಾ... ಮಾನದಂಡದಿಂದ ಸುಬ್ಬಯ್ಯ ತುಂಬಾ ಸೀನಿಯರ್, ಬುದ್ಧಿವಲಯದ ಮಾನದಂಡದಿಂದ ಚಿ.ಮೂ. ತೀರಾ ಜೂನಿಯರ್, ಆದ್ದ... ಸುಬ್ಬಯ್ಯನವರ ಆಯ್ಕೆಗೆ ಯಾರ ವಿರೋಧವೂ ಬರದಿದ್ದರೂ, ಚಿ.ಮೂ. ಮುಖ ನೋಡಿದರೆ, ಇದೇ ಕೊರಗಿನಿಂದ ಸುಬ್ಬಯ್ಯ... ಸರದಿಯನ್ನು ಮುರಿಯಲಿದ್ದಾರೆಂದು ಚಿ.ಮು. ಕಂಡರಾಗದವರು ಹೇಳಿಕೆ ಕೊಡುತ್ತಿರುವುದು ಸರಿಯಲ್ಲ, ಚಿ.ಮು. ಬೇಸರವೇಕೆಂ... ಇಟಲಿ ಮೂಲದ ಮಹಿಳೆಯ ಪಾರ್ಟಿ ತಮ್ಮ ದೇಶಭಕ್ತರ ಪಡೆಯನ್ನು ಭಯೋತ್ಪಾದಕರ ಗುಂಪೆಂದು ಹೇಳಿರುವುದಕ್ಕೆ ಎ... ಸಂಶೋಧಕ ವಿದ್ಯಾರ್ಥಿಗಳ ವ್ಯಾಖ್ಯಾನವಾಗಿದೆಯಂತಲ್ಲಾ, ಥೂತ್ತೇರಿ!


****

ಆರೆಸೆಸ್ ಒಂದು ಭಯೋತ್ಪಾದಕ ಸಂಘ ಎಂದು ಕಾಂಗ್ರೆಸ್ ಹೇಳಿದಕೂಡಲೇ ಚೆಡ್ಡಿಗಳು ದೇಶಾದ್ಯಂತ ಹರಡಿರುವ ತ... ಜಾಲದಂತಹ ಜನಿವಾರಗಳಿಗೆ ಸಂದೇಶ ರವಾನಿಸಿ "ಎಲ್ಲರೂ ಬೀದಿಗಿಳಿದು ಪ್ರತಿಭಟಿಸಿ. ಮನೆಯಲ್ಲಿ ಕೂತಿರುವ ಮಹಿಳೆಯ... ಬೀದಿಗೆ ತಂದು ಮೆರವಣಿಗೆ ಮಾಡಿ ಪ್ರತಿಭಟಿಸಿ. ಈಗ ಹಣಕಾಸಿಗೆ ತೊಂದರೆಯಿಲ್ಲದಿರುವುದರಿಂದ ಗಡ್ಡದ ಸಾಬರನ್ನು ಕೊ... ತನ್ನಿ, ಅವರಿಗೆ ಗಡ್ಡ ಟೋಪಿ ಕಡ್ಡಾಯವಾಗಿರುವಂತೆ ನೋಡಿಕೊಳ್ಳಿ" ಎಂದು ಆದೇಶಿಸಿದರಂತಲ್ಲ, ಅದರಂತೆ ಚೆಡ್ಡಿಗಳೆಲ್ಲಾ ... ಚೆಡ್ಡಿಗಳಲ್ಲದವರನ್ನು ಬೀದಿಗೆ ತಂದು ಕಾಂಗ್ರೆಸ್ ವಿರುದ್ಧ ಘೋಷಣೆ ಕೂಗಿಸಿ ಮನೆಗೆ ಹೋದದ್ದನ್ನು ನೋಡಿದ ಮಾಧ್ಯ... ಚೆಡ್ಡಿಗಳಿಗೆ ಸ್ವಾನೆ ಕನ್‌ಫ್ಯೂಜಾಗಿದೆಯಂತಲ್ಲಾ, ಈ ಪೈಕಿ ಸುವರ್ಣ ಚಾನಲ್‌ನೊಳಗೆ ಸೇರಿಕೊಂಡಿರುವ ಶ್ಯಾನುಭೋಗರ ಹೈದನ... ಮತ್ತು ಮಿಸ್ಟರ್ ಗರಗಸ ಖ್ಯಾತಿಯ ರಂಗನಾಥ ಎಂಬ ಜನಿವಾರಿಗಳು ಸೇರಿಕೊಂಡು, ಹುಟ್ಟು ಚೆಡ್ಡಿಗಳಿಬ್ಬರ ಮಧ್ಯೆ ಅಮಾ... ಸಾಬಿಯೊಬ್ಬನನ್ನು ಕೂರಿಸಿಕೊಂಡು ತಮ್ಮ ಗರಗಸದ ಕೆಲಸವನ್ನು ಹುಮ್ಮಸ್ಸಿನಿಂದ ಮಾಡಿ ಮುಗಿಸಿದರಂತಲ್ಲಾ, ಮೊಸರನ್ನ ಉ... ಬಾಯಿತೊಳೆಯದೆ ಓಡಿಬಂದಂತೆ ಕಾಣುವ ರಂಗನಾಥ, "ಆರೆಸ್ಸೆಸ್ ಬೆಳವಣಿಗೆಗೆ ಆರೆಸ್ಸ್ ಅಲ್ಲದವರು ಅಲ್ಲಿರುವುದೇ ಕಾ... ಚೆನ್ನಾಗಿ ಸಂಘ ಕಟ್ಟಿ" ಎಂದು ಚೆಡ್ಡಿಗಳಿಗೆ ಬುದ್ಧಿವಾದ ಹೇಳಿ ಕಳಿಸಿದನಂತಲ್ಲಾ, ಥೂತ್ತೇರಿ!

****

ಚೆಡ್ಡಿಗಳ ರೋದನದ ನಡುವೆಯೇ ಕರ್ನಾಟಕ ಸರ್ಕಾರಗಳು ಈವರೆಗೆ ಕಂಡು ಕೇಳರಿಯದ ಸುದ್ದಿಯೊಂದು ನಾಗಮಂಗ... ಶಾಸಕ ಸುರೇಶ್ ಗೌಡನಿಂದ ಹೊರಬಿದ್ದಿದೆಯಲ್ಲಾ, "ತಾಲ್ಲೂಕಿನ ಅಭಿವೃದ್ಧಿ ಕಾರ್ಯಗಳಿಗೆ ಅನುದಾನ ತರಬೇಕಾದರೆ ಮಂತ್ರಿಗ... ಲಂಚ ಕೊಡಬೇಕಾಗಿದೆ. ನನಗಂತೂ ಕೊಟ್ಟುಕೊಟ್ಟೂ ಸಾಕಾಗಿ ಹೋಗಿದೆ" ಎಂದು ಪತ್ರಿಕಾಗೋಷ್ಠಿಯನ್ನೆ ನಡೆಸಿದ್ದಾರಂತಲ್ಲಾ... ಕೂಡಲೇ ಬಜೆಪಿಯ ಮೆದುಳಿಲ್ಲದ ಅಧ್ಯಕ್ಷ ಈಶ್ವರಿ "ಇಮ್ಮಿಡಿಯಟ್ ಆಗಿ ಸುರೇಶ್ ಗೌಡನನ್ನು ಅರೆಸ್ಟು ಮಾಡಿ ಆತನ ಜೇ... ತಪಾಸಣೆ ಮಾಡಿ" ಎಂದುಬಿಟ್ಟರಂತಲ್ಲಾ, ಇದನ್ನ ಕೇಳಿದ ಸಿದ್ಧರಾಮಯ್ಯ ಎಂದಿನ ತಾತ್ಸಾರದಲ್ಲಿ "ಈಶ್ವರಪ್ಪನಿಗೆ ತಲೆಮೆದುಳು ... ಅಂತ ಹೇಳಿರಲಿಲ್ಲವೇನ್ರೀ. ಸುರೇಶ್ ಗೌಡನ್ನ ಕರೆದು ಯಾರಿಗೆ ದುಡ್ಡು ಕೊಟ್ಟೆ? ಅಂತದೇನು ಬಂದದೆ ನಿನಗೆ ಅಂತ ಕೇಳದಬು... ಕೂಡ್ಲೆ ಸುರೇಶ್ ಗೌಡನ್ನೆ ಅರೆಸ್ಟು ಮಾಡಿ ಅಂತನಲ್ಲಾ? ಈ ಚೆಡ್ಡಿ ಹೈದನಿಗೆ ಬುದ್ಧಿ ಬೇಡವೇನ್ರಿ?" ಎಂದರಂತಲ್ಲಾ, ಥೂತ್ತೇ...


****



ಇತ್ತ ಸುರೇಶ್ ಗೌಡನ ಫಜೀತಿ ಕೇಳಿದರೆ ವಿರೋಧ ಪಕ್ಷದ ಶಾಸಕನಾಗುವುದೇ ಬೇಡ ಎನ್ನುವಂತಾಗಿದೆಯಂತಲ್ಲಾ. ಕಂಚನಹಳ್ಳಿ ಗಂಗಾಧರಮೂರ್ತಿ ಕೊಲೆ ಆರೋಪಿಯಾಗಿದ್ದ ಶಿವರಾಮೇಗೌಡನ ವಿರುದ್ಧ ಇಡೀ ಮಂಡ್ಯ ಜಿಲ್ಲೆಯ ಬಜೆಪಿ ಹೋರಾಡಿತ್ತು, ಆದರೆ ಈಗ ಇಡೀ ಮಂಡ್ಯ ಜಿಲ್ಲೆಯ ಬಜೆಪಿ ನಾಯಕನೇ ಶಿವರಾಮೇಗೌಡನಂತಲ್ಲ, ಎಡೂರಪ್ಪನ ಅಕ್ರಮ ಸಂತಾನದಂತೆ ಮಂಡ್ಯದಲ್ಲಿ ಮೆರೆಯುತ್ತಿರುವ ಶಿವರಾಮೇಗೌಡ ನಾಗಮಂಗಲದ ಎಲ್ಲ ಅಧಿಕಾರಿಗಳನ್ನು ತಾನೇ ವರ್ಗಾ ಮಾಡಿಸಿಕೊಂಡು ಅವರ ಮಾಮೂಲಿ ಚಿಲ್ಲರೆ ಕಾಸೆಲ್ಲಾ ತನಗೇ ಸಲ್ಲುವಂತೆ ಮಾಡಿಕೊಂಡಿದ್ದಾನಂತಲ್ಲಾ. ಇದರಿಂದ ಸುರೇಶ್‌ಗೌಡನಿಗೆ ಇತ್ತ ಅಧಿಕಾರಿಗಳಿಂದ ಕಿಲುಬುಕಾಸೂ ಫಾಯ್ದೆಯಿಲ್ಲ, ಅತ್ತ ಮಾತನ್ನ ಕೇಳುತ್ತಿಲ್ಲ, ಅಭಿವೃದ್ಧಿ ಕೆಲಸಕ್ಕೆ ಕೈಹಾಕಿದರೆ ಕಾಸುಕೊಡಬೇಕು, ಆ ಕಾಸಿಗಾಗಿ ಅಗೋಚರ ಸ್ಥಾನದಲ್ಲಿದ್ದುಕೊಂಡು ಶಿವರಾಮನೂ ಕೈಚಾಚುವುದರಿಂದ ಮಂತ್ರಿಗಳು ಅನಿವಾರ್ಯವಾಗಿ ಸುರೇಶ್ ಗೌಡನನ್ನೆ ಸುಲಿಯಬೇಕಾಗಿದೆಯಂತಲ್ಲಾ, ಬೆಂಗಳೂರಿನಲ್ಲಿರುವ ಸೈಟನ್ನು ಮಾರಿಮಾರಿ ರಾಜಕಾರಣ ಮಾಡುತ್ತಿರುವ ಸುರೇಶ್ ಗೌಡ, ... ಸೈಟ್ ಮಾರಲು ಸಾಧ್ಯವೇ ಇಲ್ಲವೆಂದು, ಸರ್ಕಾರದ ವಿರುದ್ಧವೇ ಲಂಚದ ಆರೋಪ ಮಾಡಿ ತಿರುಗಿಬಿದ್ದಿರುವಾಗಲೇ, ನಾಗಮಂಗಲದ ಅವಳಿಜವಳಿಯಂತಿರುವ ಚಲುವರಾಯ ಮತ್ತು ಶಿವರಾಮ ಒಳಗೊಳಗೇ ನಗುತ್ತಿದ್ದಾರಂತಲ್ಲಾ, ಥೂತ್ತೇರಿ!!

****

ಹಟಕ್ಕೆ ಬಿದ್ದಿರುವ ಎಡೂರಪ್ಪ ಮಂಡ್ಯಕ್ಕೆ ಬೂದುಬಾಳೆ ತಿಂದವನಂತೆ ಕಾಣುವ ಅಶೋಕನನ್ನು ಉಸ್ತುವಾರಿ ಸಚಿವನನ್... ಮಾಡಿದ್ದರೂ, ಪಾರ್ಟಿ ಬೆಳೆಯದಿರುವುದನ್ನು ನೋಡಿದ ಶಿವರಾಮೇಗೌಡ, ಎಡೂರಪ್ಪನನ್ನ ಭೇಟಿಯಾಗಿ "ಸಾರ್, ಮಂಡ್ಯ ಜಿಲ್... ಬಜೆಪಿ ಪಾರ್ಟಿ ಬೆಳೀಬೇಕಾದ್ರೆ ನನ್ನ ಕೆಲುವು ಪ್ಲಾನವೆ. ಅವುನ್ನ ಪ್ರಯೋಗ ಮಾಡ್ಯ" ಎಂದರಂತಲ್ಲಾ, ಅದಕ್ಕೆ ಯಡ್ಡಿ ಹ... ಮುಖಭಾವದಲ್ಲಿ ನೋಡಲಾಗಿ, "ನೋಡಿ ಸಾರ್, ಮಂಡ್ಯ ಜಿಲ್ಲೆಗೆ ನಿಮ್ಮ ದೇವಸ್ಥಾನ, ಭಜನೆ, ಇಂತ ಕಾರ್ಯಕ್ರಮಗಳಿಂದ ಏ... ಪ್ರಯೋಜನ ಇಲ್ಲ, ಇಲ್ಲಿ ಯಾವಾಗ್ಲೂ ಬಾಡು ಬೇಯ್ತಾಯಿರಬೇಕು. ಯಂಡದ ಅಂಗಡಿಗಳು ಸದಾ ತೆರೆದಿರಬೇಕು. ಗಲಾಟೆಗಳಾಗ್ತಾಯಿರಬೆ... ಪೊಲೀಸ್‌ನೋರು ಜನಗಳನ್ನ ಅರೆಸ್ಟು ಮಾಡಿ ಚಚ್ಚಬೇಕು. ಆಗ ನಾನೋಗಿ ಬುಡಿಸಿಗಂಡು ಬಂದು ಪಾರ್ಟಿಗೆ ಸೇರಿಸಿಕೊಬೆ... ಅಂಗಾದ್ರೆ ಮಂಡ್ಯದಿಂದ ದೇವೇಗೌಡ್ರ ಪಾರ್ಟಿ ಓಡಿಸಿ ಬಜೆಪಿ ಬೆಳೆಸಬಹುದು. ಅದಕ್ಕೆ ನೀವು ನಾಗಮಂಗಲದ ಸುರೇಶ್ ಗೌಡ... ವಜಾ ಮಾಡಿ, ನನ್ನನ್ನು ನೇಮಿಸಿ" ಎಂದನಂತಲ್ಲಾ, ಆಗ ನಗು ಕಳೆದುಕೊಂಡಿರುವ ಯಡ್ಡಿ ಮುಖದಲ್ಲೂ ನಗು ಮಿಂಚ... ಬ್ರಹ್ಮಬಂದ್ರೂ ಮಂಡ್ಯದಲ್ಲಿ ಬಜೆಪಿ ಬೆಳೆಯಲ್ಲಾ" ಎಂದು ನಕ್ಕರಂತಲ್ಲಾ, ಥೂ! ಥೂ! ಥೂತ್ತೇರಿ!!!



ಡೀಸಿ ಹುದ್ದೆಗೆ 5 ಕೋಟಿ, ತಹಶೀಲ್ದಾರ್ ಸ್ಥಾನಕ್ಕೆ 1 ಕೋಟಿ

ಕರುಣಾಕರ ರೆಡ್ಡಿಯ ಟ್ರಾನ್ಸ್‌ಫರ್ ದಂಧೆ

ಸರ್ಕಾರದ ಬುಡವೇ ಅಲ್ಲಾಡುತ್ತಿದೆ. ಯಾವ ಗಳಿಗೆ ...ಲ್ಲಿ ಏನಾಗುತ್ತೋ? ಇಂಥಾ ಅತಂತ್ರದ ಮಧ್ಯೆಯೂ ...ರ್ಗಾವರ್ಗಿ ದಂಧೆಯ ಮೂಲಕ ಬಂದಷ್ಟು ಗುಂಜಿ ...ಳ್ಳಲು ಹವಣಿಸುವ ಕಂದಾಯ ಮಂತ್ರಿ ಕರುಣಾಕರ ... ಎಂಬ ಗಣಿ ಖದೀಮನ ದುರಾಶೆಗೆ ಏನೆನ್ನಬೇಕು? ಸಬ್ ರಿಜಿಸ್ಟ್ರಾರ್‌ಗಳ ವರ್ಗಾವರ್ಗಿಯಲ್ಲಿ ದುಡ್ಡು ...ಹಶೀಲ್ದಾರ್‌ಗಳನ್ನು ಎತ್ತಂಗಡಿ ಮಾಡಿ ಲಂಚ, ...ಲ್ಲಾಧಿಕಾರಿಗಳ ಟ್ರಾನ್ಸ್‌ಫರ್‌ಗಿರಿಯಲ್ಲೂ ರೊಕ್ಕ, ಸರ್ಕಾರಿ ...ಮಿ ದೋಚುವುದಕ್ಕೂ ರೇಟು, ಗ್ರೀನ್‌ಬೆಲ್ಟ್ ಮುಂಡಾ ...ಚಿದರೂ ಕಾಸು; ಹೀಗೆ ಕಂದಾಯ ಇಲಾಖೆಗೆ ಎಲ್ಲೆಲ್ಲಿ ... ಕೊರೆಯಲು ಸಾಧ್ಯವೋ ಅಲ್ಲೆಲ್ಲವೂ ಕರುಣಾಕರ ...ಬಾಚಿದ್ದೇ ಬಾಚಿದ್ದು ದೋಚಿದ್ದೇ ದೋಚಿದ್ದು. ಕರ್ನಾಟಕದ ಗಡಿಯನ್ನೇ ಲಪಟಾಯಿಸಿ ಸಾವಿರಾರು ...ಟಿಯ ಅದಿರು ದೋಚಿದ ನಂತರ ...ವರೂ ಕರುಣಾಕರ ರೆಡ್ಡಿಯ ಧನ ...ಹತಣಿಯಬೇಕಿತ್ತು. ತೀರ ಕಂದಾಯ ...ಕರರ ವರ್ಗಾವರ್ಗಿಯಲ್ಲಿ ಕಾಸು ...ಚಬಾರದೆಂಬ ಪರಿವೆಯಾದರೂ ...ಬೇಕಿತ್ತು. ಆದರೆ ಹಡಬಿಟ್ಟಿ ದುಡ್ಡು ...ಸುತ್ತದೆಯೆಂದರೆ ಯಾರಿಗೆ ತಾನೇ ... ಕೆರಳಲ್ಲ ಹೇಳಿ?



ಸುಲಿಗೆ ಸುಬ್ಬಯ್ಯ!

ಅಷ್ಟಕ್ಕೂ ಈ ಕರುಣಾಕರ ಸರ್ವ...ಗ ಪರಿತ್ಯಾಗಿಯೇನಲ್ಲಪಲ್ಲ? ಜೊತೆಗೆ ...ಟೂ ಉಳಿಬೇಕು ಗಂಟೂ ಬರ...ಕೆಂದು ತನ್ನ ಆಪ್ತ ಕಾರ್ಯದರ್ಶಿ ...ಕೆ. ಸುಬ್ಬಯ್ಯ ಎಂಬ ಕಿಲಾಡಿ ...ಎಸ್ ಅಧಿಕಾರಿಯನ್ನು ಮುಂದೆ ...ಟ್ಟು ಕಳ್ಳಆಟಕ್ಕಿಳಿದಿದ್ದಾರೆ ಕಂದಾಯ ಮಂತ್ರಿ. ಒಂದಾನೊಂದು ಕಾಲಕ್ಕೆ ಸಿಂಧ್ಯ ...ಪಿಎಸ್ ಆಗಿದ್ದು ನಂತರ ಮಂಗ...ರಿನಲ್ಲಿ ತಹಶೀಲ್ದಾರ್ ಆಗಿದ್ದ ಡಿ.ಕೆ. ಸುಬ್ಬಯ್ಯ ಸಕಲ ವಿದ್ಯಾ ಪಾರಂಗತ. ...ವ ಸಬ್ ರಿಜಿಸ್ಟ್ರಾರ್ ಬುಡಕ್ಕೆ ...ರೆ ಇಟ್ಟರೆ ಎಷ್ಟು ಗಿಟ್ಟುತ್ತದೆ, ಯಾವ ...ಗಕ್ಕೆ ಯಾವ ತಹಶೀಲ್ದಾರ್‌ನನ್ನು ...ದರೆ ಎಷ್ಟು ಲಕ್ಷ ಹುಟ್ಟುತ್ತದೆ, ಎಲ್ಲಿಗೆ ...ರನ್ನು ಡೀಸಿ ಮಾಡಿ ಎಂಥಾ ...ಲು ತೆಗೆಯಬೇಕು, ರೆವಿನ್ಯೂ ಇನ್ಸ್...ಪೆಕ್ಟರ್‌ಗಳಿಂದ ಹೇಗೆ ಸುಲಿಯಬೇಕು, ...ಲೇಜ್ ಅಕೌಂಟೆಂಟ್‌ಗಳಿಂದ ಎಷ್ಟು ...ಸಬೇಕು ಇತ್ಯಾದಿ ಪ್ರತಿ ಕರಾಮತ್ತಿ...ನಲ್ಲೂ ಸುಬ್ಬಯ್ಯ ನಿಸ್ಸೀಮ.



ಇಡೀ ಕಂದಾಯ ಇಲಾಖೆಯ ...ಗೆ ಮಂತ್ರಿ ಕರುಣಾಕರ ರೆಡ್ಡಿ ...ಮಾನಂತೆ 'ಪೋ' ಕೊಡುತ್ತಾರೆ. ಆಪ್ತ ...ರ್ಯದರ್ಶಿ ಸುಬ್ಬಯ್ಯನ ಹಾವಳಿ ...ನೇನೂ ಗೊತ್ತೇ ಇಲ್ಲ ಎಂಬಂತೆ ...ಜು ಕೊಡುತ್ತಾರೆ. ಆದರೆ ಅಂತ...ಗದಲ್ಲಿ ಸುಬ್ಬಯ್ಯ ಹೇಳಿದ್ದೇ ಮಂತ್ರಿ...ಯವರಿಗೆ ವೇದವಾಕ್ಯ. ಆತ ಹೇಳಿದ ...ಗೆಲ್ಲ ಕಣ್ಣುಮುಚ್ಚಿ ಸಹಿ ಹಾಕುತ್ತಾರೆ. ...ಂಥಾ ಪ್ರಭಾವಿಯಾದರೂ ಆಗದ ... ಸುಬ್ಬಯ್ಯನಿಂದ ಆಗುತ್ತದೆ ಎಂದರೆ ...ರ್ಥ?





...ಕಂದಾಯ ಇಲಾಖೆಯ ಸಕಲ ...ಹುತಗಳಿಗೂ ಕರುಣಾಕರ ರೆಡ್ಡಿ ಛೂ ಬಿಟ್ಟಿರುವುದು ... ಕಾರ್ಯದರ್ಶಿ ಸುಬ್ಬಯ್ಯನನ್ನು ಮತ್ತು ಆತನ ದಕಾ...ಯಿತು ಸಿಂಹಪಾಲು ಸಂದಾಯವಾಗುವುದು ಸ್ವತಃ ...ಣಾಕರ ರೆಡ್ಡಿಗೇ.

50 ಲಕ್ಷಕ್ಕೆ ಸಬ್ ರಿಜಿಸ್ಟ್ರಾರ್

...ಇಲ್ಲದಿದ್ದರೆ ಕಂದಾಯ ಮಂತ್ರಿಗಳ ಕಚೇರಿಯೇ ...ನ್ಸ್‌ಫರ್ ದಂಧೆಯ ಹುತ್ತವಾಗುತ್ತಿರಲಿಲ್ಲ. ಕಂದಾಯ ...ಲಯದ ಪಿಎಗಳಾದ ಪರಮೇಶ್, ಶರತ್ ಮತ್ತು ...ಸುಬ್ಬಯ್ಯನ ಏಜೆಂಟ್ ಶರವಣ ಎಂಬುವವರೇ ...ಇಡೀ ಕಂದಾಯ ಇಲಾಖೆಯ ಟ್ರಾನ್ಸ್‌ಫರ್ ಬ್ರೋಕರು... ಬಿಲಿದ್ದಕ್ಕೆ ಸಬ್ ರಿಜಿಸ್ಟ್ರಾರ್‌ಗಳಿಂದ ರೊಕ್ಕ ಪೀಕುವು...ದೇ ಮರಿಗೌಡ ಎಂಬ ನಿವೃತ್ತ ಸಬ್ ರಿಜಿಸ್ಟ್ರಾರ್ ...ನನ್ನು ಸುಬ್ಬಯ್ಯ ಛೂ ಬಿಟ್ಟಿದ್ದಾನೆ. ಬೆಂಗಳೂರಿನ ...ಪ್ರತೀ ಸಬ್ ರಿಜಿಸ್ಟ್ರಾರ್ ಕಚೇರಿಗೆ ಉಪನೋಂದಣಾಧಿ...ಕಾರಿಯೊಬ್ಬ ಬರಬೇಕೆಂದರೆ ಕನಿಷ್ಠ 30 ಲಕ್ಷ ಕಕ್ಕಲೇಬೇಕು. ..., ಅಗ್ರಹಾರ, ನಾಗರಬಾವಿ, ಹೆಸರಘಟ್ಟದಂಥ ಸಮೃದ್ಧ ಸಬ್ ರಿಜಿಸ್ಟ್ರಾರ್ ಕಚೇರಿಗಳಾದರೆ 50 ರಿಂದ 60 ಲಕ್ಷ. ಬೆಂಗಳೂರು ಸೆರಗಿನ ತಾಲ್ಲೂಕುಗಳಿಗೆ ತಹಶೀಲ್ದಾರ್‌ಗಳಾಗಿ ಬರಲು 25 ರಿಂದ 50 ಲಕ್ಷ ಕಂಪಲ್ಸರಿ. ಅದೇ ರೆವಿನ್ಯೂ ಇನ್ಸ್‌ಪೆಕ್ಟರ್‌ಗಳಾದರೆ ಐದರಿಂದ ಹತ್ತು ಲಕ್ಷ ಬಿಚ್ಚಲೇಬೇಕು!

ಇನ್ನು ಸರ್ವೆಯರ್‌ಗಳು, ವಿಲೇಜ್ ಅಕೌಂಟೆಂಟುಗಳು ಡೆಪ್ಯೂಟಿ ತಹಶೀಲ್ದಾರ್‌ಗಳು, ಶಿರಸ್ತೇದಾರರು; ಇತ್ಯಾದಿ ಕಂದಾಯ ಇಲಾಖೆಯ ಪ್ರತಿ ಹುದ್ದೆಗೂ ಒಂದಲ್ಲಾ ಒಂದು ರೇಟು ಫಿಕ್ಸು ಮಾಡಿದ್ದಾನೆ ಕಿಲಾಡಿ ಸುಬ್ಬಯ್ಯ. ಕನಿಷ್ಠ ಎರಡು ಲಕ್ಷ ಬಿಚ್ಚದೇ ಯಾವ ವಿಲೇಜ್ ಅಕೌಂಟೆಂಟೂ ತನ್ನ ಸ್ಥಾನ ಉಳಿಸಿಕೊಳ್ಳಲಾಗದಂಥ ದುರ್ಗತಿ ಕಂದಾಯ ಇಲಾಖೆಗೊದಗಿದೆ. ಗುಮಾಸ್ತರು, ಶಿರಸ್ತೇದಾರರು, ತಹಶೀಲ್ದಾರ್, ಸಬ್ ರಿಜಿಸ್ಟ್ರಾರ್‌ಗಳೆಲ್ಲ ಲಕ್ಷಲಕ್ಷ ಕೊಟ್ಟು ಎತ್ತಂಗಡಿಯಾಗದ ಹಾಗೆ ಕಪ್ಪ ಸಲ್ಲಿಸಬೇಕೆಂದರೆ, ಆ ದುಡ್ಡಿನ ಪುನರ್‌ಗಳಿಕೆಗಾಗಿ ಲಂಚಕ್ಕೆ ಕೈಚಾಚದೇ, ಕಚೇರಿಗೆ ಬಂದವರನ್ನು ಸುಲಿಯದೇ ಬೇರೆ ಯಾವ ದಾರಿಯಿದೆ?

ಯಲಹಂಕದ ಮಹೇಶ್ ಬಾಬು

ಒಂದೇ ವರ್ಷಕ್ಕೆ ಮೂರ‍್ನಾಲ್ಕು ಬಾರಿ ಸಬ್ ರಿಜಿಸ್ಟ್ರಾರ್‌ಗಳ ಎತ್ತಂಗಡಿ, ಮೂರೋ ಆರೋ ತಿಂಗಳಿಗೊಮ್ಮೆ ತಹಶೀಲ್ದಾರ್‌ಗಳ ವರ್ಗಾವರ್ಗಿ, 648 ಮಂದಿ ಶಿರಸ್ತೇದಾರ್‌ಗಳನ್ನು ರಾತ್ರೋರಾತ್ರಿ ವರ್ಗಾವಣೆ ಮಾಡಿ ಪಟ್ಟಿ ಪ್ರಕಟಿಸಿದ ನಂತರವೂ ಮತ್ತೆಮತ್ತೆ ಪಾರ್ಟ್‌ಟೈಂ ಎತ್ತಂಗಡಿ, ವರ್ಗಾವಣೆ ಪಟ್ಟಿಯಲ್ಲಿ ಒಂದೇ ಜಾಗಕ್ಕೆ ಇಬ್ಬಿಬ್ಬರು, ಸತ್ತವರೂ ವರ್ಗಾವರ್ಗಿಯ ಪಟ್ಟಿಯಲ್ಲಿ ಪ್ರತ್ಯಕ್ಷರಾಗಿದ್ದು; ಇತ್ಯಾದಿ ಕಂದಾಯ ಇಲಾಖೆಯಲ್ಲಿ ಕಳೆದೆರಡು ವರ್ಷಗಳಿಂದ ನಡೆದ 'ಎತ್ತಂಗಡಿ ಯಜ್ಞದ ಒಂದೊಂದು ಕತೆಯೂ ಮಂತ್ರಿ ಕರುಣಾಕರ ರೆಡ್ಡಿಯ ದುರಾಶೆ ಮತ್ತು ವಸೂಲಿ ಬುದ್ಧಿಗೆ ಹಿಡಿದ ಕನ್ನಡಿಯಂತಿವೆ.

ಯಲಹಂಕಕ್ಕೆ ಈ ಹಿಂದೆ ತಹಶೀಲ್ದಾರ್ ಆಗಿದ್ದ ಮಹೇಶ್ ಬಾಬು ಈ ಹಿಂದೆ ಶಿಕಾರಿಪುರದಲ್ಲಿದ್ದ. ಕೆಐಎಡಿಬಿ ಕರ್ಮಕಾಂಡದಲ್ಲಿ ಈತ ಕೂಡ ಮಿಂದು ಬಂದವನೆ. ಇಂಥವನನ್ನು ಯಡ್ಡಿ ಮಗ ವಿಜಯೇಂದ್ರನೇ 30 ಲಕ್ಷ ಪಡೆದು ಫಲವತ್ತಾದ ಯಲಹಂಕಕ್ಕೆ ಹಾಕಿಸಿಕೊಟ್ಟಿದ್ದ. ಯಲಹಂಕ ತಹಶೀಲ್ದಾರ್‌ಗಿರಿಯೆಂದರೆ ಹೇಳಿಕೇಳಿ ರಿಯಲ್ ಎಸ್ಟೇಟ್ ಹುತ್ತದಲ್ಲಿ ಹೆಣಗಾಡಿದಂತೆ. ಇಂಥ ಫಲವತ್ತಾದ ಹುದ್ದೆಗೆಂದು ಕೊಟ್ಟ ಕಾಸು ಮುಖ್ಯಮಂತ್ರಿ ಮಗನಿಗಾಯಿತೇ ಹೊರತು ರೆಡ್ಡಿ ಸಾಹೇಬರ ಲೆಕ್ಕಕ್ಕಲ್ಲವಲ್ಲ. 'ಮತ್ತೆ 50 ಲಕ್ಷ ಮಡಗಿದರಷ್ಟೇ ನೀನು ಯಲಹಂಕದಲ್ಲಿ ಇರ್ತೀಯ' ಎಂದು ಸುಬ್ಬಯ್ಯ ಕ್ಯಾತೆ ತೆಗೆದ.

ಬಂದಿನ್ನೂ ಆರು ತಿಂಗಳಾಗಿಲ್ಲ. ಆಗಲೇ ಮತ್ತೆ 50 ಲಕ್ಷ ಕೊಡು ಎಂದರೆ ಎಲ್ಲಿಂದ ತರುವುದು? ಮಹೇಶ್ ಬಾಬು ಏನೆಲ್ಲಾ ಶಿಫಾರಸ್ಸು ಟ್ರಿಕ್ಸ್ ಬಳಸಿದನಾದರೂ ಕರುಣಾಕರ ರೆಡ್ಡಿಯ ಮನಸ್ಸು ಕರಗಲಿಲ್ಲ. ಆರೇ ತಿಂಗಳಲ್ಲಿ ಮಹೇಶ್ ಬಾಬುವನ್ನು ಯಲಹಂಕ ತಹಶೀಲ್ದಾರ್‌ಗಿರಿಯಿಂದ ಹೊರದಬ್ಬಲಾಯ್ತು.

ದಕಾಯಿತ ಅಯ್ಯಪ್ಪ

ಇದೇ ರೀತಿ ಬೆಂಗಳೂರು ನಗರ ಜಿಲ್ಲೆಗೂ ಕರುಣಾಕರ ರೆಡ್ಡಿ ಐದು ಕೋಟಿಯ ಬೆಲೆ ಕಟ್ಟಿದ್ದ. ಆ ಹೊತ್ತಿಗೆ ಬೆಂಗಳೂರು ನಗರಕ್ಕೆ ಡೀಸಿಯಾಗಿದ್ದ ನಾಯಕ್ ಅಂಥಾ ಕಿಲಾಡಿಯಲ್ಲ. ಕೊನೆಗೆ ಸುಬ್ಬಯ್ಯ ತನ್ನ ತಂಗಿ ಗಂಡ ಎಂ.ಕೆ. ಅಯ್ಯಪ್ಪನನ್ನೇ ಡೀಸಿ ಗಾದಿಯಲ್ಲಿ ಪ್ರತಿಷ್ಠಾಪಿಸಿದ್ದ. ಈ ಎಂ.ಕೆ. ಅಯ್ಯಪ್ಪ ಪ್ರಳಯಾಂತಕ. ಸತತ ಒಂಭತ್ತು ವರ್ಷಗಳ ಕಾಲ ಸಾರಿಗೆ ಇಲಾಖೆಗೆ ಜಂಟಿ ಕಮಿಷನರ್ ಆಗಿ ಪರ್ಮಿಟ್ಟು, ಆರ್‌ಟಿಓಗಳ ವರ್ಗಾವರ್ಗಿ, ಸಾರಿಗೆ ಸಂಸ್ಥೆಗೆ ದೋಖಾ; ಇತ್ಯಾದಿಗಳಲ್ಲೆ ಕೈಬಾಯಿ ಕಚ್ಚಿ ಮಾಡಿಕೊಂಡಿದ್ದ ಅಯ್ಯಪ್ಪ, ಮಧ್ಯೆ ಒಂದು ವರ್ಷ ಮಾತ್ರ ಮಂಡ್ಯಕ್ಕೆ ಡೀಸಿಯಾಗಿದ್ದ. ಅದು ಬಿಟ್ಟರೆ ಆಯಕಟ್ಟಿನ ಜಾಗವನ್ನೇ ಹುಡುಹುಡುಕಿ ವಕ್ಕರಿಸಿದ್ದ.

ಬೆಂಗಳೂರು ನಗರ ಡೀಸಿ ಗಾದಿಯೆಂದರೆ, ಅದು ನಲವತ್ತೆರಡು ವಿವಿಧ ಇಲಾಖೆಗಳ ಮೇಲೆ ಹಿಡಿತ ಸಾಧಿಸಿದಂತೆಯೇ. ಯಾವುದೇ ಸರ್ಕಾರಿ ಭೂಮಿಗೆ ಬೋಗಸ್ ದಾಖಲೆ ಮಾಡಿಕೊಡಬೇಕೆಂದರೆ ಅದಕ್ಕೆ ಜಮೀನಿನ ಬೆಲೆಯ ಅರ್ಧಕರ್ಧ ಪಾಲು ಕೇಳುತ್ತಾರೆ. 'ರಿಯಲ್ ಎಸ್ಟೇಟ್' ಖದೀಮರ ಜೊತೆ ಸುಮ್ಮನೇ ಕುಶಲೋಪರಿಗಿಳಿದರೂ ಲಕ್ಷಲಕ್ಷ ಉದುರುತ್ತದೆ. ಇಂಥಾ ಸೂಕ್ಷ್ಮ ಹುದ್ದೆಗೆ ಅಯ್ಯಪ್ಪನಂಥ ತಿಂಡಿಪೋತರನ್ನು ಐದು ಕೋಟಿಗೆ ತಂದ ಕರುಣಾಕರ ರೆಡ್ಡಿ ಬೆಂಗಳೂರು ಸುತ್ತಮುತ್ತಲ ಯಾವ ಸರ್ಕಾರಿ ಜಮೀನನ್ನು ತಾನೇ ರಕ್ಷಿಸಲು ಸಾಧ್ಯ?

ವರ್ಗಾವರ್ಗಿ ದಂಧೆಗೆ ಪೂರಕವೆಂಬಂತೆಯೇ ನಡೆದದ್ದು ಸಬ್ ರಿಜಿಸ್ಟ್ರಾರ್‌ಗಳ ಎತ್ತಂಗಡಿ. ಒಂದೇ ವರ್ಷದಲ್ಲಿ ಮೂರು ಬಾರಿ ಸಬ್ ರಿಜಿಸ್ಟ್ರಾರ್‌ಗಳನ್ನು ಫುಟ್‌ಬಾಲ್ ಚೆಂಡಿನಂತೆ ಎತ್ತಿ ಹಾಕುವುದು ಮಾಡಿದ್ದರ ಹಿಂದಿದ್ದವನು ನಿವೃತ್ತ ಸಬ್ ರಿಜಿಸ್ಟ್ರಾರ್ ಮರಿಗೌಡ. ಈತ ಸುಬ್ಬಯ್ಯನ ಟ್ರಾನ್ಸ್‌ಫರ್ ಯಜ್ಞಕ್ಕೆ ಸಬ್ ರಿಜಿಸ್ಟ್ರಾರ್‌ಗಳ ವಿಭಾಗದ ಪ್ರಮುಖ ಏಜೆಂಟ್!

ಏಜೆಂಟ್ ಮರಿಗೌಡ

ಬೆಂಗಳೂರು ಸುತ್ತಮುತ್ತಲ ಯಾವ ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ ಎಷ್ಟೆಷ್ಟು ಆದಾಯವಿದೆ, ಅಲ್ಲಿಗೆ ಯಾರನ್ನು ತಂದರೆ ಎಷ್ಟು ರೊಕ್ಕ ಹುಟ್ಟುತ್ತದೆ; ಇತ್ಯಾದಿ ವಸೂಲಿಯ ಪ್ರತಿಯೊಂದನ್ನೂ ರಕ್ತಗತ ಮಾಡಿಕೊಂಡೇ ಅಖಾಡಕ್ಕಿಳಿದ ಮರಿಗೌಡ ಆ ಹೊತ್ತಿಗಾಗಲೇ ವಿವಿಧ ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ ಬೇರು ಬಿಡಲಾರಂಭಿಸಿದ ಸಬ್ ರಿಜಿಸ್ಟ್ರಾರ್‌ಗಳನ್ನೇ ಅಲ್ಲಾಡಿಸಿಬಿಟ್ಟಿದ್ದ. ಅಲ್ಲೇ ಉಳಿಯಬೇಕೆಂದರೆ ಪ್ರತಿ ಸಬ್ ರಿಜಿಸ್ಟ್ರಾರ್ 30 ರಿಂದ 50 ಲಕ್ಷ ಕಕ್ಕಬೇಕು. ಹೊಸಬರು ಬರಬೇಕೆಂದರೆ ಅಷ್ಟೇ ಮೊತ್ತವನ್ನು ಕೊಟ್ಟು ಬರಬೇಕು.

ಈ ಪೈಕಿ ಬೆಂಗಳೂರು ಉತ್ತರ ತಾಲ್ಲೂಕಿನ ಹೆಸರಘಟ್ಟದ ಕಚೇರಿಗೆ ಲಕ್ಷಗಟ್ಟಲೆ ಕೊಟ್ಟೇ ಗಿರೀಶ್ ಸಬ್ ರಿಜಿಸ್ಟ್ರಾರ್ ಆಗಿದ್ದ. ಬಂದಿನ್ನೂ ಆರು ತಿಂಗಳಾಗಿರಲಿಲ್ಲ. ಆಗಲೇ ರವಿಕುಮಾರ್ ಎಂಬಾತನ ಜೊತೆ ಮರಿಗೌಡ ಡೀಲು ಕುದುರಿಸಿ ಪಿಎಸ್ ಸುಬ್ಬಯ್ಯನಿಗೆ 60 ಲಕ್ಷ ಕೊಡಿಸಿದ. ಶಿಡ್ಲಘಟ್ಟಕ್ಕೆ ಆಗಿದ್ದ ವರ್ಗಾವಣೆಯನ್ನೂ ರದ್ದು ಮಾಡಿ ರವಿಕುಮಾರ್‌ನನ್ನು ಹೆಸರಘಟ್ಟದ ಸಬ್ ರಿಜಿಸ್ಟ್ರಾರ್ ಕಚೇರಿಗೆ ಹಾಕಲಾಯ್ತು.

ವಿಚಿತ್ರವೆಂದರೆ 60 ಲಕ್ಷ ಕೊಟ್ಟು ಹೆಸರಘಟ್ಟಕ್ಕೆ ಬಂದ ರವಿಕುಮಾರ್ ಈಗ ತಲೆ ಚಚ್ಚಿಕೊಳ್ಳುತ್ತಿದ್ದಾನೆ. ಏಕೆಂದರೆ ಜಮೀನಿನ ರಿಜಿಸ್ಟ್ರೇಷನ್ನನ್ನೇ ಸರ್ಕಾರ ನಿಷೇಧಿಸಿದೆ. ಲಂಚ ಹುಟ್ಟುತ್ತಿಲ್ಲ, ಸಾಲ ತಂದು ಸುಬ್ಬಯ್ಯನ ಕೈಗಿಟ್ಟ ಕಾಸಿಗೆ ಬಡ್ಡಿ ಕಟ್ಟಲಾಗುತ್ತಿಲ್ಲ. ಇದೇ ದುರ್ಗತಿ ದಾಸನಪುರಕ್ಕೆ ಸಬ್ ರಿಜಿಸ್ಟ್ರಾರ್ ಆಗಿ ಬಂದ ಶ್ರೀನಿವಾಸ್ ಎಂಬಾತನದ್ದು. 50 ಲಕ್ಷ ಕೊಟ್ಟು ಹಾಕಿಸಿಕೊಂಡ ಹುದ್ದೆಯಲ್ಲಿ ನೋಂದಣಿಯೇ ಸ್ಥಗಿತಗೊಂಡಿದ್ದರಿಂದಾಗಿ ನಯಾಪೈಸೆ ಗಿಟ್ಟುತ್ತಿಲ್ಲ.

ಈಶ್ವರಪ್ಪನ ಅಳಿಯ


ಬೆಂಗಳೂರು ಉತ್ತರ ತಾಲ್ಲೂಕಿನ ಮಾದನಾಯಕನಹಳ್ಳಿ ಉಪ ನೋಂದಣಾಧಿಕಾರಿ ಕಚೇರಿಗೆ ಸಬ್ ರಿಜಿಸ್ಟ್ರಾರ್ ಆಗಿ ಬಂದ ಜಗದೀಶ್ ಹಿಂದೆ ಕೆಂಗೇರಿಯಲ್ಲಿದ್ದ ಅಲ್ಲಿದ್ದದ್ದು ಬರೇ ಆರು ತಿಂಗಳು. ಮರಿಗೌಡನನ್ನು ಹಿಡಿದು ಮಂತ್ರಿ ಪಿಎಸ್ ಸುಬ್ಬಯ್ಯನಿಗೆ 50 ಲಕ್ಷ ಕೊಟ್ಟ. ಮಾದನಾಯಕನಹಳ್ಳಿಗೆ ಬಂದು ನಾಲ್ಕು ತಿಂಗಳಾಗಿದೆ. ಮೇಲ್ಕಾಸೇ ಗಿಟ್ಟುತ್ತಿಲ್ಲ. ಪೀಣ್ಯದ ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿದ್ದ ವಿಶ್ವನಾಥ್‌ರನ್ನು ರೊಕ್ಕ ಬಿಚ್ಚಲಿಲ್ಲ ಎಂಬ ಒಂದೇ ಕಾರಣಕ್ಕೆ ಎತ್ತಂಗಡಿ ಮಾಡಿ ಅಲ್ಲಿಗೆ ಶೇಷಾದ್ರಿಯನ್ನು ತಂದರು. ಅದೂ ಮೂವತ್ತು ಲಕ್ಷಕ್ಕೆ!

ಕೆಂಗೇರಿ ಸಬ್ ರಿಜಿಸ್ಟ್ರಾರ್ ಹುದ್ದೆಯನ್ನೂ ಮರಿಗೌಡ-ಸುಬ್ಬಯ್ಯ ಜೋಡಿ 30 ಲಕ್ಷಕ್ಕೆ ಮಾರಿಕೊಂಡಿದೆ. ಇಲ್ಲಿಗೆ 30 ಲಕ್ಷ ತೆತ್ತು ಬಂದ ರಮೇಶ್ ಎಂಬ ಬ್ರಾಹ್ಮಣ ಸಬ್ ರಿಜಿಸ್ಟ್ರಾರ್ ಈ ಹಿಂದೆ ಕನಕಪುರದಲ್ಲಿದ್ದ. ಅಲ್ಲಿಂದ ಆರೇ ತಿಂಗಳಿಗೆ ಕೆಂಗೇರಿಗೆ ಬಂದ. ತಮಾಷೆಯೆಂದರೆ ಬಿಜೆಪಿ ರಾಜ್ಯಾಧ್ಯಕ್ಷ ಈಶ್ವರಪ್ಪನವರ ಖಾಸಾ ಅಳಿಯ ಮೇಘರಾಜ್ ಎಂಬ ಸಬ್ ರಿಜಿಸ್ಟ್ರಾರ್‌ನನ್ನೂ ಸುಬ್ಬಯ್ಯ ಸುಲಿಯದೇ ಬಿಟ್ಟಿಲ್ಲ!

ಮೇಘರಾಜ್ ಮೊದಲು ಲಗ್ಗೆರೆಯಲ್ಲಿದ್ದ. ಐದೇ ತಿಂಗಳಿಗೆ ದೇವನಹಳ್ಳಿಗೆ ಓಡಿಸಲಾಯ್ತು. ಅಲ್ಲೂ 6 ತಿಂಗಳ ಮೇಲೆ ಮೇಘರಾಜ್ ಇರಲಾಗಲಿಲ್ಲ. ಈಗ ನಲವತ್ತು ಲಕ್ಷ ಕೊಟ್ಟು ಬೇಗೂರಿಗೆ ಬಂದಿದ್ದಾನೆ. ಬಿಜೆಪಿ ರಾಜ್ಯಾಧ್ಯಕ್ಷರ ಅಳಿಯನಾದರೂ ಕರುಣಾಕರನ ರೆಡ್ಡಿಯ ಲೋಭದ ಮುಂದೆ ಮೇಘರಾಜ್ ರೊಕ್ಕ ಬಿಚ್ಚಲೇಬೇಕು.

ಉಳಿಯುವುದಕ್ಕೂ ರೊಕ್ಕ.....!

ನಾಗರಬಾವಿಯ ಸಬ್‌ರಿಜಿಸ್ಟ್ರಾರ್ ಹರಿಣಿಯ ಪತಿ ಹಾಸನದಲ್ಲಿ ಅಸಿಸ್ಟೆಂಟ್ ಕಮೀಷನರ್. ಸದ್ಯ ನಾಗರಬಾವಿಗೆ ಬಂದು ವರ್ಷವಾಗಿದೆ. ಬೇರೆಲ್ಲಾ ಸಬ್ ರಿಜಿಸ್ಟ್ರಾರ್ ಕಚೇರಿಗಿಂತಲೂ ಇಲ್ಲಿ ಕೊಂಚ ಆದಾಯ ಜಾಸ್ತಿ. ಬಿಡಿಎನ ವಿಶ್ವೇಶ್ವರಯ್ಯ ಲೇಔಟ್ ಮತ್ತು ಹಳೇ ಸಿಎಂಸಿಯ ಸೈಟುಗಳ ರಿಜಿಸ್ಟ್ರೇಷನ್ನಿಗೆ ಜನ ಇಲ್ಲಿಗೆ ಬರುತ್ತಾರಾದ್ದರಿಂದ ಪ್ರತಿ



ರಿಜಿಸ್ಟ್ರೇಷನ್ನಿಗೆ ಕನಿಷ್ಠ 10 ಸಾವಿರ ರೂಪಾಯಿ ಗಿಟ್ಟಿದರೂ ದಿನವೊಂದಕ್ಕೆ ಅದೇ ಲಕ್ಷವಾಗುತ್ತದೆ. ಸದ್ಯ ಎತ್ತಂಗಡಿಯಾಗದೇ ಅಲ್ಲೇ ಉಳಿಯಬೇಕೆಂದರೆ ಹರಿಣಿ ದುಡ್ಡು ಬಿಚ್ಚಲೇಬೇಕು. ಮರಿಗೌಡನ ಮೂಲಕ ಸುಬ್ಬಯ್ಯನಿಗೆ 30 ಲಕ್ಷ ಕೊಡದೇ ಹೋಗಿದ್ದರೆ ಹರಿಣಿಯ ಜಾಗಕ್ಕೆ ಇನ್ನಾರೋ ವಕ್ಕರಿಸುತ್ತಿದ್ದರು.

ಇನ್ನು ತಹಶೀಲ್ದಾರ್‌ಗಳ ಎತ್ತಂಗಡಿ ಹಗರಣದ್ದೇ ದೊಡ್ಡ ಕತೆಯಾಗುತ್ತದೆ. ನೆಲಮಂಗಲ, ಬೆಂಗಳೂರು ಉತ್ತರ, ಕೆ.ಆರ್. ಪುರದಿಂದ ತಾಲ್ಲೂಕು ಕಚೇರಿಗಳಿಗಾಗಿ ಏಕಕಾಲಕ್ಕೆ ಇಬ್ಬಿಬ್ಬರು ತಹಶೀಲ್ದಾರ್‌ಗಳು ಬಡಿದಾಡಿಕೊಂಡ ದೃಶ್ಯವನ್ನು ವಿವಿಧ ಟೀವಿ ಚಾನಲ್ಲುಗಳು ಪದೇಪದೇ ಬಿತ್ತರಿಸುತ್ತಿವೆ. ಶಿರಸ್ತೇದಾರರದ್ದಂತೂ ನಾಯಿಪಾಡು! ಇನ್ನು ಎಫ್‌ಡಿಸಿ, ಎಸ್‌ಡಿಸಿ ಗುಮಾಸ್ತರುಗಳು ಕನಿಷ್ಠ ಲಕ್ಷದಿಂದ ಎರಡು ಲಕ್ಷದ ತನಕ ಎತ್ತಿಡಲೇಬೇಕು.

ಇಂಥ ವರ್ಗಾವರ್ಗಿ ದಂಧೆಗೆ ಅನುಕೂಲವಾಗಲಿ ಎಂದೇ ಕಂದಾಯ ಇಲಾಖೆಗೆ ಪ್ರಿನ್ಸಿಪಲ್ ಕಾರ್ಯದರ್ಶಿಯಾಗಿದ್ದ ನಿಷ್ಠುರಿ ಐಪಿಎಸ್ ಜಾವುದಾರ್‌ರನ್ನು ಹೊರದಬ್ಬಲಾಯ್ತು. ಅಲ್ಲಿಗೆ ತಂಗರಾಜ್ ಎಂಬ ಗುಮ್ಮನಗುಸುಕನನ್ನು ತಂದರು. ಮಂತ್ರಿಯೇ ಛೇಲಾಗಳ ಮೂಲಕ ಟ್ರಾನ್ಸ್‌ಫರ್ ಎತ್ತುವಳಿಗೆ ನಿಂತಿದ್ದನ್ನು ನೋಡಿ ಅಸಹ್ಯಪಟ್ಟುಕೊಂಡೇ ತಂಗರಾಜ್ ಜಾಗ ಖಾಲಿ ಮಾಡಿದರು. ಇಷ್ಟಾಗಿದ್ದೇ ಕರುಣಾಕರ ರೆಡ್ಡಿಗೆ ರೊಟ್ಟಿ ಜಾರಿ ತುಪ್ಪಕ್ಕೆ ಬಿದ್ದಂತಾಯ್ತು. ಒಂದು ವರ್ಷ ಕಾಲ ಪ್ರಿನ್ಸಿಪಲ್ ಸೆಕ್ರೆಟರಿಯೇ ಇಲ್ಲದಂತೆ ಮಾಡಿ ಕಾರ್ಯದರ್ಶಿಯಾಗಿದ್ದ ನಾರಾಯಣ ಸ್ವಾಮಿಗೇ ಇನ್‌ಚಾರ್ಜ್ ಕೊಟ್ಟು ಬೇಕುಬೇಕಾದ ಫೈಲುಗಳಿಗೆಲ್ಲ ಸಹಿ ಹಾಕಿಸಿಕೊಂಡರು.

ಬೋರಿಂಗ್ ಕ್ಲಬ್‌ನಲ್ಲಿ....

ಈ ನಾರಾಯಣಸ್ವಾಮಿ ಎಂಥಾ ದಕಾಯಿತನೆಂದರೆ ಹಿಂದೆ ಬೆಂಗಳೂರು ಡೀಸಿಯಾಗಿದ್ದಾಗ ತನ್ನ ಸಂಬಂಧಿಗಳಿಗೇ ನಾಲ್ಕೆಕರೆ ಸರ್ಕಾರಿ ಜಾಗವನ್ನು ಕಬಳಿಸಿಕೊಟ್ಟಿದ್ದ. ಇಂಥವನ ಕೈಗೆ ಕಂದಾಯ ಇಲಾಖೆಯನ್ನು ಕೊಟ್ಟರೆ ಏನೆಲ್ಲಾ ಅನಾಹುತವಾಗುತ್ತೋ ಅದೇ ಆಯಿತು. ಪ್ರತಿ ಸಂಜೆಯಾದರೆ ಬೋರಿಂಗ್ ಕ್ಲಬ್ಬಿನಲ್ಲಿ ರೂಮ್ ಹಿಡಿದು ಸುಬ್ಬಯ್ಯ, ಶರವಣ, ಪರಮೇಶ್, ಶರತ್ ಮತ್ತು ನಾರಾಯಣಸ್ವಾಮಿ ಟ್ರಾನ್ಸ್‌ಫರ್ ಖಮಾಯಿಯ ರೊಕ್ಕ ಎಣಿಸಿಕೊಳ್ಳುತ್ತಿದ್ದರು.


ಒಂದಾನೊಂದು ಕಾಲಕ್ಕೆ ಒಪ್ಪೊತ್ತು ಅನ್ನಕ್ಕೂ ಇಟ್ಟಾಡುತ್ತಿದ್ದ ಪರಮೇಶ್ ಇವತ್ತು ಕೋಟ್ಯಾಧಿಪತಿ. ಏಜೆಂಟ್ ಶರವಣ ಒಬ್ಬನೇ 15 ಕೋಟಿಗೆ ತೂಗುತ್ತಾನೆ. ಇನ್ನು ಸುಬ್ಬಯ್ಯ, ನಾರಾಯಣಸ್ವಾಮಿ, ಡೀಸಿ ಅಯ್ಯಪ್ಪ ಇತ್ಯಾದಿಗಳೆಲ್ಲ ಎಷ್ಟು ದೋಚಿರಬೇಡ?

ಹಿಂದೆ ಹುಚ್ಚಮಾಸ್ತಿಗೌಡ, ಬಸವಲಿಂಗಪ್ಪರಂಥ ಧೀಮಂತರನ್ನು ಮಂತ್ರಿಯಾಗಿ ಕಂಡ ಕಂದಾಯ ಇಲಾಖೆಗೆ ಎಂಥಾ ಗತಿ ಬಂತು? ಗಣಿಲೂಟಿಯಲ್ಲೇ ಸಾವಿರಾರು ಕೋಟಿ ದೋಚಿಯೂ ಪುಡಿ ಟ್ರಾನ್ಸ್‌ಫರ್ ಖಮಾಯಿಗೆ ಕೈಚಾಚುವ ಕರುಣಾಕರ ರೆಡ್ಡಿ ಇಷ್ಟೊಂದು ಲಜ್ಜೆಗೆಟ್ಟು ವಸೂಲಿಗೆ ನಿಲ್ಲುತ್ತಾನೆಂದರೆ ಇನ್ನು ಕಂದಾಯ ಇಲಾಖೆ ಕುಲಗೆಡದೇ ಇರುತ್ತಾ? ಮಂತ್ರಿಗೆ ಕೊಟ್ಟ ಲಂಚಕ್ಕಾಗಿ ಕಂದಾಯ ನೌಕರರು ಜನರನ್ನು ಸುಲಿಯದೇ ಬೇರೆ ಯಾವ ದಾರಿಯಿದೆ? ಆಂಧ್ರ ಮೂಲದ, ಗಣಿಕಳ್ಳನೊಬ್ಬನ ಕೈಗೆ ಕರ್ನಾಟಕದ ಕಂದಾಯ ಇಲಾಖೆ ಸಿಕ್ಕರೆ ಇದಕ್ಕಿಂತ ಇನ್ನೇನು ತಾನೇ ನಿರೀಕ್ಷಿಸಲು ಸಾಧ್ಯ?

ಬಿಜೆಪಿ ರಾಮರಾಜ್ಯ ಅಂದರೆ ಇದೇನಾ?

● ರಾ. ಸೋಮನಾಥ್

ಪ್ರಭುತ್ವದ ಹಿಂಸೆ -ಪ್ರತಿಹಿಂಸೆಗೆ ಒಂದು ಕನ್ನಡಿ



ಜೀವಿತಮಾನವತಕ್ಕು ಹೋರಾಟಗಾರ ಕೆ. ಬಾಲಗೋಪಾಲ್ (1952-2009) ಕಳೆದ ವರ್ಷ ಅಕ್ಟೋಬರ್ 8 ರಂದು ಕರುಳಿನ ರಕ್ತಸ್ರಾವದಿಂದ ತೀರಿಕೊಂಡರು. ಆಗ ಅವರಿಗೆ ಕೇವಲ 57 ರ ಹರೆಯ. ದಣಿವರಿಯದ ಹೋರಾಟ ಅವರ ಆರೋಗ್ಯವನ್ನು ಕೆಡಿಸಿ, ಅವರ ಅಕಾಲಿಕ ಮರಣಕ್ಕೂ ಕಾರಣವಾಗಿತ್ತು. ಆಂಧ್ರದ ಕಾಕತೀಯ ವಿಶ್ವವಿದ್ಯಾಲಯದಲ್ಲಿ ಗಣಿತ ಶಾಸ್ತ್ರ ಪ್ರಾಧ್ಯಾಪಕರಾಗಿದ್ದ ಬಾಲಗೋಪಾಲ್ ಎಡಪಂಥದ ವಿಚಾರಗಳಿಂದ ಪ್ರಭಾವಿತರಾಗಿ ತನ್ನ ವೃತ್ತಿಗೆ ರಾಜೀನಾಮೆ ಕೊಟ್ಟು ಪೂರ್ಣಾವಧಿ ಮಾನವ ಹಕ್ಕು ಹೋರಾಟಗಾರರಾದರು. ನಂತರ ತಾನು ಆಯ್ದುಕೊಂಡ ಈ ಸೇವಾವೃತ್ತಿಗೆ ಕಾನೂನಿನ ಪರಿಜ್ಞಾನ ಅವಶ್ಯವೆಂದು ಮನಗಂಡು ಅವರು ಬೆಂಗಳೂರಿನಲ್ಲಿ ಕಾನೂನು ವ್ಯಾಸಂಗ ನಡೆಸಿ ವಕೀಲರಾದರು. ಆಂಧ್ರದಲ್ಲಿ ಅವರು ದೀನದಲಿತರ ಪರವಾಗಿ ಫೀಸು ತೆಗೆದುಕೊಳ್ಳದೆ ವಾದಿಸುವ ವಕೀಲರು ಎಂದೇ ಹೆಸರಾಗಿದ್ದರು. ಎನ್‌ಕೌಂಟರ್ ಪ್ರಕರಣಗಳಲ್ಲಿ ಆಂಧ್ರ ಪೊಲೀಸರ ವಿರುದ್ಧ ಬಾಲಗೋಪಾಲ್ ಅಸಂಖ್ಯ ಕೇಸುಗಳನ್ನು ದಾಖಲಿಸಿದ್ದರು. ಹಣದ ಆಸೆ, ಪ್ರತಿಷ್ಠೆಯ ಗೀಳು, ಭೋಗಲಾಲಸೆಗಳು ಅವರ ಸ್ವಭಾವದಲ್ಲೇ ಇರಲಿಲ್ಲ.


ಪ್ರಭುತ್ವದ ಹಿಂಸೆಯ ಬಗ್ಗೆ ಸದಾ ಯೋಚಿಸುತ್ತಿದ್ದ ಬಾಲಗೋಪಾಲ್‌ಗೆ ಪ್ರಭುತ್ವದ ಭಯ ಕಿಂಚಿತ್ತೂ ಇರಲಿಲ್ಲ. ಆಂಧ್ರ ಪೊಲೀಸರು ಅವರನ್ನು ಹಲವು ಬಾರಿ ಬಂಧನದಲ್ಲಿರಿಸಿದ್ದರು. ಬೆದರಿಕೆ, ಹಲ್ಲೆ, ಸುಳ್ಳು ಕೇಸುಗಳಲ್ಲಿ ಫಿಟ್ ಮಾಡುವುದು ಮುಂತಾದ ಮಾಮೂಲಿ ಪೊಲೀಸ್ ಟ್ರೀಟ್‌ಮೆಂಟ್ ಅವರಿಗೆ ಅಭ್ಯಾಸವಾಗಿಬಿಟ್ಟಿತ್ತು. ಒಮ್ಮೆ ಪೊಲೀಸರು ಮುಫ್ತಿಯಲ್ಲಿ ಅವರನ್ನು ಒತ್ತಾಸೆಯಲ್ಲಿ ಕೂಡ ಇರಿಸಿಕೊಂಡಿದ್ದರು. ಮಾನವ ಹಕ್ಕು ಮತ್ತು ಅದಕ್ಕೆ ಸಂಬಂಧಿಸಿದ ವಿಷಯಗಳ ಕುರಿತು ಬಾಲಗೋಪಾಲ್ ಎಣಿಕೆಗೆ ಸಿಗದಷ್ಟು ಲೇಖನಗಳನ್ನು ತೆಲುಗು ಮತ್ತು ಇಂಗ್ಲಿಷ್ ಎರಡೂ ಭಾಷೆಗಳಲ್ಲಿ ಬರೆದಿದ್ದಾರೆ; ಪುಸ್ತಕಗಳನ್ನು ಪ್ರಕಟಿಸಿದ್ದಾರೆ; ಅವರ ಭಾಷಣ, ಸಂದರ್ಶನಗಳ ಸಿಡಿಗಳೂ ಹೊರಬಂದಿವೆ. ಇದೆಲ್ಲದರ ಜೊತೆ, ಎನ್‌ಕೌಂಟರ್ ಕೊಲೆಗಳು, ಆಂಧ್ರದ ಗ್ರಾಮೀಣ ಪ್ರದೇಶದಲ್ಲಿ ಬಡರೈತರು ಮತ್ತು ದಲಿತರ ಮೇಲೆ ನಡೆಯುವ ಹಿಂಸೆ, ಗುಜರಾತ್ ನರಮೇಧ, ಒರಿಸ್ಸಾದ ಕಂದಮಾಲ್ ಮತ್ತು ಕರ್ನಾಟಕದ ಹಲವೆಡೆ ಕ್ರೈಸ್ತರ ಮೇಲೆ ನಡೆದದಾಳಿಗಳ ಕುರಿತು ಪ್ರಕಟವಾಗಿರುವ ಸತ್ಯಶೋಧನ ವರದಿಗಳಲ್ಲೂ ಬಾಲಗೋಪಾಲ್ ಅವರ ದೊಡ್ಡ ಪಾತ್ರವಿದೆ.

ಕಾಶ್ಮೀರಕ್ಕೆ ಹಲವು ಬಾರಿ ಭೇಟಿ ಕೊಟ್ಟು ತೆಲುಗಿನಲ್ಲಿ ಅವರು ಬರೆದ ಪುಸ್ತಕ "ಕಲ್ಲಲೋಯ" ಕನ್ನಡಕ್ಕೂ ಅನುವಾದಗೊಂಡು ಪ್ರಕಟವಾಗಿದೆ. (ಪ್ರಕ್ಷುಬ್ಧ ಕಣಿವೆ-ಕಾಶ್ಮೀರದ ಕಥೆ ವ್ಯಥೆ-ಅನು: ಡಾ. ವಿ.ಎಸ್. ಶ್ರೀಧರ, ನಗರಗೆರೆ ರಮೇಶ್-ಪ್ರಗತಿ ಗ್ರಾಫಿಕ್, ಬೆಂಗಳೂರು 2009).

ಬಾಲಗೋಪಾಲ್ ಅವರ ಚಿಂತನೆಗೆ ಪ್ರಾತಿನಿಧಿಕವೆನ್ನಬಹುದಾದ 18 ಇಂಗ್ಲಿಷ್ ಲೇಖನಗಳು ಮತ್ತು ಒಂದು ಸಂದರ್ಶನವನ್ನು ವಿ.ಎಸ್. ಶ್ರೀಧರ ಹಾಗೂ ಶಿವಸುಂದರ್ ಸಂಪಾದಿಸಿ ಇದೀಗ ಸಾದರಪಡಿಸಿದ್ದಾರೆ. ಈ ಸಂಕಲನದ ಬರಹಗಳನ್ನು ಕನ್ನಡಕ್ಕೆ ಅನುವಾದಿಸಿದವರು, ವಿ.ಎಸ್. ಶ್ರೀಧರ, ಜಿ. ರಾಜಶೇಖರ, ಎ.ಪಿ. ಅಶ್ವಿನ್, ಉಮಾಪತಿ. ಡಿ, ಸುರೇಶ್ ಭಟ್, ದು. ಸರಸ್ವತಿ, ಡಾ. ವಸು, ಕುಮಾರ್ ಬುರಡಿಕಟ್ಟಿ, ಪ್ರೊ. ನಗರಗೆರೆ ರಮೇಶ್, ಡಾ. ವಾಸು, ಪ್ರೊ. ಫಣಿರಾಜ್, ಸುಮ ಎಂಬಾರ್, ಕೆ.ಪಿ. ಸುರೇಶ್, ಬಾಗೇಶ್ರೀ ಮತ್ತು ನಾ. ದಿವಾಕರ. ಮಾನವ ಹಕ್ಕು ಹೋರಾಟದ ಕಾರ್ಯಕರ್ತನಾಗಿ ಬಾಲಗೋಪಾಲ್, ತನ್ನ ಹೋರಾಟದ ಮಾರ್ಗ ಮತ್ತು ಗುರಿಗಳನ್ನು ನಿಷ್ಠುರ ಆತ್ಮಪರೀಕ್ಷೆಗೆ ಒಡ್ಡಿಕೊಂಡವರು. ವಿಮರ್ಶೆ ಮತ್ತು ಸ್ವವಿಮರ್ಶೆ ಅವರ ಹೋರಾಟದ ಅವಿಭಾಜ್ಯ ಅಂಗಗಳಾಗಿದ್ದವು. ಹಾಗಾಗಿ ಅವರ ಈ ಪ್ರಬಂಧ ಸಂಕಲನ, ವಿಮೋಚನೆಯ ಹೋರಾಟದ ಮಾರ್ಗದರ್ಶಿಯೂ, ಆ ಹೋರಾಟಕ್ಕೆ ಹಿಡಿದ ಕೈಗನ್ನಡಿಯೂ ಆಗಿದೆ.

ಕಳೆದ ಶತಮಾನದ 80 ರ ದಶಕದಿಂದ ಈಚೆಗೆ, ಆಳುವ ವ್ಯವಸ್ಥೆಯ ಹಿಂಸೆ ಮತ್ತು ಅದರ ವಿರುದ್ಧ ಅಲ್ಲಿಇಲ್ಲಿ ನಡೆದಿರುವ ಹೋರಾಟಗಳ ಬಗ್ಗೆ ಬಾಲಗೋಪಾಲ್ ಸತತವಾಗಿ ಬರೆದಿದ್ದಾರೆ. ಅವರ ಕಾರ್ಯಕ್ಷೇತ್ರ ಪ್ರಧಾನವಾಗಿ ಆಂಧ್ರವಾಗಿದ್ದುದರಿಂದ, ಸಹಜವಾಗಿ ಸಂಕಲನದ ಹೆಚ್ಚಿನ ಲೇಖನಗಳು, ಆಂಧ್ರದ ಅರೆಪಾಳೆಯಗಾರಿ ವ್ಯವಸ್ಥೆ ಗ್ರಾಮೀಣ ಬಡರೈತರು ಹಾಗೂ ದಲಿತರ ಹೋರಾಟ ಮತ್ತು ಅದಕ್ಕೆ ಸರಕಾರ ತೋರಿಸಿದ ಹಿಂಸಾತ್ಮಕ ಪ್ರತಿಕ್ರಿಯೆಗಳ ಮೇಲೆ ಕೇಂದ್ರೀಕೃತವಾಗಿವೆ. ಪಿ.ವಿ. ನರಸಿಂಹರಾವ್, ಎನ್.ಟಿ. ರಾಮರಾವ್, ಚಂದ್ರಬಾಬು ನಾಯ್ಡು ರಾಜಶೇಖರ ರೆಡ್ಡಿ-ಹೀಗೆ 1970ರಿಂದ ಈಚೆಗೆ ಆಂಧ್ರವನ್ನು ಆಳಿದ ಮುಖ್ಯಮಂತ್ರಿಗಳ ಪಕ್ಷ ಬೇರೆ ಬೇರೆಯಾಗಿದ್ದರೂ, ಬಡವರನ್ನು ಹತ್ತಿಕ್ಕುವುದರಲ್ಲಿ ಅವರ ನಡುವೆ ವ್ಯತ್ಯಾಸ ಇರಲಿಲ್ಲ; ಮತಭೇದವೂ ಇರಲಿಲ್ಲ. 80, 90ರ ದಶಕಗಳಲ್ಲಿ ಆಂಧ್ರದ ವಿವಿಧ ಸರ್ಕಾರಗಳು ಜನರ ಹೋರಾಟಗಳನ್ನು ದಮನಿಸಿದ ಪರಿ ಮುಂದೆ ದೇಶದ ಇತರ ರಾಜ್ಯ ಸರ್ಕಾರಗಳಿಗೂ ಮಾದರಿಯಾಯಿತು. ಬಾಲಗೋಪಾಲ್ ಆ ವಿದ್ಯಮಾನ ಕುರಿತು ಬರೆದ ಲೇಖನಗಳನ್ನು ಈಗ ಓದಿದರೆ ಭೂತ, ವರ್ತಮಾನ, ಭವಿಷ್ಯಗಳೆಲ್ಲ ಕಲಸಿಕೊಂಡು ಅಯೋಮಯವಾದಂತೆ ಅನ್ನಿಸುತ್ತದೆ.

ಆ ಕಾಲಘಟ್ಟದ ತನ್ನ ಲೇಖನಗಳಲ್ಲಿ ಬಾಲಗೋಪಾಲ್ ವರ್ಣಿಸುವ ಆಂಧ್ರ ಪೊಲೀಸರ ಹಿಂಸಾ ವಿಧಾನಗಳನ್ನು ನಂತರ ದೇಶದ ಇತರ ಎಡೆಗಳಲ್ಲೂ ಪೊಲೀಸರು ಅನುಸರಿಸಲಾರಂಭಿಸಿದರು. ಕೇವಲ ಸಂಶಯದ ಆಧಾರದಲ್ಲಿ ನಿಶ್ಶಸ್ತ್ರ ಪ್ರಜೆಗಳು ಮತ್ತು ಪ್ರಜಾಸತ್ತಾತ್ಮಕ ಹೋರಾಟಗಳ ಕಾರ್ಯಕರ್ತರನ್ನು 'ಎನ್‌ಕೌಂಟರ್' ಮಾಡಿ ಕೊಲ್ಲುವ ಆಂಧ್ರ ಪೊಲೀಸರ ವಿಶಿಷ್ಟ ನ್ಯಾಯ ತೀರ್ಮಾನದ ವಿಧಾನ ನಂತರದ ದಿನಗಳಲ್ಲಿ ದೇಶ ವ್ಯಾಪಿಯಾಯಿತು. ಎಷ್ಟರಮಟ್ಟಿಗೆ ಎಂದರೆ ಎನ್‌ಕೌಂಟರ್, ಲಾಕಪ್‌ಡೆತ್, ವಿರೋಪ್ಲೇನ್, ಕೇಸ್‌ನಲ್ಲಿ ಫಿಟ್ ಮಾಡುವುದು ಇತ್ಯಾದಿ ಪದಪ್ರಯೋಗಗಳು, ಭಾರತದಲ್ಲಿ ಎಲ್ಲೆಡೆ ಈಗ ಜನರ ಆಡುಮಾತಿನಲ್ಲಿ ಸೇರಿಕೊಂಡು ಬಿಟ್ಟಿವೆ. ಅವು ಸೂಚಿಸುವ ಪೊಲೀಸು ಠಾಣೆಗಳ ನರಕಸದೃಶ ಹಿಂಸೆಯ ಬಗ್ಗೆ ಬಾಲಗೋಪಾಲ್ 80 ರ ದಶಕದಲ್ಲೇ ಎಚ್ಚರಿಸಿದ್ದರು.



(ಪರ್ಯಾಯ ಭಾರತದ ಒಳದನಿ: ಬಾಲಗೋಪಾಲ್ ಅವರ ಬರಹಗಳು. ಸಂ. ಡಾ.ವಿ.ಎಸ್. ಶ್ರೀಧರ, ಶಿವಸುಂದರ್-ಲಂಕೇಶ್ ಪ್ರಕಾಶನ 2010. ಪುಟ XVI+248. ಬೆಲೆ ರೂ. 150/-)

1986ರಲ್ಲಿ ಅವರು ಆಂಧ್ರದ ಪೊಲೀಸು ಎನ್‌ಕೌಂಟರುಗಳ ಕುರಿತು ಬರೆದ ಒಂದು ಲೇಖನದಲ್ಲಿ ಹೀಗೆ ಹೇಳುತ್ತಾರೆ, "ಜನವರಿ 1985 ರಿಂದ ಎಣಿಸಿದರೆ ಎನ್‌ಕೌಂಟರ್‌ಗಳ ಎಣಿಕೆ 51 ನ್ನು ಮುಟ್ಟುತ್ತದೆ. ಹೆಚ್ಚುಹೆಚ್ಚು ಜನನಿಬಿಡ ಪಟ್ಟಣಗಳ ಹೃದಯ ಭಾಗಗಳಲ್ಲೇ ಈಗ ಕೊಲೆಗಳು ನಡೆಯುತ್ತಿವೆ. ಈ ಕೊಲೆಗಳ ಬಗ್ಗೆ ಕಟ್ಟಲಾಗುತ್ತಿರುವ ಕತೆಗಳು ಮೇಲ್ನೋಟಕ್ಕೇ ಅನುಮಾನಾಸ್ಪದವಾಗುತ್ತಿವೆ. ಇದರ ವಿರುದ್ಧ ಪ್ರತಿಭಟಿಸುವುದು ಎಂದರೆ ಅದು ಕೇವಲ ಗೋಡೆಗೆ ಗುದ್ದಿಕೊಳ್ಳುವುದೇ ಆಗಿದೆ. ಆ ಗೋಡೆಯ ಒಂದು ಬದಿ ಯಾವ ಶಬ್ದವೂ ಕೇಳದಂತಹ, ಯಾವುದೂ ಅರ್ಥವಾಗದಂತಹ ನಿರ್ವಾತವಿದ್ದರೆ, ಇನ್ನೊಂದು ಬದಿ ಕಿವಿಗಡಚಿಕ್ಕುವ, ಅರ್ಥಹೀನ ಗದ್ದಲ ತುಂಬಿದೆ. ಈ ಗದ್ದಲವನ್ನೇ ಈ ಕಡೆ 'ರಾಜಕೀಯ' ಎಂದು ಕರೆಯುತ್ತಾರೆ. (ಪು. 108).

ಎನ್‌ಕೌಂಟರ್ ಹೆಸರಿನಲ್ಲಿ ಪೊಲೀಸರು ನಡೆಸುವ ಕಗ್ಗೊಲೆಗಳು ನ್ಯಾಯ ಸಮ್ಮತವೆಂದೂ, ಆ ಕುರಿತು ಸ್ವತಃ ಪೊಲೀಸರೇ ನೀಡುವ ವಿವರಣೆ ಪ್ರಶ್ನಾತೀತವೆಂದೂ, ಆಂಧ್ರದ ಚುನಾಯಿತ ಸರ್ಕಾರ ಮತ್ತು ವಿವಿಧ ಪಕ್ಷಗಳ ರಾಜಕಾರಣಿಗಳು ಪ್ರತಿಪಾದಿಸುವುದು ಪ್ರಜಾಪ್ರಭುತ್ವಕ್ಕೆ ಮಾರಕವಾಗಲಿದೆ ಎಂದು ಬಾಲಗೋಪಾಲ್ ಆಗಲೇ ಗ್ರಹಿಸಿದ್ದರು. ಆಂಧ್ರದ ಮಾಧ್ಯಮಗಳು ಕೂಡ (ಅಪವಾದಗಳನ್ನು ಹೊರತುಪಡಿಸಿ) ಪೊಲೀಸರ ಕ್ರಿಮಿನಲ್ ಕೃತ್ಯಗಳಿಗೆ ಒಂದೋ ಮೌನವಾಗಿದ್ದವು; ಅಥವಾ ಆ ಕುರಿತು ಪೊಲೀಸು ಪ್ರಕಟಣೆಗಳನ್ನೇ ವರದಿ ಎಂಬಂತೆ ಪ್ರಸಾರ ಮಾಡಿದವು. ಈ ಪ್ರವೃತ್ತಿ ಕೂಡ ಈಗ ಕರ್ನಾಟಕವೂ ಸೇರಿದಂತೆ ದೇಶದ ಎಲ್ಲೆಡೆ ಹಬ್ಬಿದೆ. ಎನ್‌ಕೌಂಟರ್‌ಗಳ ಕುರಿತು, ಪೊಲೀಸು, ರಾಜಕಾರಣಿ ಮತ್ತು ಮಾಧ್ಯಮಗಳ ನಡುವೆ ಇರುವ ಒಮ್ಮತ, ಪಾತಕಕೃತ್ಯಗಳಿಗೆ ಒಂದು ಮಟ್ಟದ ಜನಸಮ್ಮತಿಯನ್ನೂ ಈಗ ದೊರಕಿಸಿಕೊಟ್ಟಿದೆ. ಈ ವ್ಯವಸ್ಥೆ ತನ್ನ ಉಳಿವಿಗೋಸ್ಕರ ಅಗಾಧ ಹಿಂಸೆ ನಡೆಸುವುದರ ಜೊತೆಗೆ ಹಿಂಸೆಗೆ ಜನರನ್ನು ಸಂವೇದನಾಶೂನ್ಯರನ್ನಾಗಿಯೂ ಮಾಡುತ್ತಿದೆ.

ಇತ್ತೀಚೆಗೆ ಕೇಂದ್ರ ಸರ್ಕಾರದೊಡನೆ ಸಂಧಾನದಲ್ಲಿ ತೊಡಗಿಕೊಂಡಿದ್ದ ನಕ್ಸಲ್ ನಾಯಕ ಚೇರುಕೂರಿ ರಾಜಕುಮಾರ್-ಆಜಾದ್‌ರನ್ನು ಪೊಲೀಸರು ಆಂಧ್ರದಲ್ಲಿ ಕೊಲೆ ಮಾಡಿ, ಆ ಎನ್‌ಕೌಂಟರ್ ನಡೆದದ್ದು ಮಹಾರಾಷ್ಟ್ರದ ನಾಗಪುರದಲ್ಲಿ ಎಂದು ಕತೆ ಕಟ್ಟಿದರು. ಎನ್‌ಕೌಂಟರ್ ನಡೆದ ವೇಳೆ ಆಜಾದ್ ಜೊತೆ ಹೇಮಚಂದ್ರಪಾಂಡೆ ಎಂಬ ದೆಹಲಿಯ ಪತ್ರಕರ್ತರೊಬ್ಬರಿದ್ದರು. ಪೊಲೀಸರು ಪಾಂಡೆಯನ್ನೂ ಕೊಲೆ ಮಾಡಿ, ಅವರು ಆಜಾದ್‌ರ ನಿಕಟವರ್ತಿ ಸಹದೇವ್ ಎಂದು ಇನ್ನೊಂದು ಸುಳ್ಳು ಹೇಳಿದರು. ಸ್ವತಃ ಹೇಮಚಂದ್ರ ಪಾಂಡೆಯವರ ಪತ್ನಿ ಬಬಿತ ಪಾಂಡೆ ಮತ್ತು ಸಹೋದರ ರಾಜೀವ್ ಪಾಂಡೆ ದೆಹಲಿಯಲ್ಲಿ ಪತ್ರಿಕಾಗೋಷ್ಠಿ ಕರೆದು ಆಜಾದ್ ಜೊತೆ ಕೊಲೆಯಾದವರು ಪತ್ರಕರ್ತ ಪಾಂಡೆ; ಅವರು ನಿಶ್ಶಸ್ತ್ರರಾಗಿದ್ದರು; ಅವರೆಂದೂ ನಕ್ಸಲರಾಗಿರಲಿಲ್ಲ ಎಂದು ಹೇಳಿದರು. ಆದರೆ ಆ ಸಂದರ್ಭದಲ್ಲಿ ಕೇಂದ್ರ ಗೃಹಮಂತ್ರಿಗಳು ಏನೂ ಆಗದವರಂತೆ ವರ್ತಿಸಿದರು. ವಿರೋಧ ಪಕ್ಷಗಳೂ-ಅವುಗಳನ್ನು ಹಾಗೆಂದು ಕರೆಯಬಹುದಾದರೆ- ಆ ಬಗ್ಗೆ ಮೌನವಾಗಿದ್ದವು. ಆಜಾದ್ ಕೊಲೆಯ ಕುರಿತು ತನಿಖೆಯಾಗಬೇಕು ಎಂದು ತೃಣಮೂಲ್ ಕಾಂಗ್ರೆಸ್ ನಾಯಕಿ ಮಮತಾ ಬ್ಯಾನರ್ಜಿ ಒತ್ತಾಯಿಸಿದಾಗ ಅದನ್ನು ಸಿ.ಪಿ.ಎಂ. ವಿರೋಧಿಸಿತು! ಪ್ರಾಯಶಃ ಆಗ ಕಾರ್ಲ್‌ಮಾರ್ಕ್ಸ್ ತನ್ನ ಗೋರಿಯೊಳಗೇ ನರಳಿರಬಹುದು!

ಅಭಿವೃದ್ಧಿ ಮತ್ತು ರಕ್ಷಣೆಗಳ ನೆವದಲ್ಲಿ ಪ್ರಭುತ್ವ ನಡೆಸುವ ಹಿಂಸೆಯ ಕುರಿತು ವಿವಿಧ ರಾಜಕೀಯ ಪಕ್ಷಗಳು, ಬುದ್ಧಿಜೀವಿಗಳು ಮತ್ತು ಮಾಧ್ಯಮದ ನಡುವೆ ಮೂಡಿರುವ ಸಮ್ಮತಿ ಮತ್ತು ಒಮ್ಮತದ ಕುರಿತು ಬಾಲಗೋಪಾಲ್ ತನ್ನ ಲೇಖನಗಳಲ್ಲಿ ಪದೇಪದೇ ಪ್ರಸ್ತಾಪಿಸುತ್ತಾರೆ. ಉದಾಹರಣೆಗೆ ಈ ಸಂಕಲನದಲ್ಲಿ ಕಾಶ್ಮೀರದ ಬೆಳವಣಿಗೆಗಳು ಕುರಿತ ತಮ್ಮ ಲೇಖನದಲ್ಲಿ ಅವರು ಹೀಗೆ ಬರೆಯುತ್ತಾರೆ, "ಭಾರತದಲ್ಲಿ ಪ್ರಜಾತಂತ್ರವನ್ನು ಒಪ್ಪುವ ಬುದ್ಧಿಜೀವಿಗಳು, ಸಕ್ರಿಯ ಕಾರ್ಯಕರ್ತರು ಸಾಕಷ್ಟು ಸಂಖ್ಯೆಯಲ್ಲಿದ್ದಾರೆ; ಆದರೆ ಪ್ರಜಾತಂತ್ರದ ಪರಿಕಲ್ಪನೆ ಅಷ್ಟು ಸರಳವಾದದ್ದಲ್ಲ. ಈ ಮಾತು ಬೂರ್ಜ್ವಾ ಹಾಗೂ ಎಡಪಂಥೀಯ ಬುದ್ಧಿಜೀವಿಗಳಿಬ್ಬರಿಗೂ ಅನ್ವಯವಾಗುತ್ತದೆ. ಪ್ರಜಾತಂತ್ರದ ಆಶಯಗಳಿಗೆ ಧಕ್ಕೆ ಬಂದಾಗಲೆಲ್ಲ ಪ್ರತಿಭಟಿಸಿದ ಈ ದನಿಗಳು ಅದೇ ರೀತಿಯ ಬೇರೆ ಸನ್ನಿವೇಶಗಳಲ್ಲಿ ಜಾಣಮೌನವನ್ನು ಕಾಪಾಡಿಕೊಂಡಿದ್ದರಿಂದ ಈ ಮಾತನ್ನು ಹೇಳಬೇಕಾಗಿದೆ." (ಪುಟ 74). ಕಾಶ್ಮೀರದ ಜನತೆಗೆ ನೀಡಿದ ಸ್ವಾಯತ್ತತೆಯ ಆಶ್ವಾಸನೆಯನ್ನು ಭಾರತ ಸರ್ಕಾರ ಇಷ್ಟು ವರ್ಷಗಳ ನಂತರವೂ ಈಡೇರಿಸದೆ ಇರುವುದು ಹಾಗೂ ಆ ರಾಜ್ಯದಲ್ಲಿ ಭಾರತದ ಸೈನಿಕರು ದಿನಂಪ್ರತಿ ನಡೆಸುತ್ತಿರುವ ಹಿಂಸೆ, ಲೂಟಿ, ಕೊಲೆ ಮತ್ತು ಹೆಣ್ಣುಮಕ್ಕಳ ಮೇಲೆ ಅತ್ಯಾಚಾರಗಳ ಬಗ್ಗೆ ಭಾರತದ ಬಹುಪಾಲು ಲಿಬರಲ್ ಬುದ್ಧಿಜೀವಿಗಳು ವಹಿಸಿರುವ ಮೌನದ ಕುರಿತು ಬಾಲಗೋಪಾಲ್ ಇಲ್ಲಿ ಹೇಳುತ್ತಿದ್ದಾರೆ.

ಹಾಗೆಂದು ಬಾಲಗೋಪಾಲ್, ಕಾಶ್ಮೀರದ ಪ್ರತ್ಯೇಕತಾವಾದಿಗಳು ಮತ್ತು ಇಸ್ಲಾಮಿಕ್ ಮೂಲಭೂತವಾದಿಗಳು

● ಹಿಂಸೆ, ಅಧಿಕಾರ, ಪ್ರಭುತ್ವ ಮತ್ತು ಪ್ರಜಾತಂತ್ರ-ಇವುಗಳ ನಡುವೆ ಇರುವ ಒಮ್ಮೆ ಪ್ರತಿರೋಧ ಮತ್ತೊಮ್ಮೆ ದ್ವಂದ್ವಾತ್ಮಕವಾದ ಸಂಬಂಧದ ಬಗ್ಗೆ ಬಾಲಗೋಪಾಲ್ ಗಾಢವಾಗಿ ಯೋಚಿಸಿದವರು. ಮಾನವ ಹಕ್ಕು ಎಂಬುದು ಒಂದು ಬೂರ್ಜ್ವಾ ಪರಿಕಲ್ಪನೆ ಎಂಬ ಕೆಲವು ಮತೀಯ ಮಾರ್ಕ್ಸ್‌ವಾದಿ ವಲಯಗಳಲ್ಲಿ ಚಾಲ್ತಿಯಲ್ಲಿರುವ ಅಭಿಪ್ರಾಯವನ್ನು ಬಾಲಗೋಪಾಲ್ ಉಗ್ರವಾಗಿ ಖಂಡಿಸುತ್ತಾರೆ. ●

ನಡೆಸಿರುವ ಕೊಲೆ ಸುಲಿಗೆಗಳನ್ನೂ ಅಲ್ಲಗಳೆಯುವುದಿ
ಪ್ರಭುತ್ವದ ಹಿಂಸೆಯನ್ನೂ ಅವರು ಬೆಂಬಲಿಸುವುದಿ
ಅದರ ವಿರುದ್ಧ ಸಂಘಟನೆಗಳು ನಡೆಸುವ ಪ್ರತೀಕ
ರೂಪದ ಹಿಂಸೆಯನ್ನು ಅವರು ಸಮರ್ಥಿಸುವುದೂ ಇ
ಆದರೆ ಈ ಹಿಂಸೆ, ಪ್ರತಿಹಿಂಸೆಗಳ ಸಂದರ್ಭವನ್ನು ಮ
ನಾವು ವಸ್ತುನಿಷ್ಠವಾಗಿ ಗುರುತಿಸಬೇಕು ಎಂದು ಅವ
ಒತ್ತಾಯಿಸುತ್ತಾರೆ. ಮಾನಸಿಕ ಆರೋಗ್ಯ ನೆಟ್ಟಗಿರುವ ಯ
ವ್ಯಕ್ತಿಯೂ ಹಿಂಸಾವಾದಿಯಾಗಲಾರ; ಆದಾಗ್ಯೂ ಪ್ರಜೆಗಳ
ಹಿಂಸೆಗೆ ಪ್ರೇರಿಸುವ ಶಕ್ತಿಗಳು ಯಾವುವು? ಬಾ
ಗೋಪಾಲ್ ನಿರಂತರವಾಗಿ ಶೋಧಿಸಿದ ಪ್ರಶ್ನೆ ಇ
ಅವರಿಗೆ ತಾನು ಒಬ್ಬ ಅಹಿಂಸಾವಾದಿ ಎಂದು ಘೋ
ಕೊಳ್ಳಬೇಕಾದ ಅಗತ್ಯ ಕಂಡಿಲ್ಲ, ಆದರೆ ಪ್ರಭುತ್ವದ ಹಿ
ಮತ್ತು ಅದಕ್ಕೆ ಪ್ರತಿಕ್ರಿಯೆಯಾಗಿ ಜನಸಂಘಟನೆಗಳು ನಡೆಸ
ಹಿಂಸೆಯ ನಡುವೆ ವ್ಯತ್ಯಾಸ ಕಲ್ಪಿಸದೆ ಹಿಂಸೆಯ ಕುರಿ

ಪುಸ್ತಕ ಪರಿಚಯ

● ಜಿ. ರಾಜಶೇಖ

ಸಾರಾಸಗಟಾಗಿ ತಳೆಯುವ ಧೋರಣೆ ಅನೈತಿಕ ಮ
ಬೇಜವಾಬ್ದಾರಿತನದ್ದು. ಆರಾಮ ಕುರ್ಚಿಯ ಕ್ರಾಂತಿಕಾರಿಗ
ಮತ್ತು ಆರಾಮ ಕುರ್ಚಿಯ ಅಹಿಂಸಾವಾದಿಗಳ ನಡು
ಹೆಚ್ಚು ಫರಕ್ಕಿಲ್ಲ.

ಬಾಲಗೋಪಾಲ್ ಅವೆರಡೂ ಆಗಿರಲಿಲ್ಲ. ತನ್ನ ಕಾಲ
ಹಿಂಸೆಗೆ ಅವರು ನೇರವಾಗಿ ತೆರೆದ ಕಣ್ಣುಗಳಿಂದ ಮು
ಮುಖಿಯಾದರು. ಹದಗೆಟ್ಟ ಕೋರ್ಟುಗಳು, ಕೆಟ್ಟರಸ್ತೆಗ
ಲಂಚಗುಳಿ ನೌಕರರು, ಪಾಠ ಮಾಡದ ಶಿಕ್ಷಕರು ಮುಂತಾ
ವನ್ನು ಜನ ಈಗೀಗ ಪ್ರತಿಭಟಿಸುವ ಗೋಜಿಗೆ ಸ
ಹೋಗುವುದಿಲ್ಲ. ಉತ್ತಮ ಪ್ರಭುತ್ವ ಲೊಳಲೊಟ್ಟೆ ಎಂಬು
ಜನರಿಗೆ ಗೊತ್ತಿಲ್ಲದ ಸತ್ಯವೇನೂ ಅಲ್ಲ, ಆದರೆ ತ
ಹೊಲಮನೆ, ಉದ್ಯೋಗಗಳನ್ನೆಲ್ಲ ಕಸಿದು ಉಳ್ಳವರಿ
ತಿನ್ನಿಸುವ ವ್ಯವಸ್ಥೆಯ ವಿರುದ್ಧ ಜನ ಏನು ಮಾಡಬೇಕ
ತಮ್ಮ ನೆಲದಡಿಯ ಅದಿರಿಗೋಸ್ಕರ ತಮ್ಮನ್ನು ನಿರ್ಗತಿಕರ
ಸುವ ಗಣಿಗಾರಿಕೆಯ ವಿರುದ್ಧ ಜಾರ್ಖಂಡ್, ಛತ್ತೀಸ್‌ಗ

ಒರಿಸ್ಸಾಗಳ ಆದಿವಾಸಿಗಳು ಏನು ಮಾಡಬೇಕು? ...ರದ ಇಂಫಾಲ್‌ನಲ್ಲಿ ಕಳೆದ 10 ವರ್ಷಗಳಿಂದ ...ಮ್ ಶರ್ಮಿಳ ಎಂಬ ಹೆಣ್ಣುಮಗಳು ಉಪವಾಸ ...ಹ ನಡೆಸುತ್ತಿದ್ದಾರೆ. ಅದು ಅತ್ಯಂತ ಶಾಂತಿಯುತ, ...ತ್ಮಕ ಹಾಗೂ ಪ್ರಜಾಪ್ರಭುತ್ವವಾದೀ ಪ್ರತಿಭಟನೆ, ...ಷವೇ ಇಲ್ಲ. ಆಕೆ ಹಠದಲ್ಲಿ ಉಪವಾಸದಲ್ಲಿರುವು ... ಯಾಕೆ? ಸೈನಿಕರು ಪ್ರಜೆಗಳ ವಿರುದ್ಧ ಏನೇ ...ಪವೆಸಗಿದರೂ ಅವರ ಮೇಲೆ ನ್ಯಾಯಾಲಯದಲ್ಲಿ ...ಗೆದುಕೊಳ್ಳುವ ಹಾಗಿಲ್ಲ ಎಂಬ ಕರಾಳ ಕಾಯ್ದೆಯನ್ನು ಸರ್ಕಾರ ರದ್ದುಪಡಿಸಬೇಕು ಎಂಬುದು ಮಾತ್ರ ...ಮ್ ಶರ್ಮಿಳರ ಹಕ್ಕೊತ್ತಾಯ. ಕಾಶ್ಮೀರ ಮತ್ತು ... ಸೇರಿದಂತೆ ಎಲ್ಲ ಈಶಾನ್ಯ ರಾಜ್ಯಗಳಲ್ಲೂ ಈ ...ಜಾರಿಯಲ್ಲಿದ್ದು ಅಲ್ಲಿನ ಪ್ರಜೆಗಳ ಮೇಲೆ ಭಾರತದ ... ನಡೆಸುವ ಅನ್ಯಾಯಗಳಿಗೆ ನಿರ್ಬಂಧವೂ ಇಲ್ಲ; ...ನವೂ ಇಲ್ಲ. ಇದೇ ಪರಿಸ್ಥಿತಿ ಈಗ ದೇಶದ ಶ್ರೀಮಂತ ರಾಜ್ಯಗಳಲ್ಲೂ ತಲೆದೋರುತ್ತಿದೆ. ಈ ...ನತದೃಷ್ಟ ಪ್ರಜೆಗಳೆಲ್ಲರೂ ಇರೋಮ್ ಶರ್ಮಿಳರಷ್ಟು ... ಮತ್ತು ನೈತಿಕತೆಯಲ್ಲಿ ಪ್ರತಿಭಟಿಸಬೇಕೆ? ಅದು ...? ಸಾಮಾನ್ಯರ ಹಾಗೆ ಬಾಳುವೆ ಮಾಡುವುದಕ್ಕೂ ...ರ ಛಲ, ತಾಳ್ಮೆ, ತ್ಯಾಗ ಅಹಿಂಸೆಗಳೆಲ್ಲ ಬೇಕು ...ಬಯಸುವುದು ಅಹಿಂಸಾವಾದಿಗಳ ಅಪ್ಪಟ ಕ್ರೌರ್ಯ. ...ಈ ದೇಶದ ಶೋಷಿತರ ಮೊದಲ ಆಯ್ಕೆಯೋ, ... ಲಭ್ಯವಿರುವ ಎಲ್ಲ ಪ್ರಜಾಸತ್ತಾತ್ಮಕ ಪ್ರತಿಭಟನೆಯ ...ನೂ ಮುಚ್ಚಿಕೊಂಡಿದ್ದು ಈಗ ಇದೊಂದೇ ಕಟ್ಟ... ಅನಿವಾರ್ಯ (ಮತ್ತು ಮಾರಣಾಂತಿಕ) ಆಯ್ಕೆಯೋ? ...ಗೋಪಾಲ್, ತಮ್ಮ ಎಲ್ಲ ಲೇಖನಗಳಲ್ಲೂ ಈ ...ನ್ನು ನಮ್ಮ ಮುಂದಿಡುತ್ತಾರೆ. ಮಾನವ ಹಕ್ಕು ...ಟಗಾರನಾಗಿ ಅವರು ಪ್ರಭುತ್ವದ ಹಿಂಸೆ, ಚಳವಳಿಗಳ ...ಸೆ, ಬಿಡಿ ವ್ಯಕ್ತಿಗಳ ಹಿಂಸೆ–ಹೀಗೆ ಹಿಂಸೆಯನ್ನು ...ಎಲ್ಲ ರೂಪಗಳಲ್ಲೂ ಹತ್ತಿರದಿಂದ ಕಂಡುಬಲ್ಲವರು. ...ಅವರಿಗೆ ಒಂದು ಅಮೂರ್ತ ಕಲ್ಪನೆ ಅಲ್ಲ. ...ಲ್ಲಿ ತೊಡಗಿದವರಿಂದ ದೂರದಲ್ಲಿ ಮತ್ತು ಎತ್ತರದಲ್ಲಿ ... ಅಹಿಂಸೆಯ ಕುರಿತು ಸೋಗಲಾಡಿ ಪ್ರವಚನ ... ದರ್ದು ಕೂಡ ಅವರಿಗೆ ಇಲ್ಲ. ನೈತಿಕ ಪ್ರಾಂಜಲತೆ, ...ಗೋಪಾಲ್ ಅವರ ಲೇಖನಗಳ ಹೆಗ್ಗುರುತು.

...ಸೆ, ಅಧಿಕಾರ, ಪ್ರಭುತ್ವ ಮತ್ತು ಪ್ರಜಾತಂತ್ರ–ಇವುಗಳ ... ಇರುವ ಒಮ್ಮೆ ಪ್ರತಿರೋಧದ, ಮತ್ತೊಮ್ಮೆ ...ತ್ಮಕವಾದ ಸಂಬಂಧದ ಬಗ್ಗೆ ಬಾಲಗೋಪಾಲ್ ...ಗಿ ಯೋಚಿಸಿದವರು. ಮಾನವ ಹಕ್ಕು ಎಂಬುದು ...ಬೂರ್ಜ್ವಾ ಪರಿಕಲ್ಪನೆ ಎಂಬ ಕೆಲವು ಮರ್ಕ್ಸ...ವಾದಿ ವಲಯಗಳಲ್ಲಿ ಚಾಲ್ತಿಯಲ್ಲಿರುವ ಅಭಿಪ್ರಾಯ ...ಬಾಲಗೋಪಾಲ್ ಉಗ್ರವಾಗಿ ಖಂಡಿಸುತ್ತಾರೆ. ಹಾಗೆ ...ಷ್ಟೆ ಸ್ಟೀಮ್ ಎಂಜಿನ್ ಉಗಿಯಂತ್ರ ಕೂಡ .... ಆದರೆ ಅದಿಲ್ಲದೆ ನಡೆಯುತ್ತದೆಯೆ? ಯಾವ ... ಹಕ್ಕು ಕೂಡ ಹೋರಾಟವಿಲ್ಲದೆ ಪ್ರಜೆಗಳಿಗೆ ...ತ್ತಿ ದೊರೆತಿಲ್ಲ. ಮಾನವ ಹಕ್ಕುಗಳಿಗಾಗಿ ನಡೆಯುವ ...ಂದು ಹೋರಾಟವೂ ಒಂದು ನಿರ್ದಿಷ್ಟ ಸನ್ನಿವೇಶ ...ಡೆಯುವಂತಹದ್ದು. ಪೊಲೀಸು ಹಿಂಸೆಯ ವಿರುದ್ಧ ...ಗಳ ಹಕ್ಕು, ಒಕ್ಕಲೆಬ್ಬಿಸುವಿಕೆಯ ವಿರುದ್ಧ ರೈತರ ...ಈ ಪ್ರಕಾರವೇ ಮಾನವ ಹಕ್ಕಿನ ಪರಿಕಲ್ಪನೆ ಮೂರ್ತ ...ವುದು. ಹಾಗಾಗಿ ಪ್ರತಿಯೊಂದು ಮಾನವ ಹಕ್ಕು ...ಟವೂ ಆ ಹಕ್ಕಿಗೆ ಸಂಬಂಧಿಸಿದ ಪ್ರಜಾ ಪ್ರಭುತ್ವದ ...ಳಿಗಾಗಿ ನಡೆಯುವ ಹೋರಾಟವೂ ಆಗಿದೆ.

...ಚೆಗಿನ ದಿನಗಳಲ್ಲಿ ದೇಶದ ಸಂವಿಧಾನ ಮತ್ತು ...ಹಕ್ಕುಗಳಿಗೆ ದೊಡ್ಡ ಕಂಟಕವಾಗಿ ಬೆಳೆದು ನಿಂತಿರುವ ...ತ್ವ ರಾಜಕಾರಣದ ಬಗ್ಗೆ ಪ್ರಸ್ತುತ ಸಂಕಲನದಲ್ಲಿ ...ಲೇಖನಗಳಿವೆ. (ಪು. 49-72) ತನ್ನ ಈ ಲೇಖನ...ಬಾಲಗೋಪಾಲ್ ಪ್ರಭುತ್ವ ಮತ್ತು ಹಿಂದೂತ್ವಗಳ ...ಇರುವ ಸಮಾನ ನೆಲೆಗಳನ್ನು ಮತ್ತು ಸಮಾನ ...ತಾಸಕ್ತಿಗಳನ್ನು ಗುರುತಿಸುವುದರ ಜೊತೆಗೆ ಹಿಂದೂ ...ಂಸೆಯ ಅಜೆಂಡಾದಲ್ಲಿ ಒಂದು ಮಟ್ಟದ ಜನರ ...ತ್ವವಿರುವುದನ್ನೂ ಗುರುತಿಸುತ್ತಾರೆ. ಪ್ರತಿಗಾಮಿ ...ಯೊಂದು ನಡೆಸುವ ಘೋರ ಹಿಂಸೆಯಲ್ಲಿ ಜನ ..., ಕಡೆಗೆ ಕಾರ್ಮಿಕರು, ದಲಿತರು ಮತ್ತು ಆದಿವಾಸಿಗಳು ...ಹಿಂಸುವುದರ ಅರ್ಥವೇನು ಎಂದು ಎಡಪಂಥೀಯರು ...ವಾಗಿ ಯೋಚಿಸಬೇಕಾಗಿದೆ.


... ಒಂದು ಸಂದರ್ಶನದಲ್ಲಿ ಬಾಲಗೋಪಾಲ್ ... ಮತ್ತು ಅದರ ಜೊತೆ ತಳಕು ಹಾಕಿಕೊಂಡಿರುವ ... ಸ್ವರೂಪದ ಬಗ್ಗೆ ಹೇಳುತ್ತ "ಅಧಿಕಾರ ಎಂದರೆ ...ಸರ್ಕಾರವಲ್ಲ; ಬಡವರು ಕೂಡ ತಮ್ಮ ಹೆಂಡಂದಿರನ್ನು ...ಯುತ್ತಾರೆ; ಮತೀಯ ಹಿಂಸೆಯಲ್ಲಿ ಪಾಲುಗೊಳ್ಳುತ್ತಾರೆ ...ದಲಿತರನ್ನು ಕೀಳಾಗಿ ಕಾಣುತ್ತಾರೆ. ಹಾಗೆಯೇ ...! ಎಂದರೆ ಕೇವಲ ಪಾಳೆಯಗಾರಿ ಭೂಮಾಲೀಕ ...! ಅಲ್ಲ. ನೀವು ಭೂಮಾಲೀಕನ ತಲೆಗೆ ಪಿಸ್ತೂಲು ...ಬಹುದು. ಆದರೆ ಎಸ್.ಇ.ಝಡ್ ಅಥವಾ ಅಣ್ವಸ್ತ್ರ ...ವಂತಹ ಜನವಿರೋಧಿ ಯೋಜನೆಗಳಲ್ಲಿ ಯಾರ ... ಇಡುತ್ತೀರಿ" ಎಂದು ಕೇಳುತ್ತಾರೆ. ಸ್ವಾತಂತ್ರ್ಯ ...ಸಮಾನತೆ ಬಯಸುವ ಎಲ್ಲರೂ ಯೋಚಿಸಬೇಕಾದ ...ದೆ.

ಕೊಟ್ಟ ಕೋಡಗಗಳು– ಇಸ್ಕೊಂಡ ಕಮಂಗಿಗಳು!

▶▶ 2

ಮೊತ್ತದ ಈ ಒಪ್ಪಂದವು ಅಮೆರಿಕದಲ್ಲಿ 22,160 ಕೆಲಸಗಳನ್ನು ಸೃಷ್ಟಿಸಲಿದೆ.

ಲಘು ಯುದ್ಧ ವಿಮಾನಗಳಿಗೆ ಎಂಜಿನ್ ಸರಬರಾಜು: ಈ ಭೇಟಿಯಲ್ಲಿ ಅಮೆರಿಕ ಹೈಟೆಕ್ ಟ್ರೇಡಿಗಿದ್ದ ನಿರ್ಬಂಧವನ್ನು ತೆಗೆದಿದ್ದರಿಂದ ಲಘು ಯುದ್ಧ ವಿಮಾನಗಳಿಗೆ ಹೈಟೆಕ್ ತಂತ್ರಜ್ಞಾನವನ್ನು ಸರಬರಾಜು ಮಾಡುವ ಅಮೆರಿಕದ ಜನರಲ್ ಎಲೆಕ್ಟ್ರಿಕ್ ಕಂಪನಿ- ಉಇ- ಗೆ ಸಾಕಷ್ಟು ಲಾಭವಾಗಿದೆ. ಅದು ಈಗ ಭಾರತದ ತೇಜಸ್ ಲಘು ಯುದ್ಧ ವಿಮಾನಗಳಿಗೆ 107, ಈ 414 ಎಂಜಿನ್ ಅನ್ನು ಭಾರತದ ವೈಮಾನಿಕ ಅಭಿವೃದ್ಧಿ ಸಂಸ್ಥೆಗೆ ಮಾರಲು ಒಪ್ಪಂದವನ್ನು ಮಾಡಿಕೊಂಡಿದೆ. ಇದು 5000 ಕೋಟಿ ರೂಪಾಯಿಗಳ ಕಾಂಟ್ರಾಕ್ಟ್ ಆಗಿದ್ದು 4,440 ಉದ್ಯೋಗಗಳನ್ನು ಅಮೆರಿಕದಲ್ಲಿ ಸೃಷ್ಟಿಸುತ್ತದೆ. ಇದಲ್ಲದೆ 5000 ಕೋಟಿ ರೂಪಾಯಿಗಳ ಮತ್ತೊಂದು ಒಪ್ಪಂದದಲ್ಲಿ ಇದೇ ಕಂಪನಿಯು ಮುಂದಿನ ಹತ್ತು ವರ್ಷಗಳಲ್ಲಿ ಭಾರತದ ರೈಲ್ವೇ ಇಲಾಖೆಗೆ 1000 ಎಂಜಿನ್‌ಗಳನ್ನು ಸರಬರಾಜು ಮಾಡುವ ಒಪ್ಪಂದವನ್ನು ಮಾಡಿಕೊಂಡಿದೆ. ರಿಲಯನ್ಸ್ ಕಂಪನಿಯ ಜೊತೆಗೆ ಮಾಡಿಕೊಂಡಿರುವ ಮತ್ತೊಂದು ಒಪ್ಪಂದದಲ್ಲಿ GE, ಸಮಾಲ್ ಕೋಟ್‌ನಲ್ಲಿ ರಿಲಯನ್ಸ್ ಸ್ಥಾಪಿಸಲಿರುವ 2500 ಮೆಗಾ ವ್ಯಾಟ್ ಸಾಮರ್ಥ್ಯದ ವಿದ್ಯುತ್ ಸ್ಥಾವರಕ್ಕೆ ಆರು ಆಧುನಿಕ ಗ್ಯಾಸ್ ಟರ್ಬೈನ್ ಮತ್ತು ಮೂರು ಸ್ಟೀಮ್ ಟರ್ಬೈನ್‌ಗಳನ್ನು ಅಂದಾಜು 5000 ಕೋಟಿ ವೆಚ್ಚದಲ್ಲಿ ಸರಬರಾಜು ಮಾಡಲಿದೆ. ಇದು ಅಂದಾಜು 2650 ಉದ್ಯೋಗಗಳನ್ನು ಅಮೆರಿಕದಲ್ಲಿ ಸೃಷ್ಟಿಸಲಿದೆ.



ನಾಗರಿಕ ವಿಮಾನ ಮಾರಾಟ ಒಪ್ಪಂದ: ಇದಲ್ಲದೆ ಭಾರತದ ಖಾಸಗಿ ವಿಮಾನ ಕಂಪನಿಯಾದ ಸ್ಪೈಸ್ ಜೆಟ್ ಕಂಪನಿಯು ಬೋಯಿಂಗ್ ಕಂಪನಿಯಿಂದ 30 ಬೋಯಿಂಗ್ B 737-800 ವಿಮಾನಗಳನ್ನು ಖರೀದಿಸಲಿದೆ. ಇದು ಅಂದಾಜು 13,000 ಕೋಟಿ ರೂಪಾಯಿಗಳ ಬೃಹತ್ ಕಾಂಟ್ರಾಕ್ಟ್ ಆಗಿದ್ದು ಭಾರತದ ಹಣಕಾಸು ಸಂಸ್ಥೆಗಳು ಸ್ಪೈಸ್ ಜೆಟ್ ಕಂಪನಿಗೆ ಕಡಿಮೆ ದರದಲ್ಲಿ ಹಣಕಾಸನ್ನು ಒದಗಿಸಲಿದೆ. ಈ ಕಾಂಟ್ರಾಕ್ಟು ಅಮೆರಿಕದಲ್ಲಿ 12,970 ಉದ್ಯೋಗಗಳನ್ನು ಸೃಷ್ಟಿಸಲಿದೆ.

ಇವು ಒಬಾಮಾ ಭೇಟಿಯಲ್ಲಿ ಆದ ಕೆಲವು ಮುಖ್ಯವಾದ ಒಪ್ಪಂದಗಳು. ಇದಲ್ಲದೆ ಹಲವಾರು ಅಮೆರಿಕದ ಖಾಸಗಿ ಕಂಪನಿಗಳು ಭಾರತದ ಕಂಪನಿಗಳೊಂದಿಗೆ ಹತ್ತಾರು ಒಪ್ಪಂದಗಳನ್ನು ಮಾಡಿಕೊಂಡಿವೆ. ಖಾಸಗಿ ಕಂಪನಿಗಳು ಮಾಡಿಕೊಂಡ ಎಲ್ಲಾ ಒಪ್ಪಂದಕ್ಕೂ ಹಣಕಾಸು ಗ್ಯಾರಂಟಿ ವಿಷಯದಲ್ಲಿ ಭಾರತ ಸರ್ಕಾರದ ಮುಚ್ಚಳಿಕೆ ಇರುತ್ತದೆ. ಕೆಲವು ಕಾಂಟ್ರಾಕ್ಟ್‌ಗಳು ಎಂಥಾ ಅಪಾಯಕಾರಿಯಾಗಿದೆಯೆಂದರೆ ಮಹಾರಾಷ್ಟ್ರ ಸರ್ಕಾರವು ತನ್ನ ಆಂತರಿಕ ಸುರಕ್ಷತೆಯ ಆಧುನೀಕರಣವನ್ನು ಅಮೆರಿಕದ ಕಂಪನಿಗೆ ಒಪ್ಪಿಸಿದೆ. ಅಮೆರಿಕದ ಡ್ಯೂಕ್ ಆರೋಗ್ಯ ಸೇವೆಯ ಕಂಪನಿ ಮತ್ತು ಭಾರತದ ಮೆದಾಂತ ಹಾಸ್ಪಿಟಲ್ ಕಂಪನಿಗಳು ಒಪ್ಪಂದಕ್ಕೆ ಸಹಿ ಹಾಕಿದ್ದು ಜಂಟಿ ಕ್ಲಿನಿಕಲ್ ರಿಸರ್ಚ್ ಮಾಡಲಿವೆ. ಇದಕ್ಕೆ ಭಾರತದ ರೋಗಿಗಳು ಪ್ರಯೋಗ ಪಶುಗಳಾಗಲಿದ್ದರೆ ಅಮೆರಿಕದಲ್ಲಿ ಈಗಾಗಲೇ ಬಳಸಲಾಗಿರುವ ಎರಡನೇ ದರ್ಜೆ ಉಪಕರಣಗಳನ್ನು ಭಾರತಕ್ಕೆ ಸಾಗಹಾಕಲಾಗುತ್ತಿದೆ. ಇದಲ್ಲದೆ ಕೃಷಿ ಕ್ಷೇತ್ರದಲ್ಲೂ ಕಾರ್ಗಿಲ್ ಮತ್ತು ಡುಪಾಂಟ್‌ನಂಥಾ ಹಲವಾರು ಅಗ್ರಿ ಬಿಸಿನೆಸ್ ಕಂಪನಿಗಳು ಎರಡನೇ ಹಸಿರು ಕ್ರಾಂತಿಯನ್ನು ಮುಂದುವರೆಸುವ ಹೆಸರಿನಲ್ಲಿ ತಮ್ಮ ಅಪಾಯಕಾರಿ ಬೀಜ ಮತ್ತು ಇನ್ನಿತರ ಸರಕುಗಳಿಗೆ ಮಾರುಕಟ್ಟೆ ಪಡೆದುಕೊಂಡಿವೆ.

ಇದೆಲ್ಲಕ್ಕಿಂತ ಹೆಚ್ಚಾಗಿ ಅಮೆರಿಕದಲ್ಲಿ ಅಣುವಿದ್ಯುತ್ ಉದ್ದಿಮೆಯಲ್ಲಿರುವ ಬೃಹತ್ ಬಹುರಾಷ್ಟ್ರೀಯ ಕಂಪನಿಗಳು ನಾಗರಿಕ ಅಣು ಶಕ್ತಿ ಕಾಯಿದೆ ಜಾರಿಯಾದ ಮೇಲೆ ದೊರಕಲಿರುವ ಬೃಹತ್ ಮಾರುಕಟ್ಟೆಯನ್ನು ದಕ್ಕಿಸಿಕೊಳ್ಳಲು ಜೊಲ್ಲುಸುರಿಸುತ್ತಾ ಕಾದುಕುಳಿತಿವೆ. ಆದರೆ ಭಾರತದ ಸಂಸತ್ತಿನಲ್ಲಿ ಅಣುಶಕ್ತಿ ಅವಘಡದ ಕಾಯಿದೆ ಬಗ್ಗೆ ಚರ್ಚೆ ನಡೆದು ಒಂದು ವೇಳೆ ಈ ಸ್ಥಾವರಗಳಲ್ಲಿ ಅವಘಡ ಉಂಟಾದರೆ ಅದಕ್ಕೆ ಸರಬರಾಜುದಾರನೇ ಹೊಣೆಹೊರಬೇಕಾದ ಮತ್ತು 1500 ಕೋಟಿ ರೂ.ಗಳಷ್ಟು ಪರಿಹಾರ ನೀಡಬೇಕಾದ ಕಾನೂನು ಮಾಡಲಾಗಿದೆ. ಹಾಗೆ ನೋಡಿದರೆ ಈ ಶಾಸನವೇ ಅಮೆರಿಕದ ಪರವಾಗಿದ್ದು ಭಾರತದ ರಾಜಕೀಯ ಗುಲಾಮತನವನ್ನು ತೋರಿಸುತ್ತದೆ. ಆದರೆ ಅಮೆರಿಕಕ್ಕೆ ಇದರಿಂದಲೂ ಸಮಾಧಾನವಿಲ್ಲ. ಭಾರತದ ಸಂಸತ್ತು ಅಣು ಅವಘಡದ ಬಗ್ಗೆ ಅಮೆರಿಕದ ಕಂಪನಿಗಳ ಮೇಲೆ ಅಲ್ಪಸ್ವಲ್ಪ ಜವಾಬ್ದಾರಿ ಹೊರಿಸುವ ಕಾನೂನು ಮಾಡಿದ್ದರೂ ಅದನ್ನು ನಗಣ್ಯಗೊಳಿಸಲು ತಾನು ಪ್ರಸ್ತಾಪಿಸಿರುವ **Convention on Supplementary Compensation for Nuclear Damage** ಗೆ ಸಹಿಹಾಕಬೇಕೆಂದು ಒತ್ತಾಯಿಸುತ್ತಾ ಬಂದಿದೆ. ಇದು ಅಣು ತಂತ್ರಜ್ಞಾನ ಸರಬರಾಜುದಾರರ ಮೇಲಿನ ಹೊಣೆಗಾರಿಕೆಯನ್ನು ಕಡಿತಗೊಳಿಸುತ್ತದೆ. ಇದು ಅಂತರರಾಷ್ಟ್ರೀಯ ಒಪ್ಪಂದವಾದ್ದರಿಂದ ಭಾರತದ ಶಾಸನ ಆಗ ಅಪ್ರಸ್ತುತವಾಗುತ್ತದೆ. ಒಬಾಮಾ ಭೇಟಿಗೆ ಸ್ವಲ್ಪ ಮುಂಚೆ ಭಾರತ ಸರ್ಕಾರ ಇಂಥಾ ಒಪ್ಪಂದಕ್ಕೆ ಇದೇ ಅಕ್ಟೋಬರ್ 27ರಂದು ಸಹಿ ಹಾಕಿತು. ಇದು ಒಂದೆಡೆ ಅಮೆರಿಕದ ಕಂಪನಿಗಳಿಗೆ 1,50,000 ಕೋಟಿ ರೂಪಾಯಿ ಮಾರುಕಟ್ಟೆಯನ್ನು ಮತ್ತು ಲಕ್ಷಾಂತರ ಉದ್ಯೋಗಗಳನ್ನು ಸೃಷ್ಟಿಸಿದರೆ ಭಾರತಕ್ಕೆ ಶಾಶ್ವತ್ ಅಪಾಯವನ್ನು ತಂದೊಡ್ಡಿದೆ.

ಇದು ಅಸಲಿ ವಿಷಯ. ಮೇಲ್ನೋಟಕ್ಕೆ ನೋಡಿದರೆ ಭಾರತ ಸರ್ಕಾರವೇ ಅಮೆರಿಕದ ದೊಡ್ಡ ಗಿರಾಕಿಯಾಗಿರುವುದು ಎದ್ದು ಕಾಣುತ್ತದೆ. ಭಾರತದ ಜನತೆಯ ತೆರಿಗೆ ಹಣ ಮತ್ತು ದೇಶದ ಸಂಪನ್ಮೂಲಗಳನ್ನು ಅಮೆರಿಕ ಸಾಮ–ಭೇದ–ದಂಡಗಳನ್ನು ಬಳಸಿ ತನ್ನ ಅನುಕೂಲಕ್ಕೆ ತಕ್ಕಂತೆ ಬಳಸಿಕೊಳ್ಳುತ್ತಿದೆ. ಅದಕ್ಕೆ ವಾಣಿಜ್ಯ ಮೈತ್ರಿ ಎಂಬ ಮುಖವಾಡವನ್ನು ಹಾಕಲಾಗಿದೆ. ಅಮೆರಿಕ ಸಾಮ್ರಾಜ್ಯಶಾಹಿಯ ಈ ಬಗೆಯ ಆಕ್ರಮಣಕಾರಿ ವಾಣಿಜ್ಯ ಯುದ್ಧಕ್ಕೆ ಒಬಾಮಾನ ಭಾಷಣದ ಮತ್ತು ಮಿಶೆಲ್ ಒಬಾಮಾಳ ಡ್ಯಾನ್ಸುಗಳ ತೆರೆಯನ್ನು ಹಾಕಲಾಗಿದೆ.

ಭಾರತವು ಕಳೆದ ಹತ್ತು ವರ್ಷಗಳಲ್ಲಿ 20 ಬಿಲಿಯನ್ ಡಾಲರ್‌ನಷ್ಟು ಸೇವೆ ಸರಕುಗಳನ್ನು ರಫ್ತು ಮಾಡಿದೆ, ಇದರಿಂದ ಭಾರತದಲ್ಲಿ ಪ್ರಧಾನವಾಗಿ ಐಟಿ–ಬಿಟಿ ಕ್ಷೇತ್ರದಲ್ಲಿ ಉದ್ಯೋಗಗಳು ಸೃಷ್ಟಿಯಾಗಿವೆ. ಆದರೆ ಅಮೆರಿಕ ಭಾರತ–ಅಮೆರಿಕ ವಾಣಿಜ್ಯ ಹೆಚ್ಚಾಗಬೇಕೆಂದು ಅಮೆರಿಕ ಒತ್ತಡ ಹೇರುತ್ತಿರುವಾಗ ಭಾರತದಿಂದ ಇಂಥಾ ರಫ್ತುಗಳು ಹೆಚ್ಚಾಗಬೇಕೆಂದು ಬಯಸುತ್ತಿಲ್ಲ. ಅದು ಅಮೆರಿಕದ ರಾಷ್ಟ್ರೀಯ ಹಿತಾಸಕ್ತಿಗೆ ಧಕ್ಕೆ ತರುವುದರಿಂದ ಅಮೆರಿಕದ ಮಾರುಕಟ್ಟೆಯನ್ನು ಭಾರತ ರಫ್ತುದಾರರಿಗೆ ತೆರೆಯಲಾಗುವುದಿಲ್ಲ ಎಂದು ಸ್ಪಷ್ಟವಾಗಿಯೇ ಹೇಳಿದ್ದಾರೆ. ಅಷ್ಟು ಮಾತ್ರವಲ್ಲ, ವಿಶ್ವ ವಾಣಿಜ್ಯ ಸಂಸ್ಥೆಯ ಶರತ್ತುಗಳು ಇದ್ದಾಗ್ಯೂ ಅಮೆರಿಕ ತನ್ನ ಮಾರುಕಟ್ಟೆಯನ್ನು ಮಾತ್ರ ರಕ್ಷಿಸಿಕೊಂಡಿದೆಯೇ ಹೊರತು ಭಾರತದಂಥ ಮೂರನೇ ಪ್ರಪಂಚಗಳಿಗೆ ತೆರೆದಿಲ್ಲ.

ಒಬಾಮ ಭೇಟಿಯಿಂದ ಭಾರತ ಪಡೆದುಕೊಂಡಿದ್ದೇನು? ಅಮೆರಿಕದ ಅಧ್ಯಕ್ಷ ಪಾಕಿಸ್ತಾನಕ್ಕೆ ಭೇಟಿ ನೀಡದೆ ಭಾರತಕ್ಕೆ ಮಾತ್ರ ಭೇಟಿ ಕೊಟ್ಟ ಹೆಚ್ಚುಗಾರಿಕೆ. ಅಮೆರಿಕದ ಅಧ್ಯಕ್ಷನನ್ನು ನಾಲ್ಕು ದಿನಗಳ ಕಾಲ ಭಾರತದಲ್ಲಿ ಉಪಚರಿಸಿದ ಧನ್ಯತೆ. ಭದ್ರತಾ ಮಂಡಳಿಯ ಸ್ಥಾನ ಪಡೆಯಬೇಕೆಂದರೆ ಅಂತರರಾಷ್ಟ್ರೀಯ ವಿಷಯಗಳಲ್ಲಿ ಅಷ್ಟೇ ಜವಾಬ್ದಾರಿಯಿಂದ ನಡೆದುಕೊಳ್ಳಬೇಕೆಂಬ ಬಗ್ಗೆ ಬಿಟ್ಟಿ ಉಪದೇಶ. ಅಮೆರಿಕದ ಯುದ್ಧ ಸಾಮಗ್ರಿಗಳಿಗೆ ಅತಿ ದೊಡ್ಡ ಗ್ರಾಹಕನಾದ ಹೆಗ್ಗಳಿಕೆ.

ಇದೆಲ್ಲದರಿಂದ ಭಾರತದ ಜನರಿಗೆ ಏನು ದಕ್ಕಿದಂತಾಯಿತು? ವಾಸ್ತವವಾಗಿ ರೈತರ ಆತ್ಮಹತ್ಯೆಗಳಿಗೆ, ಕಾರ್ಮಿಕರು ಬೀದಿ ಪಾಲಾಗುತ್ತಿರುವುದಕ್ಕೆ, ಇಲ್ಲಿ ನಿರುದ್ಯೋಗ ಹೆಚ್ಚುತ್ತಿರುವುದಕ್ಕೆ ಅಮೆರಿಕದ ವಿದೇಶಾಂಗ ಮತ್ತು ಆರ್ಥಿಕ ನೀತಿಗಳೇ ಕಾರಣ. ಈ ಭೇಟಿಯಲ್ಲಿ ಒಬಾಮಾ ಆ ಎಲ್ಲಾ ನೀತಿಗಳನ್ನು ಇನ್ನೂ ಕಡ್ಡಾಯವಾಗಿ ಮತ್ತು ಕಠಿಣವಾಗಿ ಜಾರಿಗೆ ತರಬೇಕೆಂದು ಆದೇಶಿಸಿದ್ದಾನೆ. ಭಾರತದ ಮೇಲೆ ಅಮೆರಿಕ ಒಂದು ಬಗೆಯ ಟ್ರೇಡ್ ಯುದ್ಧವನ್ನೇ ನಡೆಸಿದೆ. ಅವೆಲ್ಲವನ್ನೂ ನಮ್ಮ ನಾಯಕರು ಜೀ ಹುಜೂರ್ ಎಂದು ಒಪ್ಪಿಕೊಂಡಿದ್ದಾರೆ.

ನಮ್ಮ ಸೇನೆಯ ಮುಂಚೂಣಿಯಲ್ಲಿರುವ ದಂಡನಾಯಕನೇ ನಮ್ಮ ಶತ್ರುವಾಗಿರುವಾಗ ಈ ಯುದ್ಧವನ್ನು ಗೆಲ್ಲುವುದಾದರೂ ಹೇಗೆ? ●



ಅಮೆರಿಕ ಹಿಂಗೇನೇ!

ಬಿರಾಕ ಒಬಾಮಾ ಭಾಷಣಗಳು
ಮಿಶೆಲ್ಲಳ ಡ್ಯಾನ್ಸುಗಳು
ಚಪ್ಪಾಳೆಗಳು, ಜಂಟಿ ಘೋಷಣೆಗಳು
ಅಮೆರಿಕ ಹಿಂಗೇನೇ!

Two way highwayಗಳು
ಒನ್ ವೇ ಪರ್ಮಿಟ್ಟುಗಳು
ಹೆಡ್ಡ ಸ್ಪರ್ಧೆಗಳು, ಹೆಡ್ಡೇ ಇಲ್ಲದ ನಾಣ್ಯಗಳು,
ವಿನ್–ವಿನ್ ಪೊಸಿಷನ್ನುಗಳು
ಅಮೆರಿಕ ಹಿಂಗೇನೆ!

ಸುಭಾಷಿತಗಳು, ಗಾಂಧಿಗಳು, ವಿವೇಕಾನಂದಗಳು,
ಪಂಚರತ್ನ ಕಥೆಗಳು, ಪಂಚರಂಗಿ ವೇಷಗಳು,
ಪ್ರಜಾತಂತ್ರಗಳು, ಮಿಲಿಟರಿ ಕುತಂತ್ರಗಳು,
ಅಮೆರಿಕ ಹಿಂಗೇನೇ!

ಕರಿಯ ಕೈಗಳು, ಬಿಳಿಯ ಕತ್ತಿಗಳು,
ಡೆಡ್ಲಿ ಕಸಬ್‌ಗಳು, ಹೆಡ್ಲಿ ಮಾತುಗಳು,
ತಾಜ್‌ಗಳು, ಠುಸ್ ಪಟಾಕಿಗಳು,
ಅಮೆರಿಕ ಹಿಂಗೇನೇ!

ಹೈಟೆಕ್ ಟ್ರೇಡುಗಳು, ಕೆಟ್ಟು ನಿಂತ ಚರಂಡಿಗಳು,
H1B1 ವೀಸಾಗಳು, H1N1 ರೋಗಗಳು,
ಅಭಿವೃದ್ಧಿಗಳು, ಸೂಪರ್‌ಪವರ್‌ಗಳು,
ಅಮೆರಿಕ ಹಿಂಗೇನೇ!

ಅಮೆರಿಕದ ಡವ್ವುಗಳು, ಭೂಪಾಲದ ಕೆಮ್ಮುಗಳು,
ಕ್ಲೀನ್ ಎನರ್ಜಿಗಳು, ಚೆರ್ನೋಬಿಲ್‌ಗಳು,
ಕೊಟ್ಟ ಕೋಡಗಗಳು, ಇಸ್ಕೊಂಡ ಕಮಂಗಿಗಳು,
ಅಮೆರಿಕ ಹಿಂಗೇನೇ!

ಇರಾಕ್‌ಗಳು, ಅಫ್ಘಾನಿಸ್ತಾನಗಳು,
ಕೊಲ್ಯಾಟರಲ್ ಡ್ಯಾಮೇಜುಗಳು
ಭಾರತಗಳು, ಭದ್ರತಾ ಮಂಡಳಿಗಳು,
ಅಮೆರಿಕದ ಬಾಂಬುಗಳು, ಭಾರತದ ವಿಮಾನಗಳು
ಅಮೆರಿಕ ಹಿಂಗೇನೇ!

ನಲವತ್ತೈದು ನಿಮಿಷಗಳು,ಮೂವತ್ತೈದು ಚಪ್ಪಾಳೆಗಳು
ಲೋಕಸಭೆಗಳು, ರಾಜ್ಯಸಭೆಗಳು
ನೀರಿಲ್ಲದ ತೆಂಗಿನಕಾಯಿಗಳು.
ಭಾರತವೂ ಹಿಂಗೇನೆ!

ಹಿಡಿಸುವ ಕೈಗಳು, ಕಮಲದ ಕೆಸರುಗಳು,
ತುಕ್ಕು ಹಿಡಿದ ಸುತ್ತಿ–ಕುಡುಗೋಲುಗಳು,
ಚಳವಳಿಗಳು, ಬಸಿರಿಗೆ ಮುನ್ನವೇ ಸಿಸೇರಿಯನ್ನುಗಳು,
ಭಾರತವೂ ಹಿಂಗೇನೇ!


ಮಾತಿನ ಲಡಾಯಿಗಳು, ಟಿಆರ್‌ಪಿ ಬಡಾಯಿಗಳು,
ಅರ್ನಾಬ್‌ನ ಪ್ರಶ್ನೆಗಳು, ಬರ್ಕಾಳ ವಿವರಣೆಗಳು,
ಅಮೆರಿಕದ ಅಷ್ಟೋತ್ತರ ನಾಮಾವಳಿಗಳು
ಭಾರತವೂ ಹಿಂಗೇನೇ!

ಅಮೆರಿಕಗಳು, .ಅಮರಾವತಿಗಳು
ಮೆಟ್ಟಲಿರದ ಮಹಡಿಗಳು,
ತೊಟ್ಟಲೇ ಇರದ ಸಂಸಾರಗಳು,
ಮಧ್ಯಮವರ್ಗದ ಮುಷ್ಟಿಮೈಥುನಗಳು
ಭಾರತವೂ ಹಿಂಗೇನೇ!

ಏರಲಾಗದವರು ತುರ್ತು ದೇಶಭಕ್ತರು
ಏರಿದವರು ಅಂಬಿಗನ ಮಿಂಡರು
ಆರ್‌ಡಿಎಕ್ಸ್ ಪ್ರಜ್ಞೆಗಳು, ಪುರೋಹಿತರ ಬಾಂಬುಗಳು,
ಭಾರತವೂ ಹಿಂಗೇನೆ

● ಶಿವಸುಂದರ್

(ಯೋಗರಾಜ್ ಭಟ್ಟರ ಕ್ಷಮೆ ಕೋರಿ)



'ನಾನು ಸಿಂಧಿ'

ಆತ ರಾಷ್ಟ್ರೀಯತಾವಾದದ ರಾಜಕೀಯ ಕಾರ್ಯಕರ್ತನಾಗಿದ್ದು ಸರ್ಕಾರದ ಭದ್ರತಾ ಇಲಾಖೆಯವರು ಅವನನ್ನು ಬಂಧಿಸಿದ್ದರು. ಸುಮಾರು ಒಂದು ವರ್ಷದಿಂದ ಆತನ ವಿಚಾರಣೆಯನ್ನು ಭದ್ರತಾ ಇಲಾಖೆಯ ಸಿಬ್ಬಂದಿ ನಡೆಸುತ್ತಲೇ ಬಂದಿದ್ದರು. ಆತನಿಗೆ ಚಿತ್ರಹಿಂಸೆ ನೀಡಿ "ನೀನು ಯಾರು?" ಎಂಬ ಪ್ರಶ್ನೆಯನ್ನೇ ಅವರು ಪದೇಪದೇ ಕೇಳುತ್ತಿದ್ದರು. ಅದಕ್ಕೆ ಆತ ಪ್ರತಿಬಾರಿ "ನಾನು ಸಿಂಧಿ" ಎಂದೇ ಉತ್ತರಿಸುತ್ತಿದ್ದ. ಕಟುಕನಂತೆ ಕಾಣುತ್ತಿದ್ದ ದಪ್ಪನೆ ಮೀಸೆ ಬಿಟ್ಟಿದ್ದ ಅಧಿಕಾರಿಯೊಬ್ಬ ಆತನ ಮುಖಕ್ಕೆ ಬಿಗಿಯಾಗಿ ಹೊಡೆದು "ಸೂಳೆಮಗನೆ, ನಿನ್ನ ಹೆಸರೇನು?" ಎಂದು ಗದರಿಸಿದ.

"ಅದೇ ನನ್ನ ಹೆಸರು. ಗುಲಾಮ ದೇಶವೊಂದರ ಪ್ರಜೆಗಳಿಗೆ ಬೇರೆ ಯಾವ ತರಹದ ಸ್ವವ್ಯಕ್ತಿತ್ವವೂ ಇರುವುದಿಲ್ಲ, ನಾನು ಸಿಂಧಿ ಎಂಬುದೇ ನನ್ನ ಗುರುತು. ಏಕೆಂದರೆ ನನ್ನ ದೇಶವನ್ನು ಇಸ್ಲಾಂ ಮತ್ತು ಪಾಕಿಸ್ತಾನದ ಹೆಸರಲ್ಲಿ ಕಬಳಿಸಲಾಗಿದೆ ಮತ್ತು ನನ್ನನ್ನು ಪಾಕಿಸ್ತಾನಿಗಳ, ಪಂಜಾಬಿಗಳ, ಮುಹಜೂರ್‌ಗಳ, ಗುಲಾಮನನ್ನಾಗಿಸಿ ಬಂಧಿಸಲಾಗಿದೆ. ನಾನು ಇವತ್ತು ಇಸ್ಲಾಮಿನ, ಮುಸಲ್ಮಾನರ ಮತ್ತು ಪಾಕಿಸ್ತಾನಿಗಳ ಗುಲಾಮನಾಗಿದ್ದೇನೆ" ಎಂದು ಆತ ಹೇಳಿದ. ಆಗ ಆ ಅಧಿಕಾರಿಯು ಆತನ ಎದೆಗೆ ಒದ್ದು "ಇದು ನಿನಗೆ ನಾನು ಕೊಡುತ್ತಿರುವ ಕೊನೆ ಅವಕಾಶ. ಸರಿಯಾದ ಉತ್ತರ ಕೊಡದಿದ್ದರೆ ನೀನು ಸಾಯುತ್ತೀಯಾ. ಹೇಳು, ನೀನು ಯಾರು?"

ಆದರೂ ಆತ ಮತ್ತೆ "ನಾನು ಸಿಂಧಿ" ಎಂದೇ ಉತ್ತರಿಸಿದ. ಮಾತ್ರವಲ್ಲ ಮತ್ತಷ್ಟು ಧೈರ್ಯವಾಗಿ "ನಾನು ಸಿಂಧಿ. ಬೇಕಿದ್ದರೆ ನನ್ನನ್ನು ಕೊಂದು ಹಾಕಿ ಅದೊಂದು 'ಪ್ರಮಾದ' ಎನ್ನಿ; ನನ್ನನ್ನು ಬಂಧಿಸಿ ಇದೊಂದು 'ಭದ್ರತಾ ಕ್ರಮ' ಎನ್ನಿ; ನನ್ನ ನಾಯಕರನ್ನೆಲ್ಲ ದೇಶದ ವೈರಿಗಳೆಂದು ಘೋಷಿಸಿ ಅವರನ್ನೆಲ್ಲ 'ದೇಶದ್ರೋಹಿಗಳು' ಎಂದು ಕರೆಯಿರಿ; ನನ್ನ ಹಕ್ಕುಗಳನ್ನು ನನ್ನ ಭೂಮಿಯನ್ನು ಕದ್ದು ನನ್ನನ್ನು 'ಭಯೋತ್ಪಾದಕ' ಎಂದು ಬಣ್ಣಿಸಿ; ಇದೆಲ್ಲವನ್ನು ಮಾಡಿ 'ವಿಜಯ ಸಾಧಿಸಿದ್ದೇವೆ' ಎಂದು ಹೆಮ್ಮೆ ಪಡೆಯಿರಿ. ಆದರೂ ನಾನು ಸಿಂಧಿಯಾಗಿಯೇ ಇರುತ್ತೇನೆ. ನನ್ನ ತಾಯಿನಾಡನ್ನು, ಸಿಂಧೂ ನಾಗರಿಕತೆಯಷ್ಟು ಪುರಾತನವಾದ ನನ್ನ ಸಂಸ್ಕೃತಿಯನ್ನು, ಭಾಷೆ, ನದಿ, ಮರುಭೂಮಿ, ಬೆಟ್ಟ, ಗುಡ್ಡಗಳನ್ನು ನಾನು ಗೌರವಿಸುತ್ತೇನಲ್ಲದೆ ಅವುಗಳಿಗಾಗಿ ನನ್ನ ಪ್ರಾಣವನ್ನೂ ಕೊಡಲು ಸಿದ್ಧನಿದ್ದೇನೆ. ನನ್ನ ಕೊನೆ ಉಸಿರು ಇರುವತನಕ ನಾನು ಸಿಂಧಿಯಾಗಿಯೇ ಇರುತ್ತೇನೆ. ಆದರೆ ನೀವು ವಿನಾಶ ಕಾಣುತ್ತೀರಿ. ಏಕೆಂದರೆ ಫ್ಯಾಸಿಸ್ಟರು ಬಹಳ ಕಾಲ ಬದುಕುವುದಿಲ್ಲ, ಸಿಂಧ್ ಜಿಂದಾಬಾದ್, ಸಿಂಧಿಗಳಿಗೆ ಜಿಂದಾಬಾದ್!" ಎಂದು ಹೇಳಿದ.

ಆತನಿಗೆ ಮತ್ತೆ ಹೊಡೆದ ಅಧಿಕಾರಿ ಇನ್ನಿಬ್ಬರ ನೆರವು ಪಡೆದು ಆತನ ಮುಖಕ್ಕೆ ಕಪ್ಪು ಮುಸುಕನ್ನು ಧರಿಸಿ ಗಲ್ಲಿಗೇರಿಸಿದ. ಆನಂತರ "ನೀನು ಸಿಂಧಿ ಆಗಿದ್ದರಿಂದಲೇ ನಿನ್ನನ್ನು ಗಲ್ಲಿಗೇರಿಸಿದ್ದು" ಎಂದ ಅಧಿಕಾರಿ. ಮಾರನೆ ದಿನ ಸಿಂಧಿಯ ಮನೆಯ ಹತ್ತಿರ ಆ ರಾಷ್ಟ್ರೀಯತಾವಾದಿಯ ಶವ ಬಿದ್ದಿತ್ತು...

ಇಂಗ್ಲಿಷ್ ಮೂಲ: ಜಹೀದ್ ಮಿರಾಣಿ

ಕನ್ನಡಕ್ಕೆ: ಗೌರಿ ಲಂಕೇಶ್

ಕಾಶ್ಮೀರವನ್ನು ಹೇಗೆ ಬಹುಸಂಖ್ಯಾತ ಕಾಶ್ಮೀರಿಗಳ ಇಚ್ಛೆಯ ವಿರುದ್ಧ ಭಾರತ ಆಕ್ರಮಿಸಿಕೊಂಡಿದೆಯೋ ಹಾಗೆಯೇ ಸಿಂಧ್ ಜನರ ಇಚ್ಛೆಯ ವಿರುದ್ಧ ಪಾಕಿಸ್ತಾನ ಅವರ ಪ್ರದೇಶವನ್ನು ಆಕ್ರಮಿಸಿಕೊಂಡಿದೆ. ಈಗ ಸಿಂಧ್ ಪ್ರಾಂತ್ಯದ ಜನರೂ "ಸಾಕು, ಸಾಕು! ನಮಗೆ ನಮ್ಮ ಘನತೆಯನ್ನು ವಾಪಸ್ ಕೊಡಿ! ನಮ್ಮ ನ್ಯಾಯಸಮ್ಮತ ಹಕ್ಕುಗಳನ್ನು ಕೊಡಿ! ನಮ್ಮ ಸ್ವಾತಂತ್ರವನ್ನು ವಾಪಸ್ ಕೊಡಿ! ನನ್ನ ತಾಯಿನಾಡನ್ನು ನಮಗೆ ಕೊಡಿ! ನೀವು ಅವಮಾನಿಸಿರುವ ನಮ್ಮ ಪ್ರೀತಿಯ ಭಾಷೆಯನ್ನು, ನೀವು ಕಳಂಕಗೊಳಿಸಿರುವ ನಮ್ಮ ಹೆಮ್ಮೆಯ ಪರಂಪರೆಯನ್ನು ನಮಗೆ ವಾಪಸ್ ಕೊಡಿ! ನಮ್ಮ ಆತ್ಮವೇ ಆಗಿರುವ ಸಿಂಧ್ ನದಿಯನ್ನು ನಮಗೆ ಬಿಡಿ! 10,000 ವರ್ಷಗಳಷ್ಟು ಪುರಾತನವಾದ ನಮ್ಮ ನಾಗರಿಕತೆಯನ್ನು ನಮಗೆ ವಾಪಸ್ ನೀಡಿ!" ಎಂದು ಕೇಳುತ್ತಿದ್ದಾರೆ. ಸಿಂಧ್ ಪ್ರಾಂತ್ಯದ ಜನರ ಬೇಡಿಕೆಗಳನ್ನು ಕಾಶ್ಮೀರ ಜನರ ಬೇಡಿಕೆಗಳೊಂದಿಗೆ ಇಟ್ಟು ನೋಡಿದಾಗ ಪ್ರಸ್ತುತ ಕಾಶ್ಮೀರಿ ಸಮುದಾಯದ ಆಶಯಗಳು ಅರ್ಥವಾಗುತ್ತದೆ. ಈ ಹಿನ್ನೆಲೆಯಲ್ಲಿ ಸಿಂಧಿ ಬರಹಗಾರರು ಆದ ಕರಾಚಿ ನಿವಾಸಿ ಜಹೀದ್ ಮಿರಾಣಿ ಎಂಬುವವರು ಬರೆದಿರುವ ಕಿರು ಕತೆ ಇಲ್ಲಿದೆ.

ಹಿಂದೂತ್ವವಾದ V/s ಭಯೋತ್ಪಾದನೆ

ಎಂಬ ಬೂದುಗುಂಬಳಕಾಯಿ

ಓದು
ಪತ್ರ

RSS ಹಾಗು ಭಯೋತ್ಪಾದನೆ ಒಂದೇ ನಾಣ್ಯದ ಎರಡು ಮುಖಗಳು ಎಂದು ತೋ... ಕೊಟ್ಟ ಮಲ್ಲನಗೌಡರ ಲೇಖನ ಚೆನ್ನಾಗಿತ್ತು, ಇದೀಗ ರಾಷ್ಟ್ರೀಯ ಹಾಗು ಅಂತರಾಷ್ಟ್ರೀ... ಮಟ್ಟದಲ್ಲಿ ಇಸ್ಲಾಮಿಕ್ ಭಯೋತ್ಪಾದನೆಯ ಬಗ್ಗೆ ಚರ್ಚೆಗಳು ನಡೆಯುತ್ತಿದ್ದರೆ ಇದಕ್ಕೂ ಹ... ಅಪಾಯಕಾರಿಯಾಗಿರುವ ಹಿಂದೂತ್ವವಾದಿಗಳ ಭಯೋತ್ಪಾದನಾ ಚಟುವಟಿಕೆಗಳನ್ನು ಮಾಧ್ಯಮ... ಉದ್ದೇಶ ಪೂರ್ವಕವಾಗಿಯೇ ಮರೆಮಾಚುತ್ತಿವೆ. ಇಸ್ಲಾಮಿಕ್ ಭಯೋತ್ಪಾದಕರದ್ದು ನೇರಾನೇರ ನುಗ್ಗುವ ಹುಂಬರ ಪಡೆಯಾದರೆ ಹಿಂದೂತ್ವವಾದಿಗಳದ್ದು ಇಲ್ಲಿಯೂ ಶ್ರೇಣೀಕೃತ ವ್ಯವಸ್ಥೆ ಜಾರಿಯಲ್ಲಿದೆ. Finance ಮಾಡುವವರದ್ದು ಒಂದು ವರ್ಗ ಕಾರ್ಯ ಚಟುವಟಿಕೆಯ ರೂಪುರೇಷೆಗಳನ್ನು ತಣ್ಣನೆ ಒಳಗೆ ಕೂತು ಸಿದ್ಧಪಡಿಸುವವರದ್ದು ಇನ್ನೊಂದು ವರ್ಗ. ನಂತರ ಹೊಡೆದಾಟ-ಬಡಿದಾಟದ ಗುಂಪು ಮತ್ತೊಂದು. ಈ ಕಾರಣಕ್ಕೇ ಇದು ಅತ್ಯಂತ ಅಪಾಯಕಾರಿ ಭಯೋತ್ಪಾದನಾ ಗುಂಪಾಗಿ ಗುರುತಿಸಲ್ಪಡುತ್ತದೆ.

ಕುಂಬಳಕಾಯಿ ಕಳ್ಳ ಎಂದರೆ ಹೆಗಲು ಮುಟ್ಟಿಕೊಂಡ ಎಂಬ ತೆನಾಲಿರಾಮನ ಕತೆ ನೆನಪಿಸುವ... 2-3 ತಿಂಗಳ ಹಿಂದೆ ಗೃಹ ಸಚಿವ ಪಿ. ಚಿದಂಬರಂ "ಕೇಸರಿ ಭಯೋತ್ಪಾದನೆ" ಎಂಬ ಪದವ... ತಮ್ಮದೊಂದು ಮಾತಿನಲ್ಲಿ ಪ್ರಸ್ತಾಪಿಸಿದ್ದಕ್ಕೆ ಹಿಂದೂತ್ವವಾದಿ ನಾಯಕರು, ಬಿಜೆಪಿ ನಾಯ... ತೀವ್ರವಾಗಿ ವಿರೋಧ ವ್ಯಕ್ತಪಡಿಸಿದ್ದು ಸುದ್ದಿಯಾಗಿತ್ತು. ಕಳ್ಳ... 'ಕಳ್ಳ' ಎಂದು ಕರೆಯಬಾರದೆಂಬುದು ಇವರುಗಳ ವಾ... ಆದರೆ ಇದೇ ಹಿಂದೂತ್ವವಾದಿಗಳು ಮಾಡುವುದು ಏನ...



ಆಗ ಪ್ರಜ್ಞಾಸಿಂಗ್ (ಇವಳಿಗೆ ಸಾಧ್ವಿ ಎಂಬ ವಿಶೇ... ಬೇರೆ ಕೇಡು) ಗುಂಪು, ಈಗ ಇಂದ್ರೇಶ್ ಬಳಗ ಸಾಕ್ಷಿಸಮೇ... ಭಯೋತ್ಪಾದಕ ಚಟುವಟಿಕೆಗಾಗಿ ಸಿಕ್ಕಿಬಿದ್ದ... ಹಿಂದೂತ್ವವಾದಿಗಳು ತಮ್ಮ ತಪ್ಪನ್ನು ಒಪ್ಪದೇ ಸುಳ್ಳ... ಸಾಧಿಸ ಹೊರಟವೆ. ಆದರೆ ಇದೇ ಇಸ್ಲಾಂ ಜ... ವಿಷಯದಲ್ಲಾದರೆ ಇವರುಗಳು ಸುಳ್ಳನ್ನೇ ಸತ್ಯವೆಂ... ತಮ್ಮ ಬೆಂಬಲಕ್ಕಿರುವ ಮಾಧ್ಯಮಗಳ ಮೂಲಕ ಬಿಂ... ಹೊರಡುತ್ತಾರೆ. ಸ್ಥಳೀಯ ಉದಾಹರಣೆಯನ್ನೇ ಇ... ನೀಡುವುದಾದರೆ ಲವ್ ಜೆಹಾದ್ ಎಂಬ ಕಪೋಲಕ... ಕಟ್ಟುಕತೆ ಪ್ರಕರಣ.

ಮುಸ್ಲಿಂ ಯುವಕರನ್ನು ಪ್ರೇಮಿ... ಮದುವೆಯಾದ ಯುವತಿಯರು ಲವ್ ಜೆಹಾದ್‌ಗೂ ತಮಗೂ ಸಂಬಂಧವಿಲ್ಲ ಎಂದು ಹೇ... ಕೊಟ್ಟರೂ ಲವ್ ಜೆಹಾದ್‌ನಿಂದಲೇ ಹಿಂದೂ ಯುವತಿಯರು ಕಾಣೆಯಾಗುತ್ತಿದ್ದಾರೆ ಎಂದ... ಕೂಗಿದ್ದರು. ಆನಂತರ ಹಲವು ಯುವತಿಯರ 'ಕಾಣೆ'ಯ ನಿಜ ಸಂಗತಿ ಏನಂತ ಬಯಲ... ಅದರಲ್ಲಿ ಹಿಂದೂವಿನ ಕೈವಾಡ ಬಯಲಾದರೂ ಈ ಲವ್ ಜೆಹಾದ್ ಕಟ್ಟುಕತೆಯ... ಹಿಂದೂತ್ವವಾದಿಗಳು ಹಾಗು ಅವರ ಕೃಪಾಪೋಷಿತ ಮಾಧ್ಯಮಗಳು ವ್ಯವಸ್ಥಿತವಾಗಿ ಹಬ್ಬಿಸತೊಡಗಿದ... ಉದಾ: ಹಿಂದೂತ್ವವಾದಿಗಳಿಂದ ಲವ್ ಜೆಹಾದ್ ಬಲಿಪಶು ಎಂದು ಆರೋಪಿತವಾ... ಯುವತಿಯರನ್ನು ಸೈಕೋಪಾತ್ ಮೋಹನ್ ಕೊಂದದ್ದು ಎಂದು ತಿಳಿದ ಮೇಲೂ ತಮ್ಮಿಂದಾ... ತಪ್ಪನ್ನು ಮಾಧ್ಯಮಗಳು ಸರಿಪಡಿಸಿಕೊಳ್ಳುವ ಗೋಜಿಗೇ ಹೋಗದಿದ್ದುದು.

ಏನೇ ಇರಲಿ ನಿಧಾನವಾಗಿಯಾದರೂ ಒಂದೊಂದೇ ಬೆಳಕಿಗೆ ಬರುತ್ತಿರುವ ಹಿಂದೂ-ಕೇ... ಭಯೋತ್ಪಾದಕರ ಮುಖವಾಡದ ಹಿಂದಿನ ಕಾಣದ ಕೈ ಅರ್ಥಾತ್ ಕ್ರಿಮಿನಲ್ ಬ್ರೈನ್‌ಗಳು ಜೈ... ಕೂತು ಮುದ್ದೆ ಉಣ್ಣುವಂತ ಕಾಲ ಬೇಗ ಬರುವಂತಾಗಲಿ.

-ಶಶಿ ಪುತ್ತೂರು, ದಕ್ಷಿಣ ಕನ...



ಭೂಪನ ಮೆಜಾರಿಟಿ

ಎಂತಹ ಸಂಕೀರ್ಣ ಪರಿಸ್ಥಿತಿಯಿದು!
ವಿಚಿತ್ರ ಘಟನಾವಳಿಗಳಿಗೆ ಸಾಕ್ಷಿಯಾಗುತ್ತಿದೆಯಲ್ಲ?
ಸತ್ಯ ಹೇಳುವುದು ಬಲು ಕಷ್ಟವಾಗಿದೆ ಇಲ್ಲಿ
ಬರೀ ಸುಳ್ಳೇ ಸಾಕ್ಷ್ಯ ನೀಡುತ್ತಿದೆ ನೋಡು.
ಆತ್ಮ ಸಾಕ್ಷಿಯಿಲ್ಲದವರ ರಾಜಕೀಯ ದೊಂಬರಾಟದಲ್ಲಿ
ಸತ್ಯದ ಅಸ್ತಿತ್ವ ಉಳಿಸುವದು ಬಲು ಕಷ್ಟವಾಗುತ್ತಿದೆ.
ಸುಳ್ಳಿನ ತಲೆಯ ಮೇಲೆ ಕಿರೀಟ ನೋಡು.
ಇದಕ್ಕೆ ಇತಿಹಾಸವೇ ಮೌನ ಸಾಕ್ಷಿಯಾಗುತ್ತಿದೆ.
ಬೆಳಗಾಗುವದರೊಳಗಾಗಿ ಎಲ್ಲರೂ ಬದಲಾಗಿದ್ದಾರೆ
ಪ್ರಭುತ್ವದ ಕೈಗಳಿಂದ ವಿಧಾನಸೌಧಕೆ ಬೀಗ!
ಬಾಗಿಲು ಮುರಿದು ಒಳನುಗ್ಗಿದರಲ್ಲ ವಿರೋಧಿಗಳು
ಎಲ್ಲರ ನೋಟಗಳು ಗದ್ದುಗೆಯ ಮೇಲೆಯೇ
ನೆರೆ ಬಂದು ಬೀದಿಗೆ ಬಿದ್ದ ಬಡವ
ಬಯಲಲಿ ಬದುಕಿದರೂ ಸೂರು ಸಿಕ್ಕಲಿಲ್ಲ
ಅವರ ಮೇಲೆ ಯಾರ ದೃಷ್ಟಿಗಳೂ ಬೀಳಲಿಲ್ಲ ನೋಡು!
ಬಿದ್ದ ಗುಡಿಯ ಗೋಡೆಗಳ ಎತ್ತಿ ನಿಲ್ಲಿಸುವರು
ಮರುದಿನವೇ ಸುಣ್ಣ ಬಣ್ಣ ಸಿಂಗಾರ, ಪೂಜೆ
ಬಡವರ ಬದುಕಿಗೆ ಯಾರು ದಿಕ್ಕು ಹೇಳು?
ಸಾಗರದಂತೆ ಹರಿದುಬಂದ ಪರಿಹಾರದಲ್ಲಿ
ಬೊಗಸೆಯಾದರೂ ದಕ್ಕಲಿಲ್ಲ ಬಡವರ ಪಾಲಿಗೆ
ಕಾಣದ ಕೈಗಳ ಗರ್ದಿ ಗಮ್ಮತ್ತು ನೋಡು.
ವಿಧಾನಸೌಧಕ್ಕೆ ವಾಮಾಚಾರದ ಉಪದ್ರವ
ಎಂತಹ ಬೌದ್ಧಿಕ ದಾರಿದ್ರ ಬಂದಿದೆ ಪ್ರಭುತ್ವಕ್ಕೆ
ಮೆಜಾರಿಟಿ ತೋರಿಸಲು ವಿರೋಧಿಗಳು ಬಿಡಲೇ ಇಲ್ಲ
ಒಳಗೆ ಪ್ರವೇಶಿಸಿದ ಪೊಲೀಸು ರಾಜ್ಯದ ಗೈರತ್ತು
ಮುಗ್ಧ ಪ್ರಜೆಗಳಿಗೆ ಅವಮಾನದ ತುತ್ತು
ಕೋಟಿ ಕೋಟಿ ಕುದುರೆ ವ್ಯಾಪಾರ ಕುದುರಿಸಿದ
ಸಭಾಪತಿ ಭೂಪ ಘೋಷಿಸಿಯೇ ಬಿಟ್ಟ ಮೆಜಾರಿಟಿ
ಗೂಳಿಯ ಹಟ್ಟಿಯಲ್ಲಿ ರೋದನ ನೇಪಥ್ಯಕೆ ಬಿಟ್ಟು
ಪ್ರಜಾಪ್ರಭುತ್ವಕ್ಕೆ ಬಿತ್ತು ಕೊಡಲಿಯ ಪೆಟ್ಟು.
ಕಿವಿ ಮುಚ್ಚಿಕೊಂಡ ಆ ಸರ್ವಾಧಿಕಾರಿ,
ರಾಜಕೀಯ ಧ್ವನಿಗಳ ಕೇಳದಿದ್ದರೂ ಬೇಡ.
ನೆರೆ ಸಂತ್ರಸ್ತರನು ತುಳಿದಿಟ್ಟರಲ್ಲ ಅವರು
ಸಂಕಟದಲ್ಲಿರುವವರ ಆಚೆ ನೂಕಿದರಲ್ಲ
ರೆಸಾರ್ಟ ರಾಜಕೀಯ ಮಾಡುತ್ತ
ನಂಬಿದ ನಾಡಿನ ಜನರಿಗೆ ಮಣ್ಣು ಮುಕ್ಕಿಸಿದರಲ್ಲ,
ನ್ಯಾಯ ದೇಗುಲದಲಿ ಪ್ರಜಾಪ್ರಭುತ್ವದ ಕೊಲೆ
ನಡುಬೀದಿಯಲಿ ಹಾಡುಹಗಲೇ ನಡೆಸಿದರಲ್ಲ,



• ಡಾ. ಕೆ.ಪರೀ...

ಒಬಾಮನಿಗೆ ಬೊಂಬಾಯಿ ಸ್ಲಂ ತೋರುಸಬೇಕಾಗಿತ್ತು ಕಂಡ್ರ

ಮಂಡ್ಯಕ್ಕೆ ಬಂದು ಎಡೂರಪ್ಪ ಸೀರೆ ಹಂಚುತ್ತಿದ್ದಾನೆಂಬ ಕೇಳಿ ಕಾಳಮಾವನಿಗೆ ಕೋಪ ಬಂತು.

"ಅಲ್ಲಾ ಕಂಡ್ರ, ಆ ಉತ್ತರ ಕರ್ನಾಟಕದಲ್ಲಿ ಮಳಿಬಂದು, ಬಿದ್ದು, ಜನ್ನಲ್ಲ ಬೀದಿಲೆ ಇದ್ದರಂತೆ. ಅಲ್ಲಿಗೋಗಿ ರ ಮಾಡದು ಬುಟ್ಟು ಇಲ್ಲಿಗೆ ಬಂದು ಸೀರೆ ತನೆ ಅಂದ್ರೆ ಇವುನ್ಯಾಕೊ ಸರಿಲ್ಲ ಕಂಡ್ರ" ಎಂದ.

ಯ ಲು ಸೀ ಮೆ
ಕಟ್ಟೆಪುರಾಣ
ಬಿ. ಚಂದ್ರೇಗೌಡ

'ಅವುನು ದಾರಿತಪ್ಪಿದೋನು ಕಣವಾವ. ಮಾನ್ಯವಾಗಿ ದಾರಿ ತಪ್ಪಿದೋರು ಗೊತ್ತಾದೇಟಿಗೆ ದಾರಿಗೆ ಬತ್ತರೆ. ಆದ್ರಿವುನು ಅದೇ ದಾರೀಲಿ ವಂಟವುನೆ. ದು ಮಾತ್ನು ಕೇಳ್ತಯಿಲ್ಲ" ಎಂದ ಉಗ್ರಿ.

"ಇನ್ನೂರುಪಾಯಿ ಸೀರೆಯ ಐನೂರುಪಾಯಿಗೆ ವುರಂತೆ, ನಿಜವೇನ್ನ?" ಎಂದಳು ಜುಮ್ಮಿ.

"ಅದು ಮಾಮೂಲಿ ಅಲವೇನೆ. ಸೈಕಲ್ಲಿನಲ್ಲೂ ಅಂಗೆ ದ್ದು, ಈಗ ಹೆಂಗಸರ ಸೀರೆಲೂ ದುಡ್ಡು ವಡದವು."

"ಹೆಂಗಸರ ಸೀರೆಲೂ ದುಡ್ಡುವಡಿತವೆ ಅಂದ್ರ ಇನ್ನಂಥ ಟ್ಟವುಲ?" ಎಂದು ಸೀರ "ಥೂ!" ಎಂದು ಉಗಿದ.

"ಹೆಂಗಸರ ಸೀರೆ ಅಂತಿಯಲ್ಲಾ ಇನ್ನೇನು ಗಂಡುಸರವು ದ್ದವೇನೊ. ಅವುರ್ಯಾಕೆ ದುಡ್ಡುವಡಿತರೆ ಅಂದ್ರೇ ಸೀರೆ ಟೋ ಕಾರ್ಯಕ್ರಮಕ್ಕೆ ನೀನು ದುಡ್ಡು ಕೊಡ್ತಿಯ? ತರಬೇಕು, ಅವುರಿಗ್ಯಲ್ಲ ಊಟ ಕೊಡಬೇಕು, ಾಲಾಕಬೇಕು, ಇದಕ್ಯಲ್ಲ ದುಡ್ಡಬೇಕಲ್ಲ. ಅದನ್ಯಲ್ಲ ೀಲೆ ವಡಕತರಂತೆ" ಎಂದು ಉಗ್ರಿ ನಕ್ಕ.

"ಅಲ್ಲಾ ಕಂಡ್ಯಾ, ನಮ್ಮ ಮಂಡೇವುದಲ್ಲಿ ಜನ ಚನ್ನಾಗೇ ಕಿ. ಅವುರೇನು ಹರಕುಲ ಸೀರೆಲಿ ತಿರುಗಾಡ್ತರೇ. ನ್ಯಾರಪ್ಪ ಸೀರೆ ಕೇಳಿದೋರು? ಅತಿವೃಷ್ಟಿಯಿಂದ ಯಿಲ್ಲ ಕೊಚಗಂಡೋಗಿರೋ ಜಾಗದಲ್ಲಿ ಹೋಗಿ ಶಗುಂಡು ನಿಮಗೇನಾಗ್ಯದಪ್ಪ ಅಂತ ಕೇಳದಬುಟ್ಟು ಗೆ ಬಂದ್ಯವುನಲ್ಲಾ, ಇವುನಿಗೇನೇಳನಾ?"

"ತಿರಗ ಅದ್ನೆ ಹೇಳತೀಯಲ್ಲ ಮಾವ. ಇಲ್ಲಿಗಷ್ಟೆ ಹಾಸನ, ರಾಮನಗರಕ್ಕಲ್ಲ ಹೋಗಿ ಹಂಚತಾ ಅವುನೆ."

"ಹಂಚಲಿಬುಡ್ಯ. ಅದೇನವುರಪ್ಪನ ಮನಿಂದ ತಂದು ನೆ?" ಎಂದ ಸೀರ.

"ಹಂಚಿರದಷ್ಟೇ ಅಲ್ಲ, ಮಾತೆರು ನನ್ನ ಕೈಬುಡಬ್ಯಾಡಿ ಅಂದವುನೆ."

"ಅಂಗರವುನ ಕಷ್ಟ ಇನ್ನು ಬಗೆಹರಿದಿಲ್ಲ ಅನ್ನಂಗೆ ಕಾಣ್ತ ಅದೆ."

"ಊ ಕಣೊ, ಅವುನ ಮಕ ನೋಡಿದ್ರೆ ಒಂದು ನಗ ಇಲ್ಲ, ಒಂದು ತಮಾಸೆ ಇಲ್ಲ. ಅಂಗೆ ದಿನ ಎಣುಸೋನಂಗೆ ಕಾಣ್ತ ಅವುನೆ."

"ಅಂಗಂತಿಯಾ?"

"ಊ ಕಣೊ. ಮಾರಾಷ್ಟ್ರದ ಮುಖ್ಯ ಮಂತ್ರಿ ತನ್ನ ಸಮಂದಿಗಳಿಗ್ಯಲ್ಲ ಮನೆ ಕೊಡಿಸಿದ್ನಂತೆ. ಅದು ಗೊತ್ತಾದೇಟಗೆ ಸೋನಿಗಾಂಧಿ ಕರದು ರಾಜೀನಾಮೆ ಈಸ ಗಂಡವುಳೆ. ಇದೇ ಎಡೂರಪ್ಪನ್ನ ಕೆದಕಿದ್ರೆ ಅಂಥವ ಹತ್ತು ಕ್ಯಲಸ ಮಾಡ್ಯವುನೆ. ಆದ್ರಿಂದ ಬಿಜೆಪಿಗಳು ಬಾಯಿಬುಟ್ರೆ ಬಣ್ಣಗೇಡು ಅನ್ನಂಗಾಗ್ಯದೆ. ಆ ಸೋನಿಗಾಂಧಿ ಎದ್ರಿಗೆ ಸಣ್ಣ ಜನಾದ್ರು ಇವುರು."

"ಸೋನಿಗಾಂಧಿ ನಿಜವಾದ ಲೀಡ್ರು ಕಂಡ್ರ. ಮಾತಾಡದಂಗೆ ಕ್ಯಲಸ ಮಾಡ್ತಳಲ್ಲಾ.... ಅದು ಇರದು". ಎಂದ ಕಾಳಮಾವ.

"ಅವುಳ್ಯಂಥಾ ಬುದ್ಧಿವಂತೆ ಅಂದ್ರೆ ಮಾವ, ಅಮೆರಿಕದ ಅಧ್ಯಕ್ಷ ಬಂದೋಗಗಂಟ ಸುಮ್ಮನಿದ್ದು ಅವುನತ್ತಗೋದೇಟಿಗೆ ರಾಜೆನಾಮೆ ತಗಂಡ್ಳು. ಇದಕೇನೇಳ್ತಿ?"

"ಏನು ಹೇಳಂಗಿಲ್ಲ, ಮಾನ ಮರಿಯಾದಿ ಅನ್ನದೇನಾರ ಇದ್ರೆ ಬಿಜೆಪಿಗಳು ಎಡೂರಪ್ಪನ ರಾಜೀನಾಮೆ ತಗಬೇಕು ಕಣೊ ಉಗ್ರಿ" ಎಂದು ವಾಟಿಸ್ಸೆ ಬಂದ.

"ಎಲ್ಲಿಗೋಗಿದ್ದ ನೀನು?"

"ಒಬಾಮನ್ನ ಕಳಸಕ್ಕೋಗಿದ್ದೆ ಕಣಕ್ಕ."

"ಆಹಹ, ಮಹಾ ಇವುನು ನೋಡು ನೀನು. ಸೀರೆ ಹಂಚತಕ್ಕೆ ಹೋಗಿಬುಟ್ಟು ಏನು ಆಗಿಲ ವೇನೊ ಅನ್ನಂಗೆ ಬಂದವುನೆ ಮಳ್ಳಿಯಂಗೆ."

"ಸೀರೆ ಕೊಡ್ತರೆ ಅನ್ನೊ ಕಾರ್ಯಕ್ರಮನೆ ಸೇಮು ಕಣಕ್ಕ. ಆ ಒಬಾಮ ಬಂದು ಡೆಲ್ಲಿ ಸಂಸತ್ ಭವನದಲ್ಲಿ ನಿಂತುಗಂಡು, ಭಾರತ ಅಭಿವೃದ್ಧಿಯಾಗ್ತಯಿಲ್ಲಾ, ಆಗ್ಲೆ ಅಭಿವೃದ್ಧಿ ಹೊಂದಿ ಸುಧರಾಯಿಸಿಗತ್ತಾ ಅದೆ ಅಂತ ಅಲ್ಲಿ ಭಾಷಣ ಮಾಡ್ತಯಿದ್ರೆ, ಇಲ್ಲಿ ಎಡೂರ ನಮ್ಮ ಲೇಡೀಸ್‌ಗೆ ನೂರುಪಾಯಿ ಸೀರೆ ಹಂಚತಾಯಿದ್ದ. ಇಟೀಸ್ ರಿಯಲಿ ಶೇಮ್ ಟು ಅವರ್ ಕಂಟ್ರಿ.

"ಅಂಗರೆ ಅಮೆರಿಕದ ಅಧ್ಯಕ್ಷ ಅಂಗಂದನೆ?" ಎಂದ ಕಾಳಮಾವ.

"ಊ ದ್ವಡಪ್ಪ, ನಾನೇನು ಸುಳ್ಳೇಳತಾಯಿಲ್ಲ, ಇದೇ ಮಾತಂದ. ಪಾಪ ಅವುನ ಕಣ್ಣಿಗೆ ಕಂಡದ್ದ ಹೇಳ್ಯವುನೆ ಬುಡು. ಅವುನ್ನ ಬಂಬಾಯಿ ಧಾರಾವಿ, ಭೀವಂಡಿ, ಏರ್‌ಪೋರ್ಟ್‌ತ್ರುಯಿರ್ರೊ ಸ್ಲಂ ತೋರಿಸಿ, ಅಂಗೇ ಉತ್ತರ ಕರ್ನಾಟಕದ ಶೆಡ್ಡಲಿರೊ ಜನಗಳ ತೋರಿದ್ರೆ ಅಂತ ಮಾತಾಡತಿರಲಿಲ್ಲ, ಆದ್ರು ನಮ್ಮ ರಾಜಕಾರಣಿಗಳಿಗೆ ಓಲಿಸಿದ್ರೆ ಅವುನ ಭಾಳ ವಳ್ಳೆನು ದ್ವಡಪ್ಪ" ಎಂದ ವಾಟಿಸ್ಸೆ.

"ಇರಬವುದು ಬುಡು."

"ಇರಬವುದೇನು, ವಳ್ಳೆ ಮನ್ಸ ದ್ವಡಪ್ಪ, ನನಿಗೇನೊ ಲೈಕಾದ. ಅದೇ ಬಿಜೆಪಿ ಬಡ್ಡೆತ್ತವು ಯರಡು ದಿನ ಒಬಾಮ ಪಾಕೀಸ್ತಾನದ ಪರ ಅವುನೆ ಅಂತ ಮಾತಾಡಿ, ಮಾತಾಡಿ ಅದ್ನೆ ಬರಿತಿದ್ರು."

"ಅವುರ್ಯಾಕಂಗೆ ಬರದ್ರು ಗೊತ್ತೇನೊ? ಒಬಾಮಾರ ಅಪ್ಪ ಸಾಬರೋನಂತೆ. ಅವರವ್ವ ಕಿರುಸ್ತಾನರೊಳಂತೆ. ಅದ್ಕೆ ಈ ನನಮಕ್ಕಳು ಅನುಮಾನದಲ್ಲೇ ಬರಿತಿದ್ರು. ಯಾವಾಗ ಒಬಾಮಾ ಮೆಟ್ಟಿನಲ್ಲಿ ಹ್ವಡದಂಗೆ ಮಾತಾಡಿದ್ನೊ ಈಗ ಮುಟ್ಟಿ ನೋಡಿಕತ್ತಾ ಅವುರೆ."

"ನಿಜ ಕಣೊ ಉಗ್ರಿ. ಅಮೆರಿಕದಂತ ದೇಸಕೆ ಅಧ್ಯಕ್ಷಾಯ್ತನೆ ಅಂದ್ರೆ ಅದು ಸದರವಾನಿ ಮಾತಲ್ಲ, ಅವುನ ಜೊತೆ ನಮ್ಮ ಸಿಂಗ ನಿಂತಿದ್ರೆ ಅಂಗೆ ಕೊತಿಕಂಡಂಗೆ ಕಾಣತಿದ್ದ."



"ಅವುನೆಡ್ತಿ ಏನು ವಸಿ ಉದ್ದ ಇದ್ದಳೇನ್ನ?" ಎಂದಳು ಜುಮ್ಮಿ.

"ನೀನೆಲ್ಲಿ ನೋಡಿದಕ್ಕ."

"ಟಿವಿಲಿ ನೋಡಿದೆ ಕಂಡ್ರ. ಅವುಳೇನಾರ ಸೀರೆ ಉಟ್ಟಿದ್ರೆ ವಸಿ ಉದ್ದ ಕಾಣತೆದ್ಲ?"

"ಬರೀ ಸೀರೇದೆ ಯೋಚನೆ ನಿನಿಗೆ. ಆ ಎಡೂರಪ್ಪ ಇರೊ ಹೆಡತಿ ಕಳಕಂಡು ಅವುರಿವುರೆಂಡ್ತಿಗೆ ಸೀರೆ ಉಡುಸಕ್ಕೆ ಬಂದವುನೆ. ನೀನು ಒಬಾಮ ಹೆಡ್ತಿ ಸೀರೆ ಉಡಬೇಕಾಗಿತ್ತು ಅಂತಿ."

"ಸುಮ್ನೆ ಹಂಗಂದೆ ಕಂಡ್ರ."

"ನಿನಿಗೆ ಚೂಡಿದಾರ ಹಾಯ್ಕಳಕೆ ಯಂಗೆ ಆಗದಿಲವೊ ಅಂಗೇ ಆ ಒಬಾಮನೆಡ್ತಿ ಸೀರೆ ಉಡಕ್ಯಾಗದಿಲ್ಲ ಕಣಕ್ಕ, ಊಟ ಬಟ್ಟೆ ತನ್ನಿಚ್ಛೆ ಅಂತ, ಇದೇ ನಮ್ಮ ದ್ಯಾವೇಗೌಡ್ರು ಮಾಮೂಲಿ ಡ್ರಸಲ್ಲೇ ಹೋಗಿ ಕುಂತಿದ್ರು."

"ಅಂಗರೆ ದ್ಯಾವೇಗೌಡ್ನು ಹೋಗಿದ್ನೆ?"

"ಹೋಗಿದ್ದ. ಮಾಜಿ ಪ್ರಧಾನಿಯಲವೆ ದೊಡಪ್ಪ, ಅವುನು ಮಾಜಿ ಪ್ರಧಾನಿ ಅನ್ನದು ನಮಿಗೆ ಮರತೋಗ ಬವುದು. ಆದ್ರೆ ಡೆಲ್ಲಿಗೋದ್ರೆ ಅದೇ ಟ್ರಂಪ್ ಕಾರ್ಡು. ಪಾಪ ಆಗ್ಲೆ ವಯಿಸಾಯ್ತು. ಕುಂತ್ರೆ ಏಳದು ಸ್ವಲಪ ಕಷ್ಟ. ಅದ್ಕೆ ಸೋನಿಗಾಂಧಿ ಹಿಡದೆತ್ತಿದ್ಲು ಅವುನ್ನ."

"ಸೋನಿಗಾಂಧಿಗೆ ದೇವೇಗೌಡ ವಳ್ಳೆ ಮನಸಾಗಿ ಕಂಡಿದ್ರೆ ಅವುನ್ನೆ ಪ್ರಧಾನಿ ಮಾಡತಿದ್ಲು ಕಣೊ."

"ಅದ್ಯಾಂಗೆ ಮಾಡ್ತಳೊ ಉಗ್ರಿ? ದೇವೇಗೌಡ್ರು ವರ್ತೂರು ಪ್ರಕಾಶನ ಕ್ಲೋಸ್ ಪ್ರೆಂಡ್. ಅಂಥೋನು ಯಾವತ್ತಾರ ವಳ್ಳೆ ರಾಜಕಾರಣ ಮಾಡಕ್ಯಾಯ್ತದ? ಸೋನಿಗಾಂಧಿ ಮನಸು ಗೆಲ್ಲಿಕ್ಯಾಯ್ತದ ಹೇಳು?"

"ಆ ವರತೂರು ಪ್ರಕಾಸ ಮಂತ್ರಿಯಾಗದು ಎಲ್ಲಿಗೆ ಬತ್ತ?" ಎಂದ ಸೀರ.

"ಅವುನು ಮಂತ್ರಿಯಾಗದು ನಿನ್ನ ನಾಯಿ ಮದಿವಾಗದು ಒಂದೇ ದಿನ ಅನ್ನಂಗೆ ಕಾಣ್ತ ಅದೆ ಚಿಗಪ್ಪ!"

"ಸರಿಯಾಗೇಳ್ಳ."

"ಕರಟ್ಟಾಗೇ ಹೇಳಿದೆ ಚಿಗಪ್ಪ. ಅವುನು ಮಂತ್ರಿಯಾದ ಚೆನ್ನಲ್ಲೇ ಈ ಸರಕಾರ ಬಿದ್ದೊಯ್ತದೆ ಅಂತ ಜ್ಯೋತಿಷಿಗಳು ಎಡೂರಪ್ಪನಿಗೆ ಹೇಳಿದ್ರಂತೆ. ಅದ್ಕೆ ಅವುನು ಗಡಕರಿವರಿಗೂ ಪ್ರಕಾಶನ್ನ ಕರಕಂಡೋಗಿ ಕನುವಿನ್ಸ ಮಾಡಿ ಕರಕಂಡು ಬಂದವುನಂತೆ. ಇಷ್ಟಾದ್ರು ಎಡೂರಪ್ಪನೆ ರಗತ ಕಾರಿಕಂಡು ಸಾಯಂಗೆ ಯಾರೊ ಮಾಟಮಾಡಿಸಿದ್ದರಂತೆ."


"ಯಾರ್ಲ ಅಂಗಂದೋರು?"

"ಎಡೂರಪ್ಪನೇ ಅಂಗಂದ ದ್ವಡಪ್ಪ ನನಿಗೇ ಯಾರೊ ಕತ್ತೆ ಕಡುದು ಮಾಟ ಮಾಡಿಸ್ಯವುರೆ, ಆದ್ರೂ ನನಿಗೆ ಏನು ಆಗಿಲ್ಲ ಅಂತ ಹೇಳ್ತ ಕುಂತವುನೆ."

"ಯಾರು ಮಾಡಿಸಿರಬವುದೂ?"

"ಇನ್ಯಾರು, ಗಣಿರೆಡ್ಡಿಗಳೇ ಮಾಡಿಸಿರಬೇಕು. ಅವುರಿಗೇ ಅಂತ ಶಗುತಿ ಇರದು. ಅಂತೂ ಎಡೂರಪ್ಪನ ತಲೆ ಉರಳದ ನಾವು ಕಾಯ್ತಾ ಕೂರಬೇಕು. ಇಟೀಸ್ ರಿಯಲಿ ಹಾರಿಬಲ್ ಸಿಚುಯೇಶನ್!" ●

ಾಕ್‌ಪಾಟ್!




ಚಿತ್ರ ಬರೆಯುವವರಿಗೆ, ಸಂಗೀತಗಾರರಿಗೆ ುಸುತ್ತದೋ ಗೊತ್ತಿಲ್ಲ, ಅವರಲ್ಲಿ ಕೆಲವರು ಾಗಿ, ಲೌಕಿಕ ಸುಖಕ್ಕಾಗಿ ಪರದಾಡಬಹುದು; ಕೃತಿಗಳು ಎಲ್ಲರ ಮೆಚ್ಚುಗೆ ಗಳಿಸಿದರೆ ಪಡಬಹುದು. ಸಾಹಿತಿಗಳಲ್ಲೂ ಅನೇಕರು ಇರಬಹುದು. ನನ್ನ ಗುಟ್ಟು ಹೇಳುತ್ತೇನೆ. ೊಮ್ಮೆ ತುಂಬ ಬೇಸರವಾಗುತ್ತದೆ. ನನ್ನನ್ನು ಕುತೂಹಲದಿಂದ ತುಂಬುವ ಮರಗಿಡಹಕ್ಕಿ, ಶದ ವಿವಿಧ ಮೂಡ್‌ಗಳು, ಭೂಮಿಯ ವೈವಿಧ್ಯಮಯ ಉಡುಪು, ಚೆಂದಗಳು ನನಗೆ ಸಂತೋಷ ುತ್ತವೆ. ಆದರೆ ನಿಜಕ್ಕೂ ಗಾಢ ದುಗುಡ ಮುತ್ತಿದಾಗ ಯಾವುದೂ ನನ್ನಂಥವನನ್ನು ಉಳಿಸುವುದು ಸಾಧ್ಯವಿಲ್ಲ ುತ್ತದೆ. ಆಗ ನನಗೆ ಹೊಸ ಜೀವ ಕೊಡುವುದು ಈಗ ಬರೆಯುತ್ತಿರುವ ಕತೆ, ನಾಟಕ ಅಥವಾ ಕವನ. ಚೆನ್ನಾಗಿ ಾಗಲಂತೂ ತುಂಬ ಹರ್ಷ ಅನ್ನಿಸುತ್ತದೆ. ಕೆಲವರು ಲೇಖಕರು ಬೇರೆಯವರ ಅಭಿಪ್ರಾಯವನ್ನು ಅವಲಂಬಿಸುತ್ತಾರೆ. ೆ ನಮ್ಮಲ್ಲಿ ಓದುವವರು, ಅಭಿಪ್ರಾಯ ಹೇಳುವವರು ಕಮ್ಮಿ. ಹೇಳಿದಾಗಲೂ ಕತೆಯನ್ನು ಸರಿಯಾಗಿ ಓದದೆ ತನ ತೋರುವವರೇ ಹೆಚ್ಚು. ಒಬ್ಬ ಒಂದು ಕತೆ ಓದಿ 'ಸ್ವಲ್ಪ expand ಮಾಡಬಹುದಿತ್ತು. ತೀರಾ ಹವಾಗಿ ಬರೆದಿದ್ದೀರಿ' ಅಂದ. ನಾನು ಚಿಂತೆಗೀಡಾದಂತೆ ಮುಖ ಮಾಡಿಕೊಂಡು 'ಎಲ್ಲಿ, ಯಾವ ಭಾಗವನ್ನು ಮಾಡಬಹುದಿತ್ತು?' ಅಂದೆ. ಆತ ನಿಜಕ್ಕೂ ಓದಿಯೇ ಇರಲಿಲ್ಲ!


ನಿಜವಾದ ಲೇಖಕ ಸಹೃದಯರಾದ ಓದುಗರನ್ನು ಅಪೇಕ್ಷಿಸಿದರೂ ತನ್ನ ಆಳದ ತಾರತಮ್ಯ ಜ್ಞಾನವನ್ನು ೊಂಡಿರುತ್ತಾನೆ; ತಾನು ಬರೆದದ್ದು ಒಳ್ಳೆಯದೋ ಕೆಟ್ಟದೋ ಎಂಬುದನ್ನು ತೀರ್ಮಾನಿಸುವ ನಿಷ್ಠುರ ವಿಮರ್ಶಕ ನ್ನು ಪಡೆದಿರುತ್ತಾನೆ. ಇಲ್ಲದಿದ್ದರೆ ಆತ ತನ್ನ ಕೃತಿಯನ್ನು ತಿದ್ದುವುದು, ಪುನರಾವರ್ತಿಸುವುದು ಸಾಧ್ಯವಾಗುವುದಿಲ್ಲ. ಅಡ್ಡಾಡುತ್ತಿದ್ದಾಗ, ಯಾರೊಂದಿಗೋ ಕಾಡುಹರಟೆಯಲ್ಲಿ ಮುಳುಗಿದ್ದಾಗ ತಾನು ಇತ್ತೀಚೆಗೆ ಬರೆದಿರುವ ಬರೆಯುತ್ತಿರುವ ಕೃತಿಯನ್ನು ನೆನೆದು ಲೇಖಕ ನೆಮ್ಮದಿಗೊಳ್ಳುತ್ತಾನೆ; ಆತನಿಗೆ ಅದೇ ನಿಜವಾದ ಪಾಟ್!

ಅಭ್ಯಾಸ ಅಥವಾ ಅಂಗಸಾಧನೆ

ನಾನು ಎರಡು ತಿಂಗಳ ಹಿಂದೆ ನಮ್ಮ ಉತ್ತಮ ಲೇಖಕರೊಬ್ಬರೊಂದಿಗೆ ಮಾತಾಡುತ್ತಿದ್ದೆ. ಆಗ ಹೇಳಿದೆ, "ನೀವು ದಯವಿಟ್ಟು ಪ್ರತೀವಾರ ಒಂದು ಚಿಕ್ಕ ಬರಹವನ್ನು ಬರೆದು ನಮಗೆ ಕಳಿಸಿ, ಅದು ಚೆನ್ನಾಗಿದ್ದರೆ ಪ್ರಕಟಿಸೋಣ" ಅಂದೆ. ನಾನು ಗಂಭೀರವಾಗಿಯೇ ಅದನ್ನು ಹೇಳಿದ್ದೆ. ಆದರೆ ಅವರಿಗೆ ಅದು ತಮಾಷೆಯಾಗಿ ಕೇಳಿಸಿತು. "ಪ್ರತೀವಾರ ಬರೆಯೋದು ಕಷ್ಟ" ಅಂದರು, ಗಂಭೀರ ಮುಖಮುದ್ರೆ ಹೊತ್ತು.

ನಾನೆಂದೆ: "ನಮಗೆಲ್ಲ ನಾವು ಸಿದ್ಧಹಸ್ತರು, ಪ್ರಚಂಡ ಬರಹಗಾರರು ಅನ್ನೋ ಕಲ್ಪನೆ ಬಹುಬೇಗ ಬಂದುಬಿಡುತ್ತೆ. ಆದ್ದರಿಂದ ನಾವು ಬರೆಯುವ ರೀತಿಯನ್ನು ಉತ್ತಮಪಡಿಸಿಕೊಳ್ಳೋಲ್ಲ. ಒಬ್ಬ ಸಂಗೀತಗಾರ ತನ್ನ ಕಲೆಯನ್ನು ಪ್ರತೀದಿನ ಕನಿಷ್ಠ ನಾಲ್ಕುಗಂಟೆ ಅಭ್ಯಸಿಸ್ತಾನೆ, practice ಮಾಡ್ತಾನೆ, ಶ್ರದ್ಧೆಯಿಂದ ಹಾಡಿ ಅಥವಾ ವಾದ್ಯ ನುಡಿಸಿ ತರಬೇತಿ ಪಡೀತಾನೆ. ಅದು ಅಂಗಸಾಧನೆಯ ತರಹ. ಸಾಹಿತಿಯಾದವನು ಸ್ಫೂರ್ತಿಗಾಗಿ ಕಾದು ತಿಂಗಳಿಗೊಮ್ಮೆಯೋ ವರ್ಷಕ್ಕೊಮ್ಮೆಯೋ ಬರೀತಾನೆ. ಇದು ಶುದ್ಧ ಅಹಂಕಾರ. ಲೇಖಕನಾದವನಿಗೆ ಸಂಗೀತಗಾರನಿಗಿರುವ ಶ್ರದ್ಧೆ ತನ್ನ ಕಲೆಯ ಬಗ್ಗೆ ಕಾಳಜಿ ಇರಬೇಕು. ನಾನು ಓದಿರುವಂತೆ ಪ್ರಸಿದ್ಧ ಕತೆಗಾರ್ತಿ ಕ್ಯಾಥರೀನ್ ಆನ್ ಪೋರ್ಟರ್ ನಿತ್ಯ ಬರೀತಿದ್ಳು, ನೂರಾರು ಕತೆ ಬರೆದು ಒಂದೆಡರನ್ನು ಮಾತ್ರ ಅಚ್ಚುಮಾಡಲು ಕಳಿಸ್ತಿದ್ದಳು. ಬರಹವೆಲ್ಲ ಅಭ್ಯಾಸದ್ದು. ಹಾಗೆಯೇ ಎಲಿಯಟ್, 'ನೀವು ಕವನ ರಚಿಸಬೇಕಾದ್ರೆ ನಿತ್ಯ ಪದ್ಯ ಬರೆಯಲು ಯತ್ನಿಸಿ, ವಾರಕ್ಕೊಮ್ಮೆಯಾದ್ರೂ ಅಭ್ಯಾಸ ಮಾಡಿ' ಅಂತ ಆತ ಹೇಳ್ತಿದ್ದ. ಇದನ್ನೆಲ್ಲ ಕೇಳಿದ್ರೆ ನೀವು ನಗಬಹುದು. ನೀವು ನಮ್ಮಲ್ಲಿ ಬರೀತ ಹೋದ್ರೆ ನಿಮ್ಮ ಶೈಲಿ ಉತ್ತಮಗೊಳ್ಳುತ್ತೆ, ನಿಮ್ಮ ನಿರೂಪಣಾ ಶಕ್ತಿ ಹದವಾಗುತ್ತೆ ಮತ್ತೆ ಜನಕ್ಕೆ ಅರ್ಥವಾಗುವಂತೆ ಬರೆಯೋಕೆ ನಿಮಗೂ ಬರುತ್ತೆ...' ಅಂದೆ. ಇಬ್ಬರೂ ನಕ್ಕೆವು!






-ಜುಲೈ 20, 1994

ಕತ್ತೆ ಮಾಟ

ಕಾಂಗ್ರೆಸ್ ಇತ್ತು
ಅನಾವೃಷ್ಟಿ ಬಂತು
ಭಾಜಪ ಬಂತು
ಅತಿವೃಷ್ಟಿ ತಂತು

ಎಂದು ಮುಂತಾಗಿ ಪದ ಹಾಡ್ಕಳೋ ಪರಿಸ್ಥಿತಿ ಬಂದಿದೆ. ವರುಣ ಅನ್ನೋನು ಆಗ ಬಾರದೆ ಸಾಯಿಸಿದ. ಈಗ ಬಂದು ಸಾಯಿಸ್ತಾ ಇದಾನೆ. ಜನಗಳು ಹೆಂಗೋ ಬದುಕೋ ದಾರಿ ಕಂಡುಕೊಳ್ತಾರೆ ಬಿಡಿ. ಅದಲ್ಲ, ಮುಖ್ಯಮಂತ್ರಿಗಳಾಗಿರೋರ ಗೋಳ ನೋಡೋಕಾಗಲ್ಲ. ಎಸ್.ಎಂ. ಕೃಷ್ಣ ಬೆಣ್ಣೇಲಿ ಕೂದಲು ತೆಗೆಯುವಂತಹ ನಯನಾಜೂಕಿನ ಮನುಷ್ಯ ಅಲ್ವಾ. ಅದ್ಯೇ ದೇವರಿಗೆ ಪೂಸಿ ಹೊಡೆದರೆ ಮರುಳಾಗ್ತಾನೆ ಅಂತಾವ ದೇವಾಲಯ,

ಅಣಕ



▶ ಎಚ್.ಎಲ್. ಕೇಶವಮೂರ್ತಿ

ಮಸೀದಿ, ಚರ್ಚುಗಳಲ್ಲೆಲ್ಲಾ ಪೂಜೆ ನಡೀಬೇಕು ಅಂತ ಆರ್ಡರು ಮಾಡಿದ್ರು. ಮಳೆ ಬರ್ಲಿಲ್ಲ, ಮುಖ್ಯಮಂತ್ರಿಗಿರೀನೆ ಕಿತ್ಕೊಂಡೋಯ್ತು! ಇನ್ನು ಯಡ್ಯೂರಪ್ಪನವರು ಮಾತಿಗೆ ಮುಂಚೆ ದೇವರ ನೆನೆಯೋರು. ಆ ದೇವರು, ಈ ದೇವರು ಅಂತ ಬರಬರನೆ ನಾಯಿ ಅಲೆದಂಗೆ ದೇವಸ್ಥಾನಗಳಿಗೆ ಪುರುಸೊತ್ತಿಲ್ದಂಗೆ ಅಲೆಯೋರು. ಅವರು ಮಾಡಿದ ಪೂಜೆ ಸಾಲದು ಎಂದೋ ಏನೋ ನಮ್ಮ ನಾಯಕನಿಗೆ ಒಳ್ಳೆಯದಾಗಲಿ ಅಂತ ಭಾಜಪ ಭಕ್ತರು ಮೊದಲಿಂದ ಹೋಮಯಜ್ಞ ನಡೆಸುತ್ತಲೇ ಇರೋರು. ಇಷ್ಟೆಲ್ಲ ಇದ್ದರೂ ವರುಣ ಅನ್ನೋನು ಸಿಟ್ಟಿಗೆದ್ದಿರುವಂತಿದೆ. ತಾಯಂದಿರಿಗೆ ಸೀರೆ ಹಂಚಲೂ ಬಿಡುವು ಕೊಡೋ ಹಂಗೆ ಕಾಣ್ತಿಲ್ಲ. ಜೆಡಿಎಸ್‌ನವ್ರು ಬ್ಯಾರೆ 'ಕಳಪೆ ಸೀರೆ ಬೇಕಿಲ್ಲ' ಅಂತ ಕುಂತವೆ. ಅದ್ಯಾವ್ದೋ ಧರ್ಮಕ್ಕೆ ದಟ್ಟಿ ಕೊಟ್ಟರೆ ಹಿತ್ತಲಿ ಗೋಯ್ತುಂತಲ್ಲ ಮೊಳಹಾಕಕೆ ಅಂಗಾಯ್ತು ಇವರ ಕತೆ. ಸೀರೆ ಅಂತ ಬಂದು ಕೊಟ್ರಲ್ಲ ಅಂತ ಸಂತೋಷ ಪಡಲಿಲ್ಲ, ಕಳಪೆ ಗುಣಮಟ್ಟದವು ಅಂತ ಕೂಗಾಡ್ತವೆ. ತಾಲ್ಲೂಕು ಜಿಲ್ಲಾ ಪಂಚಾಯ್ತಿ ಚುನಾವಣೆಗಳು ಬೇರೆ ಹತ್ತಿರ ಬರ್ತಿವೆ. ಸೀರೆ ಹಂಚಿ ಅಭಿವೃದ್ಧಿ ಪಥದಲ್ಲಿ ಸಾಗುವುದು ಅನಿವಾರ್ಯ ಆಗಿದೆ. ಇದಕ್ಕೂ ಬಿಡುವು ಕೊಡೋ ಹಂಗೆ ಕಾಣ್ತಾ ಇಲ್ಲ ಆ ಮಳೆರಾಯ. ಹೆಂಗೋ ನಿಭಾಯಿಸಾನ ಅಂದ್ರೆ ಯಾರೋ ಈ ರೀತಿಯ ಅಭಿವೃದ್ಧಿ ಸಹಿಸದ ಮುಂಡೇಮಕ್ಳು ಕತ್ತೆ ಬಲಿ ಕೊಟ್ಟವ್ರಂತೆ. ಯಾಕೋ ಗೊತ್ತಿಲ್ಲ, ಅವರ್ನೂ ನಿನ್ನ ಜಾತಿಗೇ ಸೇರಿಸ್ಕೋ ಅಂತಾನೋ ಏನೋ! ಯಡ್ಯೂರಪ್ಪನವರು ಹೇಳದೇ ಬೇರೆ. ಸನ್ಮಾನ್ಯ ಯಡ್ಯೂರಪ್ಪನವರನ್ನೇ ಬಲಿ ತಗೊ ಅಂತ ಮಾಟ ಮಾಡ್ಸವ್ರಂತೆ! ಮಾಟ ಅನ್ನೋದು ಕೋಳಿ ಹಂತದಿಂದ ಕತ್ತೆ ಹಂತಕ್ಕೇರಿದೆ ಅಂದಮೇಲೆ ಬಲವಾದ ಮೂಲವೇ ಇರ್ಬೇಕು! ಯಾರು ಮಾಡ್ಸಿದಾರೆ ಅನ್ನೋದನ್ನ ಸನ್ಮಾನ್ಯರು ಬಹಿರಂಗಗೊಳಿಸಿಲ್ಲವಾದರೂ ದೇವೇಗೌಡರ ಕುಟುಂಬ ಮಾಟಮಂತ್ರದ ಹೋಲ್‌ಸೇಲ್ ಗುತ್ತಿಗೆ ಹಿಡಿದಿರೋದು ಜನರಿಗೆ ತಿಳಿದ ಸಂಗತಿಯೇ ಆಗಿದೆ! ಮಾಟಕ್ಕೆ ಹೆದರಿ ಸೀರೆ ಅಭಿವೃದ್ಧಿ ನಿಲ್ಲಿಸಲಿ ಎಂದು ಹೀಗೆ ಮಾಡಿದ್ದರೂ ನಾನು ನಿಲ್ಲಿಸುವುದಿಲ್ಲ, ತಾಯಂದಿರ ಸೀರೆಗಾಗಿ ನಾನು ಯಾವ ತ್ಯಾಗಕ್ಕಾದರೂ ಸಿದ್ಧನಿದ್ದೇನೆ. ನಿಮ್ಮ ಸೀರೆಗೆ ಬಂದಿರುವ ಅಡಚಣೆಗಾಗಿ ನನಗೆ ದುಃಖ ಆಗ್ತಿದೆ ಎಂದೆಲ್ಲ ಗೋಳಾಡಿ ದ್ದಾರೆ. ಯಾಕೆ ಮುಗ್ಧ ಹೆಂಗಸರ ಮುಂದೆಯೇ ತಮ್ಮ ದುಃಖ ತೋಡಿಕೊಂಡಿದ್ದಾರೆ ಅಂದರೆ ಅದು ತಾಯಿ-ಮಗುವಿನ ಸಂಬಂಧ! ಮಕ್ಕಳು ತಾಯಂದಿರ ಹತ್ತಿರ ತಮಗಾಗದವರ ಮೇಲೆ ಅಳುತ್ತಾ ಚಾಡಿ ಹೇಳಿದರೆ ಅವರು ನಂಬಿಯೇ ನಂಬುತ್ತಾರೆ ಎಂದು ಅವರಿಗೆ ತಿಳಿದಿದೆ ಅದಕ್ಕೆ!

ನನಗೆ ಒಂದು ಸಂದೇಹ. ದೇವೇಗೌಡ ಕುಟುಂಬಕ್ಕೆ ಮಾಟ, ಮಂತ್ರಗಳ ಹೋಲ್‌ಸೇಲ್ ಏಜೆನ್ಸಿ ಇರುವಂತೆಯೇ ಸಂಘ ಪರಿವಾರಕ್ಕೆ ಯಜ್ಞ ಯಾಗಾದಿಗಳ ಹೋಲ್‌ಸೇಲ್ ಏಜೆನ್ಸಿ ಇದೆ. ಪರಿವಾರದ ಪ್ರಮುಖರಾದ ಸನ್ಮಾನ್ಯ ಯಡ್ಯೂರಪ್ಪನವರು 'ಕತ್ತೆ ಮಾಟ'ವನ್ನು ತಡೆಯಲು 'ಕತ್ತೆ ನಾಶಯಾಗ'ವನ್ನೂ, ವರುಣನ ಆರ್ಭಟದಿಂದ ಪಾರಾಗಲು 'ವರುಣಾರ್ಭಟ ನಿಯಂತ್ರಣ ಯಾಗ'ವನ್ನೂ ಇನ್ನೂ ಏಕೆ ಪ್ರಾರಂಭಿಸಿಲ್ಲ ಎನ್ನುವುದು. ಅಥ್ವಾ ಗೋಪ್ಯವಾಗಿ ಪ್ರಾರಂಭಿಸಿದ್ದಾರೆಯೋ.....!

ಹಂಗನ್ನಬಹುದೇನ್ರಿ?

ಉಪ್ಪುಂಡ ಮನೆಗೆ ಎರಡು ಬಗೆಯಬಾರದು. ಹಂಗೆ ಮಾಡಿದರೆ ಮನ್ನ ಅಂದಾರಾ. ಪಾಪ ಸರ್ಕಾರ ಅನ್ನೋದು ಎಷ್ಟೊಂದು ಮಾಡಿಲ್ಲ, ಒಬ್ಬರಿಗೆ ಇಬ್ಬರಿಗೆ ಅಲ್ಲ, ಮಾಧ್ಯಮದ ಹದಿನಾರು ಮಂದಿಗೆ ರಾಜ್ಯೋತ್ಸವ ಪ್ರಶಸ್ತಿ ನೀಡಿದೆ. ಯಾವತ್ತೂ ಹೀಗೆ ಮಾಡಿದ್ದು ಕಾಣೆ. ಅದರ ನಿಯತ್ತಾದರೂ ಇರಬೇಕಾಗಿತ್ತು, ಬ್ಯಾಡ. ರಬೀಂದ್ರನಾಥ ಟ್ಯಾಗೂರ್‌ಗೆ 1913 ರಲ್ಲಿ ಸಾಹಿತ್ಯಕ್ಕಾಗಿ ನೊಬೆಲ್ ಬಹುಮಾನ ಬಂತಲ್ಲಾ, ಆಗ ಸುಬ್ರಹ್ಮ ಭಾರತಿಯವರು ಅವರನ್ನು ಅಭಿನಂದಿಸಿ ಪತ್ರ ಬರೆದರಂತೆ. ಪತ್ರದ ಕೊನೆಯಲ್ಲಿ 'ನಾನು ಇಂತಹ ವಿಷಯದಲ್ಲಿ ಪೆದ್ದ. ಏನೇನೂ ತಿಳೀದವ. ದಯಮಾಡಿ ಬಹುಮಾನ ಪಡೆಯುವ ಮಾರ್ಗೋಪಾಯಗಳನ್ನು ತಿಳಿಸಿ ಜ್ಞಾನದ ಬೆಳಕು ಹರಿಸಿ' ಎಂದು ಕೇಳಿಕೊಂಡಿದ್ದರಂತೆ. ಇಂತಹ ಪತ್ರ ಬರೆದದ್ದೇ ಸುಳ್ಳಂತೆ. ಕೇವಲ ಕಟ್ಟುಕತೆಯಂತೆ. ಕಟ್ಟುಕತೆಯೋ ಸತ್ಯ ಕತೆಯೋ ನಿರ್ಧರಿಸುವವರು ಯಾರೂ ಇಲ್ಲ, ಇದರಿಂದ ಒಂದು ಪಾಠವನ್ನಂತೂ ಕಲಿಯಬಹುದು. ರಾಜ್ಯೋತ್ಸವ ಪ್ರಶಸ್ತಿ ಪಡೆಯುವ ಮಾರ್ಗಸೂಚಿಯನ್ನು ಪ್ರಶಸ್ತಿ ವಿಜೇತರಿಂದ ಪಡೆಯಬಹುದಾಗಿದೆ! ಈ ದಾರಿಬಿಟ್ಟು ಶಿವಮೊಗ್ಗ ಪತ್ರಕರ್ತರು ವಾಮಮಾರ್ಗ ಹಿಡಿದಂತಿದೆ. ಪತ್ರಿಕಾಗೋಷ್ಠಿ ಅಂದ ಮೇಲೆ ಪ್ರಶ್ನೆ-ಉತ್ತರ ಇದ್ದದ್ದೆ. ಕೇಳ್ತೀನಿ ಕೇಳ್ತೀನಿ ಎಂದು ಮುಜುಗರ



ತರುವ ಪ್ರಶ್ನೆಗಳನ್ನೇ ಕೇಳ್ತಾ ಕುಂತರೆ ಯಾವ ನಾಯಕನಿಗೆ ಸಿಟ್ಟು ಬರೋಲ್ಲ ಹೇಳಿ. ಅಭಿವೃದ್ಧಿ ಕುರಿತು ಕೇಳಲಿ. ರಾಜ್ಯದ ಸಮಸ್ಯೆಗಳನ್ನು ಪರಿಹರಿಸಲು ಸಲಹೆ ಸೂಚನೆ ನೀಡಲಿ. ಉಹುಂ. ಅದಾಗದಂತೆ. ಕೆಲಸಕ್ಕೆ ಬಾರದ ಮುಜುಗರದ ಪ್ರಶ್ನೆಗಳೇ ಆಗಬೇಕಂತೆ! ಮೈಸೂರಿನಲ್ಲಿ ಭಾಜಪ ಕಾರ್ಯಕಾರಿಣಿ ಸಭೆ ನಡೆದಿತ್ತು ನಿಜ. ಕೆಲವರು ಗೈರುಹಾಜರಾಗಿದ್ದರು. ಅದೂ ನಿಜ. ಅವ್ರು ಯಾಕೆ ಬರ್ಲಿಲ್ಲ ಅಂದ್ರೆ. ಏನೋ ಕೆಲ್ಸಿತ್ತು ಬರ್ಲಿಲ್ಲ, ಹಂಗನ್ಕಂಡು ಸುಮ್ನಿರಬಾರ್ದಾ... ಅವಕ್ಕೇನೋ ಗುಮಾನಿ. ಭಾಜಪದಲ್ಲಿ ಭಿನ್ನಮತ ಭುಗಿಲೆದ್ದಿದೆ ಅಂತಾವ. ಭುಗಿಲೆದ್ದೂ ಇಲ್ಲ ಗಿದ್ದೂ ಇಲ್ಲ, ಭಿನ್ನಮತವೇ ಇಲ್ಲ, ನಾವೆಲ್ಲ ಒಂದು ತಾಯಿ ಮಕ್ಕಳಿದ್ದಂಗಿದೀವಿ ಅಂದಷ್ಟೂ ಅವರ ಗುಮಾನಿ ಹೆಚ್ಚಾಯ್ತಿತ್ತು ಅಂದ್ರೆ ಏನು ಮನೆಹಾಳು ಮಂದಿ ಇರಬ
ಇವರು. ಇದನ್ನೆಲ್ಲ ತಿಳ್ಕಂಡಿದ್ದಕ್ಕೇ 'ರೆಡ್ಡಿ ಬ್ರದರ್ಸ್ ಯ
ಬರ್ಲಿಲ್ಲ' ಅಂತ ಯಾವುದೋ ಕೇಳಿದಾಗ ಈಶ್ವರಪ್ಪನವ
ಉರಿದೋಯ್ತು 'ಅವರೇನು ಇಂಟರ್ ನ್ಯಾಷನಲ್ ಫಿಗ
ಅಂತ ಜಾಡಿಸಿದರು.

ಅದೇಅಪ್ಪ ಇದ ಕೇಳಿದ ಮೇಲಾದ್ರೂ 'ಓಹೋಹ
ರೆಡ್ಡಿ ಬ್ರದರ್ಸ್ ಅಂದ್ರೆ ಲೋಕಲ್ ಗಿರಾಕಿಗಳು' ಅ
ಸುಮ್ಮನಿರಬಾರದಾ. ಇದಕ್ಕೂ ಕೊಕ್ಕೆ ಹಾಕಕ್ಕೆ ನೋಡ
ಭಾಜಪ ರಾಜ್ಯಾಧ್ಯಕ್ಷರ ಮಾತು ಕೇಳಿದ್ರೆ ಇವರು
ತೆಗೆಯೋಕೆ ತುದಿಗಾಲಲ್ಲೇ ನಿಂತಿರೋ ಹಂಗಿದೆ ಅ
ರಲ್ರೀ.... ಹಂಗನ್ನಬಹುದೇನ್ರೀ.....

ಜಾತಿ ವಿಷ

ಮೈಸೂರಿನಲ್ಲಿ ಒಂದು ಸಂವಾದ ಕಾರ್ಯಕ್ರ
ವಿಷಯ: ಕರ್ನಾಟಕದ ಪ್ರಸಕ್ತ ರಾಜಕಾರಣ ಹಾ
ಪ್ರಜಾಸತ್ತೆ.

ಹಲವರ ಅಭಿಪ್ರಾಯ: ಇದು ಪ್ರಜಾಸತ್ತೆ ಅ
ಪ್ರಜಾ-ಸತ್ತೆ.

ಜಿ.ಎಚ್. ನಾಯಕರು ಹೇಳಿ
ಜಾತಿಯ ನಂಜು ಕಾಡುತ್ತಿದೆ.

ಹೇಗೆ?

2001 ರಲ್ಲೀ ವೀರಶೈವ ಮುಖಂಡರ ಸಭೆ.

ವೀರಶೈವರ ಭವಿಷ್ಯ ಕುರಿತ ಚ
ಅಲ್ಪಸಂಖ್ಯಾತರೆಂಬ ಹಣೆಪಟ್ಟಿ;
ಅದರಿಂದ ಸಿಗುವ ಲಾಭ
ಹೊಡೆಯಲು ಕಾತುರ ಮನಸ್ಸುಗಳ

ಏನು ಮಾಡಬೇಕು ಲಿಂಗಾಯತರ
ಜನಗಣತಿಯಲ್ಲಿ ಹಿಂದೂಗಳೆಂ
ನಮೂದಿಸಬಾರದು.

ಆಯಿತಲ್ಲ, ವೀರಶೈವ ಲಿಂಗಾಯತರು ಹಿಂದೂಗಳಲ್ಲ!

ಕೆಲವರ ವಿರೋಧ ಈ ನಿರ್ಣಯ
ಆದರೆ ಇದು ಪ್ರಜಾಪ್ರಭುತ್ವ. ಬಹುಮತ
ಅಭಿಪ್ರಾಯಕ್ಕೆ ಮನ್ನಣೆ!

ಮಠಾಧಿಪತಿಗಳು, ನಾಯಕರು ಉಬ್ಬಿದರು!

ಈಗ 2011 ರ ಜನಗಣತಿ ಬಂದಿದೆ.

ಲಿಂಗಾಯತರೇ 'ಹಿಂದೂ ನಾವೆಲ್ಲ ಒಂದು' ಎನ್ನು
ಪಕ್ಷದ ಬೆನ್ನೆಲುಬು!

ಈಗ ಏನು ನಮೂದಿಸುತ್ತಾರೆ?

ಮಠಾಧೀಶರು, ಮುಖಂಡರ ದಿವ್ಯ ಮೌನ!

ಇದರಲ್ಲಿ ಆಶ್ಚರ್ಯ ಇಲ್ಲ, 2001 ರಲ್ಲಿ ಲಿಂಗಾಯ
ಕೈಲಿ ಅಧಿಕಾರ ಇರಲಿಲ್ಲ, ಆಗವರು ಹಿಂದೂಗಳಾಗಿರಲಿ
ಈಗ ಅಧಿಕಾರ ಅವರ ಮುಷ್ಠಿಯಲ್ಲಿದೆ. ಅವರ
ಹಿಂದೂಗಳು!

ಇದು ಶಂಕರಾಚಾರ್ಯ ತೋರಿಸಿದ ಹಾದಿ!

ಹೊಗಳಿಕೆ ತೆಗಳಿಕೆ

ನಲ್ಮೆಯ ಅಕ್ಕ

ಬಹಳ ದಿನಗಳಿಂದ ನಿಮ್ಮ ಪ್ರಗತಿಪರ ಚಿಂತನೆಗಳನ್ನು ಗಮನಿಸ್ತಿದ್ದೆ. ನಿಮ್ಮ ಮಾತುಗಳನ್ನು ಕೇಳುವುದಕ್ಕೆ ಆಗಿರಲಿಲ್ಲ. ಆದರೆ ಅಂತಹ ಒಂದು ಅವಕಾಶ ಇತ್ತೀಚೆಗೆ ನಡೆದ ಶರಣ ಸಂಸ್ಕೃತಿ ಉತ್ಸವ-2010" ರಲ್ಲಿ ಸಿಕ್ಕಿತು. ನಿಮ್ಮ ನಿಲುವುಗಳು ನನ್ನನ್ನು ತುಂಬಾ ಪ್ರಭಾವಿಸಿದವು. ಸಮಾಜದ ಅಂಧಕಾರದ ನಡವಳಿಕೆ, ಜಾತಿ ಧರ್ಮದ ಆಚರಣೆ ಮೇಲೆ ನಡೆಯುವ ಅನ್ಯಾಯ ಇವೆಲ್ಲ ಪ್ರಶ್ನಾರ್ಹವೇ ಸರಿ. ಹಿಂದೂ ಧರ್ಮದ ಕುರಿತು ನೀವು ಎತ್ತಿದ ಪ್ರಶ್ನೆ ತುಂಬಾ ಸಮಂಜಸವಾಗಿತ್ತು, ಸ್ವಲ್ಪ ಹೊತ್ತು ಅರೆರೆ ಇದು ನಿಜವಲ್ವಾ ಅಂತ ಯೋಚಿಸೋಕೆ ಹಚ್ಚಿತು. ಸಂಪ್ರದಾಯ ತುಂಬಿದ ನಾಡಿನಲ್ಲಿ ಧರ್ಮದ ಬಗ್ಗೆ ಮಾತಾಡುವುದು ಅದೆಷ್ಟು ಕಷ್ಟ ಅಲ್ವಾ ಅಕ್ಕ?

ನಿಜವಾದ ಧರ್ಮ ಮುಚ್ಚಿಟ್ಟು ಗೊಡ್ಡು ಸಂಪ್ರದಾಯಗಳಿಂದ ಜೀವಿಸುತ್ತಿರುವ ಅನೇಕ ಸ್ವಾಮೀಜಿಗಳಿಗೆ ನಿಮ್ಮ ಪ್ರಗತಿಪರ ಚಿಂತನೆಗಳು ಶಾಕ್ ಅಲ್ವ ಅಕ್ಕಾ? ಆದರೆ ಇವೆಲ್ಲವನ್ನು ಚಿಂತನೆಗೆ ಹಚ್ಚಿ ನಮ್ಮಂತಹ ಯುವ ಮನಸ್ಸುಗಳನ್ನು ಚಿಂತನೆಗೆ ಹಚ್ತಾ ಇದ್ದಾರಲ್ಲ ಶ್ರೀ ಮುರುಘಾ ಶರಣರು. ಅವರು ನಾಡಿನ ಎಲ್ಲ ಸ್ವಾಮೀಜಿಗಳಿಗಿಂತ ಡಿಫರೆಂಟ್ ಆಗಿ ಕಾಣ ಸಿಗುತ್ತಾರೆ. ಅವರ ಕಾರ್ಯ ತುಂಬಾ ಸ್ಮರಣಾರ್ಹ. ಅವತ್ತು ಫಂಕ್ಷನ್ ಮುಗಿದ ಮೇಲೆ ನಿಮ್ಮನ್ನ ಮಾತಾಡ್ಸೋಣ ಅಂತ ಬಂದೆ ಅಕ್ಕಾ, ಆದರೆ ತುಂಬಾ ಜನ ನಿಮ್ಮನ್ನು ಸುತ್ತುವರೆದು ಮಾತಾಡ್ತಾ ಇದ್ದರು. ನಾನು ನಿರಾಶೆಯಿಂದ ವಾಪಸಾದೆ. ಮುಂದೆ ಯಾವತ್ತಾದರೂ ನಿಮ್ಮೊಂದಿಗೆ ಮಾತಾಡಬಹುದಲ್ವಾ ಅಕ್ಕಾ? ನಾನು ಇತ್ತೀಚೆಗೆ ಸ್ಟಡೀಸ್ ಮುಗಿಸಿ ಆರು ತಿಂಗಳ ಹಿಂದೆ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ಉಪನ್ಯಾಸಕನಾಗಿ ಸೇವೆಗೆ ಸೇರಿದ್ದೇನೆ. ಅನೇಕ ಕ್ರಾಂತೀಯ ವಿಚಾರ ನನ್ನ ಮನಸ್ಸಿನಲ್ಲೂ ಇದೆ. ಕಾರ್ಯರೂಪಕ್ಕೆ ತರೋಕೆ ನಿಮ್ಮ ಮಾರ್ಗದರ್ಶನ ಬೇಕು. ಮಾರ್ಗದರ್ಶನ ಮಾಡ್ತಿ ಅಲ್ವಾ ಅಕ್ಕಾ?

ಧನ್ಯವಾದಗಳೊಂದಿಗೆ

-ಶಶಿಕಾಂತ.ಕ.ರಾಠೋಡ, ಕಾರವಾರ

ಭ್ರಷ್ಟಾಚಾರವೇ ಆದರ್ಶವಾಗಿರುವ ಈ ಭಾರತ ದೇಶದಲ್ಲಿ ನ್ಯಾಯಾಂಗ, ಮಿಲಿಟರಿ, ಪತ್ರಿಕಾರಂಗ ಇವ್ರೂ ಭ್ರಷ್ಟವಾಗಿರುವಾಗ, ಭ್ರಷ್ಟಾಚಾರದಲ್ಲಿ 'ನಂಬರ್ ವನ್" ರಾಜ್ಯವೆಂಬ ಬಿರುದು ಗಳಿಸಿರುವ ಕರ್ನಾಟಕದಲ್ಲಿ ರಾಜ್ಯೋತ್ಸವ ಪ್ರಶಸ್ತಿಗಳನ್ನೂ ಲಂಚದಂತೆ ಉಪಯೋಗಿಸಿ, ಇಡೀ ಸಾಂಸ್ಕೃತಿಕಲೋಕ ಹಾಗೂ ಮಾಧ್ಯಮಗಳೊಳಗೂ 'ಆಪರೇಷನ್ ಕಮಲ' ನಡೆದು ಮಾಧ್ಯಮದವರನ್ನೂ, ಪ್ರಗತಿಪರರನ್ನು, ಸಾಹಿತಿಗಳನ್ನೂ ಸರ್ಕಾರ ಖರೀದಿಸಿದೆ ಎಂದು ಶಿವಸುಂದರ್ ಹೇಳಿದ್ದು ನೂರಕ್ಕೆ ನೂರು ಸತ್ಯ. "ಎಲ್ಲವನ್ನೂ-ಎಲ್ಲರನ್ನೂ ಖರೀದಿಸಲು ಸಾಧ್ಯ, ಕೇವಲ ಅವರವರ ತೂಕಕ್ಕೆ ತಕ್ಕಂತಹ, ನಿರಾಕರಿಸಲಾಗದಂತಹ ಬೆಲೆ ಕೊಟ್ಟರೆ ಸಾಕು"-ಎಂಬ 'ಗಾಡ್‌ಫಾದರ್' ಇಂಗ್ಲಿಷ್ ಚಿತ್ರದ ಡೈಲಾಗ್ ನೆನಪಾಯಿತು.

ಭಾರತೀಯರು ಒಳ್ಳೆಯದನ್ನಾಗಲೀ, ಕೆಟ್ಟದ್ದನ್ನಾಗಲೀ ಪ್ರತಿಯೊಂದನ್ನೂ ಅತಿಯಾಗಿಸುತ್ತಾರೆ ಎಂಬ ಆರೋಪದಲ್ಲಿ ನಿಜಾಂಶವಿದೆ. ಜಗತ್ತಿನಲ್ಲೇ ಅತಿ ಹೆಚ್ಚು ದೇಶಭಕ್ತಿಯ ಕಥೆ, ಕವಿತೆ, ನಾಟಕ, ಪುರಾಣ ಹೊಂದಿರುವ ನಾವು ದೇಶಕ್ಕಾಗಿಯೇ ಹುತಾತ್ಮರಾದ ಯೋಧರ ಶವಪೆಟ್ಟಿಗೆ ಖರೀದಿಯಲ್ಲೂ ಭ್ರಷ್ಟಾಚಾರ ಮಾಡುತ್ತೇವೆ. ಹುತಾತ್ಮರ ಬಡ ವಿಧವೆಯರಿಗೆ ಕಟ್ಟಿಸಿದ ವಸತಿಗಳಲ್ಲೂ ಭ್ರಷ್ಟಾಚಾರ ನಡೆಸುತ್ತೇವೆ. ಒಟ್ಟಿನಲ್ಲಿ ಅಮಾನವೀಯತೆಯಲ್ಲೂ ನಮ್ಮದು 'ಅತಿ'. ಎಷ್ಟಾದರೂ ಜಗತ್ತಿನಲ್ಲೇ ಅತೀ ಹೆಚ್ಚು ದೇವರುಗಳನ್ನು ಹೊಂದಿದ, ಅತಿ ಹೆಚ್ಚು ಜಾತಿಗಳನ್ನು ಹುಟ್ಟುಹಾಕಿದ, ಅತಿ ಹೆಚ್ಚು ಸಾಧುಸಂತರನ್ನು, ಋಷಿ-ಮುನಿಗಳನ್ನು, ಮಠಾಧೀಶ-ಸ್ವಾಮೀಜಿಗಳನ್ನು ಹೊಂದಿದ ದೇಶವಲ್ಲವೇ ನಮ್ಮದು!

ಮೃತ ಯೋಧರನ್ನು, ಅವರ ವಿಧವೆಯರನ್ನು ದುರುಪಯೋಗಪಡಿಸಿಕೊಂಡಿರುವುದು ಇದೇ ಮೊದಲಲ್ಲ, 1200 ವರ್ಷಗಳ ಹಿಂದೆ ವಾಮಾಚಾರಿ ಶಂಕರಾಚಾರ್ಯರು ಬೌದ್ಧ ಪಂಡಿತರೊಬ್ಬರೊಟ್ಟಿಗೆ, ಸಂಸಾರದ ಅರ್ಥ ವಿವರಿಸಲಾಗದೆ, ವಾದದಲ್ಲಿ ಸೋತಾಗ, ನಂತರ ಸಂಸಾರ ಸುಖದ ಅರ್ಥ ಅರಿಯಲು ಮೃತ ಯೋಧನ ದೇಹದೊಳಗೆ ವಾಮಾಚಾರದಿಂದ ಪರಕಾಯ ಪ್ರವೇಶ ಮಾಡಿ, ಆ ಯೋಧನ ವಿಧವೆಯೊಂದಿಗೆ ಸುಖಿಸಿದ ಆಚಾರ್ಯರೇ ಹಾಕಿಕೊಟ್ಟ ಸತ್ಸಂಪ್ರದಾಯದ ಹಾದಿಯಲ್ಲೇ ನಮ್ಮವರು ಈಗ ನಡೆಯುತ್ತಿರುವುದು!

-ಪ್ರವೀಣ್ ಎಸ್.ಶೆಟ್ಟಿ, ಮಂಗಳೂರ

ಆದಾಬ್ ಕ್ಯಾಪ್ಟನ್

ನೀವು ವೈದೇಹಿಯವರಿಗೆ ಬರೆದ ಓಪನ್ ಲೆಟರ್ ಓದಿದಾಗ ಕಣ್ಣುಗಳ
ತೇವಗೊಂಡದ್ದು ಸುಳ್ಳಲ್ಲ, ವೈದೇಹಿಯವರು ನನಗೆ ತಾಯಿ ಸಮಾನ. ಹಾಗಾಗಿ ನಿಮ
ಪತ್ರ ನನ್ನನ್ನು ಕಣ್ಣ ತೇವಗೊಳ್ಳುವಷ್ಟು ಮೂವ್ ಮಾಡಿತು. ನನ್ನ ಕಾಳಜಿ, ಆತಂ
ಪ್ರೀತಿ ಇವೆಲ್ಲವೂ ನಿಮ್ಮ ಪತ್ರದಲ್ಲಿ ನಿಮ್ಮ ಸ್ವರದ ಮುಖಾಂತರ ಹೊರಬಂದಂತಾಯಿತ

ಗಾಂಧಿ ಜಯಂತಿಯಂದು ನಾನು ದೆಹಲಿಯಿಂದ ಮರಳಿದ್ದೆ. ಅಂದು ಮಧ್ಯಾ
ವೈದೇಹಿಯವರನ್ನು ಮಾತನಾಡಿಸಲು ಹೋದಾಗ ಅವರ ಮುಖ ಬಾಡಿಹೋಗಿತ
ಜೀವಂತಿಕೆಯನ್ನೇ ಕಳೆದುಕೊಂಡವರಂತಿದ್ದರು. ನನಗೆ ಬಹಳ ಗಾಬರಿಯಾಯಿತು. ಆರೋಗ್ಯ
ಕುರಿತು ವಿಚಾರಿಸಿದಾಗ, 'ವೈಸಾಲಿ(ಕಾಸರವಳ್ಳಿ) ಹೋದ ಸುದ್ದಿ ಕೇಳಿದಾಗಿನಿಂದ ಯಾಕೋ
ಮನಸ್ಸಿಗೆ ತುಂಬಾ ಬೇಸರ' ಎಂದಿದ್ದರು. ಕಾರಣ ತಿಳಿದಕೂಡಲೇ ಗಾಬ
ಕಡಿಮೆಯಾಗುವುದಿಲ್ಲವಲ್ಲ! ಅವರ ಮನೆಯಿಂದ ಹೊರನಡೆದ ಕೂಡಲೇ ಜಯಂತ
ಕಾಯ್ಕಿಣಿ ಸರ್‌ಗೆ ಫೋನ್ ಮಾಡಿ ನನ್ನ ಕಾಳಜಿಯನ್ನು, ಆತಂಕವನ್ನು ತೋಡಿಕೊಂ
ಜಯಂತ್ ಸರ್‌ನಲ್ಲಿ ಒಂದು ಜೀವ ತುಂಬುವ ಮಾಂತ್ರಿಕ ಶಕ್ತಿ ಇದೆ ಎಂದು ನಂಬಿರು
ನಾನು ಅವರಲ್ಲಿ 'ಸರ್, ನೀವು ಅವರೊಂದಿಗೆ ಮಾತನಾಡಿ' ಎಂದು ಕೇಳಿಕೊಂಡಿದ್ದೆ.

ಅಕ್ಟೋಬರ್ 3ರಂದು ಮುಂಜಾನೆ 5.30 ರ ಬಸ್ಸಿಗೆ ನಾನು, ವೈದೇಹಿ, ಮತ
ಶ್ರೀನಿವಾಸ ಮಾಮನವರು ಹೆಗ್ಗೋಡಿಗೆ ಹೊರಟೆವು. ಅಂದು ಫೋನ್ ಮಾ
ನನ್ನನ್ನು ಎಬ್ಬಿಸಿದ್ದು ವೈದೇಹಿಯವರೇ. ನನ್ನಂಥ ಯುವಕರನ್ನೇ. ನಾಚಿಸುವಂತ
ಜೀವನೋತ್ಸಾಹ ವೈದೇಹಿಯವರಲ್ಲಿ ಇದೆ ಎಂದು ಸಂತೋಷಪಟ್ಟು ಅವರೊಂದಿ
ಬಸ್ಸೇರಿದೆ. ಅಂದು ನಾನು ಹೆಗ್ಗೋಡಿನಲ್ಲಿ ಇಳಿದುಕೊಂಡರೆ ವೈದೇಹಿಯವರು ನೇ
ಸಾಗರಕ್ಕೆ ಹೋಗಿ ಅಲ್ಲಿ ಯಾವುದೋ ಗಮಕ ಕಲಾವಿದನನ್ನು ಮಾತನಾಡಿಸಿ ಸಂ
ಹೆಗ್ಗೋಡಿಗೆ ಬರುವುದಾಗಿ ಹೇಳಿದರು. "ಅವರಿಗೆ ವಯಸ್ಸಾಗಿದೆ" ಎಂದಿದ್ದರು
ಗಮಕ ಕಲಾವಿದರನ್ನು ಕುರಿತು. ಹೆಗ್ಗೋಡಿಗೆ ಮರಳಿದವರು ಉತ್ಸಾಹದಿಂದ ಶಿಬಿರದ
ಪಾಲ್ಗೊಂಡರು. ನುಡಿಸಿರಿಯಲ್ಲಿ ಅವರು ಕುಸಿದುಬಿದ್ದ ಸುದ್ದಿ ತಿಳಿದಾಗ ಮತ್ತ
ಗಾಬರಿಯಾಯಿತು. ಆದರೆ ಅವರು ನನ್ನನ್ನು ಬೆಳ್ಳಂಬೆಳಗ್ಗೆ ಎಬ್ಬಿಸಿದ್ದು, ಗಮಕ ಕಲಾವಿದರ
ನೋಡಲು ಉತ್ಸಾಹದಿಂದ ಹೋಗಿದ್ದೆಲ್ಲವನ್ನು ನೆನಪಿಸಿಕೊಂಡು ನನಗೆ ನಾನೇ ಸಮಾಧಾ
ಹೇಳಿಕೊಂಡೆ. ಅವರ ದೇಹಕ್ಕೆ ಸ್ವಲ್ಪ ಸುಸ್ತಾಗಿರಬಹುದು. ಆದರೆ ಜೀವನೋತ್ಸಾ
ಜೀವನ ಪ್ರೀತಿ ಅವರನ್ನು ಕಾಪಾಡುತ್ತದೆ ಅಂತ ನಂಬಿಕೆ. ಅವರು ಬದುಕನ್ನು ಪ್ರೀತಿಸಿದಂ
ಬದುಕು ಸಹ ಅವರನ್ನು ಪ್ರೀತಿಸಲಿ, ಪ್ರೀತಿಸುತ್ತದೆ.

-ಸಂವರ್ತ 'ಸಾಹಿಲ್' ದೆಹ



ಗಣೇಶನ ಸಿನಿ ಬದುಕು ಒಂಥರಾ ಅವಾಂತರ!

ಇತ್ತೀಚೆಗೆ ಗೋಲ್ಡನ್ ಸ್ಟಾರ್ ಗಣೇಶನ ...ಮೊಂದು ಸಿನಿಮಾಗಳು ಹೊರ ಬರುವುದೂ ...ಗರ್ಭದ ಪ್ರಸವದಂತಾಗಿಬಿಟ್ಟಿದೆ.

...ಈ ಹಿಂದೆ ಗಣೇಶನ ಸಿನೆಮಾವೊಂದು ...ಗಡೆಯಾಗುತ್ತದೆಂದರೆ, ಬೇರೆಲ್ಲಾ ಸಣ್ಣಪುಟ್ಟ ...ರೋಗಳ ಚಿತ್ರಗಳನ್ನು ಬಿಡುಗಡೆ ಮಾಡಲು ...ರ್ಮಾಪಕರು ಹೆದರುತ್ತಿದ್ದರು. ಅಷ್ಟೇ ಅಲ್ಲ ...ಣೇಶನ ಚಿತ್ರದ ಬಿಡುಗಡೆಗೆ ಒಂದು ತಿಂಗಳ ...ನ್ನವೇ ಪತ್ರಿಕೆಗಳಲ್ಲಿ ದೊಡ್ಡ ದೊಡ್ಡ ...ಗ್ಗಳು, ಗೋಲ್ಡನ್ ಸ್ಟಾರ್‌ನ ...ಟರ್‌ವ್ಯೂಗಳು, ಚಾನೆಲ್ ...ದರ್ಶನಗಳು ರಾರಾಜಿಸುತ್ತಿದ್ದವು... ...ಲ್ಲಾ ಘಟಿಸಿ ಹತ್ತಾರು ...ರ್ಷಗಳೇನೂ ಕಳೆದಿಲ್ಲ, ಅವೆಲ್ಲ ಬರೀ ...ಮೂವರೆ ವರ್ಷಗಳ ಮುಂಚಿನ ...ತು.

ಆದರೆ ಈ ಅಲ್ಪ ಅವಧಿಯಲ್ಲೇ ... ಬದಲಾಗಿದೆ. ಪುನೀತ್ ...್‌ಕುಮಾರ್, ಸುದೀಪ್, ಶಿವಣ್ಣನಂಥ ಪಳಗಿದ ... ಸಿನಿಮಾ ಬಿಟ್ಟರೆ ಬೇರೆಲ್ಲ ಸಿನಿಮಾಗಳು ಈಗ ...ರ್ದಿಗಿಲ್ಲದಂತಾಗಿವೆ. ದುರದೃಷ್ಟವೆಂದರೆ, ಅಂಥ ...ಗೆ ಗೋಲ್ಡನ್ ಸ್ಟಾರ್ ಗಣೇಶ್ ಸಹ ...ಬಿಟ್ಟಿದ್ದಾನೆ.

ಕೇವಲ ಮೂರು ವರ್ಷಗಳ ಹಿಂದೆ ಅತಿರಥ ...ಮಹಾರಥರ ಚಿತ್ರಗಳೆಲ್ಲಾ ತರಗೆಲೆಯಂತೆ ...ಉದುರುತ್ತಿದ್ದಾಗ ಈ ಹುಡುಗ 'ಮುಂಗಾರು ಮಳೆ' ... ಚಿತ್ರದಲ್ಲಿ ನಟಿಸಿ, ಅದು ಹಿಟ್ ... ಕನ್ನಡ ಚಿತ್ರರಂಗದಲ್ಲಿ ...ಮೋಹಾರಿ ವಾತಾವರಣವೇ ...ಮೂಡಿತ್ತು.


...ಗೆ ಕನ್ನಡ ಚಿತ್ರರಂಗದ ...ದಲ್ಲಿ ದಿಢೀರನೆ ಸ್ಟಾರ್ ಆಗಿ ...ಕೊಂಡ ಗಣೇಶನ ವೃತ್ತಿಜೀವನ ... ಬೇಗ ಪ್ರಜ್ವಲಿಸಿತೋ ಅಷ್ಟೇ ... ಕಳಾಹೀನವಾಗಿಬಿಟ್ಟಿದೆ. ಇಂತಹ ...ಯಲ್ಲಿ ಗಣೇಶ್ ನಾಯಕನಾಗಿ ...ರುವ 'ಏನೋ ಒಂಥರಾ' ಎಂಬ ಚಿತ್ರ ಈ ... ಬಿಡುಗಡೆಯಾಗುತ್ತಿದೆ. ಈ ಚಿತ್ರ ಗಣೇಶ ... ಬಿಡುಗಡೆಯಾಗಬೇಕಿತ್ತು, ಅದಕ್ಕೆಂದು ...ಟರುಗಳೂ ಸಿದ್ಧವಾಗಿದ್ದವು. ಆದರೆ ಈ ... ನಿರ್ಮಾಪಕ ಚಂದ್ರಶೇಖರ್ ಫೈನಾನ್ಶಿಯರ್ ...ಎಸ್. ಗೌಡನಿಗೆ ಕೊಡಬೇಕಿದ್ದ ಹಣ ...ಪಾವತಿಯಾಗದ ಕಾರಣ ಆರ್.ಎಸ್. ಗೌಡ ... ಬಿಡುಗಡೆಯಾಗದಂತೆ ಕೋರ್ಟಿನಿಂದ ಸ್ಟೇ ...ತಂದರು. ಹೀಗಾಗಿ ಅಂದು ಸಿನಿಮಾ ...ಗಡೆಯ ದಿನವೇ ರದ್ದಾಗಿ ಮತ್ತೆ ಡಬ್ಬದಲ್ಲಿ ...ಕೊಂಡಿತ್ತು, ಈಗ ಅದೆಲ್ಲ ಸಮಸ್ಯೆಗಳೂ ...ಹರಿದು ಸಿನಿಮಾ ಬಿಡುಗಡೆಯಾಗುತ್ತಿದೆ. ಆದರೆ ...ಕಾಲ ಮಾತ್ರ ಯಾರಲ್ಲೂ ಇಲ್ಲ ...ಮೊದಲೆಲ್ಲಾ ಗಣೇಶನ ಚಿತ್ರವೊಂದು ಸೆಟ್ಟೇರಿದಾಗಲೇ ವಿತರಕರು 'ನನಗೆ ನಿನಗೆ' ಎಂದು ಏರಿಯಾಗಳ ಹಂಚಿಕೆಗಾಗಿ ಕಿತ್ತಾಡುತ್ತಿದ್ದರು. ಆದರೆ ಯಾವಾಗ ಗಣೇಶನ ವರ್ಚಸ್ಸು ಪಾತಾಳ ಸೇರಿತೋ, ಗಾಂಧಿನಗರದ ವಿತರಕರು ಗೋಲ್ಡನ್ ಸ್ಟಾರ್‌ನ ಸಿನಿಮಾಗಳತ್ತ ತಿರುಗಿಯೂ ನೋಡುತ್ತಿಲ್ಲ.

ವಾರದ ಕಲೆಕ್ಷನ್ ಹತ್ತು ಲಕ್ಷ!



ತೆಲುಗಿನಲ್ಲಿ ಸೂಪರ್ ಹಿಟ್ ಆಗಿದ್ದ ತಮ್ಮದೇ ಬ್ಯಾನರಿನ 'ಉಲ್ಲಾಸಂಗಾ ಉತ್ಸಾಹಂಗಾ' ಚಿತ್ರವನ್ನು ತಕ್ಷಣ ಕನ್ನಡದಲ್ಲೂ ರಿಮೇಕ್ ಮಾಡಿ, ಓಡುವ ಕುದುರೆಯಂತಿದ್ದ ಗಣೇಶನನ್ನು ಹೀರೋ ಮಾಡಿದರೆ ಕರ್ನಾಟಕದಲ್ಲೂ ದುಡ್ಡು ಬಾಚಬಹುದು ಎಂಬ ಮಾಸ್ಟರ್ ಪ್ಲಾನ್ ಹಾಕಿದ್ದರು ನಿರ್ಮಾಪಕ ತ್ಯಾಗರಾಜ್. ಆಗ ಗಣೇಶ್ ತನ್ನ ಕಾಲ್‌ಶೀಟ್ ಕೊಡಲು ಬರೋಬ್ಬರಿ ಒಂದೂಕಾಲು ಕೋಟಿ ರೂಪಾಯಿಗಳನ್ನು ಕೇಳಿದರೂ ಅದಕ್ಕೆ ತಕರಾರೆತ್ತದೆ 'ಓಕೆ ಓಕೆ' ಎಂದು ತ್ಯಾಗರಾಜ್ ತಲೆಯಲ್ಲಾಡಿಸಿದ್ದರು.

ಕನ್ನಡದಲ್ಲಿ ಸುಮಾರು ಇಪ್ಪತ್ತು ಚಿತ್ರಗಳಿಗೆ ಸಹಾಯಕನಾಗಿ ದುಡಿದಿದ್ದ ದೇವರಾಜ್ ಪಾಲನ್ ಎಂಬ ಅಸೋಸಿಯೇಟ್ ಡೈರೆಕ್ಟರನನ್ನೇ ನಿರ್ದೇಶಕನನ್ನಾಗಿ ನೇಮಿಸಿಕೊಂಡು ಶೂಟಿಂಗೂ ಶುರುಮಾಡಿಬಿಟ್ಟರು. ಆನಂತರ 'ಉಲ್ಲಾಸ ಉತ್ಸಾಹ' ಚಿತ್ರದ ನಿರ್ಮಾಪಕ ತ್ಯಾಗರಾಜ್ ಮತ್ತು ಗಣೇಶ್ ನಡುವೆ ಹಣಕಾಸಿನ ವ್ಯವಹಾರ ಹಳಸಿಕೊಂಡು ಅದು ಛೇಂಬರ್ ಮೆಟ್ಟಿಲೇರುವ ತನಕ ಬೆಳೆದುನಿಂತಿತ್ತು.



ಸುಮಾರು ಮೂರೂವರೆ ಕೋಟಿ ರೂಪಾಯಿಗಳಷ್ಟನ್ನು ಖರ್ಚು ಮಾಡಿ 'ಉಲ್ಲಾಸ ಉತ್ಸಾಹ' ಸಿನಿಮಾ ನಿರ್ಮಿಸಿದ್ದ ತ್ಯಾಗರಾಜ್‌ಗೆ ಮೊದಲ ವಾರದ ಕಲೆಕ್ಷನ್‌ನಿಂದ ಬಂದಿದ್ದು ಬರೀ ಹತ್ತು ಲಕ್ಷ! ಪಾಪ ತ್ಯಾಗರಾಜ್ ಪಬ್ಲಿಸಿಟಿಗೆ ಖರ್ಚು ಮಾಡಿದ ದುಡ್ಡು ಇರಲಿ, ಪೋಸ್ಟರ್‌ಗಳನ್ನು ಗೋಡೆಗಳಿಗೆ ಅಂಟಿಸಲು ಬಳಸಿದ್ದ ಗೋಂದಿನ ಹಣವೂ ಹುಟ್ಟಲಿಲ್ಲ. ಇದರ ಫಲವಾಗಿ ಪಿಆರ್‌ಓ ವೆಂಕಟೇಶ್‌ಗೆ ಬರಬೇಕಿದ್ದ ಜಾಹೀರಾತು ಹಣಕ್ಕೆ ತ್ಯಾಗರಾಜ್ ತಿರುಪತಿ ದಾರಿ ತೋರಿದ್ದರು.

ಕೋಟಿ ಕೊಟ್ಟರೆ ಕಾಲ್‌ಶೀಟ್!

ತನ್ನ ಮಾರ್ಕೆಟ್ ಕುಸಿದು ಹೇಗಿದೆ ಎಂಬುದು ಗಣೇಶ್‌ಗೆ ಗೊತ್ತಿದ್ದರೂ ಆತ ಸಂಭಾವನೆಯ ವಿಚಾರದಲ್ಲಿ ಎಳ್ಳಷ್ಟೂ ರಾಜಿಯಾಗುತ್ತಿಲ್ಲ. ಒಂದೂಕಾಲು ಕೋಟಿ ರೂಪಾಯಿ ಕೊಟ್ಟರೆ ಮಾತ್ರ ಕಾಲ್‌ಶೀಟು ಎಂದು ಗಣೇಶನ ಹೆಂಡತಿ ಶಿಲ್ಪಾ ಮನೆ ಬಾಗಿಲಲ್ಲೇ ಪದ್ಮಾಸನ ಹಾಕಿ ಕುಳಿತುಬಿಟ್ಟಿದ್ದಾಳೆ. ಹೀಗಾಗಿ ಯಾರೂ ಗಣೇಶನ ಮನೆ ಹೊಸ್ತಿಲನ್ನು ದಾಟುತ್ತಿಲ್ಲ.

ಇನ್ನು ಗಣೇಶ್ ತನ್ನದೇ ಹೋಮ್ ಬ್ಯಾನರಿನಲ್ಲಿ ನಿರ್ಮಿಸುತ್ತಿರುವ ಸಿನಿಮಾಗಳೂ ಬರಕತ್ತಾಗುತ್ತಿಲ್ಲ. 'ಮಳೆಯಿರಲಿ ಜೊತೆಯಿರಲಿ' ಚಿತ್ರವನ್ನು ಸ್ವತಃ ಗಣೇಶನೇ ನಿರ್ಮಿಸಿ, 'ಮುಂಗಾರು ಮಳೆ' ಬಿಡುಗಡೆಯಾದ ಡಿಸೆಂಬರ್ 24ರಂದೇ ಬಿಡುಗಡೆ ಮಾಡಿದ್ದ. ಹಾಗೆ ಮಾಡಿದರೆ ಈ ಚಿತ್ರ ಕೂಡಾ 'ಮುಂಗಾರು ಮಳೆ'ಯಂತೆಯೇ ದಾಖಲೆ ಮಾಡಬಹುದು ಎಂಬ ನಿರೀಕ್ಷೆಯಲ್ಲಿದ್ದ. ಆದರೆ ಅದು ಜಡಿಮಳೆಯನ್ನೂ ಸುರಿಸಲಿಲ್ಲ.

ಅದಾದ ನಂತರ ಗಣೇಶ್ ಶುರು ಮಾಡಿದ 'ಕೂಲ್' ಸಿನಿಮಾ ಕೂಡ ಆರಂಭದಲ್ಲೇ ದೊಡ್ಡ ಕಿತಾಪತಿಯೆಬ್ಬಿಸಿತ್ತು. ಇದು ತೆಲುಗಿನ 'ರಿಷಿ' ಸಿನಿಮಾದ ರಿಮೇಕು. ಈ ಚಿತ್ರವನ್ನು ಕನ್ನಡದಲ್ಲಿ ಮಾಡಲು ತೀರ್ಮಾನಿಸಿದ ಗಣೇಶ್ ಅದರ ನಿರ್ದೇಶನದ ಜವಾಬ್ದಾರಿಯನ್ನು 'ಮುಸ್ಸಂಜೆ' ಮಹೇಶ್‌ಗೆ ವಹಿಸಿದ್ದರು. ತೆಲುಗಿನಲ್ಲಿ ಪಡಾಲ ಶಿವಸುಬ್ರಮಣ್ಯ ಬರೆದಿದ್ದ ಮೂಲ ಕತೆಯ ಎಳೆಯನ್ನು ಇಟ್ಟುಕೊಂಡ ಮಹೇಶ್ ಹೊಸದಾಗಿ ಚಿತ್ರಕತೆ ರಚಿಸಿ, ಸಂಭಾಷಣೆಯನ್ನೂ ಬರೆದರು.


ಆದರೆ ಚಿತ್ರೀಕರಣದ ಮೊದಲ ದಿನವೇ ಛಾಯಾಗ್ರಾಹಕ ರತ್ನವೇಲು ಮತ್ತು ಮಹೇಶ್ ಮಧ್ಯೆ ಕಿರಿಕಿರಿ ಆರಂಭವಾಯಿತು. ನಿರ್ದೇಶಕನ ಆದೇಶಕ್ಕೆ ಕ್ಯಾರೇ ಅನ್ನದೇ ರತ್ನವೇಲು ಇಡೀ ಚಿತ್ರತಂಡವನ್ನು ತನ್ನ ಹಿಡಿತಕ್ಕೆ ತೆಗೆದುಕೊಂಡರು. ಇದರಿಂದ ಬೇಸರಗೊಂಡ ಮಹೇಶ್ ನಿರ್ಮಾಪಕಿ ಶಿಲ್ಪಾ ಮುಂದೆ ತಮ್ಮ ಅಸಮಾಧಾನವನ್ನು ತೋಡಿಕೊಂಡರು. ಆದರೆ ಶಿಲ್ಪಾ "ನಿಮ್ಮಂಥವರಿಗೆಲ್ಲಾ ಸಣ್ಣಪುಟ್ಟ ಕ್ಯಾಮೆರಾಮನ್‌ಗಳೇ ಸರಿ. ರತ್ನವೇಲು ಗ್ರೇಟ್ ಕ್ಯಾಮೆರಾಮನ್. ಅವರಿಂದ ಏನೇ ತೊಂದರೆ ಆದರೂ ಸ್ವಲ್ಪ ಅಡ್ಜಸ್ಟ್ ಮಾಡ್ಕೊಳ್ಳಿ" ಎಂದುಬಿಟ್ಟಳು. ಶಿಲ್ಪಾಳ ಈ ಮಾತಿಗೆ ಮಹೇಶ್ ಒಪ್ಪದಿದ್ದಾಗ ಆಕೆ "ಯೂ ಡರ್ಟಿ ಡೈರೆಕ್ಟರ್, ಗೆಟ್ ಔಟ್ ಫ್ರಂ ಹಿಯರ್" ಎಂದು ಮಹೇಶ್ ಅವರನ್ನು ಬೈದು ಓಡಿಸಿದ್ದಳು. ಅದು ಛೇಂಬರ್ ಮೆಟ್ಟಿಲೇರಿ, ನಿರ್ದೇಶಕ ಮಹೇಶ್‌ಗೆ ಅಲ್ಲೂ ಅನ್ಯಾಯವಾಗಿತ್ತು. ಇದಾದ ಮೇಲೆ ಹೊಸ ನಿರ್ದೇಶಕರಾಗಲಿ, ಹಳಬರಾಗಲಿ ಗಣೇಶನನ್ನು ಹಾಕಿಕೊಂಡು ಸಿನಿಮಾ ಮಾಡಲು ಹಿಂಜರಿಯುತ್ತಿದ್ದಾರೆ. ಗಣೇಶನ ಸಿನಿಮಾವೆಂದರೆ ಅಲ್ಲಿ ಸಾಲುಸಾಲು ತಕರಾರುಗಳು, ಕಿರಿಕಿರಿಗಳು ಇದ್ದೇ ಇರುತ್ತೆ ಎಂಬುದು ಈಗ ಗಾಂಧಿನಗರದಲ್ಲಿ ಎಲ್ಲೆಡೆ ಹಬ್ಬಿರುವ ಮಾತು.

ಗಣೇಶನ ಇಷ್ಟೆಲ್ಲಾ ರಂಕು, ರಗಳೆಗಳ ನಡುವೆ 'ಏನೋ ಒಂಥರಾ' ಬಿಡುಗಡೆಯಾಗುತ್ತಿದೆ. ಈ ಚಿತ್ರದಲ್ಲಿ ಗಣೇಶನ ಜೊತೆ ನಾಯಕಿಯಾಗಿ ಪ್ರಿಯಾಮಣಿ ನಟಿಸಿದ್ದಾಳೆ. 'ದಿಲ್‌ಖುಷ್' ಅನ್ನುವ ಹಾಡೊಂದು ಹಿಟ್ಟಾಗಿರುವುದು ಬಿಟ್ಟರೆ ಸಿನಿಮಾ ಬಿಡುಗಡೆಯ ಆಜುಬಾಜಿನಲ್ಲಿ ಯಾವ ಸಂಭ್ರಮ, ಸಡಗರಗಳೂ ಕಾಣುತ್ತಿಲ್ಲ.

ಈ ಚಿತ್ರದೊಂದಿಗೇ ಇಂದ್ರಜಿತ್ ಲಂಕೇಶ್ ನಿರ್ದೇಶನದ 'ಹುಡುಗ ಹುಡುಗಿ' ಚಿತ್ರ ಭಾರೀ ಪ್ರಚಾರ ಮತ್ತು ನಿರೀಕ್ಷೆಗಳೊಂದಿಗೆ ಬಿಡುಗಡೆಯಾಗುತ್ತಿದೆ.

ಹೀಗಾಗಿ ಗಣೇಶನ ಲಕ್ಕು ಚೆನ್ನಾಗಿದ್ದು ಸಿನಿಮಾ ಸುಂದರವಾಗಿ ಮೂಡಿಬಂದಿದ್ದರೆ ನಿರ್ಮಾಪಕ ಬಚಾವ್. ಇಲ್ಲದಿದ್ದರೆ ಗಣೇಶನ ಈ ಸಿನಿಮಾ ಒಂದು ವಾರ ಕೂಡ ಥಿಯೇಟರಿನಲ್ಲಿ ಉಳಿಯುವುದು ಕಷ್ಟ.... ಹಾಗಾಗದಿರಲಿ!

• ಅರುಣ್.ಜಿ
arunodayagc@gmail.com



ಹುಡುಗ ಹುಡುಗಿ ಇಲಿಯಾನಾ

RNI No. KARKAN200
Regd.No.KA/RNP/BGS/2036/2008-10 Posted at : GPO, Bangalore-01. R B P LANKESH, Kannada Weekly Price Rs. 12/- 24-11-2010

ಅರ್ಜುನನ ಅಂಬಾರಿಯಲ್ಲಿ ರಾಧಿಕಾ ಸವಾರಿ



"ಸಿನಿಮಾ ನಟಿಯಾಗುವುದೇ ನನ್ನ ಜೀವನದ ಚರಮ ಗುರಿ. ಹೀರೋಯಿನ್ ಆಗಲು ಏನು ಮಾಡಲೂ ನಾನು ಸಿದ್ಧ. ಒಂದು ಛಾನ್ಸು ಸಿಕ್ಕರೆ ಸಾಕು" ಎಂದು ಹೇಳುವ, ಹಾಗೆ ಹೇಳಿದ ಮಾತನ್ನು ಕಾರ್ಯರೂಪಕ್ಕಿಳಿಸಲು ಹೋಗಿ ತಮ್ಮ ವೃತ್ತಿಬದುಕಿನೊಂದಿಗೆ ವೈಯಕ್ತಿಕ ಜೀವನವನ್ನೂ ಹಾಳುಬಾವಿಗೆ ನೂಕಿಕೊಳ್ಳುವ ಎಷ್ಟೋ ಹೆಣ್ಣು ಮಕ್ಕಳು ಕಾಣಸಿಗುತ್ತಾರೆ; ಸಿಗುತ್ತಲೇ ಇರುತ್ತಾರೆ. ನೋಡಲು ಅಲ್ಪಸ್ವಲ್ಪ ಚೆಂದಕ್ಕಿದ್ದರೆ ಸಾಕು, ಬೆಳ್ಳಿ ತೆರೆಯ ಮೇಲೆ ಕಾಣಿಸಿಕೊಳ್ಳುವ ಹುಚ್ಚಿಗೆ ಬಿದ್ದ ಹುಡುಗಿಯರು ಗಾಂಧಿನಗರದ ಹೆಣ್ಣುಬಾಕರಿಗೆ ಆಹಾರವಾಗುತ್ತಲೇ ಬಂದಿರುವುದು ಇತಿಹಾಸ ಮತ್ತು ಭವಿಷ್ಯ.

ಆದರೆ ಪ್ರತಿಭೆ, ಸೌಂದರ್ಯ ಎಲ್ಲವೂ ಇರುವ ನಟಿಯರೂ ಕೆಲವೊಮ್ಮೆ ನಿರ್ದೇಶಕ, ನಿರ್ಮಾಪಕರಿಗೆ ಬಕೀಟು ಹಿಡಿಯಲು ಹೋಗಿ ಗಾಸಿಪ್‌ಗೆ ಸಿಲುಕಿಕೊಳ್ಳುತ್ತಾರೆ.

ರಾಧಿಕಾ ಪಂಡಿತ್ ಎಂಬ ಪ್ರತಿಭಾವಂತ ನಟಿ ಕೂಡಾ ಈಗ ಇಂಥದ್ದೇ ಸುದ್ದಿಗಳ ಸುಂಟರಗಾಳಿಯಲ್ಲಿ ಸಿಲುಕಿಕೊಂಡಿದ್ದಾಳೆ. ರಾಧಿಕಾಳಿಗೆ ಈಗಾಗಲೇ 'ಪ್ರಬುದ್ಧ ನಟಿ' ಎಂಬ ಹಣೆಪಟ್ಟಿ ಸಿಕ್ಕಿರುವುದರಿಂದ ಆಕೆಯ ಸುತ್ತ ಸರಿದಾಡುತ್ತಿರುವ ಸುದ್ದಿಗಳನ್ನು ಒಂದೇ ಏಟಿಗೆ ಯಾರೂ ನಂಬುತ್ತಿಲ್ಲ. ಆದರೆ ಬೆಂಕಿ ಮತ್ತು ಹೊಗೆ ಒಟ್ಟೊಟ್ಟಿಗೇ ಇರುವುದರಿಂದ ಅದನ್ನು ನಂಬಿದರೂ ತಪ್ಪಿಲ್ಲ!

ಅರ್ಜುನನ ಅಂಬಾರಿಯಲ್ಲಿ ರಾಧಿಕಾ ಸವಾರಿ?

ರಾಧಿಕಾ ಪಂಡಿತ್ ಇತ್ತೀಚೆಗೆ ಚಿಕ್ಕ ವಯಸ್ಸಿನ ನಿರ್ದೇಶಕ ಅರ್ಜುನ್ ಜೊತೆ ಸಿಕ್ಕಾಪಟ್ಟೆ ಸಲುಗೆಯಿಂದ ಇದ್ದಾಳೆ ಅನ್ನೋದು ನಿಜ. ಇವತ್ತಿನ ದಿನಗಳಲ್ಲಿ ನಾಯಕಿಯರು ಕೊಟ್ಟ ಕಾಲ್‌ಶೀಟ್‌ಗೆ ಸರಿಯಾಗಿ ಬಂದು ಸಿನಿಮಾ ಮುಗಿಸುವುದೇ ದೊಡ್ಡ ವಿಷಯ. ಆದರೆ ರಾಧಿಕಾ 'ಅದ್ದೂರಿ'ಗಾಗಿ 18 ದಿನಗಳ ರಿಹರ್ಸಲ್‌ಗೂ ಅಟೆಂಡ್ ಆಗಿದ್ದಾಳೆ. ಹೆಚ್ಚು ಆಸಕ್ತಿ ವಹಿಸಿ ಈ ಚಿತ್ರಕ್ಕಾಗಿ ತನ್ನ ಸಮಯ ಮತ್ತು ಗಮನವನ್ನು ಧಾರೆ ಎರೆಯುತ್ತಿದ್ದಾಳೆ. ಅದು ಅವಳ ವೃತ್ತಿಪರತೆಯನ್ನು ತೋರುತ್ತದೆ.

ಆದರೆ ಸಮಸ್ಯೆ ಇರುವುದು 'ಅದ್ದೂರಿ' ಚಿತ್ರದ ನಿರ್ದೇಶಕ ಅರ್ಜುನನ ವರ್ತನೆಯಲ್ಲಿ. ಚಿತ್ರದ ಮುಹೂರ್ತದ ದಿನವೇ ಎಲ್ಲರಲ್ಲಿ ಅನುಮಾನ ಹುಟ್ಟುವಂತೆ ಆತ ವರ್ತಿಸಿದ್ದ. ರಾಧಿಕಾ ಕುಂತರೂ, ನಿಂತರೂ ಅವಳ ಹಿಂದೆಯೇ ತಿರುಗುತ್ತಿದ್ದ. "ಶೂಟಿಂಗ್ ಮುಗಿಸಿಕೊಂಡು ಬಂದರೂ ರಾಧಿಕಾ ಪಂಡಿತ್ ಬಗ್ಗೇನೇ ಮಾತಾಡಿ, ಆಕೆಯನ್ನ ಯದ್ವಾತದ್ವಾ ಹೊಗಳಿ ಸಿಕ್ಕವರ ತಲೆಗೆ ಹುಳಾ ಬಿಡ್ತಾನೆ" ಅನ್ನೋದು ಅರ್ಜುನ್‌ನ ಖಾಸಾ ದೋಸ್ತಿಗಳ ಆರೋಪ. ರಾಧಿಕಾಳನ್ನೇ 'ಅದ್ದೂರಿ'ಯ ಕೇಂದ್ರವಾಗಿಟ್ಟುಕೊಂಡಿರುವುದು, ಎಲ್ಲೆಂದರಲ್ಲಿ ರಾಧಿಕಾ ಪಂಡಿತ್‌ಳ ಪಾರಾಯಣ ಶುರುಹಚ್ಚಿಕೊಳ್ಳುತ್ತಿರುವುದು ನೂರೆಂಟು ಅನುಮಾನಗಳಿಗೆ ಕಾರಣವಾಗಿದೆ.



ರಾಧಿಕಾ ಪಂಡಿತ್‌ಳನ್ನು ಈ ಪಾಟ ಹಚ್ಚಿಕೊಂಡಿರುವ ಅರ್ಜುನ್ ಈ ಹಿಂದೆ ತನ್ನೂರಿನಲ್ಲೇ ಹುಡುಗಿಯೊಬ್ಬಳನ್ನು ಪ್ರೀತಿಸುತ್ತಿರುವುದಾಗಿಯೂ, ಆಕೆಯನ್ನೇ ಮದುವೆಯಾಗುವುದಾಗಿಯೂ ಹೇಳಿಕೊಂಡಿದ್ದನಂತೆ. ಆದರೀಗ ಆಕೆಯನ್ನು ಮರೆತಿರುವ ಅರ್ಜುನ್ 'ರಾಧಿಕಾಳ ಜಪ'ದಲ್ಲಿ ಮುಳುಗಿದ್ದಾನೆ.

ಅರ್ಜುನ್‌ಗೆ ಈಗಿನ್ನೂ ಇಪ್ಪತ್ತಾರು ವರ್ಷ. ಆದರೆ ಕಳೆದ ಏಳೆಂಟು ವರ್ಷಗಳಿಂದ ಗಾಂಧಿನಗರದ ಗಲ್ಲಿ ಬದುಕನ್ನು ಕಂಡಿದ್ದಾನೆ. ಮಂಡ್ಯ ಜಿಲ್ಲೆಯ ಕೆರಗೋಡಿನವನಾದ ಅರ್ಜುನ್ ಸಿನಿಮಾ ಕನಸು ಕಾಣುತ್ತಾ ಗಾಂಧಿನಗರಕ್ಕೆ ಬಂದು, ಛಾನ್ಸಿಗಾಗಿ ಅಲ್ಲಿ ಇಲ್ಲಿ ಅಲೆದುಕೊಂಡಿದ್ದ. ಅದು ಹೇಗೋ ಗಾಯಕ ಎಲ್.ಎನ್.ಶಾಸ್ತ್ರಿ ಅವರ ಪರಿಚಯ ಮಾಡಿಕೊಂಡ. ಅವರು ಈತನನ್ನು ರವಿಚಂದ್ರನ್ ಜೊತೆಗೆ ಕೆಲಸಕ್ಕೆ ಹಚ್ಚಿದರು. ಒಂದಷ್ಟು ದಿನ ರವಿಚಂದ್ರನ್ ಜೊತೆ 'ಮಲ್ಲ' ಸಿನಿಮಾದಲ್ಲಿ ಕ್ಲಾಪ್ ಬಾಯ್ ಆಗಿ ಕೆಲಸ ಮಾಡಿದ. ಆನಂತರ "ನಾನು ರವಿಚಂದ್ರನ್ ಶಿಷ್ಯ" ಎಂದು ಹೇಳಿಕೊಂಡು ಅಷ್ಟಿಷ್ಟು ಅವಕಾಶಗಳನ್ನು ಗಿಟ್ಟಿಸಿಕೊಂಡ. ಪಿ.ಎನ್.ಸತ್ಯಾ ಜೊತೆ ಒಂದೆರಡು ಸಿನಿಮಾಗಳಲ್ಲಿ ಅಸಿಸ್ಟೆಂಟ್ ಆಗಿ ಕೆಲಸ ಮಾಡಿದ.

ಅಷ್ಟೊತ್ತಿಗೆ ಅರ್ಜುನ್‌ಗೆ ದರ್ಶನ್‌ನ ಸಂಪರ್ಕ ಸಿಕ್ಕಿತು. ಚೆಂದದ ಕವಿತೆಗಳನ್ನು ಬರೆಯುತ್ತಿದ್ದ ಅರ್ಜುನ್ ಒಮ್ಮೆ ಅವುಗಳನ್ನು ದರ್ಶನ್‌ಗೆ ತೋರಿಸಿದ. ಆಗ ದರ್ಶನ್ ಇನ್‌ಫ್ಲೂಯೆನ್ಸ್ ಮಾಡಿ 'ತಂಗಿಗಾಗಿ' ಚಿತ್ರದ ಐದೂ ಹಾಡುಗಳನ್ನು ಬರೆಯುವ ಅವಕಾಶ ಅರ್ಜುನ್‌ಗೆ ಸಿಕ್ಕಿತ್ತು.

ಈ ಮಧ್ಯೆ, ಅದು ಹೇಗೋ ಜೇಡರಳ್ಳಿ ಕೃಷ್ಣಪ್ಪನನ್ನು ಹಿಡಿದು 'ಅಂಬಾರಿ' ಚಿತ್ರಕ್ಕೆ ನಿರ್ದೇಶಕನಾದ. ಬೆಂಗಳೂರಿನಲ್ಲಿ ಆರಂಭವಾಗಿ ಆಗ್ರಾದ ತಾಜ್ ಮಹಲ್ ಬಳಿ ಅಂತ್ಯಗೊಳ್ಳುವ ಕಥೆಯ 'ಅಂಬಾರಿ' ಚಿತ್ರದುರ್ಗ ದಾಟುತ್ತಿದ್ದಂತೆಯೇ ಚಿತ್ರದ ಮೇಲೆ ಅರ್ಜುನ್‌ನ ಹಿಡಿತ ತಪ್ಪಿತ್ತು. ಮುಂದೇನು ಮಾಡುವುದು ಎಂದು ತೋಚದೇ ಕಕ್ಕಾಬಿಕ್ಕಿಯಾಗಿ ಕೂತಿದ್ದ ಅರ್ಜುನ್‌ನನ್ನು ಪಕ್ಕದಲ್ಲಿಟ್ಟುಕೊಂಡು ಇಡೀ ಸಿನಿಮಾ ಮುಗಿಸಿದ್ದು ಕ್ಯಾಮೆರಾಮನ್ ಸತ್ಯಾ ಹೆಗಡೆ. ಇತ್ತ ಸತ್ಯಾ ಹೆಗಡೆ ಚಿತ್ರದ ಎಲ್ಲ ಕೆಲಸಗಳನ್ನು ತಮ್ಮ ಮೈಮೇಲೆಳೆದುಕೊಂಡು ಒದ್ದಾಡುತ್ತಿದ್ದರೆ ಅತ್ತ ಅರ್ಜುನ್ 'ಅಂಬಾರಿ' ಚಿತ್ರದ ನಾಯಕಿ ಸುಪ್ರೀತಾಳ ದುಪ್ಪಟ್ಟಾ ಹಿಡಿದು ತಿರುಗಾಡುತ್ತಿದ್ದ. "ಅರ್ಜುನ್ ಮತ್ತು ಸುಪ್ರೀತಾ ಲವ್ ಮಾಡುತ್ತಿದ್ದಾರೆ. ಮದುವೆನೂ ಆಗುತ್ತಾರೆ" ಎಂದೆಲ್ಲ ಆಗ ಪಿಸುಪಿಸು ಮಾತುಗಳು ಕೇಳಿಬಂದಿದ್ದವು. ಇಂತಹ ಮಾತುಗಳು ಕೊನೆಗೂ ಹೆಲ್ತ್ ಡಿಪಾರ್ಟ್‌ಮೆಂಟ್‌ನಲ್ಲಿ ಉದ್ಯೋಗಕ್ಕಿರುವ ಸುಪ್ರೀತಾಳ ತಾಯಿಯ ಕಿವಿಗೆ ಬಿದ್ದು ಅವರು ತಮ್ಮ ಮಗಳನ್ನು ಬಿಗಿ ಮಾಡಿದರು. ಅಲ್ಲಿಗೆ ಆ 'ಲವ್ ಸ್ಟೋರಿ' ಎಂಡ್ ಆಗಿತ್ತು.

ಇದ್ದಕ್ಕಿದ್ದ ಹಾಗೆ ಅರ್ಜುನ್‌ಗೆ ಡೈರೆಕ್ಟರ್ ಚೇರು ಸಿಕ್ಕಿದ್ದು, ತನ್ನ ಸುತ್ತಲೂ ಹುಡುಗಿಯರು ಸೇರುತ್ತಿದ್ದದ್ದು ಕಂಡು ತಲೆ ತಿರುಗಿತು. ತೀರಾ ಚೆಂಗಲು ಹುಡುಗನಲ್ಲದಿದ್ದರೂ, ಜಡೆ ಕಂಡಲ್ಲಿ ಜೊಲ್ಲುಬೀಳ ಲಾರಂಭಿಸಿದ ಅರ್ಜುನ್!

ರಾಧಿಕಾ ರಗಳೆ...

ಕಳೆದೆರಡು ವರ್ಷಗಳಿಂದ ಕನ್ನಡ ಚಿತ್ರರಂಗದಲ್ಲಿ ತಣ್ಣನೆಯ ಅಲೆ ಎಬ್ಬಿಸಿರುವ ರಾಧಿಕಾ ಪಂಡಿತ್ ನಿಜಕ್ಕೂ ಇತ್ತೀಚಿನ ದಿನಗಳಲ್ಲಿ ಕನ್ನಡ ಚಿತ್ರರಂಗ ಕಂಡ ಉತ್ತಮ ಕಲಾವಿದೆ. ಕೇವಲ ಗ್ಲಾಮರ್ ಒಂದಿದ್ದರೆ ಸಾಕು ಚಿತ್ರರಂಗ ದಲ್ಲಿ ಬೇರೂರಬಹುದು ಎಂದು ಬೊಬ್ಬಿಡುವ ಎಷ್ಟೋ ಹುಡುಗಿಯರನ್ನು ರಾಧಿಕಾಳ ಮುಂದೆ ನಿವಾಳಿಸಿಬಿಡಬಹುದು. ಯಾಕೆಂದರೆ ಈವರೆಗೆ ಈಕೆ ಕಾಣಿಸಿಕೊಂಡ ಒಂದೊಂದು ಚಿತ್ರದಲ್ಲೂ ರಾಧಿಕಾಳ ಅಭಿನಯದ ತಾಕತ್ತು ಏನೆಂಬುದು ಸಾಬೀತಾಗಿದೆ.

ಅಶೋಕ್ ಕಶ್ಯಪ್ ಮತ್ತು ರೇಖಾರಾಣಿ ಎಂಬ ಜೋಡಿ ನಿರ್ಮಿಸಿ, ನಿರ್ದೇಶಿಸಿದ್ದ 'ನಂದಗೋಕುಲ' ಎಂಬ ಟೀವಿ ಧಾರಾವಾಹಿಯ ಮೂಲಕ ನಟನಾ ವೃತ್ತಿಗಿಳಿದವಳು ರಾಧಿಕಾ ಪಂಡಿತ್. ನಂತರ ಕೆಲವು ಟೆಲಿಫಿಲಂಗಳಲ್ಲಿ ರಾಧಿಕಾ ನಟಿಸಿದ್ದಳಾದರೂ ಚಿತ್ರರಂಗದಲ್ಲಿ ಅವಕಾಶ ಸಿಕ್ಕಿದ್ದು 'ಶಿಷ್ಯ' ಖ್ಯಾತಿಯ ದೀಪಕ್ ನಾಯಕನಟನಾಗಿ ಅಭಿನಯಿಸಿದ್ದ '18th ಕ್ರಾಸ್'ನಲ್ಲಿ. ಆದರೆ ಆ ಸಿನಿಮಾ ಇವತ್ತಿಗೂ ಬಿಡುಗಡೆಯಾಗಿಲ್ಲ. ರಾಧಿಕಾ ನಟಿಸಿದ ಮೊದಲ ಚಿತ್ರ ಬಿಡುಗಡೆಯೇ ಆಗದಿದ್ದಾಗ ಚಿತ್ರರಂಗಕ್ಕೆ ಗುಡ್‌ಬೈ ಹೇಳಿ ಕಿರುತೆರೆಯಲ್ಲೇ ನೆಲೆಗೊಳ್ಳುವ ಆಲೋಚನೆಯಲ್ಲಿ ರಾಧಿಕಾ ಪಂಡಿತ್ ಇದ್ದಾಗ ಸಿನಿಮಾರಂಗಕ್ಕೆ ಆಕೆಯನ್ನು ಮತ್ತೆ ಕರೆತಂದದ್ದು 'ಮೊಗ್ಗಿನ ಮನಸು'. 'ಮುಂಗಾರು ಮಳೆ' ನಿರ್ಮಾಪಕ ಈ. ಕೃಷ್ಣಪ್ಪ ನಿರ್ಮಾಣದಲ್ಲಿ ಉತ್ಸಾಹಿ ನಿರ್ದೇಶಕ ಶಶಾಂಕ್ ನಿರ್ದೇಶನದಲ್ಲಿ ಬಂದ 'ಮೊಗ್ಗಿನ ಮನಸು' ಚಿತ್ರ ರಾಧಿಕಾಳ ಪ್ರತಿಭೆಯನ್ನು ಅನಾವರಣ ಮಾಡಿತಲ್ಲದೇ, ಆಕೆಗೆ ಅವಕಾಶಗಳ ಹೊಸ ಲೋಕವನ್ನೇ ತೆರೆದಿಟ್ಟಿತು. ನಂತರ 'ಒಲವೇ ಜೀವನ ಲೆಕ್ಕಾಚಾರ', 'ಲವ್ ಗುರು' ಚಿತ್ರಗಳಲ್ಲೂ ನಟಿಸಿದಳು. ಪ್ರಜ್ವಲ್ ದೇವರಾಜ್ ಅಭಿನಯದ 'ಸೂಪರ್ ಮ್ಯಾನ್' ಚಿತ್ರ ಆರಂಭವಾದರೂ ಆ ಸಿನಿಮಾ ಅರ್ಧಕ್ಕೇ ಕಾಲು ಮೇಲ ಕೆತ್ತಿತು.

ಹೀಗೆ ಹಲವು ಚಿತ್ರಗಳಲ್ಲಿ ನಟಿಸಿ ಛೇಫ್ ಎನಿಸಿಕೊಂಡ ರಾಧಿಕಾ ಪಂ[...] ಮುಂದೊಂದು ದಿನ ಕನ್ನಡ ಚಿತ್ರರಂಗದ ಮೇರು ನಟಿಯಾಗುವ [...] ಸಾಧ್ಯತೆಗಳೂ ಇವೆ. ಆದರೆ ಮೊದಲ ಒಂದೆರಡು ಚಿತ್ರಗಳ ಯಶಸ್ಸು ಪ[...] ಪಡೆದ ಕೀರ್ತಿ ಈಕೆಯ ವರ್ತನೆಯನ್ನೇ ಬದಲಿಸಿಬಿಟ್ಟವು.

'ಮೊಗ್ಗಿನ ಮನಸು' ಚಿತ್ರದಲ್ಲಿ ಸಲೀಸಾಗಿ ಕೆಲಸ ಮಾಡಿದ್ದ ರಾಧಿಕಾ[...] ತಮ್ಮ 'ಕೃಷ್ಣನ್ ಲವ್ ಸ್ಟೋರಿ' ಚಿತ್ರಕ್ಕೂ ಶಶಾಂಕ್ ಆಯ್ಕೆ ಮಾಡಿಕೊಂಡ[...] ಆದರೆ ರಾಧಿಕಾಳ ಮೊಗ್ಗಿನ ಮನಸ್ಸು ಈ ಬಾರಿ ಅರಳಿನಿಂತಿತ್ತು. ಹೆಜ್ಜೆಹೆಜ್ಜೆ[...] ಶಶಾಂಕ್‌ಗೆ ಕಿರಿಕಿರಿ ಮಾಡಿದಳು. ಕ್ಲೈಮ್ಯಾಕ್ಸ್ ದೃಶ್ಯಕ್ಕಾಗಿ ತಾನು ನೀರಿ[...] ನಿಲ್ಲುವುದಿಲ್ಲ ಎಂದು ಕಿರಿಕ್ಕು ತೆಗೆದಳು. ಇನ್ನೊಂದು ದೃಶ್ಯದಲ್ಲಿ ನಿರ್ದೇ[...] ಆಕೆಯ ಹಿಂಭಾಗದಿಂದ ಒಂದು ಶಾಟ್ ಕಂಪೋಸ್ ಮಾಡಿದ್ದನ್ನು ವಿರೋ[...] ಜಗಳಕ್ಕೆ ನಿಂತಳು. ಕಡೆಗೂ ರಾಧಿಕಾಳನ್ನು ಒಪ್ಪಿಸುವಲ್ಲಿ ವಿಫಲವಾದ ಶಶಾ[...] ಆ ದೃಶ್ಯವನ್ನೇ ಬೇರೆ ರೀತಿ ಶೂಟ್ ಮಾಡಿಮುಗಿಸಿದರು. ಚಿತ್ರೀಕರಣ ಮು[...] ನಂತರ ರಾಧಿಕಾಳ ಸಹವಾಸ ಸಾಕು ಎಂದು ತೀರ್ಮಾನಿಸಿದ ಶಶಾಂಕ್ ಆಕೆಯ[...] ಡಬ್ಬಿಂಗ್‌ಗೂ ಕರೆಸದೇ ಬೇರೊಬ್ಬರಿಂದ ಆಕೆಯ ಪಾತ್ರಕ್ಕೆ ಕಂಠದಾನ ಮಾಡಿಸಿದ[...] ತೀರ ಇತ್ತೀಚೆಗೆ 'ಗಾನಬಜಾನ' ಚಿತ್ರದ ಸಂದರ್ಭದಲ್ಲೂ ಅದರ ನಿರ್ದೇ[...] ಪ್ರಶಾಂತ್‌ರಾಜ್ ಜೊತೆ ಮುನಿಸಿಕೊಂಡು ಸುದ್ದಿ ಮಾಡಿದ್ದಳು ರಾಧಿಕಾ ಪಂಡಿ[...]

ಚಾಲಾಕಿ ಹುಡುಗಿ, ನಾಜೂಕು ಪೋರಿ!

ಉತ್ತರ ಕನ್ನಡದ ಶಿರಾಲಿ ಮೂಲದ ಕೊಂಕಣಿ ಹುಡುಗಿ ರಾಧಿಕಾ ಹು[...] ಬೆಳೆದದ್ದೆಲ್ಲಾ ಬೆಂಗಳೂರಿನಲ್ಲೇ. ಇನ್ಶೂರೆನ್ಸ್ ಸಂಸ್ಥೆಯೊಂದರ ಉದ್ಯೋಗಿಯಾಗಿರುವ ರಾಧಿಕಾಳ ತಂದೆ ಕೃಷ್ಣ ಪ್ರಸಾದ್ ಅವರೂ ಸಹ ಮೊದಲಿನಿಂದಲೂ ಸಿನಿಮಾ, ಕಿರುತೆರೆ, ರಂಗಭೂಮಿ ಜೊತೆಗೆ ಒಡನಾಟ ಇಟ್ಟುಕೊಂಡಿರುವವರು. ರಾಧಿಕಾ ಓದಿದ್ದು ಎಂಬಿಎ ಆದರೂ ನೆಲೆ ಕಂಡುಕೊಂಡಿರುವುದು ನಟನೆಯಲ್ಲಿ.



ಅಶೋಕ್ ಕಶ್ಯಪ್ ನಿರ್ದೇಶನದ 'ನಂದ ಗೋಕುಲ' ಧಾರಾವಾಹಿಯಲ್ಲಿ ನಟಿಸುತ್ತಿದ್ದ ರಾಧಿಕಾ ಮತ್ತು ಅದೇ ಧಾರಾವಾಹಿಯಲ್ಲಿ ಪಾತ್ರ ನಿರ್ವಹಿಸುತ್ತಿದ್ದ ಯ[...] ನಡುವೆ ಅನ್ಯೋನ್ಯ ಸ್ನೇಹವಿತ್ತು. ಇದೇ ಜೋಡಿ ಮುಂದೆ 'ಮೊಗ್ಗಿನ ಮನ[...] ಚಿತ್ರದಲ್ಲೂ ನಾಯಕ-ನಾಯಕಿಯಾಗಿ ಕಾಣಿಸಿಕೊಂಡಿತ್ತು. ಆಗ ಇವರಿಬ್ಬರ ಸ್ನೇ[...] ಬೇರೆ ರೀತಿಯ ಬಣ್ಣಗಳೂ ಅಂಟಿಕೊಂಡಿದ್ದವು.

'ಕೃಷ್ಣನ್ ಲವ್ ಸ್ಟೋರಿ' ಹಿಟ್ ಆದ ನಂತರ ಅದರ ನಾಯಕ ಅಜ[...] ರಾವ್ ಜೊತೆಗೂ ರಾಧಿಕಾಳ ಹೆಸರು ತಗುಲಿಕೊಂಡಿತ್ತು. ಬಸವೇಶ್ವರನಗ[...] ಪ್ರಕೃತಿ ಹೋಟೆಲ್ ಹಿಂಭಾಗದಲ್ಲಿರುವ ಅಜಯ್ ಮನೆಯಲ್ಲಿ ರಾಧಿಕಾ ಮೇಲಿ[...] ಮೇಲೆ ಕಾಣಿಸಿಕೊಳ್ಳುತ್ತಾಳೆ ಎಂಬ ಸುದ್ದಿಯೂ ಹೊಗೆಯಾಡಿತ್ತು.

ರಾಧಿಕಾ ಎಲ್ಲರೊಂದಿಗೂ ಸ್ನೇಹಯುತವಾಗಿರುವುದು, ಅನ್ಯೋನ್ಯವ[...] ಓಡಾಡಿಕೊಂಡಿರುವುದು ಇಷ್ಟೆಲ್ಲಾ ಗಾಸಿಪ್ಪುಗಳಿಗೆ ಕಾರಣವಿರಬಹುದು. ಆ[...] ಅರ್ಜುನ್‌ನಂಥ ಮೀಸೆ ಮೊಳೆಯದ ನಿರ್ದೇಶಕನಿಗೆ ಕುಂತ್ರೆ ನಿಂತ್ರೆ ರಾಧಿಕಾ ಧ್ಯಾನವಾಗಿರುವುದಂತೂ ಅಚ್ಚರಿ ಮೂಡಿಸುತ್ತಿದೆ.

ಅಭಿನಯದಲ್ಲಿ ಚಾಲಾಕಿತನವಿರುವ ರಾಧಿಕಾ ಪಂಡಿತ್ ಸಿನಿಮಾದವರೊಂದಿಗೆ ಬೆರೆಯುವ ನಾಜೂಕುತನವನ್ನೂ ತಿಳಿದು 'ಹುಷಾರಾಗಿ' ಹೆಜ್ಜೆಯಿಡಲಿ. ಗಾಂಧಿನಗರದ ಗಾಸಿಪ್ಪಿನ ಕಾವಿನಲ್ಲಿ ರಾಧಿಕಾ ಎಂಬ ಕನ್ನಡದ ಹೂ ಕಮರುವುದು ಬೇಡ...



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial [...]